**ಕರ್ನಾಟಕ ವಿಧಾನ ಪರಿಷತ್ತು**

**ಗುರುವಾರ 14ನೇ ಫೆಬ್ರವರಿ 2013 ರಂದು**

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 15 ನಿಮಿಷಕ್ಕೆ**

**ಸಮಾವೇಶಗೊಂಡಿತು**

**ಸಭಾಪತಿಯವರಾದ**

**(ಶ್ರೀ ಡಿ.ಹೆಚ್. ಶಂಕರಮೂರ್ತಿ)**

**ಅವರು ಪೀಠದಲ್ಲಿ ಉಪಸ್ಥಿತರಿದ್ದರು**

## 1. ಪ್ರಕಟಣೆ

**ಸಭಾಪತಿಯವರು:–** (ಅ) ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಮಹಾಂತೇಶ್ ಶಿವಾನಂದ ಕೌಜಲಗಿ ಅವರಿಂದ ದಿನಾಂಕ:04–02–2013 ಒಂದು ಪತ್ರವನ್ನು ಸ್ವೀಕರಿಸಿದ್ದೇನೆ. ಸದರಿಯವರು ದೂಧ್ ಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆ, ಚಿಕ್ಕೋಡಿ, ಬೆಳಗಾವಿ ಜಿಲ್ಲೆ ಇದರ ಆಡಳಿತ ಮಂಡಳಿ ಚುನಾವಣೆ ಇರುವುದರಿಂದ ಹಾಗೂ ಆಡಳಿತ ಮಂಡಳಿ ಚುನಾವಣೆಯಲ್ಲಿ ಭಾಗವಹಿಸುವ ಪ್ರಕ್ರಿಯೆಯಲ್ಲಿ ತೊಡಗಿರುವುದರಿಂದ ದಿನಾಂಕ: 04–02–2013 ರಿಂದ 13–02–2013 ರವರೆಗಿನ ಸದನದ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿದ್ದಾರೆ. ಅದಕ್ಕೆ ಸದನದ ಅನುಮತಿ ಇದೆ ಎಂದು ನಾನು ಭಾವಿಸುತ್ತೇನೆ.

(ಆ). ಹಾಗೆಯೇ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ತಾರಾ ಅನುರಾಧ ಅವರಿಂದ ದಿನಾಂಕ: 30–01–2013 ರಂದು ಪತ್ರವನ್ನು ಸ್ವೀಕರಿಸಲಾಗಿದ್ದು, ಸದರಿಯವರು ವೈಯಕ್ತಿಕ ಕಾರಣಗಳಿಂದಾಗಿ ಸದನದ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿರುತ್ತಾರೆ. ಸದರಿಯವರ ಗೈರು ಹಾಜರಿಗೆ ಸದನದ ಅನುಮತಿ ಇದೆ ಎಂದು ನಾನು ಭಾವಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಹಿರಿಯ ಸದಸ್ಯರಾಗಿದ್ದ ಡಾ॥ ವಿ.ಎಸ್. ಆಚಾರ್ಯರವರು ನಮಗೆ ತುಂಬಾ ಪ್ರೇರಣೆ ಕೊಟ್ಟಂತಹವರು, ನಮ್ಮ ಸಭಾನಾಯಕರಾಗಿದ್ದವರು, ಈ ರಾಜ್ಯದ ಹಲವು ಇಲಾಖೆಗಳ ಮಂತ್ರಿಗಳಾಗಿ ಕೆಲಸ ಮಾಡಿದಂತಹ ಡಾ॥ ವಿ.ಎಸ್. ಆಚಾರ್ಯರವರನ್ನು ನಾವು ಇದೇ ದಿವಸ ಕಳೆದ ವರ್ಷ ಕಳೆದುಕೊಂಡಿದ್ದೇವೆ. ಒಂದು ನಿಮಿಷ ನವು ಅವರನ್ನು ನೆನಪು ಮಾಡಿಕೊಳ್ಳಬೇಕೆನಿಸಿತು. ಹಾಗಾಗಿ, ಈ ಸದನಕ್ಕೆ ಮಾರ್ಗದರ್ಶನ ಮಾಡಿದಂತಹ ಹಿರಿಯರಾದಂತಹ ಸನ್ಮಾನ್ಯ ಡಾ॥ ವಿ.ಎಸ್. ಆಚಾರ್ಯರವರನ್ನು ನೆನಪು ಮಾಡಿಕೊಳ್ಳುತ್ತಾ, ಅವರು ಒಬ್ಬ ಆದರ್ಶ

ರಾಜಕಾರಣಿಯಾಗಿ ನಮಗೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿದ್ದರು. ಅವರು ತೀರಿಕೊಳ್ಳುವ ಕೊನೆಯ ದಿವಸ ಸುಮಾರು 12, 12–30 ಗಂಟೆಗೆ ಅವರ ಜೊತೆ ನಾನು ಮಾತನಾಡಿದ್ದೆ. ಆಗ ಸಹ ಅವರು ಕೊನೆ ಘಳಿಗೆಯಲ್ಲಿಯೂ ಕೂಡ ಸದದ ಚರ್ಚೆ ಮಾಡಿದ್ದರು. ತದನಂತರ ಅವರು 20 ನಿಮಿಷಗಳ ನಂತರ ನಾನು ಮನೆಯಲ್ಲಿ ಸಿಗುತ್ತೇನೆ, ಮನೆಗೆ ಬಾ ಎಂದು ಹೇಳಿದ್ದರು. ದಾರಿಯಲ್ಲಿ ಬರಬೇಕಾದರೆ ಕೆಲವು ಸಮಸ್ಯೆಗಳಾಗಿ ಒಂದು ಕಾಲೇಜಿನ ಕಾರ್ಯಕ್ರಮಕ್ಕೆ ಹೋದರು. ಆಗ ನಾನು ಒಂದು ಕಾಲೇಜಿನ ಕಾರ್ಯಕ್ರಮದಲ್ಲಿದ್ದು, ಇಲ್ಲಿಗೆ ಬಾ ಎಂದು ನನಗೆ ಅವರಿಂದ ಒಂದು phone call ಬಂತು. ನಾನು ಮತ್ತು ಡಾ॥ ಶಿವಯೋಗಿಸ್ವಾಮಿ ಅವರು ಆ ಕಾಲೇಜಿಗೆ ಹೋಗುವಷ್ಟರಲ್ಲಿಯೇ ಸುದ್ದಿ ಬಂದು ನಾವು ಮತ್ತೆ ಅಲ್ಲಿಗೆ ಹೋಗಿದ್ದೆವು. ಇವತ್ತು ನಾನು ಅವರನ್ನು ತುಂಬಾ ನೆನಪು ಮಾಡಿಕೊಳ್ಳುತ್ತಿದ್ದೇನೆ. ನಾನು ಶಾಸಕನಾಗಿ ಮೊದಲು ಈ ಸದನಕ್ಕೆ ಬಂದಾಗ ಒಬ್ಬ ಶಾಸಕನ ಕರ್ತವ್ಯ ಏನು, ಕೆಲಸಗಳೇನು ಎನ್ನುವುದರ ಬಗ್ಗೆ ಬಹಳ ಚೆನ್ನಾಗಿ ಹೇಳಿಕೊಟ್ಟಿದ್ದರು. ಆ ಸಂದರ್ಭದಲ್ಲಿ ಹಿಂದೂ ಪತ್ರಿಕೆಯವರು ಅವರ ಫೋಟೋ ಪ್ರಕಟಿಸಿದ್ದರು. ಈ ಸದನದಲ್ಲಿ ಯಾರೂ ಇರಲಿಲ್ಲ, ಡಾ॥ ವಿ.ಎಸ್. ಆಚಾರ್ಯರವರು ಯಾವುದೋ ಒಂದು ಸಂಗತಿಯನ್ನು ಓದುತ್ತಿರುವಂತಹ ಫೋಟೋ ಅದಾಗಿತ್ತು. ಅಂದರೆ ಅಧಿವೇಶನದ ಮಧ್ಯದಲ್ಲಿ 5–10 ನಿಮಿಷಗಳ ಕಾಲ break ಇದ್ದಾಗ ಕೂಡ ಯಾವ ರೀತಿ ಅಧ್ಯಯನಶೀಲರಾಗಿ ಡಾ॥ ಆಚಾರ್ಯರವರು ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು, ಅದೆಲ್ಲವನ್ನೂ ನೆನೆಪು ಮಾಡಿಕೊಳ್ಳುತ್ತಾ, ಅವರ ಸ್ಮರಣೆ ನಮಗೆ ಪ್ರೇರಣೆ ಕೊಡಲಿ, ನಿರಂತರವಾಗಿ ಈ ಮೇಲ್ಮನೆಯ ಘನತೆ–ಗೌರವವನ್ನು ಹೆಚ್ಚಿಸಲಿಕ್ಕೆ ಪ್ರಯತ್ನ ಪಡುತ್ತಿದ್ದರು ಅದು ನಮಗೆ ಆದರ್ಶವಾಗಲಿ. ಅವರ ಒಂದಿಷ್ಟು ಏನು ಕನಸುಗಳಿದ್ದವು, ಆ ಎಲ್ಲಾ ಕನಸುಗಳು ನನಸಾಗಲಿ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಇವತ್ತು ತಡೆ ಹಿಡಿಯಲಾದ ಎರಡು ಪ್ರಶ್ನೆಗಳಿವೆ. ಆದಾದ ಮೇಲೆ ಶೂನ್ಯವೇಳೆಯಲ್ಲಿ ಚರ್ಚೆ ಮಾಡುವ ನಿಮಿತ್ತ ಗೌರವಾನ್ವಿತ ಸದಸ್ಯರುಗಳು ಕೆಲವು ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಅವಕಾಶವನ್ನು ಕೊಡುತ್ತೇನೆ. ಬಜೆಟ್ ಬಗ್ಗೆ ಚರ್ಚೆ ಮುಂದುವರಿಯುತ್ತದೆ. ನಿನ್ನೆ ವಿರೋಧ ಪಕ್ಷದ ನಾಯಕರ ಬಜೆಟ್ ಬಗೆಗಿನ ಚರ್ಚೆ inconclusive ಆಯಿತು. ಅವರು ಚರ್ಚೆಯನ್ನು ಮುಕ್ತಾಯ ಮಾಡಲಿಲ್ಲ. ಇವತ್ತು ಅವರು ತಮ್ಮ ಚರ್ಚೆಯನ್ನು ಮುಕ್ತಾಯ ಮಾಡಿದ ಮೇಲೆ ಉಳಿದಂತಹ ಸದಸ್ಯರಿಗೆ ಈ ಕಡೆಯಿಂದ ಒಬ್ಬ ಸದಸ್ಯರಿಗೆ, ಆ ಕಡೆಯಿಂದ ಒಬ್ಬ ಸದಸ್ಯರಿಗೆ ಬಜೆಟ್ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡುತ್ತೇನೆ. ಇವತ್ತು ಬಜೆಟ್ ಬಗ್ಗೆ ಎಲ್ಲರೂ ಹೆಚ್ಚಿನ ಸದಸ್ಯರು ಮಾತನಾಡುತ್ತಾರೆ. ಅಂದು ಕಾವೇರಿ ನೀರಿನ ವಿಚಾರವಾಗಿ ಚರ್ಚೆ ಮಾಡುವಾಗ ಸುಮಾರು 15–20 ಜನಕ್ಕೆ ಚರ್ಚೆ ಮಾಡಲಿಕ್ಕೆ ಅವಕಾಶ ಸಿಕ್ಕಿತು. ಮತ್ತೆ ಉನ್ನತ ಶಿಕ್ಷಣ ಸಚಿವರು ಮಂಡಿಸಿದಂತಹ ಒಂದು ವಿಧೇಯಕದ ಬಗ್ಗೆ 19–20 ಜನ ಸದಸ್ಯರು ಮಾತನಾಡಿದರು. ಈ ರೀತಿ ಸದನದ ಎಲ್ಲಾ ಸದಸ್ಯರು ತಮ್ಮ ಭಾವನೆಗಳನ್ನು, ತಮ್ಮ ಮಾತುಗಳನ್ನು, ತಮ್ಮ ವಿಚಾರಗಳನ್ನು ಮಂಡಿಸುವುದಕ್ಕೆ ಇದು ವೇದಿಕೆ. ಇದರ ಸದ್ವಿನಿಯೋಗವಾಗಬೇಕು. ಆದರೆ, ಮಾತನಾಡುವಂತಹ ಸದಸ್ಯರು ತಮ್ಮ ಮೇಲೆ ತಾವೇ ಸ್ವಲ್ಪ ನಿಯಂತ್ರಣ ಇಟ್ಟುಕೊಂಡು ಇನ್ನೊಬ್ಬರು ಮಾತನಾಡಲಿಕ್ಕೆ ಅವಕಾಶ ಕೊಡೋಣ ಎಂದು ತಿಳಿದುಕೊಂಡು ತಾವು ಏನು ಹೇಳಬೇಕೋ ಆ ವಿಚಾರಗಳನ್ನು 8–10 ನಿಮಿಷಗಳಲ್ಲಿ ಹೇಳಿದರೆ ಸದನದಲ್ಲಿ ಇರುವಂತಹ ಎಲ್ಲಾ ಸದಸ್ಯರಿಗೂ ಮಾತನಾಡಲಿಕ್ಕೆ ಅವಕಾಶ ಸಿಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು B.A.C. meeting ನಲ್ಲಿ ಹೇಳಿರುವ ಪ್ರಕಾರ ನಾಳೆ ಬೆಳಿಗ್ಗೆ finance bill ಗಳನ್ನು ತಂದು ಮಂಡಿಸುವುದು ಸರ್ಕಾರಿ ಕೆಲಸವಾಗುತ್ತದೆ. ಆದ್ದರಿಂದ, ಇವತ್ತು ಮಾತ್ರ ನಮಗೆ ಬಜೆಟ್ ಮೇಲೆ ಮಾತನಾಡಲಿಕ್ಕೆ ಅವಕಾಶ ಸಿಕ್ಕುತ್ತದೆ. ದಯಮಾಡಿ ಸಹಕಾರ ನೀಡಿ. ಎಲ್ಲರಿಗೂ ಅವಕಾಶವನ್ನು ಕೊಡೋಣ. ಎಲ್ಲರೂ ಮಾತನಾಡೋಣ. ನಮ್ಮ ನಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ, ನೇರವಾಗಿ ಹೇಳತಕ್ಕಂತಹ ಪ್ರಯತ್ನವನ್ನು ನಾವು ಮಾಡೋಣ. ಈ

ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳೋಣ ಎಂದು ಹೇಳುತ್ತಾ, ತಡೆ ಹಿಡಿದ ಎರಡು ಪ್ರಶ್ನೆಗಳು ಮಾತ್ರ ಇವತ್ತು ಪಟ್ಟಿಯಾಗಿದ್ದು, ಆ ಎರಡೂ ಪ್ರಶ್ನೆಗಳನ್ನು ಕೇಳಿದಂತಹ ಸದಸ್ಯರನ್ನು ಕರೆಯುತ್ತೇನೆ. ದಯಮಾಡಿ, ಅವರು ತಮ್ಮ ಪ್ರಶ್ನೆಗಳನ್ನು ಕೇಳಿದರೆ, ಅದಕ್ಕೆ ಸಚಿವರು ಉತ್ತರವನ್ನು ಕೊಡುತ್ತಾರೆ.

ಮೊದಲನೆಯ ಪ್ರಶ್ನೆ ಶ್ರೀಯುತ ಸಂದೇಶ ನಾಗರಾಜ್‌ರವರದ್ದಾಗಿದ್ದು, ಅವರು ಸದನಕ್ಕೆ ಗೈರು ಹಾಜರಾಗಿರುತ್ತಾರೆ. ಎರಡನೆಯ ಪ್ರಶ್ನೆ ಶ್ರೀಯುತ ಬಿ. ರಾಮಕೃಷ್ಣ ರವರ ಪ್ರಶ್ನೆಯಾಗಿರುತ್ತದೆ. ಅವರು ತಮ್ಮ ಪ್ರಶ್ನೆಯನ್ನು ಕೇಳಬೇಕು.

## 2. ಪ್ರಶ್ನೋತ್ತರಗಳು

## (ಅ) ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ 121ಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನಲ್ಲಿರುವ ಸ್ಮಶಾನಗಳ ಬಗ್ಗೆ

### 121; ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕಿನ ಎಷ್ಟು ಗ್ರಾಮಗಳಲ್ಲಿ ಸ್ಮಶಾನಗಳಿವೆ? ಎಷ್ಟು ಗ್ರಾಮಗಳಲ್ಲಿ ಸ್ಮಶಾನಗಳಿರುವುದಿಲ್ಲ. (ಮಾಹಿತಿ ನೀಡುವುದು

**ಆ)** ಸ್ಮಶಾನಗಳಿಲ್ಲದಿರುವ ಗ್ರಾಮಗಳಿಗೆ ಸ್ಮಶಾನಕ್ಕಾಗಿ ಭೂಮಿಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಯಾವಾಗ ಮಂಜೂರು ಮಾಡಲಾಗುವುದು? (ಮಾಹಿತಿ ನೀಡುವುದು)

ಇ) ಮಂಡ್ಯ ಜಿಲ್ಲೆಯ, ಕೊಪ್ಪ ಹೋಬಳಿ, ಯಡವನಹಳ್ಳಿ ಗ್ರಾಮದಲ್ಲಿ ಸ.ನಮ. 17 ರಲ್ಲಿ ಸ್ಮಶಾನಕ್ಕಾಗಿ ಮಂಜೂರಾಗಿರುವ ಭೂಮಿಯನ್ನು ಕೆಲವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಈ)** ಬಂದಿದ್ದಲ್ಲಿ, ಹಲವಾರು ಬಾರಿ ಒತ್ತುವರಿಯನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಕೋರಿದ್ದರೂ ಸಹ ತೆರವುಗೊಳಿಸದಿರುವ ಕಾರಣಗಳೇನು? (ಪೂರ್ಣ ಮಾಹಿತಿ ನೀಡುವುದು)

**ಶ್ರೀ ಕೆ.ಎಸ್. ಈಶ್ವರಪ್ಪ (ಕಂದಾಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)**

**ಅ)** ಮದ್ದೂರು ತಾಲ್ಲೂಕಿನಲ್ಲಿ 162 ಗ್ರಾಮಗಳಿದ್ದು, ಈ ಪೈಕಿ 156 ಗ್ರಾಮಗಳಿಗೆ ಸ್ಮಶಾನದ ವ್ಯವಸ್ಥೆ ಇರುತ್ತದೆ. ಉಳಿದ 6 ಗ್ರಾಮಗಳು ಬೇಚರಾಕ್ ಗ್ರಾಮಗಳಾಗಿರುತ್ತವೆ.

**ಆ)** ತಾಲ್ಲೂಕಿನ ಒಟ್ಟು 162 ಗ್ರಾಮಗಳ ಪೈಕಿ 6 ಬೇಚರಾಕ್ ಗ್ರಾಮಗಳನ್ನು ಹೊರತುಪಡಿಸಿ, ಉಳಿದ 156 ಗ್ರಾಮಗಳಲ್ಲಿಯೂ ಸಹ ಸ್ಮಶಾನದ ವ್ಯವಸ್ಥೆ ಇರುತ್ತದೆ. ಆದಾಗ್ಯೂ ಸಹ ಸ್ಮಶಾನಕ್ಕಾಗಿ ಹೆಚ್ಚುವರಿ ಭೂಮಿ ಕೋರಿ ಪ್ರಸ್ತಾವನೆ ಬಂದಲ್ಲಿ ಹಿಡುವಳಿ ಜಮೀನು ಹಾಗೂ ಸರ್ಕಾರಿ ಭೂ ಲಭ್ಯತೆ ಆಧರಿಸಿ, ಮಂಜೂರು ಮಾಡಲು ಕ್ರಮ ವಹಿಸಲಾಗುತ್ತದೆ.

**ಇ)** ಹೌದು ಬಂದಿರುತ್ತದೆ.

**ಈ)** ಅಪೇಕ್ಷಿತ ಸ್ಥಳದ ಅಳತೆ ಕೆಲಸ ಮುಗಿದಿದ್ದು, ಸ್ಮಶಾನದಲ್ಲಿನ ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಗೌರವಾನ್ವಿತ ಉಪ ಮುಖ್ಯಮಂತ್ರಿಗಳಾದ ಈಶ್ವರಪ್ಪನವರು ನನ್ನ ಪ್ರಶ್ನೆಗೆ ಉತ್ತರವನ್ನು ನೀಡಿದ್ದಾರೆ. ಈ ಉತ್ತರದಲ್ಲಿ ಸಂಪೂರ್ಣ ತಪ್ಪು ಮಾಹಿತಿಯನ್ನು ನೀಡಿದ್ದಾರೆ. 1984ರಲ್ಲಿ ಯಡವನಹಳ್ಳಿ ಗ್ರಾಮದ ಒಬ್ಬ ನಾಗರೀಕನಿಗೆ ಇನಾಂ ಜಮೀನು ಮಂಜೂರಾಗಿತ್ತು. ಘನತೆವೆತ್ತ ಮಾನ್ಯ ರಾಜ್ಯಪಾಲರ ಆದೇಶದ ಮೇರೆಗೆ 1999ರಲ್ಲಿ ಆ ಪೈಕಿ ಒಂದು ಎಕರೆಯನ್ನು ಸ್ಮಶಾನಕ್ಕೆ ಎಂದು ತಹಶೀಲ್ದಾರರಿಗೆ ನೊಂದಣಿ ಮಾಡಿಕೊಟ್ಟಿದ್ದಾರೆ. ಅದರಲ್ಲಿ ಖರಾಬು ಕೂಡ 9 ಗುಂಟೆ ಇತ್ತು. ಒಟ್ಟು 1 ಎಕರೆ 9 ಗುಂಟೆಯನ್ನು ಘನತೆವೆತ್ತ ಮಾನ್ಯ ರಾಜ್ಯಪಾಲರ ಆದೇಶದ

ಮೇರೆಗೆ ಸ್ಮಶಾನಕ್ಕೆಂದು ನೊಂದಣಿ ಮಾಡಿಕೊಟ್ಟಿದ್ದಾರೆ. ಆದರೆ ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ಅಕ್ಕಪಕ್ಕದವರು ಆ ಜಾಗವನ್ನು ಒತ್ತರಿಸಿಕೊಂಡು ಈಗ ಬರೀ 5–10 ಗುಂಟೆ ಜಮೀನು ಇದೆ. 2010 ರಲ್ಲಿ ತಹಶೀಲ್ದಾರರ ಹತ್ತಿರ ಜಿಲ್ಲಾಧಿಕಾರಿಗಳ ಬಳಿ ಅಡಿಷನಲ್ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ದೂರನ್ನು ಕೊಟ್ಟರೂ ಯಾವುದೇ ಕ್ರಮವನ್ನು ಇದುವರೆಗೆ ತೆಗೆದುಕೊಂಡಿಲ್ಲ. ನಾನು ಈ ಕುರಿತು ತಹಶೀಲ್ದಾರ ಮತ್ತು ಎಲ್ಲರ ಬಳಿಯೂ ಮಾತನಾಡಿದರೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಅಲ್ಲಿ sketch ಇಲ್ಲ, ಅದು ಇಲ್ಲ, ಇದು ಇಲ್ಲ ಎಂಬ ಸಬೂಬು ಹೇಳಿಕೊಂಡು ಬರುತ್ತಿದ್ದಾರೆ. ಯಡವನಹಳ್ಳಿಯ ಎಲ್ಲಾ ವರ್ಗದ ಜನರಿಗೆ ಸ್ಮಶಾನ ಬಹಳ ಅಗತ್ಯವಾಗಿ ಬೇಕಾಗಿದೆ. ಇದರಿಂದ ಆ ಗ್ರಾಮದ ಜನರು ವಂಚಿತರಾಗಿದ್ದಾರೆ. ನಮ್ಮ ಇಡೀ ತಾಲ್ಲೂಕಿನಲ್ಲಿ 162 ಗ್ರಾಮಗಳ ಪೈಕಿ 156 ಗ್ರಾಮಗಳಲ್ಲಿ ಸ್ಮಶಾನ ಇದೆ ಎಂದು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಅಲ್ಲಿ ಸ್ಮಶಾನ ಇದೆಯೋ ಇಲ್ಲವೋ?

**ಶ್ರೀ ಬಿ. ರಾಮಕೃಷ್ಣ:–** 156 ಗ್ರಾಮಗಳಲ್ಲಿ ಸ್ಮಶಾನ ಇದೆ. ಆದರೆ ಇದರ ಅಭಿವೃದ್ಧಿ ಆಗಿಲ್ಲ. ಕೆಲವು ಕಡೆಗಳಲ್ಲಿ ಒತ್ತುವರಿ ಆಗಿದೆ. ಕೆಲವು ಕಡೆಗಳಲ್ಲಿ ಹಳ್ಳ ದಿಣ್ಣೆಗಳು ಬಿದ್ದಿವೆ. ಹಳ್ಳಿಗಳಲ್ಲಿ ಸ್ಮಶಾನಗಳು ಹೇಗೆ ಇರುತ್ತವೆಂದು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಗೊತ್ತು. ಇನ್ನು ಕೆಲವು ಭಾಗಗಳಲ್ಲಿ ಅಕ್ಕಪಕ್ಕದವರು ಜಾಗವನ್ನು ಒತ್ತರಿಸಿಕೊಂಡಿರುತ್ತಾರೆ. ವಿಶೇಷವಾಗಿ ಹಿಂದುಳಿದ ವರ್ಗದ ಜನರು ಈ ಸ್ಮಶಾನದ ಸೌಲಭ್ಯವನ್ನು ಪಡೆಯುವುದರಿಂದ ವಂಚಿತರಾಗಿರುವಂತಹ ಸನ್ನಿವೇಶಗಳನ್ನು ಕೂಡ ನಾವು ನೋಡಬಹುದಾಗಿದೆ. ಇದರ ಬಗ್ಗೆ ಹಲವಾರು ಬಾರಿ ಸರ್ಕಾರದ ಗಮನ ಸೆಳೆದರೂ ಇದರ ಬಗ್ಗೆ ಮಂತ್ರಿಗಳಾಗಲೀ, ಸರ್ಕಾರದವರಾಗಲೀ ಇದುವರೆಗೂ ಗಮನಹರಿಸಿಲ್ಲ. ಕಳೆದ ಸಾಲಿನಲ್ಲಿ ನಾನು ಸುಮಾರು ಅರ್ಜಿಗಳನ್ನು ನೀಡಿದ್ದೇನೆ. ಮಂಡ್ಯ ಆಯುಕ್ತರಿಗೆ ಕೂಡ ಅರ್ಜಿಯನ್ನು ನೀಡಿದ್ದೇನೆ. ಈ 156 ಸ್ಮಶಾನಗಳಿಗೆ 5 ಲಕ್ಷ ರೂಪಾಯಿಯನ್ನು ಮಂಜೂರು ಮಾಡಿದ್ದಾರೆ. ಇದರಿಂದ ಯಾವ ಅಭಿವೃದ್ಧಿ ಆಗುತ್ತದೆ ಎಂಬುದನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ತಿಳಿಸಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಶಾಸಕರು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಯಾವತ್ತಾದರು ನಮ್ಮ ಕಚೇರಿಗೆ ಬರುತ್ತೇನೆಂದು ಹೇಳಿದರೆ ಸಂಬಂಧಪಟ್ಟ Assistant Commissioner, ಜಿಲ್ಲಾಧಿಕಾರಗಳು ಮತ್ತು ಆ ತಾಲ್ಲೂಕಿನ ತಹಶೀಲ್ದಾರ್ ಅವರನ್ನು ಇಲ್ಲಿಗೇ ಕರೆಸುತ್ತೇನೆ. ಸಮಯ ನಿಗದಿ ಮಾಡಿ ಅಂದು ಅವರುಗಳನ್ನೆಲ್ಲಾ ಕರೆಸಿ ಏನು ಬೇಕೋ ಆ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಡುತ್ತೇನೆ. ಹಣವನ್ನು ಹೆಚ್ಚು ಕೊಡುವುದಕ್ಕೆ ಏನು ಮಾಡಬೇಕೆಂಬುದನ್ನು ಗಮನಿಸಿ, ಹೆಚ್ಚು ಹಣವನ್ನು ಬಿಡುಗಡೆ ಮಾಡಿಕೊಡುತ್ತೇವೆ. ಸ್ಮಶಾನದಲ್ಲೂ ಮೇಲ್ವರ್ಗ, ಹಿಂದುಳಿದ ವರ್ಗ, ದಲಿತರು ಎಂದು ಬರುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇದು ನಮ್ಮ ಭಾಗದಲ್ಲಿ ಇಲ್ಲ.

**ಶ್ರೀಮತಿ ಮೋಟಮ್ಮ:-** ಪ್ರತ್ಯೇಕವಾದ ಸ್ಮಶಾನಗಳು ಇವೆ. ಎಲ್ಲ ಒಟ್ಟಿಗೆ ಇಲ್ಲ. ಹಾಗಾಗಿ ಈ ತಾಪತ್ರಯ ಬರುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಇದು ದುರಾದೃಷ್ಟ. ನಮ್ಮ ಭಾಗದಲ್ಲಿ ಆ ರೀತಿ ಇಲ್ಲ. ಸ್ಮಶಾನ ಅಂದರೆ ಯಾರು ಸಾಯುತ್ತಾರೆ ಅವರನ್ನು ತೆಗೆದುಕೊಂಡು ಹೋಗಿ ಅಲ್ಲಿ ಹಾಕುವುದು ಇಷ್ಟನ್ನು ಬಿಟ್ಟು ಬಿಟ್ಟರೆ, ಅದರಲ್ಲೂ ಮೇಲ್ಜಾತಿ, ಹಿಂದುಳಿದವರು, ದಲಿತರು ಇದರಲ್ಲೂ ಇದೆ ಎಂದರೆ ಇದಕ್ಕಿಂತ ದುರದೃಷ್ಟ ಬೇರೆ ಇಲ್ಲ. ಇದೆಲ್ಲವನ್ನೂ ಸರಿ ಮಾಡಬೇಕಾದರೆ ಏನು ಮಾಡಬೇಕೆಂಬ ಬಗ್ಗೆ ನಾವು ಮತ್ತು ನೀವೆಲ್ಲರೂ ಕುಳಿತು ಚರ್ಚೆ ಮಾಡಿ ಒಂದು ಸಾರಿ ರೂಪಕ್ಕೆ ತರೋಣ. ಮಾನ್ಯ ಶಾಸಕರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಒಂದು ದಿನಾಂಕವನ್ನು ಗೊತ್ತು ಮಾಡಿ ನಾನು ಮತ್ತು ನೀವು ಕುಳಿತು ಸಂಬಂಧಪಟ್ಟ ಅಧಿಕಾರಿಗಳನ್ನೂ ಇಲ್ಲಿಗೇ ಕರೆಸೋಣ. ಯಾವ ಯಾವ ಗ್ರಾಮದಲ್ಲಿ ಏನೇನು ಸಮಸ್ಯೆಗಳು ಇವೆ ನೀವು ಏನೇನು ಪತ್ರವನ್ನು ಬರೆದಿದ್ದೀರಿ, ಯಾವ್ಯಾವ ವಿಚಾರದ ಬಗ್ಗೆ ಅಧಿಕಾರಿಗಳು ಗಮನವನ್ನು ಕೊಟ್ಟಿಲ್ಲ ಎಂಬ ಬಗ್ಗೆ ತಿಳಿಸಿ. ಈ ಪ್ರಶ್ನೆಯನ್ನು ಕೇಳುವ

ಸಂದರ್ಭದಲ್ಲಿ ಮತ್ತು ಮೊದಲು ಕೂಡ ತಾವು ಇದರ ಬಗ್ಗೆ ನನ್ನ ಗಮನಕ್ಕೆ ತಂದಿಲ್ಲ. ಈಗ ನೀವು ನನ್ನ ಗಮನಕ್ಕೆ ತಂದಿದ್ದೀರಿ. ನಾವೂ ನೀವು ಇಲ್ಲಿ ಕುಳಿತುಕೊಂಡು ಒಂದು ದಿನಾಂಕವನ್ನು ನಿಗದಿ ಮಾಡಿ ಯಾವ್ಯಾವ ಅಧಿಕಾರಿಗಳನ್ನು ಕರೆಸಬೇಕೋ ಅವರನ್ನು ಕರೆಸೋಣ. ಅವರಿಗೆ ಏನೇನು ಅನುಕೂಲಗಳು ಬೇಕೋ ಅದನ್ನು ಮಾಡಿಕೊಡೋಣ. ಹೆಚ್ಚು ಹಣವನ್ನು ಕೂಡ ಬಿಡುಗಡೆ ಮಾಡೋಣ.

**ಶ್ರೀ ಬಿ. ರಾಮಕೃಷ್ಣ:-** ಮಾನ್ಯ ಸಭಾಪತಿಯವರೆ, ಅಪೇಕ್ಷಿತ ಸ್ಥಳದ ಕೆಲಸ ಮುಗಿದಿದ್ದು, ಸ್ಮಶಾನದಲ್ಲಿನ ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಮಾನ್ಯ ಉಪ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಇದು ಅಪ್ಪಟ್ಟ ಸುಳ್ಳು. ನಾನು ಮತ್ತು ಆ ಊರಿನ ಜನರೆಲ್ಲರೂ ಸೇರ ದಿನಾಂಕ 1-9-2010 ರಲ್ಲಿ ಅಲ್ಲಿನ ತಹಶೀಲ್ದಾರರಿಗೆ ದೂರನ್ನು ನೀಡಲಾಗಿದೆ. 2010 ರಿಂದ ಒತ್ತುವರಿ ಆಗಿರುವ ಜಮೀನನ್ನು ಬಿಟ್ಟು ಕೊಡಬೇಕಾ? ಯಾರೋ ಒಬ್ಬ ಪುಣ್ಯಾತ್ಮ ಈ ಒಂದು ಉದ್ದೇಶಕ್ಕಾಗಿ ಆ ಜಮೀನನ್ನು ಮಾನ್ಯ ರಾಜ್ಯಪಾಲರಿಗೆ ನೊಂದಣಿಯನ್ನು ಮಾಡಿಕೊಟ್ಟಿರುತ್ತಾರೆ. ಅದರಲ್ಲಿ ಏರಿಯಾ ಮಾರ್ಜಿನ್, ರಸ್ತೆ ಮಾರ್ಜಿನ್ ಎಲ್ಲಾ ಕಳೆದು 1 ಎಕರೆ 9 ಗುಂಟೆ ಇದೆ. ಅ ಜಮೀನನ್ನು ತಹಶೀಲ್ದಾರರಿಗೆ ಬಿಡಿಸಿ ಕೊಡುವುದಕ್ಕಾಗುತ್ತಿಲ್ಲವೆಂದರೆ ಅವರು ಇನ್ನು ಕೆಲಸ ಮಾಡುತ್ತಿದ್ದಾರೆ. ಸದನಕ್ಕೆ ಇಂತಹ ಸುಳ್ಳು ಮಾಹಿತಿಯನ್ನು ಏತಕ್ಕೆ ಕೊಡಬೇಕು? ಮಾನ್ಯ ಉಪ ಮುಖ್ಯಮಂತ್ರಿಯವರು ಕಳೆದ ಅಧಿವೇಶನದಲ್ಲಿ ರಾಮಕೃಷ್ಣ ಅವರೇ, ಮದ್ದೂರು ತಾಲ್ಲೂಕಿನ ಸಮಸ್ಯೆ ಬಗ್ಗೆ ಚರ್ಚೆ ಮಾಡುವ ಸಲುವಾಗಿ ಮದ್ದೂರಿನಲ್ಲಿ ಒಂದು ಸಭೆಯನ್ನು ಕರೆಯುತ್ತೇನೆ, ನಾನು ಈ ಕುರಿತು ಒಂದು ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳಿದ್ದರು. ಮಾನ್ಯ ಉಪ ಮುಖ್ಯಮಂತ್ರಿಗಳು ಎಲ್ಲಾ ಕಡತವನ್ನು ತೆಗೆಸಿ ನೋಡಿದರೆ ತಿಳಿಯುತ್ತದೆ. ನಾನು ನೀವು ಮೀಟಿಂಗ್ ಮಾಡುವ ಬಗ್ಗೆ ಇದುವರೆವಿಗೂ ಯಾವುದೆ ಮಾಹಿತಿ ನಿಮ್ಮಿಂದ ಬಂದಿಲ್ಲ. ನಾವು ನೀವು ಕುಳಿತುಕೊಂಡು ಮಾತನಾಡಿ ಈ ಎಲ್ಲಾ ತೊಂದರೆಯನ್ನು ಬಗೆಹರಿಸೋಣ ಎಂದು ತಾವು ಹೇಳಿದಿರಲ್ಲ

ಅದಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಒಂದು ದಿನಾಂಕವನ್ನು ಗೊತ್ತು ಮಾಡಿ ನಾನು ಮತ್ತು ನೀವು ಕುಳಿತು ಸಂಬಂಧಪಟ್ಟ ಅಧಿಕಾರಿಗಳನ್ನೂ ಇಲ್ಲಿಗೇ ಕರೆಸೋಣ. ಯಾವ ಯಾವ ಗ್ರಾಮದಲ್ಲಿ ಏನೇನು ಸಮಸ್ಯೆಗಳು ಇವೆ ಅದನ್ನು ಬಗೆಹರಿಸೋಣ ಎಂದು ತಾವು ಹೇಳಿದಿರಿ. ಮೊದಲಿಗೆ ಅಧಿಕಾರಿಗಳು ಏನು ಈ ಉತ್ತರವನ್ನು ಕೊಟ್ಟಿದ್ದಾರಲ್ಲಾ ಇದು ಎಷ್ಟು ಸತ್ಯ ಇದೆ ಎಂದು ಸತ್ಯ ಪರಿಶೋಧನೆಯನ್ನು ಮಾಡಿಸಿ. ನಾನು ಬರೀ ಇದು ಒಂದಕ್ಕೆ ಹೇಳುತ್ತಿಲ್ಲ. ಇದರಲ್ಲಿ ಹಿಂದುಳಿದ ವರ್ಗದ ಜನರು ಇದ್ದಾರೆ. ಅವರ ಮೇಲೆ ಇನ್ನೂ ಗದಾ ಪ್ರಹಾರ ಮಾಡಬೇಕೆ? ಈ ಜಾಗವನ್ನು ಒತ್ತುವರಿ ಮಾಡಿಕೊಂಡು ಏನು ಬೇಕಾದರೂ ಮಾಡಬಹುದೇ? ನಾವು ಸಾಯುವುದು ಒಂದೇ, ಅವರು ಸಾಯುವುದು ಒಂದೇ. ಈ ವಿಚಾರದಲ್ಲಿ ಏಕೆ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಒಂದು ನಿಮಿಷ ತಾವು ಕುಳಿತುಕೊಳ್ಳಿ. ನೀವು ನಿಂತಿದ್ದರೆ ನನಗೆ ಉತ್ತರ ಹೇಳುವುದಕ್ಕಾಗುವುದಿಲ್ಲ. ನೀವು ನಮ್ಮ ಕಚೇರಿಗೆ ಬನ್ನಿ, ನಿಮ್ಮ ಎದುರಿಗೇ ಮೀಟಿಂಗ್‌ಗೆ ತಕ್ಷಣ ದಿನಾಂಕ ನಿಗದಿ ಮಾಡುತ್ತೇನೆ. ಇದನ್ನು ನಾನು ಆವತ್ತೂ ಹೇಳಿದ್ದೆ ಇವತ್ತೂ ಕೂಡ ಹೇಳುತ್ತಿದ್ದೇನೆ. ಉತ್ತರ ಹೇಳುವುದಕ್ಕೆ ಬಿಡದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ನೀವು ಬನ್ನಿ ಇಬ್ಬರೂ ಕುಳಿತುಕೊಂಡು ಒಂದು ಸಮಯವನ್ನು ನಿಗದಿ ಮಾಡಿ ಅಧಿಕಾರಿಗಳನ್ನೆಲ್ಲಾ ಕರೆಸಿ ಒಂದು ಸಭೆ ಮಾಡೋಣ.

**ಶ್ರೀ ಬಿ. ರಾಮಕೃಷ್ಣ:–** ಸಭೆ ನಡೆಸುವ ದಿನಾಂಕದಂದು ನಿಮಗೂ ಕೂಡ ಪತ್ರವನ್ನು ಬರೆದು ಹಾಜರಾಗುವುದಕ್ಕೆ ತಿಳಿಸುತ್ತೇವೆ ಎಂದು ಹೇಳಿದ್ದಿರಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನೀವು ಬಂದರೆ ತಾನೇ ಸಭೆಯ ದಿನಾಂಕವನ್ನು ನಿಗದಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನೀವು ಬರದಿದ್ದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ. ಈ ಸಭೆ ಮುಗಿಯುತ್ತಿದ್ದ ಹಾಗೆ ಇಂದೇ ಬನ್ನಿ. ನಮ್ಮಿಬ್ಬರ ದಿನಾಂಕವನ್ನು ನೋಡಿಕೊಂಡು ಒಂದು ದಿನಾಂಕವನ್ನು ನಿಗದಿ ಮಾಡಿ ಅಂದು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು

ಕರೆದು ಅವರ ಜೊತೆ ಚರ್ಚೆ ಮಾಡೋಣ. ಮತ್ತೆ ಇದೇ ಸದನದಲ್ಲಿ ಈ ಪ್ರಶ್ನೆಯನ್ನು ಕೇಳಿದರೆ ನಾನು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಈ ಬೇಜವಾಬ್ದಾರಿ ಮುಂತಾದ ಪದಗಳನ್ನು ಬಳಸಬೇಡಿ. ಇವರು ಏನು ಬೇಕಾದರೂ ಹೇಳುವುದಕ್ಕೆ ಅವಕಾಶ ಕೊಡುವುದಕ್ಕೆ ನನಗೆ ಬರುವುದಿಲ್ಲ. ನಾನು ನೇರವಾಗಿ ಅವರಿಗೆ ಹೇಳುತ್ತಿದ್ದೇನೆ. ನೀವು ದಯವಿಟ್ಟು ಬನ್ನಿ ಕುಳಿತುಕೊಂಡು ಮಾತನಾಡೋಣ. ಆ ಅಧಿಕಾರಿ ತಪ್ಪು ಉತ್ತರ ಕೊಟ್ಟಿದ್ದರೆ, ನಾನು ಏನು ಮಾಡುತ್ತೇನೆಂದು ಆಗ ನೋಡಿ. ಈಗ ಬೇಜವಾಬ್ದಾರಿ ಮುಂತಾದ ಪದಗಳನ್ನು ಬಳಸಿದರೆ ಅದು ಸರಿ ಹೋಗುವುದಿಲ್ಲ.

**ಶ್ರೀ ಬಿ. ರಾಮಕೃಷ್ಣ:–** ಈಗ ಇದಕ್ಕೆ ಉತ್ತರ ಹೇಳಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ರಾಮಕೃಷ್ಣ ಅವರೇ ಈ ಅಧಿವೇಶನ ಮುಗಿದ ತಕ್ಷಣ ಸರ್ಕಾರ dissolve ಆದರೆ ನೀವು ಅವರು ಕುಳಿತು ಮಾತನಾಡುವುದು ಎಲ್ಲಿ. ಇನ್ನು ಒಂದು ವಾರ 15 ದಿವಸಗಳಲ್ಲಿ ಮಾಡಿ ಕೊಡಿ. ನಾನು ಮಂಡ್ಯದ ಸೊಸೆ. ಬೇಕಾದರೆ ನಾನೂ ಬರುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ಇವತ್ತೇ ಬನ್ನಿ ಎಂದು ಅವರಿಗೆ ಹೇಳಿದೆ. ನೀವು ಸರಿಯಾಗಿ ಅದನ್ನು ಕೇಳಿಸಿಕೊಂಡರೆ ತಾನೇ? ನೀವು ಮಂಡ್ಯದ ಸೊಸೆಯೇ ಆಗಿರಿ. ಅತ್ತೆ ಆಗಬೇಡಿ. ಅತ್ತೆ ಅಂದರೆ ತಾಯಿಯಂತಹ ಅತ್ತೆಯಾಗಿ ಇರಿ ಎಂದು ಹೇಳಬಯಸುತ್ತೇನೆ.

**ಶ್ರೀಮತಿ ಮೋಟಮ್ಮ:–** ನಾನು ಹೈದರಾಬಾದಿಗೆ ಅತ್ತೆಯಾಗಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಅವರು ಇಡೀ ಆಂಧ್ರ ರಾಜ್ಯಕ್ಕೆ ಅತ್ತೆಯಾಗಿದ್ದಾರೆ ಅಂದರೆ ಅವರು ಎಷ್ಟು powerful ಎಂಬುದನ್ನು ವಿಚಾರ ಮಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅದು ಬಹಳ dangerous. ಮಾನ್ಯ ರಾಮಕೃಷ್ಣ ಅವರೇ ನಾವು ನೀವು ಸಾರ್ವಜನಿಕರ ಸೇವೆಗೋಸ್ಕರವೇ ಇದ್ದೇವೆ. ಇಲ್ಲಿ ಸರ್ಕಾರ dissolve ಆಗುತ್ತದೋ, ಬಿಡುತ್ತದೋ ಅದು ಬೇರೆ ವಿಚಾರ.

**ಶ್ರೀ ಬಿ. ರಾಮಕೃಷ್ಣ:–** ನಾನು ಆ ಮಾತನ್ನು ಹೇಳಲಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ತಾವು ಹೇಳಲಿಲ್ಲ ನಿಜ. ಅದನ್ನು ಇವರು ಹೇಳಿದ್ದು. ದಯವಿಟ್ಟು ಈ ಸಭೆಯು ಮುಗಿಯುತ್ತಿದ್ದ ಹಾಗೇ ಬನ್ನಿ. ನಮ್ಮಿಬ್ಬರ ಪೂರ್ವ ನಿಗದಿತ ಕಾರ್ಯಕ್ರಮಗಳಿಗೆ ವ್ಯತ್ಯಾಸವಾಗದಂತೆ ನೋಡಿಕೊಂಡು ಒಂದು ದಿನಾಂಕವನ್ನು ನಿಗದಿ ಮಾಡಿ ಅಂದು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಕರೆಯೋಣ. ಅವರ ಜೊತೆ ಚರ್ಚೆ ಮಾಡೋಣ. ನಮಗೆ ಮತ್ತು ತಮಗೆ ಇಬ್ಬರಿಗೂ ಜವಾಬ್ದಾರಿ ಇರುತ್ತದೆ. ಸುಮ್ಮನೆ ಚೀಟಿ ಇಟ್ಟುಕೊಂಡು ಇಲ್ಲಿ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ನಾನು ಉತ್ತರವನ್ನು ನೀಡುವುದಿಲ್ಲ. ನೀವುಗಳೂ ಕೂಡ ಮಂತ್ರಿಗಳಾಗಿ ಕೆಲಸ ನಿರ್ವಹಣೆ ಮಾಡಿದ್ದೀರಿ. ನಮ್ಮ ಅಧಿಕಾರಿಗಳು ಏನು ಉತ್ತರವನ್ನು ನೀಡಿರುತ್ತಾರೆಯೋ ಅದನ್ನು ಇಲ್ಲಿ ಕೊಟ್ಟಿರುತ್ತೇವೆ. ನಾವೇನು ಅಲ್ಲಿಗೆ ಹೋಗಿ ಯಾರು ಈ ಸ್ಮಶಾನದ ಜಾಗವನ್ನು ಒತ್ತುವರಿ ಮಾಡಿದ್ದಾರೆಂದು ನೋಡಿಕೊಂಡು ಬಂದಿರುತ್ತೇವೆಯೇ? ಅಧಿಕಾರಿಗಳು ನೀಡಿದಂತಹ ಉತ್ತರವನ್ನೇ ನಾವು ಇಲ್ಲಿ ನೀಡುವುದು. ಸ್ವಲ್ಪ ಸಮಾಧಾನವಾಗಿ ಕೇಳಿ. ದಯವಿಟ್ಟು ನೀವು ಬನ್ನಿ. ಆ ಸ್ಥಳಕ್ಕೆ ಹೋಗಬೇಕಾ ಆ ಸ್ಥಳಕ್ಕೆ ಹೋಗೋಣ. ಯಾರು ಒತ್ತುವರಿ ಮಾಡಿರುತ್ತಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳೋಣ. ಅಧಿಕಾರಿಗಳು ತಪ್ಪು ಮಾಡಿದ್ದರೆ ನಾನು ಯಾವ ಕಾರಣಕ್ಕೂ ಬಿಡುವುದಿಲ್ಲ. ದಯವಿಟ್ಟು ನೀವು ಬನ್ನಿ ಕುಳಿತು ಚರ್ಚೆ ಮಾಡೋಣ. ಯಾರು ಸುಳ್ಳು ಮಾಹಿತಿ ಕೊಟ್ಟಿದ್ದಾರೋ, ಸುಳ್ಳು ದಾಖಲೆ ಕೊಟ್ಟಿದ್ದಾರೋ ಮತ್ತು ನೀವು ಈ ಬಗ್ಗೆ ದೂರನ್ನು ಕೊಟ್ಟಾಗ ಯಾವ ಅಧಿಕಾರಿ ಅದರ ಬಗ್ಗೆ ಕ್ರಮವನ್ನು ತೆಗೆದುಕೊಂಡಿಲ್ಲವೋ ಆ ಅಧಿಕಾರಿಗೆ ಏನು ಮಾಡುತ್ತೇನೆಂದು ಈಗ ಹೇಳುವುದಿಲ್ಲ. ಆಗ ಹೇಳುತ್ತೇನೆ. ನೀವು ಬನ್ನಿ ಕುಳಿತು ಚರ್ಚೆ ಮಾಡೋಣ ಇದಕ್ಕೆ ಒಂದು ಪರಿಹಾರವನ್ನು ಕಂಡು ಹಿಡಿಯೋಣ.

**ಸಭಾಪತಿಯವರು:–** ಧನ್ಯವಾದಗಳು.

( 11–30 )

## 3. ಪ್ರಕಟಣೆಗಳು

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾ ಹಾಗೂ ನಡವಳಿಕೆಯ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 13.02.2013 ರಂದು " ಶ್ರೀ ಮಲೈ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2013" ನ್ನು ಅನುಮೋದಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 121ರ ಮೇರೆಗೆ ವಿಧಾನ ಸಭೆಯ ದಿನಾಂಕ 13.02.2013 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಿತೆಂದು ಸದನದ ಗಮನಕ್ಕೆ ತರಲಾಗಿದೆ.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2013.
2. ಸಿ.ಎಂ.ಆರ್. ವಿಶ್ವವಿದ್ಯಾಲಯ ವಿಧೇಯಕ, 2013.
3. ನ್ಯೂ ಬಾಲ್ಡ್‌ವಿನ್ ವಿಶ್ವವಿದ್ಯಾಲಯ ವಿಧೇಯಕ, 2013.
4. ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ವಿಧೇಯಕ, 2013.

## 4 ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

## (ಅ) ಬೆಂಗಳೂರಿನ ಹೊರವಲಯದ ರಿಂಗ್ ರಸ್ತೆಗಳು, ನೈಸ್ ರಸ್ತೆಗಳಲ್ಲಿ ಇನ್ನಿತರೆ ಹೊಸದಾಗಿ ನಿರ್ಮಿಸಿರುವ ರಸ್ತೆಗಳಲ್ಲಿ ಯುವಕರು ಹಾಗೂ ವಿದ್ಯಾರ್ಥಿಗಳು ಮದ್ಯಪಾನ ಹಾಗೂ ಮಾದಕ ದ್ರವ್ಯಗಳನ್ನು ಸೇವಿಸಿ ಡ್ರ್ಯಾಗ್‌ರೇಸ್ ನಡೆಸಿ ಅಪಘಾತವಾಗಿ ಮೃತರಾಗುತ್ತಿರುವ ಬಗ್ಗೆ.

**ಶ್ರೀ ಆರ್.ವಿ. ವೆಂಕಟೇಶ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಬೆಂಗಳೂರಿನ ಹೊರವಲಯದ ರಿಂಗ್ ರಸ್ತೆಗಳು, ನೈಸ್ ರಸ್ತೆಗಳಲ್ಲಿ ಹಾಗೂ ಇನ್ನಿತರೆ ಹೊಸದಾಗಿ ನಿರ್ಮಿಸಿರುವ ರಸ್ತೆಗಳಲ್ಲಿ ಯುವಕರು ಹಾಗು ವಿದ್ಯಾರ್ಥಿಗಳು ಮದ್ಯಪಾನ ಹಾಗೂ ಮಾದಕ ದ್ರವ್ಯಗಳನ್ನು ಸೇವಿಸಿ ಡ್ರ್ಯಾಗ್‌ರೇಸ್‌ನಲ್ಲಿ ತೊಡಗಿ ಅತೀವೇಗವಾಗಿ ಬೈಕ್‌ಗಳನ್ನು ಅಡ್ಡಾದಿಡ್ಡಿ ಚಲಿಸಿ ವಾಹನವು ಅವರ ನಿಯಂತ್ರಣಕ್ಕೆ ಬರದೇ ಇರುವ ಕಾರಣ ರಸ್ತೆ ವಿಭಾಜಗಳಿಗೆ ಹೊಡೆದು ಅಪಘಾತವಾಗಿ ಅಥವಾ ಅಕ್ಕಪಕ್ಕದಲ್ಲಿ ಚಲಿಸುತ್ತಿರುವ ವಾಹನಗಳಿಗೆ ಡಿಕ್ಕಿ ಹೊಡೆಯುವ ಪರಿಣಾಮವಾಗ ಅನೇಕ ಯುವಕ/ಯುವತಿಯರು ಮೃತರಾಗುತ್ತಿರುವ ವಿಚಾರವು ಶೋಚನೀಯವಾದ ಸಂಗತಿಯಾಗಿದೆ. ಈ ರಸ್ತೆಗಳಲ್ಲಿ ಸಂಚಾರಿ ಪೊಲೀಸ್ ಗಸ್ತು ಇಲ್ಲದಿರುವ ಕಾರಣದಿಂದ ಬಹುಮುಖ್ಯವಾಗಿ ನೈಸ್ ರಸ್ತೆಗಳಲ್ಲಿ ಈ ಅವಘಡಗಳು ಹೆಚ್ಚಾಗಿ ನಡೆಯುತ್ತಿವೆ.

ಈ ವಿಚಾರವಾಗಿ ಹೊರವಲಯದ ರಿಂಗ್ ರಸ್ತೆಗಳಲ್ಲಿ, ನೈಸ್ ರಸ್ತೆಗಳಲ್ಲಿ ಹಾಗೂ ಇನ್ನಿತರೆ ಹೊಸದಾಗಿ ನಿರ್ಮಿಸಿರುವ ರಸ್ತೆಗಳಲ್ಲಿ ಯುವಕರು ಇಂತಹ ಅಘಾತಕಾರಿ ಡ್ರ್ಯಾಗ್‌ರೇಸ್‌ಗಳಿಗೆ ಅವಕಾಶವಿಲ್ಲದಂತೆ ನಿಯಂತ್ರಣವನ್ನು ಮಾಡಲು ಈ ಕೂಡಲೇ ಈ ಎಲ್ಲಾ ರಸ್ತೆಗಳಲ್ಲಿ ಸಂಚಾರಿ ಪೊಲೀಸ್ ವ್ಯವಸ್ಥೆಯನ್ನು ಹೆಚ್ಚಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ನೀಡುವ ಸಲುವಾಗಿ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಗೃಹ ಸಚಿವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ವಿ. ಸೋಮಣ್ಣ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ವಿಷಯವನ್ನು ಮಾನ್ಯ ಗೃಹ ಸಚಿವರ ಗಮನಕ್ಕೆ ತೆಗೆದುಕೊಂಡು ಬಂದು ಅವರಿಂದ ಉತ್ತರವನ್ನು ಕೊಡಿಸುತ್ತೇನೆ.

**(ಆ) ಸರ್ಕಾರ ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರೋತ್ಸಾಹದ ಧನವನ್ನು 2 ರೂಪಾಯಿಗಳಿಂದ 5 ರೂಪಾಯಿಗಳಿಗೆ ಹೆಚ್ಚಿಸಬೇಕು ಮತ್ತು ಏನು ಹಾಲಿನ ದರವನ್ನು ಗ್ರಾಹಕರಿಗೆ ಹೆಚ್ಚು ಮಾಡಲಾಗಿದೆ ಅದನ್ನು ಕಡಿಮೆ ಮಾಡುವ ಬಗ್ಗೆ.**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕನಾಟಕ ಹಾಲು ಮಹಾಮಂಡಲ (ಕೆ.ಎಂ.ಎಫ್) ನಷ್ಟದಲ್ಲಿ ಇದೆ ಎಂದು ತಿಳಿಸಿ ಕೆಲವು ದಿನಗಳ ಹಿಂದೆ ಹಾಲಿನ ಬೆಲೆಯನ್ನು 3 ರೂಪಾಯಿಗಳು ಹಾಗೂ ಪಶು ಆಹಾರಕ್ಕೆ ಪ್ರತಿ ಟನ್‌ಗೆ 3,000 ರೂಪಾಯಿಗಳನ್ನು ಹೆಚ್ಚು ಮಾಡಲಾಗಿದೆ. ಇದರಿಂದ ಹಾಲು ಉತ್ಪಾದಕರಿಗೆ ಹಾಗೂ ಗ್ರಾಹಕರಿಗೆ ತುಂಬಾ ಹೊರೆಯಾಗಿದೆ. ರಾಜ್ಯದಲ್ಲಿರುವ 13 ಹಾಲು ಒಕ್ಕೂಟಗಳು ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ಏಕರೂಪದ ದರ ನೀಡುತ್ತಿಲ್ಲ. ಉದಾಹರಣೆಗೆ ಬೆಂಗಳೂರು ನಗರ ಗ್ರಾಮಾಂತರ ಹಾಲು ಒಕ್ಕೂಟ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ 19.50 ರೂಪಾಯಿಗಳು, ಮಂಡ್ಯ ಹಾಲು ಒಕ್ಕೂಟ 17.40 ರೂ ಹಾಸನ ಹಾಲು ಒಕ್ಕೂಟ 17.50 ರೂಪಾಯಿಗಳು, ತುಮಕೂರು ಹಾಲು ಒಕ್ಕೂಟ 18 ರೂಪಾಯಿಗಳನ್ನು ಪಾವತಿಸುತ್ತಿರುವುದರಿಂದ ಹಾಲು ಉತ್ಪಾದಕರಿಗೆ ತುಂಬಾ ನಷ್ಟ ಉಂಟಾಗುತ್ತಿದೆ. ಸಾಮಾನ್ಯ ಪಶು ಆಹಾರಕ್ಕೆ ಪ್ರತಿ ಟನ್‌ಗೆ 14.770 ರೂಪಾಯಿಗಳಿಗೆ ಮಾರಾಟ ಮಾಡಲಾಗುತ್ತಿದ್ದು, ಅದನ್ನು 17,770 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಇದರಿಂದ ಹಾಲು ಉತ್ಪಾದಕರ ಬದುಕು ಚಿಂತಾಜನಕವಾಗಿದೆ.

ರಾಜ್ಯದ 13 ಹಾಲು ಒಕ್ಕೂಟಗಳಿಂದ ಪ್ರತಿ ನಿತ್ಯ 50 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಕಳೆದ 4 ದಿನಗಳ ಹಿಂದೆ ಪ್ರತಿ ಲೀಟರ್ ಹಾಲಿಗೆ 3 ರೂಪಾಯಿಗಳ ಪೈಕಿ 2 ರೂಪಾಯಿಗಳನ್ನು ಹಾಲು ಉತ್ಪಾದಕರಿಗೆ

ನೀಡಲಾಗುತ್ತಿದೆ. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ 1 ರೂಪಾಯಿ ಕಡಿಮೆ ನೀಡುತ್ತಿರುವುದರಿಂದ ಪ್ರತಿ ದಿನ ಹಾಲು ಉತ್ಪಾದಕರಿಗೆ 50 ಲಕ್ಷ ರೂಪಾಯಿಗಳು ನಷ್ಟವಾಗುತ್ತಿದೆ. ವಾರ್ಷಿಕ 180 ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಮಾರುಕಟ್ಟೆಯಲ್ಲಿ ಪ್ರತಿ ಲೀಟರ್ ಹಾಲಿಗೆ 27 ರೂಪಾಯಿಗಳಿಗೆ ಮಾರಾಟ ಮಾಡಲಾಗುತ್ತಿದೆ. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ಸರಾಸರಿ 17.50 ರೂಪಾಯಿಗಳನ್ನು ಮಾತ್ರ ನೀಡಲಾಗುತ್ತಿದೆ. ಇಷ್ಟಾದರು ಮಹಾಮಂಡಲ ನಷ್ಟದಲ್ಲಿರುವುದು ದುರದೃಷ್ಟಕರ ಸಂಗತಿ

ಈ ಸಮಯದಲ್ಲಿ ಹಾಲು ಉತ್ಪಾದಕರ ಹಾಗೂ ಗ್ರಾಹಕರ ನೆರವಿಗೆ ಸರ್ಕಾರ ಧಾವಿಸಬೇಕು. ಮಹಾಮಂಡಲದ ನಷ್ಟದ ಬಗ್ಗೆ ಸೂಕ್ತ ತನಿಖೆ ಮಾಡಿ ಕ್ರಮ ಕೈಗೊಂಡು ಒಕ್ಕೂಟಗಳಲ್ಲಿ ಏಕರೂಪದ ಆಹಾರ ದರ ಏರಿಕೆಯಿಂದ ಗ್ರಾಹಕರಿಗೆ ಹಾಗೂ ಹಾಲು ಉತ್ಪಾದಕರಿಗೆ ತುಂಬಾ ಅನ್ಯಾಯ ಉಂಟಾಗಿದೆ. ರಾಜ್ಯ ಸರ್ಕಾರ ಪ್ರತಿ ಲೀಟರ್ ಹಾಲಿಗೆ ನೀಡುತ್ತಿರುವ 2 ರೂಪಾಯಿಗಳ ಪ್ರೋತ್ಸಾಹ ಧನವನ್ನು 5 ರೂಪಾಯಿಗಳಿಗೆ ಕೂಡಲೇ ಹೆಚ್ಚಿಸಬೇಕು ಹಾಗೂ ಮಾರುಕಟ್ಟೆಯಲ್ಲಿ ಹಾಲಿನ ದರವನ್ನು ಕಡಿಮೆ ಮಾಡಬೇಕೆಂದು ಈ ಮೂಲಕ ಮಾನ್ಯ ಪಶು ಸಂಗೋಪನಾ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ವಿ. ಸೋಮಣ್ಣ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟಂತಹ ಸಚಿವರಿಂದ ನಾಳೆಯ ದಿವಸ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಬಸವರಾಜ ಹೊರಟ್ಟಿಯವರು ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದಾರೆ. ಆದರೆ ಈಗ ಅವರು ಸದನದಲ್ಲಿಲ್ಲ.

**(ಇ) ಹಳಿಯಾಳ ಅರಣ್ಯ ಇಲಾಖೆಯ ಉಪ ವಿಭಾಗದ ಸಿಬ್ಬಂದಿಗಳ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಂದು ಸದ್ಯ ಸೇವೆ ಸಲ್ಲಿಸುತ್ತಿರುವ ಶ್ರೀ ಪಿ.ಎ. ಅಂಬೇಕರ ರವರಿಗೆ ಮಾನಸಿಕ ಹಿಂಸೆ, ಕಿರುಕುಳ ನೀಡುತ್ತಿರುವ ಬಗ್ಗೆ.**

**ಶ್ರೀ ಶ್ರೀಕಾಂತ ಲಕ್ಷ್ಮಣ ಘೋಟ್ನೇಕರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಹಳಿಯಾಳ ವಿಭಾಗದ, ಹಳಿಯಾಲ ಉಪ ವಿಭಾಗದಲ್ಲಿ ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯೆಂದು ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಪಿ.ಎ. ಅಂಬೇಕರ ತಮ್ಮ ಕೆಳಗಿನ ಸಿಬ್ಬಂದಿಗೆ ಮೇಲಿಂದ ಮೇಲೆ ಮಾನಸಿಕ ಹಿಂಸೆ, ಕಿರುಕುಳ ನೀಡುತ್ತಿದ್ದು ಇವರಿಂದ ತಮಗೆ ಮತ್ತು ತಮ್ಮ ಕುಟುಂಬ ವರ್ಗದವರಿಗೆ ಮಾನಸಿಕ ತೊಂದರೆಯಾಗಿದ್ದು ಅಲ್ಲದೇ ನಮಗೆ ಸರ್ಕಾರಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗಿರುತ್ತದೆ. ಆದ್ದರಿಂದ ಅವರನ್ನು ಇಲ್ಲಿಂದ ವರ್ಗಾವಣೆ ಮಾಡಿ. ಇಲ್ಲವೇ ನಮ್ಮ ಎಲ್ಲಾ 99 ಮಂದಿ ಸಿಬ್ಬಂದಿಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಬೇಕೆಂದು ವಿನಂತಿಸಿ ಕರ್ನಾಟಕ ರಾಜ್ಯ ಉಪ ವಲಯ ಅರಣ್ಯಾಧಿಕಾರಿಗಳ ಸಂಘ (ರಿ) ಬೆಂಗಳೂರು ಇವರ ಸಹಯೋಗದಲ್ಲಿ ಹಳಿಯಾಲ ಅರಣ್ಯ ಇಲಾಖೆಯ ಸಿಬ್ಬಂದಿ ಸಾಮೂಹಿಕವಾಗಿ ಸಹಿ ಮಾಡಿ ಮನವಿ ನೀಡಿರುತ್ತಾರೆ.

ಶ್ರೀ ಪಿ.ಎ. ಅಂಬೇಕರ ಸಿ.ಅ.ಸಿ ಇವರು ಈ ಹಿಂದೆ ಕರ್ತವ್ಯ ಮಾಡಿದ ಸ್ಥಳದಲ್ಲೂ ಇವರು ನೀಡಿದ ಮಾನಸಿಕ ಹಿಂಸೆಗೆ ಸಿಬ್ಬಂದಿಗಳು ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳು ಇರುತ್ತದೆ. ಹಾಗೂ ಸಾರ್ವಜನಿಕ ವಲಯದಲ್ಲೂ ತೊಂದರೆ ನೀಡುವ ಅಧಿಕಾರಿ ಇವರದ್ದಾರೆ. ಅದುದರಿಂದ ತಮ್ಮ ಮುಖಾಂತರ ಈ ವಿಷಯದ ಬಗ್ಗೆ ಮಾನ್ಯ ಅರಣ್ಯ ಸಚಿವರು ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ವಿ. ಸೋಮಣ್ಣ (ಸಭಾ ನಾಯಿಕರು):–** ಮಾನ್ಯ ಸಭಾಪತಿಯವರೆ, ಸದರಿ ವಿಷಯವನ್ನು ಅರಣ್ಯ ಸಚಿವರ ಗಮನಕ್ಕೆ ತೆಗೆದುಕೊಂಡು ಬಂದು ನಾಳೆ ದಿವಸ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:–** ಶ್ರೀ ಅಶ್ವನಾಥನಾರಾಯಣರವರು ದಿನಾಂಕ 11.02.2013ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಈಗ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

## ಸಚಿವರ ಹೇಳಿಕೆ

### (ಅ) ವಿಷಯ: ಭೂಮಂಜೂರಿ ಪ್ರಕರಣದಲ್ಲೂ ಮಿಸಿಂಗ್ ಕಡತ ನಿರ್ವಹಣೆ ಕುರಿತು.

**ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ಈ ಭೂಮಂಜೂರಿ ಪ್ರಕರಣದಲ್ಲಿ ಮಿಸಿಂಗ್ ಕಡತ ನಿರ್ವಹಣೆ ಕುರಿತು ಮಾನ್ಯ ಅಶ್ವಥನಾರಾಯಣರವರು ಪ್ರಸ್ತಾಪ ಏನು ಮಾಡಿದ್ದಾರೆ ಅದನ್ನು ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ತಿಳಿಸಿ, ಅವರು ಹೇಳಿದ ಪ್ರಕಾರ ರೈತರಿಗೆ ಆಗುತ್ತಿರುವಂತಹ ತೊಂದರೆಗಳನ್ನು ಗಮನಿಸಿ, ಅವರಿಗೆ ಏನು ಅವಶ್ಯಕತೆ ಇದೆ ಅದನ್ನು ಮಾಡಿಕೊಡುತ್ತೇವೆ.

**ಶ್ರೀ ಅಶ್ವತ್ ನಾರಾಯಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ, ಅವರಿಗೆ ಸುಮಾರು ಮೂವತ್ತು–ನಲವತ್ತು ವರ್ಷಗಳ ಹಿಂದೆ ಈ ಭೂಮಿ ಮಂಜೂರಾತಿ ಆಗಿದೆ ಆ ಸಂದರ್ಭದಲ್ಲಿ ಅಲ್ಲಿ ಒಂದು ಚೆಕ್‌ಪೋಸ್ಟ್ ಇತ್ತು. ಆ ಚೆಕ್ ಪೋಸ್ಟ್‌ನಿಂದ 16 ಕಿಲೋಮೀಟರ್ ಅಥವಾ 18 ಕಿಲೋಮೀಟರ್ ಎಂಬುದಾಗಿ ಒಂದು ಬೌಂಡರಿಯನ್ನು ನಿಗದಿಪಡಿಸಿಕೊಂಡಿರುತ್ತಾರೆ. ಭೂ ಮಂಜೂರಾತಿಯಾದಂತಹ ಸಂದರ್ಭದಲ್ಲಿ ಅವರಿಗಿದ್ದಂತಹ ಜಮೀನು ಮೈಸೂರು ರಸ್ತೆ ಗುಡ್ಡದಹಳ್ಳಿ ಬಳಿ ಇತ್ತು. ಸನ್ಮಾನ್ಯ ದೇವರಾಜ ಅರಸು ಅವರ ಕಾಲದಲ್ಲಿ ಅದು sanction ಆಗಿತ್ತು. ಈಗ ದೊಡ್ಡ ಆಲದಮರ ಬಳಿ ಅಂದರ ಕುಂಬಳಗೋಡು ಹತ್ತಿರ ಅದರ ಬೌಂಡರಿ ಇದೆ. ಹೀಗಾಗಿ ಈ ಜಮೀನೆಲ್ಲಾ ದೊಡ್ಡ ಆಲದಮರ, ಕುಂಬಳಗೋಡು ಹತ್ತಿರದಲ್ಲಿ ಬರುತ್ತದೆ. ಈಗ ಆ ಜಮೀನು ಕೆಂಪೇಗೌಡ ಬಡಾವಣೆ ಮತ್ತು ವಿಶ್ವೇಶ್ವರಯ್ಯ ಬಡಾವಣೆಗೆ acquire ಆಗಿದೆ. ಆ ಸಂದರ್ಭದಲ್ಲಿ ಕೆಲವರು Form No. 53ನಲ್ಲಿ apply ಮಾಡಿರುವುದಕ್ಕೆ ಕೆಲವು ದಾಖಲೆಗಳಿವೆ, ಖಾತೆ ಇದೆ, ಪಹಣಿ ಇದೆ. ಆದರೆ ಅದನ್ನು ಪೋಡಿ ಮಾಡುತ್ತಿಲ್ಲ. ಹೀಗಾಗಿ ಬಿ.ಡಿ.ಎ.ನಲ್ಲಿ ಅವರಿಗೆ ಕೋಟ್ಯಾಂತರ ರೂಪಾಯಿ ಹಣವೇನು ಬಂದಿದೆ ಅದು pending ಆಗಿದೆ.

ದುಡ್ಡನ್ನು ತೆಗೆದುಕೊಳ್ಳಲಿಕ್ಕೆ ಅವರಿಗೆ ದಾಖಲಾತಿಗಳೇನು ಬೇಕು ಆ ದಾಖಲಾತಿಗಳೇನು ಬೇಕು ಆ ದಾಖಲಾತಿಗಳಾಗುತ್ತಿಲ್ಲ, ದಾಖಲಾತಿ ಆಗಬೇಕಾದರೆ ಪೋಡಿ ಆಗಬೇಕು. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಈ ವಿಷಯದಲ್ಲಿ ವೈಯಕ್ತಕವಾಗಿ ಆಸಕ್ತಿ ವಹಿಸಿ ಸಂಬಂಧಪಟ್ಟಂಹ ಅಧಿಕಾರಿಗಳನ್ನು ಕರೆಸಿ ದಯಮಾಡಿ ಪೋಡಿ ಮಾಡುವುದಕ್ಕೆ ಆದೇಶ ನೀಡಬೇಕು. ಬಿ.ಡಿ.ಎ.ನವರು ಒಟ್ಟು 13 ದಾಖಲಾತಿಗಳನ್ನೇನು ಕೇಳುತ್ತಾರೆ ಅದರಲ್ಲಿ ಒಂದೆರಡು ದಾಖಲಾತಿಗಳಿಲ್ಲದಿದ್ದ ಪಕ್ಷದಲ್ಲಿ ಕೂಡ ಅವರಿಗೆ relaxation ಕೊಟ್ಟು, ಆ ಹಣವನ್ನು ಪಡೆದುಕೊಳ್ಳುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಅದಕ್ಕಾಗಿ ಪೋಡಿ ಮಾಡುವುದಕ್ಕೆ ಸಂಬಂಧಿಸಿದಂತೆ ತಕ್ಷಣವೇ ಆದೇಶ ಮಾಡಬೇಕೆಂದು ನಾನು ಮತ್ತೊಮ್ಮೆ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ಈಗಾಗಲೇ ಕಂದಾಯ ಸಚಿವರ ಜೊತೆಯಲ್ಲಿ ಮನವಿ ಮಾಡಿಕೊಂಡಂತಹ ಸಂದರ್ಭದಲ್ಲಿ ಅವರು ಡಿ.ಸಿ.ಯವರು ಮತ್ತು DDLR ಅವರ್ನೆಲ್ಲಾ ಕರೆಸುವುದಾಗಿ ತಿಳಿಸಿದ್ದಾರೆ. ಸತತವಾಗಿ ಕಳೆದ ಮೂರು ವರ್ಷಗಳಿಂದ ನಮ್ಮ ರೈತರ ಜಮೀನು acquisition ಆಗಿರುವಂತಹ ಹಣವನ್ನು ಬಿ.ಡಿ.ಎ. ಯಿಂದ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಕಡತಗಳ ಮೂಲ ದಾಖಲೆಗಳನ್ನು ತರುವಂತೆ ತಿಳಿಸುತ್ತಾರೆ, ತಾಲ್ಲೂಕು ಕಛೇರಿಗಳಲ್ಲಿ 1983ನೇ ಇಸವಿ ಅಥವಾ ಅದಕ್ಕಿಂತಲೂ ಹಿಂದಿನ ದಿನಗಳ ದಾಖಲೆಗಳನ್ನು ಕೇಳಿದರೆ ನಮ್ಮಲ್ಲಿ ಹಾ ಇರುವುದಿಲ್ಲ ಎಂದು endorsement ಕೊಡುತ್ತಾರೆ. ಅದನ್ನು ಇವರು ಒಪ್ಪಿಕೊಳ್ಳುವುದಿಲ್ಲ. ಈ ವಿಚಾರವಾಗಿ ಹಿಂದಿನ ಡಿ.ಸಿಯವರಲ್ಲಿ ನಾವು ತುಂಬಾ ಒತ್ತಾಯವನ್ನು ತಂದು, ನ್ಯಾಯಾಲಕ್ಕೆ ಕೂಡ ಹೋಗಿದ್ದು, ಅಲ್ಲಿಂದ ಆದೇಶ ಬಂದಿದ್ದರೂ ಸಹ ಇವೊತ್ತು ಕೂಡ DDLR ಮಾಡುತ್ತಿಲ್ಲ. ಆದ್ದರಿಂದ ತಾಉ ಇವೊತ್ತೇ ಆ ಕಡತವನ್ನು ತರಿಸಿ ಅದರ ಮೇಲೆ ತಮ್ಮ ಅನಿಸಿಕೆ ಏನಿದೆ, ಅದರಿಂದ ರೈತರಿಗೆ ಏನು ತೊಂದರೆ ಇದೆ ಅದನ್ನು ನಿವಾರಣೆ ಮಾಡುವ

ಒಂದು ಪ್ರಕ್ರಿಯೆಗೆ ಮುಂದಾಗಬೇಕು. ಏಕೆಂದರೆ ಈ 4800 ಜನರಲ್ಲಿ ಅತಿ ಹೆಚ್ಚಿನವರು ಹಿಂದುಳಿದ ವರ್ಗ ಮತ್ತು ಹರಿಜನರೇ ಇರುತ್ತಾರೆ. ಅವರಿಗೆ ಸಣ್ಣ ಪುಟ್ಟ ಮಂಜೂರಾತಿಗಳು, ಅಂದರೆ 1 ಎಕರೆ ಅಥವಾ 20 ರಿಂದ 30 ಗುಂಟೆ ಜಮೀನುಗಳಿರುತ್ತವೆ. ಕಂದಾಯ ಇಲಾಖೆಯಲ್ಲಿಯೇ ಮೂಲ ದಾಖಲಾತಿಗಳಿಲ್ಲವೆಂದರೆ ಅವರೇನೂ ಮಾಡುವುದಕ್ಕಾಗುವುದಿಲ್ಲ. ಅವರಲ್ಲಿರುವಂತಹ endoresementಗಳನ್ನು ಇವರು ಒಪ್ಪುವುದಿಲ್ಲ. ನಮ್ಮ register ನಲ್ಲಿಲ್ಲ ಎಂದು ಹೇಳುತ್ತಾರೆ. ಆ register ಕಾಯ್ದುಕೊಳ್ಳಬೇಕಾದುದು ಕಂದಾಯ ಇಲಾಖೆಯ ಜವಾಬ್ದಾರಿಯೇ ಹೊರತು ರೈತರದ್ದಾಗಲಿ ಅಥವಾ ಗೇಣಿದಾರನದ್ದಾಗಲಿ ಅಲ್ಲ. ಆದ್ದರಿಂದ ದಯವಿಟ್ಟು ಅದಕ್ಕೆ ಸೂಕ್ತ ನಿರ್ದೇಶನವನ್ನು ಕೊಟ್ಟು, ಈ 4800 ಜನರಿಗೆ ಪೋಡಿ ಮಾಡಿಕೊಡುವ ಕಾರ್ಯ ಸತತವಾಗಿ ಕಳೆದ 3 ವರ್ಷಗಳಿಂದ ಏನು ಸ್ಥಗಿತಗೊಂಡಿದೆ, ಅದನ್ನು ಕೂಡಲೇ ವಿಲೇವಾರಿ ಮಾಡಲಿಕ್ಕೆ ಮಾನ್ಯ ಸಚಿವರು ಆದೇಶ ನೀಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಅಶ್ವತ್ ನಾರಾಯಣ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಕೆಲವರು ಹಣವನ್ನು draw ಮಾಡಿಕೊಂಡಿದ್ದಾರೆ. ಆದ್ದರಿಂದ ದಾಖಲಾತಿ ಇಲ್ಲದವರಿಗೆ ತೊಂದರೆಯಾಗಬಾರದೆನ್ನುವ ದೃಷ್ಟಿಯಿಂದ ಮಾನ್ಯ ಉಪ ಮುಖ್ಯಮಂತ್ರಿಯವರು ಈ ವಿಚಾರದಲ್ಲಿ ಗಮನ ಹರಿಸಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ಕಂದಾಯ ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳು):-** ಸನ್ಮಾನ್ಯ ಸಭಾಪತಿಯವರೇ, ಇಬ್ಬರು ಶಾಸಕರು ಮಾತನಾಡಿದ್ದನ್ನೂ ತಾವು ಕೇಳಿದ್ದೀರಿ. ಬಹಳ ವಿಶೇಷ ಎಂದರೆ, ಬೆಂಗಳೂರಿನಲ್ಲಿ ಒಂದೇ ಆಸ್ತಿಗೇ ಸಂಬಂಧಿಸಿದಂತೆ original document 4 ಇರುತ್ತವೆ, ಅದನ್ನು ಕೂಡ ಈ ಇಬ್ಬರು ಸದಸ್ಯರು ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಇದನ್ನು ಗಮನಿಸಿರಬಹುದು, ಆದರೆ ಅವರ ಭಾಗದಲ್ಲಿ ಬಹುಶಃ ಇಂಥದ್ದೆಲ್ಲಾ

ನಡೆಯಲಿಕ್ಕಿಲ್ಲ. ಇಂಥದ್ದೇ ಒಂದು ಪರಿಸ್ಥಿತಿಯಲ್ಲಿದಂತಹವರು ದಾಖಲೆಗಳನ್ನು ತಂದು ತೋರಿಸಿ, ನನಗೆ ಬಹಳ ಅನ್ಯಾಯವಾಗಿದೆ, ದಯಮಾಡಿ ನನಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡರು. ನಾನು ಆ ವಿಚಾರವಾಗಿ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆದು ಚರ್ಚಿಸಿದಾಗ ಅವರು ನನ್ನ ಮುಂದೆ ಅದೇ ಆಸ್ತಿಗೆ ಸಂಬಂಧಿಸಿದ ಇನ್ನೂ 3 ದಾಖಲೆಗಳನಿಟ್ಟರು. ಹೀಗಾಗಿ ಒಂದೇ ಆಸ್ತಿಗೆ ಸಂಬಂಧಿಸಿದಂತೆ 4 original document ಗಳಿರುವುದು ಸ್ಪಷ್ಟವಾಯಿತು. ಅದೇ ರೀತಿ ಪೋಡಿ ಮಾಡುವ ದಿಕ್ಕಿನಲ್ಲಿ ಏನೇನು ಸಮಸ್ಯೆಗಳಾಗುತ್ತಿವೆ ಎನ್ನುವಂತಹ ವಿಚಾರವನ್ನು ಸಹ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದೇ ವಿಚಾರವಾಗಿ ಮಾತನಾಡಲು ಮಾನ್ಯ ಕೃಷ್ಣಪ್ಪನವರು ನಮ್ಮ ಕಛೇರಿಗೂ ಬಂದಿದ್ದರು. ನಾನು ಅಧಿಕಾರಿಗಳಿಗೆ ಕೂಡ ತಿಳಿಸಿದ್ದೇನೆ, ಇವೊತ್ತೇ ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಮಾನ್ಯ ಸದಸ್ಯರ ಸಮಕ್ಷಮದಲ್ಲಿ ಕರೆಸಿ, ಬೆಂಗಳೂರಿನಲ್ಲಿ ಆ ದಾಖಲೆಗಳ ವಿಚಾರದಲ್ಲಿ ಏನು ಸಮಸ್ಯೆ ಇದೆ, ಹಣ ಪಾವತಿ ಮಾಡುವ ದಿಕ್ಕಿನಲ್ಲಿ ಏನು ತೊಂದರೆ ಇದೆ ಎಂಬುದನ್ನು ಗಮನಿಸಿ ಖಂಡಿತವಾಗಿಯೂ ಇವೊತ್ತೇ ಈ ಸಮಸ್ಯೆಯನ್ನು ನಾನು ಪರಿಹರಿಸಿಕೊಡುತ್ತೇನೆ

**ಶ್ರೀ ಇ. ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ತಿಳಿಸಿರುವಂತೆ ಒಂದೇ ಆಸ್ತಿಗೆ ಸಂಬಂಧಿಸಿದಂತೆ ನಾಲ್ಕು-ನಾಲ್ಕು orginal document ಗಳಿರುವಂತಹ ವಿಚಾರ ಸತ್ಯವಾಗಿದೆ. ನಮ್ಮ ಕಂದಾಯ ಇಲಾಖೆಯ ಇಂದಿನ ಕೆಲವು ಅಧಿಕಾರಿಗಳೇ ಇಂತಹವುಗಳನ್ನೆಲ್ಲಾ ಮಾಡಿದ್ದಾರೆ. ಅಂತಹ ಎರಡು-ಮೂರು ದಾಖಲೆಗಳಿರವಂತಹ ಪ್ರಕರಣಗಳಿಗೆ ಕಾರಣರಾದವರನ್ನು ಕಾನೂನಿನ ಪ್ರಕಾರ ಶಿಕ್ಷೆಗೆ ಒಳಪಡಿಸಬೇಕು. ಅತ್ಯಾಚಾರಿಗಳನ್ನು ಗೂಂಡಾ ಕಾಯಿದೆಯ ಅಡಿಯಲ್ಲಿ ಶಿಕ್ಷೆಗೆ ಗುರಿಪಡಿಸುವಂತೆ ಇವರನ್ನು ಸಹ ಶಿಕ್ಷೆಗೆ ಒಳಪಡಿಸಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಅಂತಹವರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಿ ಎಂದು ಹೇಳಿ, ಅದನ್ನು ಬಿಟ್ಟು ಗೂಂಡಾ ಕಾಯಿದೆ ಅಡಿಯಲ್ಲಿ ಎನ್ನುವಂತಹ ಶಬ್ದವನ್ನು ತಾವು ಬಳಕೆ ಮಾಡುವುದು ಬೇಡ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಕಾನೂನು ಪ್ರಕಾರ ಅವರ ವಿರುದ್ಧ ಗೂಂಡಾ ಕಾಯಿದೆಯನ್ನೇ ಜಾರಿಗೊಳಿಸಬೇಕಾಗುತ್ತದೆ. ಏಕೆಂದರೆ ಒಂದೇ ಆಸ್ತಿಗೆ ಸಂಬಂಧಿಸಿದಂತೆ ನಾಲ್ಕು–ನಾಲ್ಕು original documents ಹೇಗೆ ಬರುತ್ತವೆ, ಅದನ್ನು ಅಧಿಕಾರಿಗಳು ಮಾಡಿದ್ದಾರೆಯೋ ಅಥವಾ ಬೇರೆ ಯಾರು ಮಾಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಲಿ. ಸದನದಿಂದ ತಪ್ಪು ಸಂದೇಶ ಹೋಗಬಾರದು. ನಾವು ಶಾಸನ ಮಾಡುವವರೇ ಒಂದೇ ಆಸ್ತಿಗೆ ನಾಲ್ಕು–ನಾಲ್ಕು original documents ಇವೆ ಎನ್ನುವಂತಹ ವಿಚಾರವನ್ನು ಒಪ್ಪಿಕೊಂಡಂತಾಗುತ್ತದೆ. ಆದ್ದರಿಂದ ಆ ದಾಖಲೆಗಳನ್ನು ಯಾರು ತಿದ್ದಿದ್ದಾರೆ, ಯಾರು ಅದನ್ನು fake ಮಾಡಿದ್ದಾರೆ ಅವರನ್ನು ಯಾವುದಾದರೂ ಕಾನೂನಿನ ಅಡಿಯಲ್ಲಿ ಶಿಕ್ಷೆಗೆ ಒಳಪಡಿಸಿ ಮುಂದೆ ಇಂತಹ ಪ್ರಕರಣಗಳಾಗದಂತೆ ಬಂದೋಬಸ್ತ್ ಮಾಡುವಂತಹ ಕೆಲಸವನ್ನು ಮಾಡಬೇಕೇ ಹೊರತು, ಆ ಬಗ್ಗೆ ಉದಾಸೀನ ಧೋರಣೆಯನ್ನು ತಳೆದರೆ ಒಂದೇ ಆಸ್ತಿಗೆ ಸಂಬಂಧಿಸಿದಂತೆ ನಾಲ್ಕು–ನಾಲ್ಕು original documents ಇವೆ ಎಂಬುದನ್ನು ನಾವು ಒಪ್ಪಿಕೊಂಡಂತಾಗುತ್ತದೆ. ಈ ರೀತಿಯಾದರೆ ಕಾನೂನನ್ನು ಕಾಪಾಡುವವರು ಯಾರು ಎನ್ನುವಂತಹ ಪ್ರಶ್ನೆ ಎದುರಾಗುತ್ತದೆ. ಪೋಡಿ ಮಾಡಿಕೊಡುವ ವ್ಯವಸ್ಥೆ ಆಗಬೇಕು. ಅದರ ಜೊತೆಗೆ ಇಂತಹ ಶಿಕ್ಷಾರ್ಹ ಅಪರಾಧ ಮಾಡಿರುವವರನ್ನು ಕಾನೂನಿನ ಅಡಿಯಲ್ಲಿ ತಂದು ಶಿಕ್ಷೆಗೆ ಗುರಿಪಡಿಸುವಂತಹ ಕೆಲಸವನ್ನು ಕೂಡ ಮಾನ್ಯ ಕಂದಾಯ ಸಚಿವರು ಮಾಡಬೇಕಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಿಳಿಸಿರುವಂತಹ ವಿಚಾರ ಸರಿಯಿದೆ. ಅಧಿಕಾರಿಗಳು ಅವರಾಗಿಯೇ ಮಾಡುತ್ತಾರೆ ಎನ್ನುವುದು ಕೂಡ ಕೆಲವು ಸಂದರ್ಭದಲ್ಲಿ ಸತ್ಯ. ಆದರೆ ಆ

ಅಧಿಕಾರಿಗಳ ಹಿಂದೆ ಎಷ್ಟು ಪ್ರಭಾವಿ ವ್ಯಕ್ತಿಗಳಿರುತ್ತಾರೆ ಎನ್ನುವುದು ತಮಗೂ ಸಹ ಗೊತ್ತಿದೆ. ಇಂತಹ ಸಂದರ್ಭಗಳಲ್ಲಿ ಶಿಕ್ಷೆಯನ್ನು ಯಾರಿಗೆ ಕೊಡಬೇಕೆಂಬುದು ಪ್ರಶ್ನೆ.

**ಶ್ರೀ ಇ. ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಶಾಸನ ಸಭೆಗಳ ಮುಂದೆ, ಸರ್ಕಾರದ ಮುಂದೆ ಯಾರೂ ಪ್ರಭಾವಿಗಳಲ್ಲ. ನಾವು ಅದರಲ್ಲಿ ದೌರ್ಬಲ್ಯವನ್ನು ತೋರಿಸಿದಾಗ ಅವರು ಪ್ರಭಾವಿಗಳಾಗುತ್ತಾರೆ. ಎಲ್ಲ ರೀತಿಯಲ್ಲಿಯೂ ಪ್ರಭಾವಿಗಳು ಈ ಶಾಸನ ಸಭೆಯೇ ಹೊರತು ಬೇರೆ ಯಾರೋ ಒಬ್ಬ ಅಧಿಕಾರಿಯಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಸಹ ಅದನ್ನೇ ಈ ನಾಲ್ಕು document ಗಳಲ್ಲಿ ಯಾವ document ಪಕ್ಕಾ ಎಂಬುದನ್ನು ನ್ಯಾಯಾಲಯಗಳೇ ತೀರ್ಮಾನ ಮಾಡಬೇಕಾದಂತಹ ಸ್ಥಿತಿ ಇದೆಯೇ ಹೊರತು ಬೇರೆ ದಾರಿ ಇಲ್ಲ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, . . .

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಾನೂನಿನಲ್ಲಿ title disputes, it should be decided by the Civil Courts.

**ಸಭಾಪತಿಯವರು:-** ನಾವೇನೂ ಮಾಡುವುದಕ್ಕೇ ಬರುವುದಿಲ್ಲ.

**Sri. S.R. PATIL:-** They are the authority. ಆದರೆ ಈ multi registration ಆಗುವುದನ್ನು ನಿರ್ಬಂಧಿಸಲು ದಯಮಾಡಿ ಸರ್ಕಾರ ಒಂದು sotware ಅಭವೃದ್ಧಿಪಡಿಸಬೇಕಾಗುತ್ತದೆ. ಒಂದು ಆಸ್ತಿಗೆ ಸಂಬಂಧಿಸಿದಂತೆ registration ಆದಮೇಲೆ ಮತ್ತೆ ಎರಡನೇ ಬಾರಿಗೆ ಅದೇ ಆಸ್ತಿಗೆ registration ಆಗದಂತೆ ಸರ್ಕಾರ software ಅಭಿವೃದ್ಧಿಪಡಿಸಿ ಈ multi registration, prevent ಮಾಡಬೇಕಾಗುತ್ತದೆ. ಆ ರೀತಿಯ ವ್ಯವಸ್ಥೆಯನ್ನು ಮಾಡಿದರೆ ಇಂತಹ ಪ್ರಕರಣಗಳು ಪುನರಾವರ್ತನೆಯಾಗುವುದಿಲ್ಲ. ಆ ಬಗ್ಗೆ ಸರ್ಕಾರ ನಿಗಾ ವಹಿಸಿದರೆ ಬಹಳ ಒಳ್ಳೆಯದು. ನಮ್ಮ ಕಡೆಯಲ್ಲಿ ಒಂದು ಆಸ್ತಿಯನ್ನು

ಪರಭಾರೆ ಮಾಡಿದರೆ ಮುಗಿಯಿತು, ಆದರೆ ಇಲ್ಲಿ ಒಂದು property ಯನ್ನು 50 ಜನರಿಗೆ ಪರಭಾರೆ ಮಾಡುತ್ತಾರೆ.

ಇತ್ತೀಚೆಗೆ ನಮ್ಮ ಅಟೆಂಡರ್ ಒಬ್ಬಾತ ಬಂದು ಮನೆ ಕಟ್ಟುವುದಾಗಿ ತಿಳಿಸಿದ, ಆಯಿತು, ಹೋಗಿ ಪೂಜೆ ಮಾಡಿ ಕಟ್ಟಡವನ್ನು ಪ್ರಾರಂಭಿಸಿ, ಒಳ್ಳೆಯದಾಗಲಿ ಎಂದು ನಾನು ತಿಳಿಸಿದೆ. ಆತ ಕಟ್ಟಡ ಕಟ್ಟಲು ಹೋಗಿ ನೋಡಿದರೆ, ಅಲ್ಲಾಗಲೇ ಇದ್ದಂತಹ ಮತ್ತೊಬ್ಬಾತ ನಾನು ಈ ಜಾಗವನ್ನು ಖರೀದಿ ಮಾಡಿದ್ದೇನೆ ಎಂದು ಹೇಳಿದನಂತೆ. ಎಲ್ಲಿದೆ ದಾಖಲೆ ಎಂದರೆ ಅವನ ಬಳಿ ಒಂದು sale deed ಇದೆಯಂತೆ, ಇವನ ಬಳಿಯೂ ಒಂದು sale deed ಇದೆಯಂತೆ. ಮಾಲೀಕನಿಗೆ ಹೋಗಿ ಕೇಳಿದರೆ, ಅವನು ಕೇಳಿದ; ಅವನಿಗೂ sale deed ಮಾಡಿಕೊಟ್ಟಿದ್ದೇನೆ, ನೀನು ಕೇಳಿದೆ; ನಿನಗೂ sale deed ಮಾಡಿಕೊಳ್ಳಿ ಎಂದನಂತೆ. ಅಂದರೆ ಇಂತಹ ವಿಚಾರಗಳಲ್ಲಿ ನಮ್ಮಲ್ಲಿ ಒಂದು ಬದ್ಧತೆ ಮತ್ತು ಪ್ರಾಮಾಣಿಕತೆ ಇರಬೇಕು. ಅಂತಹ ಜನರೂ ಇದ್ದಾರೆ, ಅದಕ್ಕಾಗಿ ಯಾವುದೇ ಆಸ್ತಿಯನ್ನು sale ಮಾಡುವ vendor ಏನಿರುತ್ತಾರೆ ಅವರು ಸಹ ಆರೋಪಿಗಳೆ, ಅವರಿಗೂ ಶಿಕ್ಷೆಯಾಗಬೇಕು. ಇಂತಹವುಗಳಿಗೆ ಅವಕಾಶ ಕಲ್ಪಿಸುವಂತಹ ಅಧಿಕಾರಿಗಳಿಗಿಂತ ಹೆಚ್ಚಾಗಿ ಆಸ್ತಿಯನ್ನು ಮಾರಾಟ ಮಾಡುವಂತಹ vendorಗಳಿಗೆ ಕೂಡ ಶಿಕ್ಷೆಯಾಗಬೇಕು.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಂತೂ ಬಹುತೇಕ ಜನರಿಗೆ ಇಂತಹ ಒಂದು ಅನುಭವವಾಗಿರುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅದಕ್ಕೇ ಈಗ ಈ ಪ್ರಶ್ನೆ ಬಂದಿರುವುದು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಅದಕ್ಕೊಂದು ಪರಿಹಾರವನ್ನು ಹೇಳಿದರು. ಸರ್ಕಾರದಿಂದ ಒಂದು ವಿಷಯವನ್ನು ತಿಳಿಸಿದ್ದಾರೆ. Software develop ಮಾಡುವುದನ್ನು ಬಿಟ್ಟರೆ ಬೇರೆ ದಾರಿ ಇಲ್ಲ. ಇದು ಮುಂದೆ ಬರುವಂತಹ ಸಮಸ್ಯೆಗಳಿಗೆ ಪರಿಹಾರವಾಗುತ್ತದೆ, ಆದರೆ ಹಳೆಯದಕ್ಕೆ ಏನು ಮಾಡಬೇಕೆಂಬ ವಿಚಾರದ ಬಗ್ಗೆ ಸರ್ಕಾರ ತೀರ್ಮಾನ ಮಾಡುತ್ತದೆ. ಅದರ ಕಾನೂನಿನ ಬಗ್ಗೆ ಕೂಡ ಮಾನ್ಯ ವಿರೋಧ

ಪಕ್ಷದ ನಾಯಕರು ಈಗಾಗಲೇ ತಿಳಿಸಿದ್ದಾರೆ. Title disputes ಇದ್ದಾರೆ, ಸರ್ಕಾರ ಕೂಡ ಏನೂ ಮಾಡುವುದಕ್ಕೆ ಬರುವುದಿಲ್ಲ, ಅವರು ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ ಎನ್ನುವಂತಹ ವಿಚಾರವನ್ನು ಮಾನ್ಯ ಸಚಿವರು ತಿಳಿಸಿದ್ದಾರೆ. ಇದುವರೆಗೆ ಆಗಿರುವಂತಹ ಸಮಸ್ಯೆಗಳಿಗೆ ಒಂದು ಪರಿಹಾರವಾದರೆ, ಇನ್ನು ಮುಂದೆ ಇಂತಹ ಸಮಸ್ಯೆಗಳಾಗದಿರುವುದಕ್ಕೆ ಒಂದು ದಾರಿ, ಈ ರೀತಿ ಎರಡು ದಾರಿಗಳಿವೆ. ಇವರೆಡು ದಾರಿಯಲ್ಲಿ ನಾವು ಮುಂದಕ್ಕೆ ಹೋಗಬೇಕು. ಮಾನ್ಯ ಕೃಷ್ಣಪ್ಪನವರು ಒಂದು ನಿರ್ದಿಷ್ಟವಾದ ಪ್ರಕರಣದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ನಿರ್ದಿಷ್ಟ ಪ್ರಕರಣದ ಬಗ್ಗೆ ಮಾನ್ಯ ಸಚಿವರು ಗಮನ ಹರಸಬೇಕಾಗುತ್ತದೆ.

**ಶ್ರೀ ಆರ್.ವಿ. ವೆಂಕಟೇಶ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಬಹುತೇಕ ಜನರಿಗೆ ಇದೆ ಅನುಭವವಾಗಿದೆ. ಇದು ಒಂದು ದೊಡ್ಡ ಸಂಚು ಎಂದು ಹೇಳಬಹುದಾಗಿದ್ದು, ಎಲ್ಲ ಬಡಾವಣೆಗಳಲ್ಲಿಯೂ ಇದೆ. ಈ ಸಂಚನ್ನು ಆಸ್ತಿಯ ಮಾಲೀಕರು, ಇಲಾಖೆಯ ಅಲ್ಲಿನ ಅಧಿಕಾರಿಗಳು ಎಲ್ಲರೂ ಸೇರಿಕೊಂಡೇ ಮಾಡುತ್ತಿದ್ದಾರೆ. ಪ್ರತಿಯೊಬ್ಬರು ತಮ್ಮ ಜೀವಿತಾವಧಿಯಲ್ಲಿ ಒಂದು ಸ್ವಂತ ಮನೆಯನ್ನು ಹೊಂದುವಂತಹ ಕನಸನ್ನು ಹೊಂದಿರುತ್ತಾರೆ. ಹಾಗಾಗಿ ಮೊದಲು ಒಂದು ನಿವೇಶನವನ್ನು ಖರೀದಿಸಿ ಸುಮಾರು ಆರು ತಿಂಗಳ ನಂತರ ಆ ನಿವೇಶನವನ್ನು ನೋಡುವುದಕ್ಕೆ ಹೋದರೆ, ಆ ನಿವೇಶನಕ್ಕೆ ಬೇರೆ 3 ಜನ ಮಾಲೀಕರು ಹುಟ್ಟಿಕೊಂಡಿರುತ್ತಾರೆ. ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತಹ ವಿಷಯದಲ್ಲಿ ನಾನು ಮತ್ತು ಅವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಕೂಡ ನೆನ್ನೆಯ ದಿವಸ ಚರ್ಚೆ ಮಾಡಿದ್ದೇವೆ. ಆದ್ದರಿಂದ ಈ multiple registration of properties ನಿಲ್ಲಬೇಕು ಎನ್ನುವುದು ನಮ್ಮ ಕಳಕಳಿಯ ವಿನಂತಿಯಾಗಿದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಒಂದೇ ಆಸ್ತಿಗೆ ಸಂಬಂಧಿಸಿದಂತೆ 4 ದಾಖಲೆಗಳಿವೆ ಎನ್ನುವಂತಹ ವಿಚಾರವನ್ನು ಹೇಳಿ, ಆ ಪ್ರಕರಣವನ್ನು ನ್ಯಾಯಾಲಯಕ್ಕೆ ಹಾಕಿರುವಂಥದ್ದು ಸಮಂಜಸವಲ್ಲ.

ಅದಕ್ಕೆ ಎಲ್ಲಿಯವರೆಗೆ ತಾವು accountability ಯನ್ನು ನಿಗದಿಪಡಿಸುವುದಿಲ್ಲ ಅಲ್ಲಿಯವರೆಗೂ ಈ ವ್ಯವಹಾರ ನಡೆಯುತ್ತಲೇ ಇರುತ್ತದೆ. ನಮ್ಮ ಭೂಮಿಯನ್ನು ನಮಗೆ ಉಳಿಸಿಕೊಳ್ಳಲಿಕ್ಕೆ ಎಷ್ಟು ಕಷ್ಟವಿದೆ ಎನ್ನುವಂತಹ ವಿಚಾರ ಮಾನ್ಯ ಸಚಿವರಿಗೆ ಕೂಡ ಗೊತ್ತಿದೆ. ಇವೊತ್ತು ನಾವು 2 ಎಕರೆ ಜಮೀನನ್ನು ಖರೀದಿ ಮಾಡಿದರೆ ಪಹಣಿ ಆಗುವಾಗ ಅದು ಕನಿಷ್ಟ ಪಕ್ಷ 20 cents ಕಡಿಮೆ ಇರುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಲಂಚ ಕೊಟ್ಟಿಲ್ಲ ಎನ್ನುವಂತಹ ಕಾರಣಕ್ಕಾಗಿ ಆ ರೀತಿ ಕಡಿಮೆಯಾಗುತ್ತದೆ. ಆಮೀನ್ನು ಖರೀದಿಸುವಾಗ ಲಂಚ ಕೊಟ್ಟಿಲ್ಲ ಎನ್ನುವಂತಹ ಒಂದು ಕಾರಣಕ್ಕಾಗಿ ಆ ವ್ಯಕ್ತಿ ಹತ್ತು ಸಾವಿರ ರೂಪಾಯಿಗಳನ್ನು ವಕೀಲರಿಗೆ ಕೊಡಬೇಕು ಮತ್ತು ಹತ್ತು ವರ್ಷ ಕಾಯಬೇಕು. ನಾವು ಖರೀದಿ ಮಾಡಿರುವಂತಹ ಜಾಗವನ್ನು ನಾವು ಉಳಿಸಿಕೊಳ್ಳುವುದಕ್ಕೆ ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾದರೆ ಇದಕ್ಕೆ ಕಾರಣವೇನು? ಕಂದಾಯ ಇಲಾಖೆಯವರಿಗೆ ಇದೊಂದು ಅವಕಾಶ, good faith ಅಂದರೆ ಅವರು ಮಾಡಿರತಕ್ಕಂಥದ್ದಕ್ಕೆ ಯಾವುದಕ್ಕೂ ಶಿಕ್ಷೆ ಇಲ್ಲ. ಆದುದರಿಂದ ಎಲ್ಲಿಯವರೆಗೆ ನೀವು ಅವರಿಗೆ accountability fix ಮಾಡುವುದಿಲ್ಲವೋ ಅಲ್ಲಿಯವರೆಗೆ ಈ Revenue appeal ಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ, ಜನರಿಗೆ harassment ಆಗುತ್ತಲೇ ಇರುತ್ತದೆ. ಆದ್ದರಿಂದ ಸರ್ಕಾರ ಈ ವಿಚಾರದಲ್ಲಿ ಬಹಳ ಸೂಕ್ಷ್ಮವಾಗಿ ಪರಿಶೀಲನೆ ಮಾಡಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ನನ್ನ ಹೆಂಡತಿ ಹೆಸರಿಗೆ ಆಸ್ತಿ ಖರೀದಿ ಮಾಡಿದೆ. ಆದರೆ ಅವರ ಹೆಸರಿಗೆ ಖಾತೆ ಮಾಡಿಸುವುಕ್ಕೆ ಆರು ವರ್ಷಗಳ ಕಾಲ ಪ್ರಯತ್ನ ಪಟ್ಟೆ. ಏಕೆಂದರ ನಾನು ಆ ಆಸ್ತಿಯ ಮೇಲೆ ಲೋನ್ ತೆಗೆದುಕೊಳ್ಳಬೇಕಾಗಿತ್ತು. ನನಗೆ ಖಾತೆ ಬೇಕು ಎಂದರೆ ಅಲ್ಲಿರುವಂತಹ ಸೆಕ್ರೇಟರಿಗೆ ಹಣ ಕೊಡಬೇಕಾಗಿತ್ತು ಆದರೆ ನಾನು ಹಣ ಕೊಡುವುದಕ್ಕೆ ಸಿದ್ಧನಿರಲಿಲ್ಲ. ಹಾಗಾಗಿ ಅವರು ಖಾತೆ ಮಾಡಿಕೊಡುವುದಕ್ಕೆ ಸಿದ್ದರಿರಲಿಲ್ಲ. ಕಡೆಗೆ ನಾನು ಗಲಾಟೆ ಮಾಡಿದ ಮೇಲೆ ಖಾತೆ ಮಾಡಿಕೊಟ್ಟರು. ಆ ಖಾತೆಯಲ್ಲಿ ಯಾವ ರೀತಿ ಇತ್ತು

ಎಂದರೆ Jagadamba W/o Late E. Krishnappa ಎಂದು ಖಾತೆ ಮಾಡಿಕೊಟ್ಟರು.

**ಸಭಾಪತಿಯವರು:–** ಅಂದರೆ ನಿಮ್ಮನ್ನು ಅವರು ಸಾಯಿಸಿಬಿಟ್ಟರು.

**ಶ್ರೀ ಇ. ಕೃಷ್ಣಪ್ಪ:–** ಖಾತೆ ಏನೋ ಮಾಡಿಕೊಟ್ಟರು, ಆ ಪ್ರಾಪರ್ಟಿಯ ಮೇಲೆ ಲೋನ್ ಸ್ಯಾಂಕ್ಷನ್ ಆಯಿತು. ಆದರೆ ಆ ಹಣವನ್ನು ಆರು ತಿಂಗಳಾದರು ಬಿಡುಗಡೆ ಮಾಡಲಿಲ್ಲ. ಏಕೆಂದರೆ ತಪ್ಪಾಗಿ ಖಾತೆ ಮಾಡಿದ ಕಾರಣ ಹಣವನ್ನು ಬಿಡುಗಡೆ ಮಾಡಲಿಲ್ಲ. ಪುನಃ ಆ ಖಾತೆ correctionಗೆ ಹೋಗಬೇಕಾಗಿ ಬಂತು. ಆ ಖಾತೆ correction ಆಗಿ ಬರುವುದಕ್ಕೆ ಒಂದೂವರೆ ವರ್ಷ ತೆಗೆದುಕೊಂಡಿತು.

**ಸಭಾಪತಿಯವರು:–** ಈಗ ತಾವು ಹೇಳುವುದು ಸರಿ ಇದೆ. ಆ ರೀತಿ ತಪ್ಪು ಮಾಡುವ ಅಧಿಕಾರಿಗಳಿಗೆ ಶಿಕ್ಷೆ ಕೊಡಬೇಕೆಂದು ಮಾನ್ಯ ಪ್ರತಾಪಚಂದ್ರಶೆಟ್ಟರು ಸಹ ಹೇಳಿದರು.

**ಶ್ರೀ ಇ. ಕೃಷ್ಣಪ್ಪ:–** ಈ ರೀತಿ ಏಕೆ ತಪ್ಪಾಗಿದೆ ಎಂದು ಕೇಳಿದರೆ ಅವರಿವರ ತಪ್ಪು ಎಂದು ಹೇಳುತ್ತಾರೆ. ಆದರೆ ಅದರಿಂದಾಗುವ ತೊಂದರೆಯನ್ನು ಅನುಭವಿಸುವವರು ಯಾರು? ಈ ರೀತಿ ಮಾಡಿದವರ ಮೇಲೆ ಯಾವುದೇ ರೀತಿಯಾದಂತಹ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಅವರಿಗೆ ಇಷ್ಟ ಬಂದಂತೆ ಮಾಡಬಹುದು. ಆದುದರಿಂದ ಇದಕ್ಕೆ ಸರ್ಕಾರ ಏನಾದರು ಕಡಿವಾಣ ಹಾಕುವಂತಹ ಪ್ರಯತ್ನವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸುತ್ತೇನೆ.

**ಸಭಾಪತಿಯವರು:–** ಮಾನಯ ಸದಸ್ಯರು ಆ ಅಧಿಕಾರಿಗಳಿಗೆ ಶಿಕ್ಷೆ ಕೊಡಿ ಎಂದು ಹೇಳುತ್ತಿದ್ದಾರೆ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಈ ರೀತಿ ಏಕೆ ತಪ್ಪಾಗಿದೆ ಎಂದು ನಾವು ಕೇಳಿದರೆ ಅದು ನನ್ನದಲ್ಲ ತಪ್ಪು, ಕಂಪ್ಯೂಟರ್‌ನಲ್ಲಿರುವ software ತಪ್ಪು ಎಂದು ಹೇಳುತ್ತಾರೆ. ಈ ರೀತಿ ಒಬ್ಬರ

ಮೇಲೆ ಒಬ್ಬರು ಹಾಕುತ್ತಾರೆ. ನಿಜವಾಗಿ ಯಾರು ತಪ್ಪು ಮಾಡುತ್ತಾರೆ ಅವರಿಗೆ ಶಿಕ್ಷೆ ಕೊಡುವಂತಹ ಒಂದು ವಿಧೇಯಕವನ್ನು ಮಂಡಿಸಬೇಕಾಗುತ್ತದೆ.

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಾವು ಎರಡು ಹಂತದಲ್ಲಿ ವರ್ಗಿಕರಿಸಬೇಕಾಗಿದೆ. ಒಂದು ಮಾಲೀಕತ್ವದಲ್ಲಿ ಇರುವಂತಹ ಬಿನ್ನಾಭಿಪ್ರಾಯಗಳು ಅಥವಾ ಹೋರಾಟಗಳು. ಮೂಲ ದಾಖಲಾತಿ ಯಲ್ಲಿರುವಂತಹ ವ್ಯತ್ಯಾಸಗಳು. ಮಾನ್ಯ ಎಸ್.ಆರ್. ಪಾಟೀಲರು ಏನು ಹೇಳಿದರು ಎಂದರೆ ಸಿವಿಲ್ ಕೋರ್ಟ್ ಈ dispute ಅನ್ನು settle ಮಾಡಬೇಕಾಗುತ್ತದೆ ಎಂದು.

**ಸಭಾಪತಿಯವರು:–** ಮಾನ್ಯ ಎಸ್.ಆರ್. ಪಾಟೀಲರು ಹೇಳಿದ್ದು ಕಾನೂನಿನಲ್ಲಿ ಏನಿದೆ ಎಂದು ಹೇಳಿದ್ದಾರೆಯೇ ವಿನಃ ಅದು ಅವರ ಅಭಿಪ್ರಾಯವಲ್ಲ. ನೀವು ಅವರನ್ನು ಏಕೆ ತಪ್ಪಿತಸ್ಥರನ್ನಾಗಿ ಮಾಡುತ್ತೀರಿ.

**ಶ್ರೀ ಸಿ.ಹೆಚ್. ವಿಜಯಶಂಕರ:–** ಮಾನ್ಯ ಸಭಾಪತಿಯವರೇ, ಭೂಮಾಲೀಕತ್ವದ ವಿಚಾರದಲ್ಲಿ ವ್ಯಕ್ತಿ – ವ್ಯಕ್ತಿಗಳ ಮಧ್ಯೆ ಅಥವಾ ಸರ್ಕಾರ ಮತ್ತು ವ್ಯಕ್ತಿಯ ಮಧ್ಯೆ ಭಿನ್ನಾಬಿಪ್ರಾಯಗಳು ಬರುತ್ತದೆ. ಅಲ್ಲಿ ನಾವು ಘನನ್ಯಾಯಾಲಯವನ್ನು ಸಂಪರ್ಕ ಮಾಡಬೇಕಾಗುತ್ತದೆ. ಅದು ಸಹಜವಾಗಿರುವಂತಹ ವಾತಾವರಣ ಅದರ ಕಡೆಗೆ ಬಹುಶಃ ಕೋರ್ಟ್‌ಗಳು ಗಮನ ಕೊಡಬೇಕಾಗುತ್ತದೆ. ಆದರೆ ಇಲ್ಲಿ ಮೂಲ ದಾಖಲಾತಿಯಲ್ಲಿಯೇ ವ್ಯತ್ಯಾಸ ಆಗುತ್ತದೆ ಎಂದು ಹೇಳುವುದಾದರೆ ಇಲಾಖೆ ಏಕೆ ಬೇಕು? ಇಲಾಖೆಯ ಜವಾಬ್ದಾರಿ ಆದರೂ ಏನು? ಬಹುಶಃ ಸುಳ್ಳು ಸೃಷ್ಟಿ ಆಗುತ್ತದೆ ಎಂದು ಹೇಳುವುದಾದರೆ ಅಲ್ಲಿರುವಂತಹ ತಹಶೀಲ್ದಾರ್ ಮತ್ತು ಸಹಾಯಕ ಆಯುಕ್ತರು ಅವರ ಜವಾಬ್ದಾರಿ ಆದರೂ ಏನು? ಈಗಾಗಿ ಇಲಾಖೆಗಳಲ್ಲಿ ಮೂಲ ದಾಖಾಲಾತಿಗಳಲ್ಲಿ ಆಗುವಂತಹ ವ್ಯತ್ಯಾಸಗಳ ವಿಚಾರದಲ್ಲಿ ಇಲಾಖೆಗೆ ಜವಾಬ್ದಾರಿಯನ್ನು fix ಮಾಡಲಿಲ್ಲ ಎಂದು ಹೇಳುವುದಾದರೆ ಒಂದು ಕಡೆ ಇಲಾಖೆಯು ಅಹ ಬೇಡವಾದಂತಹ ವ್ಯವಹಾರಗಳಲ್ಲಿ ಭಾಗಿ

ಆಗುವಂಥದ್ದನ್ನು ನಾವು ಕಾಣುತ್ತೇವೆ. ಹೀಗಾಗಿ ಇಲಾಖೆಗೆ ಜವಾಬ್ದಾರಿಯನ್ನು ಫಿಕ್ಸ್ ಮಾಡುವಂಥದ್ದು ಮೊದಲನೆ ಹಂತ. ಖಾಸಗಿ ವಿಚರಗಳಲ್ಲಿ ಮಾಲೀಕತ್ವ ವಿಚಾರಗಳಲ್ಲಿ ಆಗುವಂತಹ ಭಿನ್ನಾಬಿಪ್ರಾಯ ಎರಡನೇ ಹಂತ. ಈ ಎರಡನ್ನೂ ವರ್ಗೀಕರಿಸಿ ಬೇರೆ ಬೇರೆ ಹಂತದಲ್ಲಿ ಕಂದಾಯ ಇಲಾಖೆ ಗಮನವನ್ನು ಕೊಡಲಿಲ್ಲವೆಂದರೆ ಎರಡನ್ನೂ ಒಟ್ಟಿಗೆ ಸೇರಿಸುವುದಾದರೆ ಬಹುಶಃ ಇದು ಜಟಿಲ ಸಮಸ್ಯೆಯಾಗುತ್ತದೆ. ಈ ಸಮಸ್ಯೆಗೆ ತಾವು ಪರಿಹಾರ ಕಂಡುಹಿಡಿಯುವ ಸಮಯದಲ್ಲಿ ವರ್ಗೀಕರಣ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವಿಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದಂತಹ ವಿಚಾರ. ಇದು ವಿಶೇಷವಾಗಿ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಜಾಗದಲ್ಲಿ ಮಾತ್ರ ಈ ರೀತಿ ಆಗುತ್ತಿದೆ. ಏಕೆಂದರೆ ಇದು ಭೂಮಿ ಅಲ್ಲ, ಬಂಗಾರ. ಅಂದರೆ ಹಣ ಯಾವಾಗಲೂ ಓಡಾಡುತ್ತಿರುತ್ತದೆಯಂತೆ. ಬೆಂಗಳೂರಿನಲ್ಲಿರುವಂತಹ ಭೂಮಿ ಒಬ್ಬರ ಕೈಯಿಂದ ಮತ್ತೊಬ್ಬರ ಕೈಯಿಗೆ ಓಡಾಡುವಂತಹ ಪ್ರವೃತ್ತಿ ಇರುವುದರಿಂದ ಈ ರೀತಿ ಆಗುತ್ತದೆ. ಯಾರ‍್ಯಾರ ಆಸ್ತಿ ಯಾರದು ಎಂದು ನಿರ್ಣಯ ಮಾಡುವಂಥದ್ದು ಸರ್ಕಾರದ ಆದ್ಯ ಕರ್ತವ್ಯ ರೆಕಾರ್ಡ್ ಮಾಡುವಂಥದ್ದು ಆದ್ಯ ಕರ್ತವ್ಯ. ಅದನ್ನು ಮಾಡದೆ ಹೋದರೆ Government has failed in its duty ಎಂದಾಗುತ್ತದೆ. ಇಲ್ಲಿ ಕೇವಲ ಅಧಿಕಾರಿಗಳದೇ ತಪ್ಪು ಎಂದು ಹೇಳುವುದಿಲ್ಲ. ಸಾರ್ವಜನಿಕರೂ ಸಹ ಕುತಂತ್ರ ಮಾಡುತ್ತಾರೆ. ಕುತಂತ್ರ ಮಾಡುವಂತಹ ಸಾರ್ವಜನಿಕರು ಯಾರು? ನಾಲ್ಕು ಜನ ನಾಲ್ಕು ಟೈಪ್ ಒಂದೇ original document ಇಟ್ಟುಕೊಂಡಿರುತ್ತಾರೆ, original ಯಾವುದು ಎಂದು ಗೊತ್ತಾದಮೇಲೆ ಉಳಿದವರಿಗೆ ಶಿಕ್ಷೆ ಕೊಡುವಂತಹ ಕೆಲಸ ಆಗಲೇ ಬೇಕು. ಈ ಕೆಲಸ ಆಗದೆ ಹೋದರೆ ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ. ಒಂದೊಂದು ಸಲ ಅಧಿಕಾರಿಗಳಿಂದಲೂ ತಪ್ಪಾಗುತ್ತದೆ. ಇದು ನನಗೇ ಆದಂತಹ ಅನುಭವ. ನನ್ನ ತಂದೆಯ ಪ್ರಾರ್ಪಟಿ ನಮ್ಮ ತಾಯಿಗೆ ಹೋಗಬೇಕಾದರೆ 'ತಿಮ್ಮಮ್ಮ' ಎಂದು ಬರೆಯುವ ಬದಲು 'ತಿಮ್ಮಪ್ಪ' ಎಂದು

ಬರೆದ. ಆಗ ನಾನು ನೋಡಿಕೊಂಡು ಅದನ್ನು ಕರೆಕ್ಷನ್ ಮಾಡಿಸಿದೆ. ಇಲ್ಲದೆ ಹೋದರೆ ಇದೂವರೆವಿಗೂ ಅದು ಹಾಗೇಯೇ ಇರುತ್ತಿತ್ತು. ಈ ರೀತಿ ಏಕೆ ಮಾಡಿಸಿದೆ. ಇಲ್ಲದೆ ಹೋದರೆ ಇದೂವರೆವಿಗೂ ಅದು ಹಾಗೆಯೇ ಇರುತ್ತಿತ್ತು. ಈ ರೀತಿ ಏಕೆ ಮಾಡುತ್ತಾರೆ ಎಂದರೆ, ಇವರು ಪುನಃ ನನ್ನ ಹತ್ತಿರ ಬರಲಿ ಎಂದು ಮಾಡುತ್ತಾರೆ. ಮನುಷ್ಯ ಸ್ವಾಭಾವಿಕವಾಗಿ ಏನೂ ಒಂದು ಕುಚೋದ್ಯ ಮಾಡುತ್ತಿರುತ್ತಾನೆ. ಆ ರೀತಿ ಆಗದೆ ಇರುವ ರೀತಿಯಲ್ಲಿ ಸರ್ಕಾರಿ ಅಧಿಕಾರಿಗಳ ಮೇಲೂ ನಿಯಂತ್ರಣ ಇರಬೇಕು, ಸಾರ್ವಜನಿಕರ ಮೇಲೂ ನಿಯಂತ್ರಣ ಇರಬೇಕು. ಮಾನ್ಯ ಸದಸ್ಯರು honest ಇರಬೇಕು ಎಂದು ಹೇಳಿದರು. ಆದರೆ ಸತ್ಯ ಏನು ಗ್ರಂದಿಗೆ ಅಂಗಡಿಯಲ್ಲಿ ಸಿಗುವುದಿಲ್ಲ. ಸ್ವತಃ ಸತ್ಯವಂತರಾಗಬೇಕೆ ವಿನಃ ಗ್ರಂದಿಗೆ ಅಂಗಡಿಗೆ ಹೋಗಿ sulphur ಕೊಡು copper ಕೊಡು ಎಂದು ಕೇಳಿದರೆ ಯಾವ ರೀತಿ ಸಿಗುತ್ತದೆ, ಆ ರೀತಿ ಪ್ರಾಮಾಣಿಕತೆ ಸಿಗುವುದಿಲ್ಲ. ಪ್ರಾಮಾಣಿಕತೆ ಸ್ವತಃ ಅನುಭವದ ಮೇಲೆ ತಮ್ಮ ತಂದೆ ತಾಯಿಗಳ, ಗುರು–ಹಿರಿಯರ ನಡತೆಯಿಂದ ಬರಬೇಕೆ ವಿನಃ ನಾವು ಎಷ್ಟೇ ಎಳೆದರೂ ಬರುವುದಿಲ್ಲ. "Charity Starts at Home" ಈ ಅಂಶವನ್ನು ನಾವು ಎಷ್ಟರ ಮಟ್ಟಿಗೆ ಚಾರಿತ್ರ್ಯವನ್ನು ಇಟ್ಟುಕೊಂಡಿರುತ್ತೇವೆ ಅದರ ಮೇಲೆ ಅದು ಅವಲಂಭಿತವಾಗಿರುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಸಬ್‌ರಿಜಿಸ್ಟ್ರಾರ್‌ಗಳನ್ನು ಸರಿಯಾಗಿ ನಿಯಂತ್ರಣದಲ್ಲಿ ಇಟ್ಟುಕೊಳ್ಳದಿರುವುದರಿಂದ ಈ ರೀತಿ ಆಗುತ್ತಿದೆ. ನೋಂದಣಿ ಮಾಡಬೇಕಾದರೆ ಏನೇನು ದಾಖಲೆಗಳು ಬೇಕಾಗುತ್ತದೆ ಆ ದಾಖಲೆಗಳು ಮಾರಾಟಗಾರರಿಗೆ ಸಂಬಂಧಪಟ್ಟಿದೆಯೇ ಎನ್ನುವಂಥದ್ದನ್ನು ಪರಿಶೀಲನೆ ಮಾಡಿ ರಿಜಿಸ್ಟರ್ ಮಾಡಿದರೆ ಈ ಒಂದು ಸಮಸ್ಯೆ ಉಂಟಾಗುವುದಿಲ್ಲ. ಸಬ್‌ರಿಜಿಸ್ಟ್ರಾರ್ ನೀವು ಏನೇ ತಂದರು ರಿಜಿಸ್ಟರ್ ಮಾಡುವುದಕ್ಕೆ ನಮಗೆ ಕಾನೂನಿನಲ್ಲಿ ಅವಕಾಶ ಇದೆ ಎಂದು ಹೇಳುತ್ತಾರೆ. ಆ ರೀತಿಯ ಅವಕಾಶ ಇದ್ದರೆ ದಯವಿಟ್ಟು ಕಾನೂನನ್ನು ತಿದ್ದುಪಡಿ ಮಾಡಿ. ನಮ್ಮ ತಂದೆಯ

ಆಸ್ತಿಯನ್ನು ಬೇರೆಯವರು ರಿಜಿಸ್ಟರ್ ಮಾಡಿದಾಗ ನಾನು Revenue Department , IGR ಅವರನ್ನು ಭೇಟಿ ಮಾಡಿದಾಗ ಅವರು ಹೇಳುತ್ತಾರೆ ನಮ್ಮ ಸಬ್‌ರಿಜಿಸ್ಟ್ರಾರ್ ಏನೇ ಕೊಟ್ಟರು ರಿಜಿಸ್ಟರ್ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ ಎಂದು ಹೇಳಿದರು. ದಯವಿಟ್ಟು ಆ ರೀತಿ ಕಾನೂನಿನಲ್ಲಿ ಅವಕಾಶವಿದ್ದರೆ ಅದಕ್ಕೆ ತಿದ್ದುಪಡಿ ತಂದು ಏನೆಲ್ಲಾ ದಾಖಲೆಗಳನ್ನು ಕೊಡಬೇಕು, ಆ ದಾಖಲೆಗಳನ್ನು ಪರಿಶೀಲನೆ ಮಾಡುವಂತಹ ಜವಾಬ್ದಾರಿಗೆ ಸಬ್‌ರಿಜಿಸ್ಟ್ರಾರ್ ಅವರನ್ನು ಹೊಣೆಗಾರರನ್ನಾಗಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿ):–** ಸನ್ಮಾನ್ಯ ಸಭಾಪತಿಯವರೇ, ಈ ದಾಖಲೆಗಳಲ್ಲಿ ಏನು ವ್ಯತ್ಯಾಸಗಳು ಆಗುತ್ತಿದೆ, ಎನ್ನುವುದನ್ನು ಗಮನಿಸಿ ಸರಿಮಾಡುವಂತಹ ದಿಕ್ಕಿನಲ್ಲಿಯೇ ಭೂಮಿ ಯೋಜನೆ ಮುಖಾಂತರ ಮತ್ತು Atalji Janasnehi Kendra ಕೇಂದ್ರದಲ್ಲಿ ಕಂಪ್ಯೂಟರ್ ಮುಖಾಂತರ ಸಾಕಷ್ಟು software ಗಳನ್ನು develop ಮಾಡುತ್ತಿದ್ದೇವೆ. ಇದರ ಮುಖಾಂತರ ಒಂದು document ಇದ್ದದ್ದನ್ನು ಇನ್ನೊಂದು document ಅನ್ನು ಅದೇ ದಿಕ್ಕಿನಲ್ಲಿ ನಡೆಸುವಂತಹ ಪ್ರಯತ್ನ ನಡೆದರೆ ಅಲ್ಲಿ ತಕ್ಷಣ document ಸಿಕ್ಕಿ ಬೀಳುತ್ತದೆ. ಈ ದಿಕ್ಕಿನಲ್ಲಿ ಪ್ರಯತ್ನ ಸಹ ನಡೆಯುತ್ತಿದೆ. ನಾನು ಈ ಕೆಲಸ ಪೂರ್ಣವಾಗಿ ಮುಗಿದು ಹೋಗಿದೆ ಎಂದು ಹೇಳುತ್ತಿಲ್ಲ.

**ಶ್ರೀ ದಯಾನಂದ:–** ಸಬ್‌ರಿಜಿಸ್ಟ್ರಾರ್ ಬಳಿ ಹೋಗಿ ನೀವು ಯಾವ ನಂಬರ್ ಕೊಡುತ್ತೀರಿ ಆ ನಂಬರ್‌ಗೆ ರಿಜಿಸ್ಟರ್ ಮಾಡುತ್ತಾರೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಮಾಹಿತಿ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವಂತಹ ಮಾತುಗಳು ಎಲ್ಲವೂ ಸತ್ಯ ಇದೆ. ಇವರೆಲ್ಲರೂ ತಮ್ಮ ತಮ್ಮ ಸ್ವಂತ ಅನುಭವಗಳನ್ನು ಹೇಳುತ್ತಿದ್ದಾರೆ. ಹಾಗಾಗಿ ಇಲ್ಲ ಎಂದು

ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಕೃಷ್ಣಪ್ಪನವರ ಕೇಸಿನಲ್ಲಿ ಬದುಕಿದ್ದವರನ್ನು ಸಾಯಿಸಿದ್ದಾರೆ. ಸತ್ತು ಹೋಗಿರುವವರನ್ನು ಬದುಕಿಸಿ ರಿಜಿಸ್ಟರ್ ಮಾಡುತ್ತಾರೆ. ಈ ನಿಟ್ಟಿನಲ್ಲಿ ಭೂಮಿ ಯೋಜನೆ ಮುಖಾಂತರ ಮತ್ತು Atalji Janasnehi ಕೇಂದ್ರದ ಮುಖಾಂತರ ಏನೇನು ಮಾಡಬೇಕು ಆ ಎಲ್ಲಾ ಪ್ರಯತ್ನಗಳನ್ನು ನಡೆಸುತ್ತಿದ್ದೇವೆ. ವಿಶೇಷವಾಗಿ ಈಗೇನು ಪೋಡಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಇವತ್ತೇ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆಸಿ ಮಾನ್ಯ ಶಾಸಕರಾದ ಅಶ್ವಥ್ ನಾರಾಯಣ್ ಮತ್ತು ಮಾನ್ಯ ಇ. ಕೃಷ್ಣಪ್ಪನವರ ಜೊತೆ ಕೂತು ಚರ್ಚೆ ಮಾಡಿ particular ಸಮಸ್ಯೆಯನ್ನು ಪರಿಹರಿಸಿ ಕೊಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆ ಎಂದರೆ ಯಾವಾಗಲು overlapping ಕಾರ್ಯಕ್ರಮ ಎಂದು. Overlapping ಮಾಡುವುದು. ನಿಮಗೂ ಖಾತೆ ಮಾಡಿಕೊಡುವುದು, ಇನ್ನೊಬ್ಬರಿಗೂ ಖಾತೆ ಮಾಡಿಕೊಡುವುದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, overlapping ಆದರೆ ಇಷ್ಟೆಲ್ಲಾ ನಾವು ಸರ್ಕಸ್ ಮಾಡುವ ಅವಶ್ಯಕತೆ ಇರಲಿಲ್ಲ. ಇಷ್ಟೆಲ್ಲಾ ಪ್ರಯತ್ನ ನಡೆಸುತ್ತಿದ್ದೇವೆ, software develop ಮಾಡಿಕೊಂಡು ಅದರ ಮುಖಾಂತರ ಏನು ಮಾಡಬೇಕು ಎಂದು ಗಮನಿಸುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಈ ರೀತಿ ಭೂಮಿ ಯೋಜನೆ ಮುಖಾಂತರ ಮತ್ತು Atalji Janasnehi ಕೇಂದ್ರದ ಮುಖಾಂತರ ಎಲ್ಲಾ ದಾಖಲೆಗಳಿಗೆ overlapping ಆಗದೆ ಇರುವಂತೆ ಗಮನಿಸುತ್ತೇವೆ, ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

**ಸಭಾಪತಿಯವರು:–** ಮಾನ್ಯ ಶಿಕ್ಷಣ ಸಚಿವರಾದಂತಹ ಶ್ರೀ ವಿಶ್ವೇಶವರ ಹೆಗಡೆ ಕಾಗೇರಿಯವರು ಶೂನ್ಯ ವೇಳೆಯಲ್ಲಿ ನಮ್ಮ ಗೌರವಾನ್ವಿತ ಸದಸ್ಯರಾದಂತಹ ಶ್ರೀ ಅಲ್ಲಮಪ್ರಭು ಪಾಟೀಲರು ಪ್ರಸ್ತಾಪ ಮಾಡಿದ್ದರು. ಅಲ್ಲಮಪ್ರಭು ಪಾಟೀಲರು ಇರಬಹುದು. ಗೋವಿಂದ ರಾಜು

ಇರಬಹುದು, ನನಗೆ ಇಬ್ಬರ ಹೆಸರು ನೆನಪಾಯಿತು ಅದಕ್ಕೆ ಹೇಳುತ್ತಿದ್ದೇನೆ. ಬೇರೆಯವರ ಹೆಸರು ನೆನಪಿಗೆ ಬರುತ್ತಿಲ್ಲ ಹಾಗಾಗಿ ಅವರ ಹೆಸರುಗಳನ್ನು ಹೇಳುತ್ತಿಲ್ಲ. ಅವರವರ subject ನಿನ್ನೆ ದಿವಸ ಕೊಡಬೇಕೆಂದು ಹೇಳಿ ಒತ್ತಾಯ ಮಾಡಿದರು ವಿರೋಧ ಪಕ್ಷದ ನಾಯಕರು ಅವರಿಗೆ ಅವಕಾಶ ಕೊಡಿ ಎಂದು ತಾವು ಕೇಳಿದಿರಿ. ಅವಕಾಶ ಕೊಟ್ಟೆವು. ಅವಕಾಶ ಕೊಟ್ಟಮೇಲೆ ಅವರು ಸಭೆಯಿಂದ ಗೈರು ಆದರು ಇವತ್ತು ಅವರು ಬರಲೇ ಇಲ್ಲ. ನಾನು ಅವರ ಬಗ್ಗೆ ಮಾತ್ರ ಹೇಳುತ್ತಿದ್ದೇನೆಂದು ತಿಳಿದುಕೊಳ್ಳಬಾರದು. ಬೇರೆ ಸದಸ್ಯರು ಸಹ ಇದನ್ನು ಗಮನಿಸಿಬೇಕಾಗುತ್ತದೆ. ನಾನು ಒಂದು ನೋಟೀಸ್ ಕೊಟ್ಟೆ ನನಗೆ ಅವಕಾಶ ಸಿಕ್ಕಿತು, ನಾನು ಮಾತನಾಡಿದೆ ನೀವು ಏಆದರೂ ಮಾಡಿಕೊಳ್ಳಿ ನಾನು ಹೋಗುತ್ತೇನೆ ಎನ್ನುವಂತಹ ಭಾವನೆ ಯಾವ ರೀತಿ ಸರಿ ಎನ್ನುವುದು ನನ್ನ ಪ್ರಶ್ನೆ. ಹಾಗಾಗಿ ಮಾನ್ಯ ವಿಶ್ವೇಶ್ವರ ಹೆಗಡೆ ಅವರ ಉತ್ತರವನ್ನು ನೀವು ಮಂಡಿಸಿದ್ದೀರಿ, ಹಾಗಾಗಿ ಅದನ್ನು ಓದುವುದು ಬೇಡ. ಏಕೆಂದರೆ ಅವರೇ ಇಲ್ಲ. ನಾನು ಸಭೆಯ ಗಮನಕ್ಕೆ ಹಾಗೂ ರೆಕಾರ್ಡ್‌ಗೆ ಹಾಕಿಕೊಳ್ಳುತ್ತೇನೆ.

**ಆ) ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಚಿವರಿಂದ ಉತ್ತರ.**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಸಭಾಪತಿಯವರೇ,**

ನಿಯಮ 371 ಜೆ ಕಲಂ ಇದುವರೆಗೂ ರೂಲ್ಸ್ ಪ್ರೇಮ್ ಆಗಿಲ್ಲ. ಹಾಗೂ 371ಕ್ಕೆ ಇನ್ನೂ ಕೇಂದ್ರ ಸರ್ಕಾರದಿಂದ ಗೆಜೆಟ್ ಹೊರಡಿಸಿಲ್ಲ. ಕೇಂದ್ರ ಸರ್ಕಾರವು ಗೆಜೆಟ್ ಹೊರಡಿಸಿದ ನಂತರ ಸಾಮಾನ್ಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು (ಸರ್ಕಾರದ ಎಲ್ಲಾ ಇಲಾಖೆಗಳಿಗೂ ಅನ್ವಯಿಸುವಂತೆ) ತಿದ್ದುಪಡಿ ಮಾಡಬೇಕಾಗುತ್ತದೆ. ಇದಕ್ಕೆ ಬಹಳಷ್ಟು ಸಮಯ ಬೇಕಾಗುತ್ತದೆ.

ಪ್ರಸ್ತುತ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 12,000 ಶಿಕ್ಷಕರ ಕೊರತೆ ಇದ್ದು ಕೇವಲ 4,000 ಶಿಕ್ಷಕರನ್ನು ಮಾತ್ರ ನೇಮಕಾತಿ

ಮಾಡಿಕೊಳ್ಳಲಾಗುತ್ತಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ಕೊರತೆಯು ಹೈದರಾಬಾದ್–ಕರ್ನಾಟಕದಲ್ಲಿ ತೀವ್ರವಾಗಿದ್ದು, ಈ ನೇಮಕಾತಿ ನಿಲ್ಲಿಸಿದಲ್ಲಿ ಭಾಗದ ಮಕ್ಕಳ ಶಿಕ್ಷಣಕ್ಕೆ ಕೊರತೆ ಹೆಚ್ಚಾಗುತ್ತದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ನೇಮಕಾತಿ ಅಧಿಸೂಚನೆ ಹೊರಡಿಸಿರುವುದನ್ನು ತಡೆಹಿಡಿದಲ್ಲಿ ಆ ಭಾಗದ ಮಕ್ಕಳ ಕಲಿಕೆಗೆ ಇನ್ನಷ್ಟು ತೊಂದರೆ ಆಗಬಹುದಾಗಿರುತ್ತದೆ. ಆದುದರಿಂದ ಈಗಾಗಲೇ ಹೊರಡಿಸಿರುವ ಅಧಿಸೂಚನೆಯನ್ನು ತಡೆಹಿಡಿಯುವುದು ಸೂಕ್ತವಲ್ಲವೆಂದು ಸರ್ಕಾರವು ಭಾವಿಸಿದೆ.

## 6. ಸಭೆಯ ಮುಂದಿಡಲಾದ ಕಾಗ ಪತ್ರಗಳು

## (ಮೂರನೇ ಪಟ್ಟಿ)

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ,

**I. ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿ) ಅವರ ಪರವಾಗಿ:**

**ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ.**

1. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ,

**II. ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿ) (ಗೃಹ ಮತ್ತು ಸಾರಿಗೆ ಸಚಿವರು) ಅವರ ಪರವಾಗಿ:**

1. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 2011–12ನೇ ಸಾಲಿನ ವಾರ್ಷಿಕ ಆಡಳಿತ ವರದಿ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ,

**III. ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು) ಅವರ ಪರವಾಗಿ:**

**1956 ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:**

1. ಶ್ರೀ ಕಂಠೀರವ ಸ್ಟುಡಿಯೋ ನಿಯಮಿತದ 2011-12ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧಕರ ವರದಿ ಹಾಗೂ ಟೀಕೆಗಳನ್ನೊಳಗೊಂಡಂತೆ)

ಶ್ರೀ **ವಿ. ಸೋಮಣ್ಣ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ,

**IV. ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) ಅವರ ಪರವಾಗಿ:**

**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 2009ರ ಕಲಂ 4093)ರ ಮೇರೆಗೆ:**

1. ಧಾರವಾಡ ಕೃಷಿ ವಿಶ್ವವಿದ್ಯಾಲಯದ 2010-11ನೇ ಸಾಲಿನ ಲೆಕ್ಕಪರಿಶೋಶಧನಾ ವರದಿಗೆ ಅನುಸರಣಾ ವರದಿ.

ಶ್ರೀ **ವಿ. ಸೋಮಣ್ಣ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ

**V. ಶ್ರೀ ಮುರಗೇಶ್ ರುದ್ರಪ್ಪ ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಅವರ ಪರವಾಗಿ**

1. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 2011-12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**VI. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಅವರು: ಮಾನ್ಯ ಸಭಾಪತಿಗಳೇ,**

1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ 2011–12ನೇ ಸಾಲಿನ ವಾರ್ಷಿಕ ಆಡಳಿತ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):– ಮಾನ್ಯ ಸಭಾಪತಿಯವರೆ,**

**VII. ಶ್ರೀ ಸಿ.ಪಿ. ಯೋಗಿಶ್ವರ್ (ಅರಣ್ಯ ಸಚಿವರು) ಅವರ ಪರವಾಗಿ,**

**1956ರ ಕಂಪನಿಗಳ ಅಧಿನಿಯಮ 619(ಎ)ರ ಮೇರೆಗೆ:**

1. ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):– ಮಾನ್ಯ ಸಭಾಪತಿಯವರೆ,**

**VIII. ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) ಅವರ ಪರವಾಗಿ**

**ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಕಲಂ 47(4)ರ ಮೇರೆಗೆ:**

1. ದಾವಣಗೆರೆ ವಿಶ್ವವಿದ್ಯಾಲಯದ 2009–10 ಮತ್ತು 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಅನುಸರಣಾ ವರದಿ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):– ಮಾನ್ಯ ಸಭಾಪತಿಯವರೆ,**

**IX. ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವರು) ಅವರ ಪರವಾಗಿ:**

**1956 ಕಂಪನಿಗಳ ಅಧಿನಿಯಮ 619(ಎ) ಮೇರೆಗೆ:**

1. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ 2009–10ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

**ಸಭಾಪತಿಯವರು:–** ಮಂಡಿಸಲಾಯಿತು

( 12 ಘಂಟೆ)

**ಸಭಾಪತಿಯವರು:–** ಸಭಾನಾಯಕರು ಮತ್ತು ಮುಖ್ಯ ಸಚೇತಕರು ಗಮನಿಸಬೇಕು, ಶೂನ್ಯವೇಳೆಯಲ್ಲಿ ಬಹಳಷ್ಟು ಜನ ಸದಸ್ಯರು ಹಲವಾರು ಮಹತ್ವ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಅದರಲ್ಲಿ ಕೆಲವು ವಿಷಯಗಳಿಗೆ ಮಾತ್ರ ಕೆಲವು ಸಚಿವರುಗಳು ಹೇಳಿಕೆಯನ್ನು ಮಾಡಿದ್ದಾರೆ. ಸದನ ಮತ್ತು ನಾಳೆ ಮಾತ್ರ ಇರುತ್ತದೆ. ಈ ಎರಡು ದಿವಸಗಳಲ್ಲಿ ಸಂಬಂಧಪಟ್ಟ ಸಚಿವರುಗಳು ಉತ್ತರವನ್ನು ನೀಡಬೇಕು. ಸದನ ನಡೆಯುತ್ತಿರುವಾಗ ಸಚಿವರು ಉತ್ತರ ನೀಡಲು ರೆಡಿ ಆದಲ್ಲಿ ನಾನು ಅವರಿಗೆ ಹೇಳಿಕೆ ಮಾಡಲು ಅವಕಾಶ ನೀಡುತ್ತೇನೆ.

**ಡಾ|| ಎಸ್.ಆರ್. ಲೀಲಾ:–** ಮಾನ್ಯ ಸಭಾಪತಿಗಳೇ, ಶೂನ್ಯವೇಳೆಯಲ್ಲಿ ನಾನು ಪ್ರಸ್ತಾಪಿಸಿದಂತಹ ವಿಚಾರಕ್ಕೆ ಇನ್ನೂ ಸಂಬಂಧಪಟ್ಟ ಸಚಿವರಿಂದ ಉತ್ತರ ಬಂದಿರುವುದಿಲ್ಲ.

**ಸಭಾಪತಿಯವರು:–** ನಾನು ಹೇಳಿದ್ದು ನಿಮಗೆ ಕೇಳಿಸಲಿಲ್ಲವೇ? ನಾನು ನಿಮ್ಮೊಬ್ಬರ ವಿಚಾರ ಹೇಳಲಿಲ್ಲ, 'ಸದಸ್ಯರುಗಳು' ಎಂದು ಹೇಳಿದ್ದೇನೆ. ಅದರಲ್ಲಿ ನೀವು ಸಹ ಸೇರುತ್ತೀರಿ. ನೀವು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರತಕ್ಕ ಇನ್ನೂ ಉತ್ತರಗಳು ಬರಬೇಕು.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಡಾ|| ಲೀಲಾರವರು ದಿವಂಗತ ಮಹಾಂತೇಶ್‌ರವರ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದರು. ಇದರ ಬಗ್ಗೆ ನಾನು ಅಧಿಕಾರಿಗಳ ಜೊತೆಯಲ್ಲಿ ಸಭೆಯನ್ನು ನಡೆಸಿದ್ದೇನೆ. ಈ

ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಗಮನಕ್ಕೂ ಸಹ ತಂದಿದ್ದೇನೆ. ನಾಳೆ ಬೆಳಿಗ್ಗೆ 11–12 ಗಂಟೆಯೊಳಗಾಗಿ ಸಂಕ್ಷಿಪ್ತವಾದ ಉತ್ತರವನ್ನು ಒದಗಿಸಲಾಗುವುದು.

**ಶ್ರೀ ವಿ. ಸೋಮಣ್ಣ (ಸಭಾನಾಯಕರು) (ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿ) ಅವರ ಪರವಾಗಿ):–** ಮಾನ್ಯ ಸಭಾಪತಿಗಳೇ,

(ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ದಿನಾಂಕ:31ನೇ ಮಾರ್ಚ್ 2012ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕಪರಿಶೋಧಕರು ಮತ್ತು ಮಹಾ ಲೆಕ್ಕ ಪರಿಶೋಧಕರ(ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು) ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಇ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕಪರಿಶೋಧಕರು ಮತ್ತು ಮಹಾ ಲೆಕ್ಕ ಪರಿಶೋಧಕರ (ಸಾಮಾನ್ಯ ಮತ್ತು ಸಾಮಾಜಿಕ ವಲಯ) ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಈ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ದಿನಾಂಕ:31ನೇ ಮಾರ್ಚ್ 2012ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕಪರಿಶೋಧಕರು ಮತ್ತು ಮಹಾ ಲೆಕ್ಕ ಪರಿಶೋಧಕರ(ರಾಜಸ್ವ ಸ್ವೀಕೃತಿಗಳು) ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಉ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ದಿನಾಂಕ:31ನೇ ಮಾರ್ಚ್ 2012ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕಪರಿಶೋಧಕರು ಮತ್ತು ಮಹಾ ಲೆಕ್ಕ ಪರಿಶೋಧಕರ(ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಊ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ದಿನಾಂಕ:31ನೇ ಮಾರ್ಚ್ 2012ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕಪರಿಶೋಧಕರು ಮತ್ತು ಮಹಾ ಲೆಕ್ಕ ಪರಿಶೋಧಕರ(ಆರ್ಥಿಕ ವಲಯ) ವರದಿಯನ್ನು ಸಭೆಯ ಮುಂದ ಮಂಡಿಸುತ್ತೇನೆ.

**ಸಭಾಪತಿಯವರು:–** ವರದಿಗಳನ್ನು ಒಪ್ಪಿಸಲಾಯಿತು.

## ವರದಿಗಳನ್ನೊಪ್ಪಿಸುವುದು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಶ್ರೀಮತಿ ವಿಮಲಾಗೌಡ, ಉಪಸಭಾಪತಿಗಳು ಹಾಗೂ ಅಧ್ಯಕ್ಷರು, ಖಾಗಿ ಸದಸ್ಯರುಗಳ ವಿಧೇಯಕ ಮತ್ತು ನಿರ್ಣಯ ಸಮಿತಿ)ರವರ ಪರವಾಗಿ:–** ಮಾನ್ಯ ಸಭಾಪತಿಗಳೇ, ಖಾಸಗಿ ಸದಸ್ಯರುಗಳ ವಿಧೇಯಕ ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನು ಒಪ್ಪಿಸುತ್ತೇನೆ.

**ಪ್ರೊ|| ಕೆ.ಆರ್. ಮಲ್ಲಿಕಾರ್ಜುನಪ್ಪ (ಶ್ರೀ ಎಂ.ವಿ. ರಾಜಶೇಖರನ್(ಸದಸ್ಯರು ಅಧೀನ ಶಾಸನ ರಚನಾ ಸಮಿತಿ)ರವರ ಪರವಾಗಿ:–** ಮಾನ್ಯ ಸಭಾಪತಿಗಳೇ, ಕರ್ನಾಟಕ ವಿಧಾನಮಂಡಲದ ಅಧೀನ ಶಾಸನ ರಚನಾ ಸಮಿತಿಯ 40ನೇ ವರದಿಯನ್ನು ಒಪ್ಪಿಸುತ್ತೇನೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಗಳೇ, ಶೂನ್ಯವೇಳೆಯಲ್ಲಿ ನಾನು ಪ್ರಸ್ತಾಪಿಸಿದಂತಹ ವಿಚಾರಕ್ಕೆ ಇನ್ನೂ ಸಂಬಂಧಪಟ್ಟ ಸಚಿವರಿಂದ ಉತ್ತರ ಬಂದಿರುವುದಿಲ್ಲ.

**ಸಭಾಪತಿಯವರು:–** ನಾನು ಆಗಲೇ ಏನು ಹೇಳಿದೆ ಎನ್ನುವುದು ನಿಮಗೆ ಅರ್ಥ ಆಗಲಿಲ್ಲವೇ? ಕೆಲವು ವಿಚಾರಗಳಿಗೆ ಉತ್ತರ ಬಂದಿದೆ, ಅದನ್ನು ಹೇಳಿಕೆ ಮಾಡಲು ಅವಕಾಶ ನೀಡಿದ್ದೇನೆ. ಹೇಳಿಕೆ ಬರದೇ ಇರುವುದನ್ನು ನಾಳೆಯೊಳಗೆ ಕೊಡಿ ಎಂದು ಸಭಾನಾಯಕರಿಗೆ ಸೂಚನೆ ನೀಡಿದ್ದೇನೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಗೌರವಾನ್ವಿತ ಸದಸ್ಯರಾದ ಡಾ|| ಮುಮ್ತಾಜ್

ಆಲಿಖಾನ್ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಚಾರಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಬಂದಿದೆ, ಅದರ ಹೇಳಿಕೆಯನ್ನು ಸಭಾನಾಯಕರು ಈಗ ಮಾಡುತ್ತಾರೆ. ಮುಂದೆ ಇದೇ ರೀತಿ ಸಚಿವರ ಹೇಳಿಕೆ ಬಂದಲ್ಲಿ ಅದನ್ನು ಹೇಳಿಕೆ ಮಾಡಲು ನಾನು ಅವಕಾಶ ನೀಡುತ್ತೇನೆ.

**8 ಸಚಿವರ ಹೇಳಿಕೆ**

**ವಿಷಯ: 4 ವರ್ಷದ ಬಾಲಕಿಯ ಸಾವಿನ**

**ಶ್ರೀ ವಿ. ಸೋಮಣ್ಣ (ಸಭಾನಾಯಕರು) (ಗೃಹಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೇ,

ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕರಡಗೆರೆ ಗ್ರಾಮದ ವಾಸಿಯಾದ ಶ್ರೀಮತಿ ಪವಿತ್ರರವರು ಅದೇ ಗ್ರಾಮದ ಕೆಂಚೆಗೌಡರವರ ಮಗನಾದ ಶ್ರೀ ಮಹದೇವ ಎಂಬುವರೊಂದಿಗೆ ಈಗ್ಗೆ 5 ವರ್ಷಗಳ ಹಿಂದೆ ಮದುವೆಯಾಗಿದ್ದು, ಇವರಿಗೆ ಕ್ರಮವಾಗಿ 4 ವರ್ಷ ಮತ್ತು 2 1/2 ವರ್ಷದ ಇಬ್ಬರು ಹೆಣ್ಣು ಮಕ್ಕಳಿದ್ದು, ಪವಿತ್ರಳ ಗಂಡ ಪ್ರತಿ ದಿನ ಕುಡಿದು ಬಂದು ಗಲಾಟೆ ಮಾಡುತ್ತಿದ್ದರಿಂದ ಶ್ರೀಮತಿ ಪವಿತ್ರರವರು ಈಗ್ಗೆ 3 ತಿಂಗಳ ಹಿಂದೆ ಕೋಡಿಚಿಕ್ಕನಹಳ್ಳಿ, ರೋಟರಿ ನಗರ 8 ನೇ ಕ್ರಾಸಿನಲ್ಲಿ ವಾಸವಾಗಿದ್ದ ಕೋಡಿಚಿಕ್ಕನಹಳ್ಳಿಯಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಬಿಟ್ಟು ಹೋಗುತ್ತಿದ್ದು, ಅಂಗನವಾಡಿ ಮುಗಿದ ನಂತರ ಅಲ್ಲೆ ಕೆಲಸ ಮಾಡುವ ಆಯಾ ಅಜ್ಜಿರವರು ಅವರ ಮನೆಗೆ ಕರೆದುಕೊಂಡು ಹೋಗುತ್ತಿದ್ದು, ಕೆಲಸ ಮುಗಿದ ನಂತರ ಶ್ರೀಮತಿ ಪವಿತ್ರಳಾಗಲಿ ಅಥವಾ ಆಕೆಯ ತಾಯಿಯಾಗಲಿ ಆಯಾ ಮನೆಯಿಂದ ಮಕ್ಕಳನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಿದ್ದರು.

ದಿನಾಂಕ 11–02–2013 ರಂದು ಪ್ರತಿನಿತ್ಯದಂತೆ ಬೆಳಿಗ್ಗೆ 9.00 ಗಂಟೆಗೆ ತನ್ನ ಇಬ್ಬರೂ ಹೆಣ್ಣು ಮಕ್ಕಳನ್ನು ಶ್ರೀಮತಿ ಪವಿತ್ರರವರು ಅಂಗನವಾಡಿ ಶಾಲೆಗ ಬಿಟ್ಟುಹೋಗಿದ್ದು, ಮತ್ತೆ ಸಂಜೆ ಸುಮಾರು 4.00

ಗಂಟೆಗೆ ಅಂಗನವಾಡಿಯ ಆಯಾ ಮನೆಯ ಹತ್ತಿರ ಮಕ್ಕಳನ್ನು ಕರೆದುಕೊಂಡು ಬರಲು ಹೋದಾಗ ಶ್ರೀಮತಿ ಪವಿತ್ರರವರ 2ನೇ ಮಗಳು ಆಯಾ ಮನೆಯಲ್ಲಿ ಮಲಗಿಕೊಂಡಿದ್ದು, ಮೊದಲನೆ ಮಗಳ ಬಗ್ಗೆ ಆಯಾ ಹತ್ತಿರ ವಿಚಾರ ಮಾಡಲಾಗಿ ಹೊರಗೆ ಆಟವಾಡಲು ಹೋಗಿರುವುದಾಗಿ ತಿಳಿಸಿದ್ದು, ನಂತರ ಶ್ರೀಮತಿ ಪವಿತ್ರ ಮತ್ತು ಆಕೆಯ ಸಂಬಂಧಿಕರು ಆಕೆಯನ್ನು ರಾತ್ರಿವರೆಗೂ ಹುಡುಕಿ ನೋಡಲಾಗಿ ಪತ್ತೆಯಾಗದ ಕಾರಣ ದಿನಾಂಕ 12-02-2013 ರಂದು ಬೆಳಿಗ್ಗೆ ಸುಮಾರು 6.00 ಗಂಟೆಗೆ ಶ್ರೀಮತಿ ಪವಿತ್ರ ಮತ್ತು ಆಕೆಯ ತಾಯಿ ಇಬ್ಬರೂ ಕಾಣೆಯಾಗಿದ್ದ ಬಾಲಕಿಯನ್ನು ಹುಡುಕಿಕೊಂಡು ಹೋದಾಗ, ಆ ಬಾಲಕಿಯು ರೋಟರಿ ನಗರ 2ನೇ ಕ್ರಾಸ್‌ನ ಮಾರಪ್ಪ ಎಂಬುವವರ ಮನೆಯ ಪಕ್ಕದ ಖಾಲಿ ಜಾಗದಲ್ಲಿ ಬಿದ್ದಿರುವುದು ಕಂಡು ಬಂದಿದ್ದು, ಹತ್ತಿರ ಹೋಗಿ ನೋಡಲಾಗಿ ಆಕೆಯು ಸತ್ತುಹೋಗಿದ್ದು, ಆಕೆಯ ಕತ್ತಿನ ಹತ್ತಿರ ಪರಚಿರುವ ಗಾಯಗಳಾಗಿದ್ದು, ಯಾರೋ ದುಷ್ಕರ್ಮಿಗಳು ಯಾವುದೋ ಉದ್ದೇಶದಿಂದ ಕತ್ತು ಹಿಸುಕಿ ಕೊಲೆ ಮಾಡಿರುತ್ತಾರೆಂದು ನೀಡಿದ ದೂರಿನ ಮೇರೆಗೆ ಮಡಿವಾಳ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 112/2013 ಕಲಂ 302 ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಪ್ರಕರಣದ ವರದಯಾದ ಕೂಡಲೇ ಘಟನಾ ಸ್ಥಳಕ್ಕೆ ಆಗ್ನೇಯ ವಲಯದ ಉಪ ಪೊಲೀಸ್ ಆಯುಕ್ತರು ಹಾಗೂ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿರುತ್ತಾರೆ. ಈ ಘಟನೆಯ ಬಗ್ಗೆ ಅತೀ ಹೆಚ್ಚಿನ ಪ್ರದಾನ್ಯತೆ ನೀಡಿ, ಆರೋಪಿಗಳ ಪತ್ತೆಯ ಸಲುವಾಗಿ ಈ ಕೆಳಕಂಡಂತೆ ತನಿಖಾ ತಂಡ ರಚಿಸಲಾಗಿದೆ.

1. ಶ್ರೀ ಹೆಚ್. ಸುಬ್ಬಣ, ಸಹಾಯಕ ಪೊಲೀಸ್ ಆಯುಕ್ತರು, ಮಡಿವಾಳ ಉಪ ವಿಭಾಗ
2. ಶ್ರೀ ಎಂ.ಎಂ. ಪ್ರಶಾಂತ್, ಪೊಲೀಸ್ ನಿರೀಕ್ಷಕರು, ಮಡಿವಾಳ ಪೊಲೀಸ್ ಠಾಣೆ

3. ಶ್ರೀ ಶ್ರೀನಿವಾಸ ರೆಡ್ಡಿ, ಪೊಲೀಸ್ ನಿರೀಕ್ಷಕರು, ಹೆಚ್.ಎಸ್.ಆರ್ ಲೇಔಟ್ ಪೊಲೀಸ್ ಠಾಣೆ,

4. ಶ್ರೀ ಪ್ರಶಾಂತ ಬಾಬು, ಪೊಲೀಸ್ ನಿರೀಕ್ಷಕರು, ಕೋರಮಂಗಲ ಪೊಲೀಸ್ ಠಾಣೆ,

5. ಶ್ರೀ ನಾಗರಾಜ್, ಪೊಲೀಸ್ ನಿರೀಕ್ಷಕರು, ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ,

6. ಶ್ರೀ ಲಕ್ಷ್ಮಿನಾರಾಯಣ, ಪೊಲೀಸ್ ನಿರೀಕ್ಷಕರು, ಪರಪ್ಪನ ಅಗ್ರಹಾರ ಪೊಲೀಸ್ ಠಾಣೆ.

ಈ ಎಲ್ಲಾ ತಂಡಗಳು ಆರೋಪಿಗಳ ಪತ್ತೆಯ ಬಗ್ಗೆ ಕಾರ್ಯೋನ್ಮುಖವಾಗವೆ.

ಕೃತ್ಯ ನಡೆದ ಸ್ಥಳಕ್ಕೆ ಎಫ್.ಎಸ್.ಎಲ್. ಅಧಿಕಾರಿಗಳು ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿರುತ್ತಾರೆ. ಹೆಚ್ಚಿನ ವೈಜ್ಞಾನಿಕ ಪರೀಕ್ಷೆ ಸಲುವಾಗಿ ಹಾಗೂ ಮರಣೋತ್ತರ ಪರೀಕ್ಷೆಗೆ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಯ ವಿಧಿವಿಜ್ಞಾನ ವಿಭಾಗದ ಪ್ರಾಧ್ಯಾಪಕರನ್ನೊಳಗೊಂಡ ವಿಶೇಷ ತಂಡದವರಿಗೆ ಕಳುಹಿಸಲಾಗಿದೆ. ವರದಿ ಬರುವುದು ಬಾಕಿ ಇರುತ್ತದೆ. ಮೃತಳ ಮೇಲೆ ಅತ್ಯಾಚಾರ ನಡೆದಿದೆ ಅಥವಾ ಇಲ್ಲ ಎಂದು ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರ ಖಚಿತಪಡಿಸಲು ಸಾಧ್ಯವಾಗುತ್ತದೆ. ಆದರೂ ಸಹ ಈ ಪ್ರಕರಣದ ತನಿಖೆಯನ್ನು ಗಂಭೀರ ರೂಪದಿಂದ ಹಿರೀಯ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಸಲು ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಲಾಗಿದೆ.

## 9. 2013–14ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಚರ್ಚೆ

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಸಂವಿಧಾನದ ಕಲಂ 371(ಜೆ)ಗೆ ತಿದ್ದುಪಡಿ ತಂದು ಕೇಂದ್ರ ಸರ್ಕಾರ ಹೈದ್ರಾಬಾದ್ ಕರ್ನಾಟಕ್ಕರ special status ಕೊಡುವ ವಿಚಾರದಲ್ಲಿ ಮಾತನಾಡಲು ನಾನು ಬೆಳಿಗ್ಗೆ ತಮಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶವನ್ನು ಕೇಳಿ ಪತ್ರವನ್ನು ಕೊಟ್ಟಿದ್ದೆ. ಆದರೆ ಬಜೆಟ್ ಮೇಲೆ ಮಾತನಾಡುವ ಸಮಯದಲ್ಲಿ ಆ ವಿಚಾರವನ್ನು ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಯಾದಗಿರಿ, ಕೊಪ್ಪಳ, ಬಳ್ಳಾರಿ, ರಾಯಚೂರು, ಬೀದರ್, ಗುಲ್ಬರ್ಗಾ ಜಿಲ್ಲೆಗಳಲ್ಲಿ ಶಿಕ್ಷಕರ ನೇಮಕಾತಿ ಪ್ರಾರಂಭವಾಗಿದೆ. ಈ ಆರು ಜಿಲ್ಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಬಹಳ ಕೆಳಮಟ್ಟದಲ್ಲಿದೆ. ಇವತ್ತು ಅಲ್ಲಿ ಮೈಸೂರು ಕಡೆಯವರು, ಮಂಗಳೂರು ಕಡೆಯವರೆ ಶಿಕ್ಷಕರಾಗಿ ನೇಮಕವಾಗುತ್ತಾರೆ. ಮುಂದೆ ಸ್ವಲ್ಪ ದಿನಗಳಲ್ಲಿ ಅವರು ತಮ್ಮ ಜಿಲ್ಲೆಗೆ ವಾಪಸ್ ಹೋಗುತ್ತಾರೆ. ಆಗ ಮತ್ತೆ ಆ ಹುದ್ದೆಗಳು ಖಾಲಿ ಉಳಿಯುತ್ತವ. ಮತ್ತೆ ಶೈಕ್ಷಣಿಕ ಗುಣಮಟ್ಟ ಎಲ್ಲಿ ಇತ್ತು ಅಲ್ಲೇ ಇರುತ್ತದೆ. "ಹೇಗೆ ಇದ್ದೊ ಶಿವಾ ಹಾಗೆ" ಎನ್ನುವ ಹಾಗೆ ಆಗುತ್ತದೆ. ನೇಮಕಾತಿ ನಿಯಮಗಳು ಪೂರ್ತಿಯಾಗಿ ರಚನೆಯಾಗುವವರೆಗೆ ತಡೆಹಿಡಿಯಬೇಕೆಂದು ತಮ್ಮ ಮುಖಾಂತರ ಈ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. 311(ಜೆ) ದ ಉಪಯೋಗ ಆ ಭಾಗದ ಜನರಿಗೆ ಆಗಬೇಕಾಗುತ್ತದೆ. ಈಗ ಎಲ್ಲಾ ನೇಮಕಾತಿ ಮಾಡಿಬಿಟ್ಟರೆ ಮತ್ತೆ ಅಲ್ಲಿಯವರು ನೇಮಕಾತಿಯಿಂದ ವಂಚಿತರಾಗುತ್ತಾರೆ. The very intention of the legislation is going to be defeated. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕು. ಈಗ ಎಲ್ಲಾ ನೇಮಕಾತಿ ಮಾಡಿಬಿಟ್ಟರೆ 3171(ಜೆ) ಬಂದು ಅವರಿಗೆ ಏನು ಲಾಭವಾದ ಹಾಗೆ ಆಯಿತು? ಈ ನೇಮಕಾತಿಯನ್ನು ವಿರೋಧಿಸಿ ಮಾನ್ಯ ವೈಜನಾಥ್ ಪಾಟೀಲ್‌ರವರ ಮುಖಂಡತ್ವದಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ಧರಣೆ ಮಾಡುತ್ತಿದ್ದಾರೆ. ನೇಮಕಾತಿ ನಿಯಮಗಳು ರಚನೆಯಾಗುವವರೆಗೆ ಮತ್ತು 371(ಜೆ) ಲಾಭ ಆ ಭಾಗದ ಜನರಿಗೆ ದೊರೆಯಬೇಕು ಎನ್ನುವ ಉದ್ದೇಶದಿಂದ ಅಲ್ಲಿ ಸತ್ಯಾಗ್ರಹವನ್ನು

ಮಾಡುತ್ತಿದ್ದಾರೆ. ಇದು ಕೂಡ ಬಜೆಟ್ಗೆ ಸಂಬಂಧಿಸಿದ ವಿಷಯವೇ ಆಗಿದೆ. ಈ ದಿಶೆಯಲ್ಲಿ ಚಿಂತನೆ ಮಾಡಬೇಕೆಂದು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನೇಮಕಾತಿ ನಿಯಮಗಳು ರಚನೆಯಾದ ಮೇಲೆ ನೇಮಕಾತಿಯನ್ನು ಮಾಡಿದ್ದರೆ ಆ ಭಾಗದ ಜನರಿಗೆ ಅವಕಾಶವನ್ನು ಕಲ್ಪಿಸಿದ ಹಾಗೆ ಆಗುತ್ತದೆ ಎಂದು ಹೇಳಬಯಸುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ನೇಮಕಾತಿಯನ್ನು ತಡೆಹಿಡಿಯಲಾಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ.

**ಸಭಾಪತಿಯವರು:–** ಪತ್ರಿಕೆಯಲ್ಲಿ ಬರಲಿ, ಆದರೆ ಸರ್ಕಾರದಿಂದ ಅಧಿಕೃತವಾದ ಒಂದು ಹೇಳಿಕೆ ಬಂದರೆ ಒಳ್ಳೆಯದು ಎನ್ನುವುದು ಅವರ ಉದ್ದೇಶ. ಇದು ಆ ಭಾಗದ ಜನರ ಬಹಳ ದಿನಗಳ ಬೇಡಿಕೆಯಾಗಿದೆ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ನಂತರ ತಿಳಿಸುತ್ತೇನೆ. ಇಲ್ಲದಿದ್ದರೆ ನಾಳೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಉತ್ತರವನ್ನು ನೀಡುವ ಸಮಯದಲ್ಲಾದರೂ ಅದರ ಬಗ್ಗೆ ಹೇಳಿಸುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:– ಮಾನ್ಯ ಸಭಾಪತಿಗಳೆ,** ಇನ್ನು ನಾನು ಕೆಲವು ಇಲಾಖೆಗಳ ಮೇಲೆ ಮಾತನಾಡುತ್ತೇನೆ. ಇವತ್ತು ತೋಟಗಾರಿಕೆ ಬಹಳ ಮಹತ್ವವನ್ನು ಪಡೆದಿದೆ. ಕೃಷಿಯ ಒಟ್ಟು ಆದಾಯದಲ್ಲಿ 40% ತೋಟಗಾರಿಕೆಯಿಂದ ಬರುತ್ತದೆ. ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದರಲ್ಲಿ ಇಡೀ ಪ್ರಪಂಚದಲ್ಲಿಯೇ ನಮ್ಮ ದೇಶ ಎರಡನೇ ಸ್ಥಾನವನ್ನು ಪಡೆದಿದೆ. ಕರ್ನಾಟಕದ ವಿಷಯದಲ್ಲಿ ಹೇಳುವುದಾದರೆ ಇಡೀ ಭಾರತದಲ್ಲಿಯೇ ತೋಟಗಾರಿಕಾ ಬೆಳೆಗಳನ್ನು ಉತ್ಪಾದನೆ ಮಾಡುವಲ್ಲಿ ನಮ್ಮ ಕರ್ನಾಟಕ ರಾಜ್ಯ ಮೊದಲನೆಯ ಸ್ಥಾನದಲ್ಲಿದೆ. ಪ್ರಪಂಚಕ್ಕೆ ಎರಡನೇ ಸ್ಥಾನದಲ್ಲಿರುವ ಭಾರತ ಇಂಗ್ಲೆಂಡ ಮಾರುಕಟ್ಟೆಯಲ್ಲಿ percentage ಎಷ್ಟು ಇದೆ ಎಂದರೆ, it is less than one percent. ಅದರಲ್ಲಿಯು ವಿಶೇಷವಾಗಿ ಲಂಡನ ಸೂಪರ್ ಮಾರ್ಕೆಟ್‌ನಲ್ಲಿ ನಮ್ಮ ದೇಶದ ತೋಟಗಾರಿಕಾ ಬೆಳೆಗಳ ಮಾರಾಟ.

1% ಇದೆ. ನಮ್ಮಲ್ಲಿ ಬೆಳೆಯುವ ತೋಟಗಾರಿಕಾ ಬೆಳೆಗಳನ್ನು ಸಾಗಾಣಿಕೆ ಮಾಡಬೇಕಾದರೆ cold storage, refrigerator van, air strip ಇರಬೇಕಾಗುತ್ತದೆ, ಒಳ್ಳೆಯ ರಸ್ತೆಗಳು ಇರಬೇಕಾಗುತ್ತದೆ. ಶೀಥಲ ವ್ಯವಸ್ಥೆ ಒಂದು ಮಾಡಿ ತೋಟಗಾರಿಕಾ ಬೆಳೆಗಳಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ ಎಂದು ಹೇಳಲು ಬರುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಅತ್ಯಂತ ಉತ್ಕೃಷ್ಟವಾದ, ಅತ್ಯಂತ ಶ್ರೇಷ್ಟವಾದ ದ್ರಾಕ್ಷಿ ಬೆಳೆಯನ್ನು ಬೆಳೆಯುತ್ತೇವೆ. ಲಂಡನ್ ಸೂಪರ್ ಮಾರುಕಟ್ಟೆಯಲ್ಲಿ ಬಿಜಾಪೂರ ದ್ರಾಕ್ಷಿ ಅತ್ಯಂತ ಶ್ರೇಷ್ಠತೆಯನ್ನು ಪಡೆದಿದೆ. ಆದರೆ ಇದನ್ನು ಸಾಗಾಣಿಕೆ ಮಾಡಲು ಯಾವುದೇ ಮೂಲಭೂತ ಸೌಲಭ್ಯಗಳು ನಮ್ಮಲ್ಲಿ ಇಲ್ಲ ಎಂದರೆ ಹೇಗೆ ಸಾಗಾಣಿಕೆ ಮಾಡುವುದು? ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಅಂಕಿ-ಸಂಖ್ಯೆಗಳ ಮುಖಾಂತರ ಹೇಳಬೇಕು ಎಂದರೆ, ಈ ದೇಶದಲ್ಲಿ ಉತ್ಪಾದನೆಯಾಗುವಂತಹ ತೋಟಗಾರಿಕಾ ಉತ್ಪನ್ನಗಳು during transit ಅಂದರೆ transportation ಮಾಡುವ ಸಂದರ್ಭದಲ್ಲಿ 4000 ದಿಂದ 5000 ಕೋಟಿ ರೂಗಳ ಬೆಲೆವುಳ್ಳಂತಹ ಉತ್ಪನ್ನಗಳು ನಾಶವಾಗಿ ಹೋಗುತ್ತವೆ. We are going to lose `. 4,000-5,000 Crores worth horticulture crop during transit itself.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):- ಮಾನ್ಯ ಸಭಪತಿಗಳೆ,** ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೈದ್ರಾಬಾದ್ ಕರ್ನಾಟಕ ವಿಷಯವಾಗಿ ಮಾತನಾಡಿದರು. ನಿನ್ನೆ ಆ ಭಾಗದ ಕೆಲವು ಜನಪ್ರತಿನಿಧಿಗಳು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಮಾತನಾಡಿದ್ದಾರೆ. ಈಗ ಆಗುತ್ತಿರುವ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯುತ್ತೇವೆ, ಮತ್ತು ನೇಮಕಾತಿ ನಿಯಮಗಳು ಪೂರ್ತಿ ಜಾರಿಗೆ ಬರುವವರೆಗೆ ಯಾವುದೇ ನೇಮಕಾತಿಯನ್ನು ಮಾಡುವುದಿಲ್ಲ. ಮತ್ತು ಸಂಬಂಧಪಟ್ಟ ಎಲ್ಲ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ ಎಂದು ಮಾನ್ಯ ಪಶುಸಂಗೋಪನಾ ಸಚಿವರು ತಿಳಿಸಿದ್ದಾರೆ. ಮತ್ತು ಈಗಾಗಲೇ ಮಾನ್ಯ ವೈಜನಾಥ ಪಾಟೀಲ್‌ರವರಿಗೆ ಈ ವಿಷಯವನ್ನು ತಿಳಿಸಿದ್ದಾರೆ.

**ಸಭಾಪತಿಯವರು:–** ಬಹಳ ಒಳ್ಳೆಯ ವಿಚಾರವನ್ನು ಹೇಳಿದ್ದೀರಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೆ, ಸರ್ಕಾರ ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡಿದೆ ಇದನ್ನು ಸ್ವಾಗತ ಮಾಡುತ್ತೇನೆ. ಹೈದ್ರಾಬಾದ್ ಕರ್ನಾಟಕದ ಜನರಿಗೆ ಕಲಂ 371(ಜೆ) ತಿದ್ದುಪಡಿಯ ಮೂಲಕ ಆ ಜನರಿಗೆ ಅದರ ಲಾಭ ತಲುಪಲು ಸರ್ಕಾರ ಸ್ಪಂದಿಸಿದೆ ಅದಕ್ಕೆ ಧನ್ಯವಾದಗಳನ್ನು ತಿಳಿಸುತ್ತೇನೆ. ಮತ್ತು ಜನಪ್ರತಿನಿಧಿಗಳನ್ನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕರೆದುಕೊಂಡು ಹೋದ ಮಾನ್ಯ ಪಶುಸಂಗೋಪನಾ ಸಚಿವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, because he has taken initiation and interest in this.

**ಶ್ರೀ ರೇವು ನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು):– ಮಾನ್ಯ ಸಭಾಪತಿಗಳೆ,** ನಿನ್ನೆ ನಾವು ಮತ್ತು ಶಾಸಕರು, ಜನಪ್ರತಿನಿಧಿಗಳು ಸೇರಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, 371(ಜೆ) ಜಾರಿಯಾಗುವವರೆಗೆ ಮತ್ತು ನೇಮಕಾತಿ ನಿಯಮಗಳನ್ನು ರಚನೆ ಮಾಡುವವರೆಗೆ ಈಗ ನಡೆಯುತ್ತಿರುವ ನೇಮಕಾತಿಯನ್ನು ತಡೆಹಿಡಿಯಬೇಕು ಎಂದು ಕೇಳಿದಾಗ, ಮಾನ್ಯ ಮುಖ್ಯಮಂತ್ರಿಗಳು ಖಂಡಿತವಾಗಿಯು ಈ ನೇಮಕಾತಿಯನ್ನು ತಡೆ ಹಿಡಿಯುತ್ತೇನೆ, ಈ ಅಧಿವೇಶನ ಮುಗಿದ ತಕ್ಷಣ ಸಂಬಂಧಪಟ್ಟ ಎಲ್ಲ ಶಾಸಕ ಮಿತ್ರರು ಬನ್ನಿ, ಏನೇನು ಸಲಹೆ ಕೊಡಬೇಕು ಕೊಡಿ. ಆತುರದಲ್ಲಿ ಮಾಡುವುದು ಬೇಡ, ಒಳ್ಳೆಯ ಕೆಲಸವನ್ನು ಮಾಡುತ್ತೀದ್ದೇವೆ ಆ ಭಾಗದ ಜನರಿಗೆ ನ್ಯಾಯ ಸಿಗುವ ಹಾಗೆ ಮಾಡೋಣ ಎಂದು ಹೇಳಿದ್ದಾರೆ. ಇದರ ಜೊತೆಗೆ ಧರಣಿ ಕುಳಿತವರ ಹತ್ತಿರ ನಮ್ಮನ್ನೆ ಕಳುಹಿಸಿದ್ದರು, ವೈಜನಾಥ್ ಪಾಟೀಲ್‌ರವರಿಗೆ ವಿಷಯ ತಿಳಿಸಿ, ಭರವಸೆಯನ್ನು ಕೊಟ್ಟ ಮೇಲೆ ಅವರು ಧರಣಿಯನ್ನು ವಾಪಸ್ ತೆಗೆದುಕೊಂಡಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಧನ್ಯವಾದಗಳು, ತೋಟಗಾರಿಕೆ ಬಗ್ಗೆ ಹೇಳುತ್ತಿದೆ, ಇಸ್ರೇಲ್ ಸಣ್ಣ ರಾಷ್ಟ್ರ, ಅವರಲ್ಲಿ ನೀರು ಇಲ್ಲ, ಭೂಮಿ ಕಡಿಮೆ ಇದೆ. ಆದರೂ ಅವರು ತೋಟಗಾರಿಕೆ ಬೆಳೆಗಳನ್ನು ಬೆಳೆಯುವಲ್ಲಿ

ಮುಂಚೂಣಿಯಲ್ಲಿದ್ದಾರೆ. ಬೆಳಗ್ಗೆ 7 ಗಂಟೆಗೆ ಅವರ harvesting ಪ್ರಾರಂಭವಾಗುತ್ತದೆ. ಕಾಯಿಪಲ್ಯ ಇರಬಹುದು, ಹಣ್ಣು-ಹಂಪಲ ಇರಬಹುದು ಪ್ಯಾಕಿಂಗ್ ಮಾಡುತ್ತಾರೆ. ಅವುಗಳು ಒಂದು ಅಥವಾ ಎರಡು ಗಂಟೆ ಹೊತ್ತಿಗೆ ಏರಪೋರ್ಟ್‌ಗೆ ಹೋಗಿ ಮುಟ್ಟುತ್ತವೆ. ಅಲ್ಲಿ ಎಲ್ಲ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಮುಂದೆ air lift ಆಗಿ ಬೆಳಗ್ಗೆ 6ಗಂಟೆ ಅಥವಾ 7ಗಂಟೆಗೆ ಲಂಡನ್ ಸೂಪರ್ ಮಾರುಕಟ್ಟೆಯಲ್ಲಿ ಅವರ ಬೆಳೆಗಳು ಮಾರಾಟಕ್ಕೆ ಸಿಗುತ್ತವೆ. ದೇಶದಲ್ಲಿಯೇ ತೋಟಗಾರಿಕಾ ಉತ್ಪಾದನೆ ಮಾಡುವುದರಲ್ಲಿ ಮೊದಲನೆಯ ಸ್ಥಾನದಲ್ಲಿರುವ ಕರ್ನಾಟಕ ರಾಜ್ಯದ ಈ ಸರ್ಕಾರಕ್ಕೆ ಮನವಿ ಏನು ಎಂದರೆ, ಈ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕಡೆಗೆ ಒತ್ತು ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಎಲ್ಲೋ ಒಂದು ಕಡೆ ಘಟಕವನ್ನು ಪ್ರಾರಂಭ ಮಾಡಿ ತೋಟಗಾರಿಕೆಗೆ ನಾವು ಸಹಾಯ ಮಾಡಿದ್ದೇವೆ ಎಂದು ಭಾವಿಸಬಾರದು. ಒಟ್ಟು ತೋಟಗಾರಿಕಾ ಉತ್ಪಾದನೆಗಳಲ್ಲಿ 17% ನೇರವಾಗಿ ಬಳಕೆ ಮಾಡಿಕೊಳ್ಳುತ್ತೇವೆ. 22% ಸಂಸ್ಕರಣ ಆಗುತ್ತದೆ ಅಂದರೆ value added product ಆಗುತ್ತದೆ, ಇನ್ನುಳಿದ 61% ಭಾಗ ನಿರುಪಯುಕ್ತವಾಗುತ್ತಿದೆ. 22% ಬೆಳೆ ಸಂಸ್ಕರಣಾ ಘಟಕಕ್ಕೆ ಹೋಗಿ value added product ಆಗಿ ಬರುತ್ತದೆ. ಮಾವಿನ ಹಣ್ಣನ್ನೆ ತೆಗೆದುಕೊಳ್ಳಿ ಅಥವಾ ಬೇರೆ ಯಾವುದೇ ಹಣ್ಣು ಇರಬಹುದು ಅದರಿಂದ ಜ್ಯೂಸ್, ಜ್ಯಾಮ್, ಜೆಲ್ಲಿ ಮಾಡಬಹುದು. ಒಂದು ಹಣ್ಣಿನ ಬೆಲೆ 5 ರೂ ಇದ್ದರೆ ಅದು 100-150 ರೂಗಳ value added product ಆಗುತ್ತದೆ. ಅದಕ್ಕಾಗಿ ಈ ಸರ್ಕಾರಕ್ಕೆ ನಾನು ಹೇಳುವುದು, ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಿ, ಸಾಗಾಣಿಕೆ ಮಾಡಲು, ಹೊರದೇಶಗಳಿಗೆ ರಪ್ತು ಮಾಡಲು ಅನುಕೂಲ ಮಾಡಿಕೊಡುವುದರ ಜೊತೆಗೆ ಸಂಸ್ಕರಣಾ ಘಟಕಗಳ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಸಂಸ್ಕಕರಣಾ ಘಟಕಗಳ ಬಗ್ಗೆ ಚಿಂತನೆ ಮಾಡಿದಾಗ ತೋಟಗಾರಿಕೆ ಬೆಳೆಗಾರರಿಗೆ ನ್ಯಾಯ ಒದಗಿಸಿದಂತೆ ಆಗುತ್ತದೆ. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸುಮಾರು 10 ಸಾವಿರ ಟನ್ ಒಣ ದ್ರಾಕ್ಷಿ ಉತ್ಪಾದನೆಯಾಗಿ ಶೇಕಡ 2ರಷ್ಟು ತೆರಿಗೆ ವಿಧಿಸಿದ್ದಾರೆ. ಮಾನ್ಯ

ನಿರಾಣಿಯವರು ಅದೇಕೋ ಮಾನ್ಯ ಸಭಾನಾಯಕರ ಜೊತೆ ಕೂಡಿ ಮಾತನಾಡುತ್ತಿರುತ್ತಾರೆ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್. ಪಾಟೀಲರು ಹಿರಿಯ ಸದಸ್ಯರಾಗಿದ್ದು, ಈ ವಿಚಾರವನ್ನು ನಾನು ಹೇಳದೇ ಇರಬಾರದು. ಮೊದಲು ನಾನು ನಿರಾಣಿಯವರನ್ನು ಆ ಕಡೆ ಏಕೆ ಕುಳಿತಿದ್ದೀರಿ ಎಂದು ಕೇಳಿದೆ. ಅದಕ್ಕೆ ಮಾನ್ಯ ನಿರಾಣಿಯವರು ವಿರೋಧ ಪಕ್ಷದ ನಾಯಕರು ಮತ್ತು ನಾನು ಒಂದೇ ಜಿಲ್ಲೆಯವರಾಗಿದ್ದು, ಕೆಲವು ವಿಚಾರಗಳು ಮನಸ್ಸಿಗೆ ಒಪ್ಪದೇ ಇರುವುದನ್ನು ಹೇಳುತ್ತಾರೆ. ಆದ್ದರಿಂದ ಸ್ವಲ್ಪ ದೂರ ಕುಳಿತುಕೊಂಡಿರುತ್ತೇನೆ ಎಂದು ಹೇಳಿದರು. ಅದಕ್ಕೆ ನಾನು ಅವರನ್ನು ಇಲ್ಲಿಗೆ ಎಳೆದುಕೊಂಡು ಕೂರಿಸಿಕೊಂಡೆನು.

**ಸಭಾಪತಿಯವರು:–** ಅಂದರೆ ಮಾನ್ಯ ನಿರಾಣಿಯವರಿಗೆ ಮುಜುಗರವಾಗುವಂತೆ ತಾವು ಮಾತನಾಡುವಂತಿಲ್ಲ.

**ಶ್ರೀ ದಯಾನಂದ:–** ಮಾನ್ಯ ವಿರೋಧ ಪಕ್ಷದ ನಾಯಕರು ಸುಳ್ಳು ಹೇಳಿದರೆ ಅಲ್ಲಿ ಕನ್‌ಫರ್ಮ್ ಮಾಡಿಕೊಳ್ಳುವುದಕ್ಕೆ ಕುಳಿತಿದ್ದಾರೆ.

**ಶ್ರೀ ಮುರುಗೇಶ್ ನಿರಾಣಿ:–** ನಾವಿಬ್ಬರೂ ಅಕ್ಕಪಕ್ಕದ ಹಳ್ಳಿಯವರಾಗಿದ್ದು, ಒಂದು ರೀತಿ ಇಬ್ಬರೂ partner ಗಳಾಗಿದ್ದೇವೆ. ಒಂದು ಸಕ್ಕರೆ ಕಾರ್ಖಾನೆಯಲ್ಲಿ ಅವರು ಅಧ್ಯಕ್ಷರು ಮತ್ತು ನಾನು M.D., ಆಗಿದ್ದೇನೆ. ಅದರ ಸಲುವಾಗಿ ಅವರು ಮಾತನಾಡುವಾಗ ಬಹಳ ಚೆನ್ನಾಗಿ ಮಾತನಾಡುತ್ತಾರೆ, ಬಹಳ ಹಿರಿಯರಿದ್ದಾರೆ, ಎಂದು ಹೇಳುತ್ತಿದ್ದಾಗ, ಸ್ವಲ್ಪ ಅಂಕಿ ಅಂಶಗಳನ್ನು ಸರ್ಕಾರಕ್ಕೆ ವಿರೋಧವಾಗಿ ಹೇಳಿ, ಅದನ್ನು ಸರಿಪಡಿಸುವುದಕ್ಕೆ ಹೋದಾಗ, ಜಟಾಪಟಿ ಬೇಡ ಎಂದು ಹೇಳಿದರು. ಅದಕ್ಕೆ ನಾನು ದೂರ ಕುಳಿತಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಪ್ರತಿಯೊಬ್ಬ ಸದಸ್ಯರು ಪ್ರಮಾಣ ವಚನ ಮಾಡಿ ಬಂದಿದ್ದು, ಒಬ್ಬರಿಗೆ ಮುಜುಗರ ಆಗುತ್ತದೆ. ಒಬ್ಬರಿಗೆ ಆಗುವುದಿಲ್ಲ,

ಮತ್ತೊಬ್ಬರನ್ನು please ಮಾಡಬೇಕು ಎನ್ನುವ ರೀತಿ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಇಲ್ಲ. ಸತ್ಯವೇ ಮಾತನಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ನಾನು ಸತ್ಯವನ್ನೇ ಮಾತನಾಡುವುದು.

**ಸಭಾಪತಿಯವರು:–** ಅವರು ಹೇಳಿ ಕೇಳಿ ವಕೀಲರು, ಸತ್ಯವನ್ನು ಬಿಟ್ಟು ಬೇರೇನೂ ಹೇಳುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ನಾನು ಯಾವಾಗಲೂ individual based ಆಗಿ ಮಾತನಾಡುವುದಿಲ್ಲ. Issue based ಆಗಿಯೇ ಮೇಲೆ ಮಾತನಾಡುತ್ತೇನೆ. ವೈಯಕ್ತಿಕ ಟೀಕೆ–ಟಿಪ್ಪಣಿ ಮಾಡುವುದನ್ನು ನಾನು ಇಷ್ಟಪಡುವುದಿಲ್ಲ. ಚುನಾವಣೆ ಭಾಷಣದಲ್ಲೂ ಇದನ್ನು ನಿರೀಕ್ಷೆ ಮಾಡಬಹುದು. I will only talk on policy matters. ವ್ಯಕ್ತಿಗತವಾಗಿ ಒಬ್ಬ ಮನುಷ್ಯನ ಚಾರಿತ್ಯದ ಬಗ್ಗೆ ಮಾತನಾಡುವುದು ಮತ್ತು ಖಾಸಗಿ ವಿಚಾರಗಳ ಬಗ್ಗೆ ಕಡು ವೈರಿ ಇದ್ದರೂ ಮಾತನಾಡುವುದಿಲ್ಲ. I will never talk. ಯಾರಿಗೂ ಮುಜುಗರವಾಗುವಂತೆಯೂ ನಾನು ಮಾತನಾಡುವುದಿಲ್ಲ.

**ಶ್ರೀ ದಯಾನಂದ:–** ಅವರಿಬ್ಬರ ಮಾತುಗಳನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುವಂತಿಲ್ಲ, ಏಕೆಂದರೆ ಅವರಿಬ್ಬರೂ partners.

**ಶ್ರೀ ಎಸ್.ಆರ್. ಪಾಟೀಲ್:–** 10 ಸಾವಿರ ಟನ್ ಒಣ ದ್ರಾಕ್ಷಿ ಉತ್ಪಾದನೆಯಾಗುತ್ತಿದ್ದು, ಬಿಜಾಪುರದಲ್ಲಿ ಒಣ ದ್ರಾಕ್ಷಿ ಮಾರುಕಟ್ಟೆ ಆರಂಭಿಸಲು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿರುವುದನ್ನು ಸ್ವಾಗತ ಮಾಡುತ್ತೇನೆ. ಇದು ಒಳ್ಳೆಯ ಕೆಲಸ. ಏಕೆಂದರೆ ಬಾಬಾನಗರ, ಬಿಜ್ಜರಗಿ, ತ್ರಿಕೋಟ ಪ್ರದೇಶಗಳಲ್ಲಿ ಹೆಚ್ಚು ದ್ರಾಕ್ಷಿಯನ್ನು ಬೆಳೆಯುತ್ತೇವೆ. ಏಕೆಂದರೆ ಬಿಜಾಪುರದಲ್ಲಿ ಒಣಹವೆ, ಉತ್ಕೃಷ್ಟವಾದ ಭೂಮಿ ಹಾಗೂ ಯೋಗ್ಯವಾದ ನೀರು ಇರುವುದರಿಂದ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಹೇಳಿ ಮಾಡಿಸಿದಂತಹ ಜಿಲ್ಲೆಯಾಗಿದೆ. ದ್ರಾಕ್ಷಿಗೆ ಹೆಚ್ಚು ಪ್ರಸಿದ್ದಿ ಪಡೆದಿದೆ. ಆದರೆ ಒಣ

ದ್ರಾಕ್ಷಿಗೆ ಶೇಕಡ 2 ತೆರಿಗೆ ವಿಧಿಸಿದ್ದಾರೆ. ಆದರೆ ಪಕ್ಕದ ಮಹಾರಾಷ್ಟ್ರದಲ್ಲಿ ತೆರಿಗೆ ಶೇಕಡ ಶೂನ್ಯ ಇದೆ. ಆಗ ಎಲ್ಲವನ್ನು ತೆಗೆದುಕೊಂಡು ಮಹಾರಾಷ್ಟ್ರಕ್ಕೆ ಹೋಗುವುದರಿಂದ ಬೊಕ್ಕಸಕ್ಕೆ ಬರುವಷ್ಟು ಆದಾಯವೂ ಬರುವುದಿಲ್ಲ. ಒಣ ದ್ರಾಕ್ಷಿ ಸಲುವಾಗಿ ಬಿಜಾಪುರದಲ್ಲಿ ಮಾರುಕಟ್ಟೆಯನ್ನು ತೆಗೆದರೆ ಯಾರೂ ತರುವುದಿಲ್ಲ. ಶೂನ್ಯ ತೆರಿಗೆ ಇರುವಲ್ಲಿ ಹೋಗುತ್ತಾರೆ. ಮಹಾರಾಷ್ಟ್ರದವರು ತೆರಿಗೆ ವಿನಾಯಿತಿ ಮಾಡಿದಂತೆ on par with Maharashtra ನಮ್ಮಲ್ಲಿಯೂ ಮಾಡಿದರೆ ರಾಜ್ಯದ ಬೊಕ್ಕಸಕ್ಕೆ ಹಣ ಬರುತ್ತದೆ ಮತ್ತು ಬಜೆಟ್‌ನಲ್ಲಿ ಪ್ರಸ್ತಾಪಿಸಿರುವುದಕ್ಕೂ ಬೆಲೆ ಸಿಗುತ್ತದೆ ಎಂದು ಹೇಳಬಯಸುತ್ತೇನೆ.

ಹವಾಮಾನ ಮುನ್ಸೂಚನಾ ಕೇಂದ್ರವನ್ನು ಪ್ರತಿ ಹೋಬಳಿ ಮಟ್ಟದಲ್ಲಿ ಸ್ಥಾಪನೆ ಮಾಡಿದರೆ ಬಹಳಷ್ಟು ಉಪಯೋಗವಾಗುತ್ತದೆಂದು ನಾನು ಇನ್ನೊಂದು ಮನವಿಯನ್ನು ಮಾಡಿದ್ದೆ. ಆದರೆ ಬಜೆಟ್‌ನಲ್ಲಿ ಪ್ರಸ್ತಾಪ ಆಗಿಲ್ಲ. ತೋಟಗಾರಿಕೆ ಬೆಳೆ ಬೆಳೆಯುವವರಿಗೆ ಇದರ ಅವಶ್ಯಕತೆ ಬಹಳಷ್ಟು ಇದೆ. ಕೆಲವು ಸಮಯದಲ್ಲಿ ನಾನೂ ದ್ರಾಕ್ಷಿ ಬೆಳೆಗಾರನಾಗಿದ್ದೆ. ಈಗ ಬೆಳೆಯುವುದಿಲ್ಲ. ಬೆಳಿಗ್ಗೆ ಹವಾಮಾನ ಸರಿಯಲ್ಲ ಎಂದರೆ ಆಗ spray ಮಾಡಬೇಕು, ಅದೇ ರೀತಿ ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿಯೂ spray ಮಾಡಬೇಕು, ಅಂದರೆ ದಿವಸಕ್ಕೆ 3 ಬಾರಿ ದ್ರಾಕ್ಷಿ ಬೆಳೆಗೆ spray ಮಾಡುವ ಅವಶ್ಯಕತೆ ಇದೆ. ಹವಾಮಾನ ಮುನ್ಸೂಚನೆ ಕೇಂದ್ರಗಳು ಪ್ರತಿ ಹೋಬಳಿ ಮಟ್ಟದಲ್ಲಿ ಇರುವುದರಿಂದ ದ್ರಾಕ್ಷಿ ಬೆಳೆಗಾರರಿಗೆ ಮಾತ್ರವಲ್ಲದೇ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ. ಮುಂಬರುವ ವಾತಾವರಣ, ಮಳೆ ಬರುವ ಮುನ್ಸೂಚನೆ ತಿಳಿಯುವ ಹಾಗೂ ರೈತನು ವೈಜ್ಞಾನಿಕವಾಗಿ ಹಾಗೂ ಸಮರ್ಥವಾಗಿ ಕೃಷಿ ಮಾಡಲು ಅನುಕೂಲವಾಗುವ ದೃಷ್ಟಿಯಿಂದ ಹವಾಮಾನ ಮುನ್ಸೂಚನಾ ಕೇಂದ್ರಗಳನ್ನು ಹೋಬಳಿ ಮಟ್ಟದಲ್ಲಿ ಸ್ಥಾಪನೆ ಮಾಡಬೇಕು.

ಇನ್ನು ವೈನ್ ತಯಾರಿಕೆ ಮತ್ತು ಮಾರುಕಟ್ಟೆಯನ್ನು ಅಬಕಾರಿಯಿಂದ ಆಹಾರದ ನಿಯಮದಡಿ ತರಬೇಕು. ನನ್ನ ದೃಷ್ಟಿಯಲ್ಲಿ ವೈನ್ it's a fruit juice. ಅದಕ್ಕೆ ಸಾರಾಯಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ವೈನ್ ಕುಡಿದರೆ

it will increase the lifespan ಎಂದು ಹೇಳುತ್ತಾರೆ. ಇದಲ್ಲದೇ ಮನುಷ್ಯನ complexion ಸಹ ಬದಲಾವಣೆ ಆಗುತ್ತದೆ ಎಂದು ಹೇಳುತ್ತಾರೆ. Unfortunately, ಮಾನ್ಯ ನಾಣಯ್ಯನವರು ಸದನದಲ್ಲಿ ಇಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರನ್ನು ಕೇಳಿದರೆ ಹೇಳುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಇಲ್ಲ, ಮಾನ್ಯ ಸಭಾಪತಿಯವರಿಗೆ ಇಂತಹ ಅನುಭವ ಇಲ್ಲ, ಇಲ್ಲದಿದ್ದರೆ ಅವರನ್ನೇ ಕೇಳುತ್ತಿದ್ದೆ ತಮಗೆ ಸ್ವಲ್ಪ ಅನುಭವ ಇದ್ದರೆ ಹೇಳಬಹುದು. ವೈನ್ ತಯಾರಿಕೆಯನ್ನು ಅಬಕಾರಿಯಲ್ಲಿ ಇಟ್ಟರೆ ಸಾರಾಯಿ ಎಂದು treat ಆಗುತ್ತದೆ.

**ಶ್ರೀ ದಯಾನಂದ:–** ಮಾನ್ಯ ಮೋಟಮ್ಮನವರು ಮಾನ್ಯ ಸಭಾಪತಿಯವರ ಮೇಲೆ ಸಂಶಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಮಾನ್ಯ ಸಭಾಪತಿಯವರ ಜೊತೆ 15 ದಿವಸ ಪ್ರವಾಸ ಮಾಡಿದ್ದೇನೆ, ಅವರು ತೆಗೆದುಕೊಳ್ಳುವುದಿಲ್ಲ ಎಂದು ಹೇಗೆ ಹೇಳುತ್ತಾರೆ, witness ಮಾಡಿದ್ದೇನೆ ಎಂದು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಇದನ್ನು ಅಬಕಾರಿಯಿಂದ ಆಹಾರಕ್ಕೆ ತರಬೇಕು. ಅಲ್ಲದೇ it is like a fruit juice. ಇದೊಂದು ಹಣ್ಣಿನ ರಸ ಇದ್ದಂತೆ, ಆದರೆ ಯಾವುದಾದರೂ ಇತಿಮಿತಿಯಲ್ಲಿ ತೆಗೆದುಕೊಳ್ಳಬೇಕು. ಮಿತಿ ಮೀರಿದರೆ ಬೇರೆ ಫಲಿತಾಂಶ ಕೊಡುತ್ತದೆ. ಈ ಮನವಿಯನ್ನು ಯಾರು note ಮಾಡಿಕೊಳ್ಳುತ್ತಿದ್ದಾರೆ? ಮಾನ್ಯ ರೇವೂ ನಾಯಕ್‌ರವರು ಬರೆದುಕೊಳ್ಳುತ್ತಿದ್ದಾರೆಯೇ?

**ಶ್ರೀ ಎ.ಎಚ್. ಶಿವಯೋಗಿಸ್ವಾಮಿ:–** ಮಾನ್ಯ ಸಚಿವರ ಹಾಗೂ ಅಧಿಕಾರಿಗಳು note ಮಾಡಿಕೊಳ್ಳುತ್ತಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಯಾವ ಸಚಿವರು ಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿಸಬೇಕು.

**ಶ್ರೀ ವಿ. ಸೋಮಣ್ಣ:–** ಇಲ್ಲಿ ಮಾತನಾಡುವ ವಿಷಯವು ಪ್ರತಿ ಅರ್ಧ ಗಂಟೆಗಳಿಗೊಮ್ಮ ಬೆರಳಚ್ಚು ಆಗಿ ನಮಗೆ ಬರುತ್ತಿರುತ್ತದೆ. ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ವಿಷಯವನ್ನು ಸಂಕ್ಷಿಪ್ತವಾಗಿ ಸಭೆಯ ಮುಂದಿಡುತ್ತೇನೆ. ಪ್ರತಿಯೊಂದನ್ನು ಮಾಡುತ್ತಿದ್ದೇವೆ. ಮಾನ್ಯ ಮೋಟಮ್ಮನವರು ಏನು ಮಾತನಾಡಿದ್ದಾರೆ ಎಂಬುದನ್ನು ಹೇಳುತ್ತೇನೆ. ಅವರು ನಿನ್ನೆ ಮುಂದುವರೆದು "ಮಠ ಮಾನ್ಯಗಳಿಗೆ ಹೆಚ್ಚಿನ ಹಣ ಒದಗಿಸುವಂತೆ" ಕೇಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ನಾವು ಮಾಡಿಕೊಳ್ಳಿ ಎಂದು ಹೇಳಿದೆವು, ಬೇರೆನೂ ಹೇಳಿಲ್ಲ. ಮುಖ್ಯ ಸಚೇತಕರು ಅಧಿಕಾರಿಗಳು ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

**ಶ್ರೀ ಎ.ಎಚ್. ಶಿವಯೋಗಿಸ್ವಾಮಿ:–** ರೆಕಾರ್ಡ್ ಆಗಿರುವುದು ಇಲ್ಲಿದೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಮೋಟಮ್ಮನವರು ಹಾಗೂ ಮಾನ್ಯ ಹೊರಟ್ಟಿಯವರು ಮಂತ್ರಿಯಾಗಿದ್ದರು. ಆಯವ್ಯಯ ಎಲ್ಲರ ಕಾಲದಲ್ಲಿ ನಡೆದಿದೆ. ಯಾರ ಕಾಲದಲ್ಲಿ ಹೆಚ್ಚಾಗಿ ನಡೆದಿದೆ ಎನ್ನುವುದಕ್ಕಿಂತ ವಿರೋಧ ಪಕ್ಷದ ನಾಯಕರ ಜವಾಬ್ದಾರಿ ಮತ್ತು ಸೂಕ್ಷ್ಮತೆ ಅರಿವು ಇರುವುದರಿಂದ ಮಾಹಿತಿಗಳನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟು, ಎಲ್ಲಕ್ಕೂ ಉತ್ತರವನ್ನು ಕೊಡಿಸುವ ಕೆಲಸದಲ್ಲಿ ಇದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಅವರು ಮಂತ್ರಿಯಾಗಿದ್ದಾಗ ನೀವು ಬರೆದುಕೊಳ್ಳುತ್ತಿದ್ದಿರಾ? ಎಂದು ಕೇಳಿದರು. ನಾನು ಮಂತ್ರಿಯಾಗಿದ್ದಾಗ ನಮ್ಮ ಸಭಾನಾಯಕರು ಎಲ್ಲವನ್ನು ಮಾಡುತ್ತಿದ್ದರು ಎಂದು ಹೇಳಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ವೈನ್ ಬಗ್ಗೆ ಉಲ್ಲೇಖ ನಡೆಯುತ್ತಿದ್ದು, ಅದನ್ನು ಹಣ್ಣಿನ ರಸ ಎಂದು ಪರಿಗಣಿಸಬೇಕೆಂದು ನಡೆಯುತ್ತಿದೆ. ಆದರೆ ವೈನ್ ನಾನು ಕುಡಿಯದಿದ್ದರೂ, ನಾನು ತಿಳಿದುಕೊಂಡಂತೆ ಶೇಕಡಾವಾರು ಆಲ್ಕೋಹಾಲ್ ಬಿಯರ್‌ಗಿಂತ ಜಾಸ್ತಿ

ಇರುತ್ತದೆ. ಅದನ್ನು ಅಬಕಾರಿ ಇಲಾಖೆಯಿಂದ ತೆಗೆದು ಆಹಾರ ಇಲಾಖೆಗೆ ಕೊಡುವ ಬಗ್ಗೆ ಹೇಳುತ್ತಿದ್ದು, ಇದರ ಬಗ್ಗೆ ಸ್ಪಷ್ಟತೆಯನ್ನು ಕೊಡಬೇಕು. Because, wine contains ot of alchohol. ಅದರ impact ಏನಾಗಬಹುದು? ದ್ರಾಕ್ಷಿ ಬೆಳೆಗಾರರಿಗೆ ಏನು ಸಹಾಯ ಮಾಡಬಹುದು ಎಂಬ ಬಗ್ಗೆ ಚಿಂತನೆ ಮಾಡಬಹುದು, ಆದರೆ ಆಲ್ಕೋಹಾಲ್ ಇರುವಂತಹ beverage ಅನ್ನು ಹಣ್ಣಿನ ರಸ ಎಂದು ಪರಿಗಣಿಸುವುದು ತಪ್ಪಾಗುತ್ತದೆ. ಆದ್ದರಿಂದ ಇದರ ಬಗ್ಗೆ ಅವರು ಸ್ಪಷ್ಟೀಕರಣ ಕೊಡಬೇಕೆಂದು ವಿನಂತಿಸುತ್ತೇನೆ.

( 12–30)

**ಶ್ರೀ ಮುರುಗೇಶ ನಿರಾಣಿ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮುದೋಳದಲ್ಲಿ ನಾನು ಒಂದು Distillery ನಡೆಸುತ್ತಿರುವುದರಿಂದ ಈ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. 'ವೈನ್ ಅನ್ನು ಅಬಕಾರಿ ಇಲಾಖೆಯಿಂದ ಬೇರೆ ಮಾಡಿ ಆಹಾರ ಪದಾರ್ಥಗಳಂತೆ ಅಂಗಡಿಗಳಲ್ಲಿ ಮಾರಾಟ ಮಾಡುವ ಮೂಲಕ ದ್ರಾಕ್ಷಿ ಬೆಳೆಗಾರರಿಗೆ ಉತ್ತೇಜನ ಕೊಡಬೇಕು' ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಸಲಹೆಯನ್ನು ನೀಡುತ್ತಿದ್ದಾರೆ, ಅದು ನೂರಕ್ಕೆ ನೂರರಷ್ಟು ಸರಿಯಾಗಿದೆ. ನೇರವಾಗಿ ದ್ರಾಕ್ಷಿ ಮಾರಾಟ ಮಾಡುವ ಬದಲಿಗೆ ಅದನ್ನು ವೈನ್ ರೂಪಕ್ಕೆ ತಂದು ಮಾರಾಟ ಮಾಡಿದರೆ ಅದರಿಂದ ಬರುವಂತಹ ಲಾಭ ಹೆಚ್ಚಾಗಿರುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ತಯಾರಾಗುತ್ತಿರುವ ವೈನ್ ಬಗ್ಗೆ ಹೇಳಬೇಕಾದರೆ, Wine industry ಇರುವವರು E.N.A., (Extra Neutral Alcohol) ಮತ್ತು R.S., (Rectified Spirit) ನ್ನು ಖರೀದಿ ಮಾಡುತ್ತಾರೆ. Local wine original ಆಗಿ ಇರುವುದರಿಂದ ನಶೆ ಬರುವುದಿಲ್ಲ. ಹೊರ ದೇಶಗಳಲ್ಲಿ ಸುಮಾರು 8–10 ವರ್ಷಗಳು ಅಥವಾ 20–30 ವರ್ಷಗಳ ಕಾಲ ಅದನ್ನು ಕೊಡಿ ಇಡುವುದರಿಂದ, ಆ ವೈನ್‌ಗೆ ಅದರದೇ ಆಗಿರುವಂತಹ taste ಬರುತ್ತದೆ

ಮತ್ತು ಅದು ಯಾವುದೇ ರೀತಿಯಿಂದ ಹಾನಿಕಾರಕವಾಗಿರುವುದಿಲ್ಲ. ನಮ್ಮಲ್ಲಿ ತಯಾರು ಆಗುವಂತಹ ವೈನ್‌ಗೆ ನಶೆ ಬರುವ ಸಲುವಾಗಿ E.N.A., ಮತ್ತು R.S.,ನ್ನು ಮಿಶ್ರಣ ಮಾಡುತ್ತಿದ್ದಾರೆ. ಈ ವಿಚಾರ ನನಗೆ ಮೊದಲು ಗೊತ್ತಿರಲಿಲ್ಲ. ವೈನ್‌ನಲ್ಲಿ ಶುದ್ಧವಾಗಿರುವ ದ್ರಾಕ್ಷ ರಸ ಮಾತ್ರ ಇರುತ್ತದೆ ಎಂದು ನಾನು ಭಾವಿಸಿದ್ದೆ. ಆದರೆ, ಅದಕ್ಕೆ ಬಹಳಷ್ಟು ಸ್ಪಿರಿಟ್‌ಗಳನ್ನು ಮಿಶ್ರಣ ಮಾಡಗುತ್ತಿದೆ ಅದು ಆಗಬಾರದು ಎನ್ನುವುದನ್ನು ಮಾನ್ಯ ಸಬಕಾರಿ ಸಚಿವರಿಗೆ ತಿಳಿಸಿದ್ದೇನೆ. Wine industryಗೆ ಇದು ಸಹಾತಕವಾಗುವುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರ ಸಲಹೆ ಗಮನಾರ್ಹವಾಗಿದೆ ಎಂದು ಹೇಳಬಹುದಾಗಿದೆ.

**ಶ್ರೀ ಕೆ.ಬಿ. ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ವೈನ್ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದು ಘಟನೆಯನ್ನು ನೆನಪು ಮಾಡಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ನಾನು 1985ರಲ್ಲಿ M.L.A., ಆಗಿದ್ದೆ. ಆಗ ಬಿ.ಜಿ. ಬಣಕಾರ್‌ರವರು ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತಿದ್ದರು. ಮಾನ್ಯ ವೇದಾಂತ ಹೆಮ್ಮಿಗೆಯವರು ಒಂದು ಖಾಸಗಿ ಸದಸ್ಯರ ವಿಧೇಯಕವನ್ನು ಸಭೆಯ ಮುಂದೆ ತಂದಿದ್ದರು. ಆ ವಿಧೇಯಕದ ಮೇಲೆ ಚರ್ಚೆ ನಡೆಸುವಂಹ ಸಂದರ್ಭದಲ್ಲಿ ಕುಡಿಯುವವರಿಗೆ ಏನು ಮಾಡಬೇಕು, ಅದನ್ನು ನಿಷೇಧಿಸಬೇಕೇ ಹೇಗೇ ಎನ್ನುವುದರ ಬಗ್ಗೆ ಚರ್ಚೆ ನಡೆದಿತ್ತು. ಆಗ ಮಾನ್ಯ ಸಭಾಧ್ಯಕ್ಷರು. 'ಇಲ್ಲಿ ಎಷ್ಟು ಜನ ಕುಡಿಯುವವರು ಇದ್ದೀರಿ ಕೈ ಎತ್ತಿ' ಎಂದು ಹೇಳಿದರು. ನಾನು ಮತ್ತು ಮಾನ್ಯ ಜೆ.ಹೆಚ್. ಪಟೇಲ್ ಇಬ್ಬರೇ ಕೈ ಎತ್ತಿದ್ದೆವು. ಉಳಿದವರು ಯಾರೂ ಕೈ ಎತ್ತಲಿಲ್ಲ. ಆಗ ಮಾನ್ಯ ಜೆ.ಹೆಚ್. ಪಟೇಲ್‌ರವರು ಸುಮ್ಮನೆ ಕುಳಿತುಕೊಳ್ಳದೇ, 'ಏನ್ರೀ ಹೆಗಡೆ ಮತ್ತು ಬೊಮ್ಮಾಯಿಯವರೇ, ನಾವೆಲ್ಲರೂ ರಾತ್ರಿ ಒಟ್ಟಿಗೇ ಕುಡಿಯಲು ಕುಳಿತಿದ್ದೆವು ಯಾಕೆ ಕೈ ಎತ್ತುತ್ತಿಲ್ಲ? ಎಂದು ಹೇಳಿದರು.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಈ ನಾಡು ಕಂಡಂತಹ ಅಪರೂಪದ ಮುಖ್ಯಮಂತ್ರಿಗಳಲ್ಲಿ ಮಾನ್ಯ ಜೆ.ಹೆಚ್.

ಪಟೇಲ್‌ರವರೂ ಒಬ್ಬರು. ಅವರು ಯಾವುದನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ.

**ಶ್ರೀ ರಾಮಚಂದ್ರಗೌಡ:–** ಸನ್ಮಾನ್ಯ ಸಭಾಪತಿಯವರೇ, ಪ್ರಶ್ನೆ ಏನು ಎನ್ನುವುದೇ ಅರ್ಥವಾಗದೇ ಇರುವಷ್ಟು ಪ್ರಮಾಣದಲ್ಲಿ ಅವರಿಬ್ಬರು ಕುಡಿದು ಬಿಟ್ಟಿದ್ದರು ಅನಿಸುತ್ತದೆ. ಅದಕ್ಕಾಗಿ ಅವರುಗಳು ಕೈ ಎತ್ತಲಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

**ಸಭಾಪತಿಯವರು:–** ಪ್ರಾಸಂಗಿಕವಾಗಿ ಇಷ್ಟು ಸಾಕು. ವಿಷಯದ ಮೇಲೆ ಚರ್ಚೆ ಮುಂದುವರಿಯಲಿ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಿರಾಣಿಯವರು ಹೇಳಿದಂತಹ ವಿಷಯಕ್ಕೆ ನಾನೂ ಸಹ ಧ್ವನಿಗೂಡಿಸುತ್ತಿದ್ದೇನೆ. ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು, 'ನಾನು ಕುಡಿಯುವುದೇ ಇಲ್ಲ, ವೈನ್‌ನ ರುಚಿಯನ್ನೇ ನೋಡಿಲ್ಲ ವಿಸ್ಕಿ . . .' ಎಂದು ಹೇಳಿದರು.

**ಸಭಾಪತಿಯವರು:–** ವೈನ್ ರುಚಿಯನ್ನೇ ನೋಡದೇ ಇರುವವರನ್ನು ವಿಸ್ಕಿಯನ್ನು ಹೇಗೆ ಕುಡಿಯುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಒಂದು 60 ml ವೈನ್ ಕುಡಿದರೆ ಅಮಲು ಬೇಗ ಬರುತ್ತದೆಯೇ ಎನ್ನುವುದನ್ನು ತಾವೇ ಹೇಳಬೇಕಾಗಿದೆ.

**ಸಭಾಪತಿಯವರು:–** ನನಗೆ ಗೊತ್ತಿಲ್ಲ.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮನ್ನು ಕೇಳುತ್ತಿದ್ದಾರೆ ಇದು ವಿಪರ್ಯಾಸದ ಸಂಗತಿಯಾಗಿದೆ.

**ಶ್ರೀ ದಯಾನಂದ:–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಪರವಾಗಿ ಅವರೇ ಉತ್ತರ ಕೊಡಲಿ.

**ಡಾ॥ ಎ.ಹೆಚ್. ಶಿವಯೋಗಿ ಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರ ಪ್ರಶ್ನೆಗೆ ಮಾನ್ಯ ಸಭಾಪತಿಯವರು ಉತ್ತರವನ್ನು ಕೊಡಬೇಕಾದರೆ, ಇವತ್ತು ಅದನ್ನು try ಮಾಡಿ ನಾಳೆ ಬಂದು ಹೇಳಬೇಕಾಗುತ್ತದೆ. ಅದರ ಮೇಲಿನ Ruling ನಾಳೆ.

**ಶ್ರೀ ದಯಾನಂದ:–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಅವರುಗಳನ್ನು ಕೇಳುತ್ತಿದ್ದೇವೆ. ಈ ಸದನ ಮುಗಿದ ಮೇಲೆ ತಾವು ಆ ಪ್ರಯತ್ನವನ್ನು ಮಾಡಿ. ಈಗ ಅಂತಹ ಪ್ರಯೋಗ ಮಾಡುವುದು ಬೇಡವೆನ್ನುವುದು ನನ್ನ ಪ್ರಾರ್ಥನೆಯಾಗಿದೆ.

**ಶ್ರೀ ಎಸ್.ಆರ್. ಪಾಟೀಲ್ :–** ಸನ್ಮಾನ್ಯ ಸಭಾಪತಿಯವರೇ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವೈನ್‌ಗೆ ಹೆಚ್ಚು ಮಹತ್ವವಿದೆ. ಅದರಲ್ಲೂ France ದೇಶದಲ್ಲಿ ವೈನ್‌ಗೆ ಹೆಚ್ಚು ಮಹತ್ವವಿದೆ. French wine is very popular in the world. ಯಾವುದೇ ಡ್ರಿಂಕ್ಸ್ ತೆಗೆದುಕೊಂಡರೂ ಬೇಗ ಕಿಕ್ ಕೊಡಬೇಕು ಎನ್ನುವ ಭಾವನೆ ನಮ್ಮ ಜನರಲ್ಲಿ ಇದೆ. ಅದಕ್ಕಾಗಿ Extra Neutral Alcoholನ್ನು ಸೇರಿಸಲಾಗುತ್ತದೆ. ಗೋಲ್ಕೊಂಡಾ ವೈನ್ ಬಹಳ ಬೇಗ ನಶೆ ಕೊಡುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ಸ್ಪಿರಿಟ್ ಮಿಶ್ರಣ ಮಾಡಬಾರದು, ಆದರೆ ಮಾಡುತ್ತಾರೆ. ಇದು ತಪ್ಪು. ಮಾನ್ಯ ಗಣೇಶ್ ಕಾರ್ಣಿಕ್ ಅವರು ಹೇಳಿದಂತೆ ವಿಸ್ಕಿ, ರಮ್ ಮತ್ತು ಬ್ರಾಂದಿ ಮುಂತಾದ ಪೇಯಗಳಿಗಿಂತ ಶುದ್ಧ ವೈನ್‌ನಲ್ಲಿ ಆಲ್ಕೋಹಾಲ್ ಪ್ರಮಾಣ ಹೆಚ್ಚು ಇರುವುದಿಲ್ಲ.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಸಹಾಯಕ್ಕೆ ಬರುತ್ತಿದ್ದೇನೆ, ಒಂದು ಉಕ್ತಿ:

"If the drink is taken in a small quantity you will the kick from within, if it is more, you will receive kick from outside" ಎಂದು ಇದೆ.

**ಶ್ರೀ ದಯಾನಂದ:–** ಸನ್ಮಾನ್ಯ ಸಭಾಪತಿಯವರೇ, ಅವರು theory ಬಗ್ಗೆ ಮಾತನಾಡಬಾರದು. ಪ್ರಾಕ್ಟಿಕಲ್ ಆಗಿ ಮಾತ್ರ ಮಾತನಾಡಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಮಾಹಿತಿಗಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆ. ಬೇರೆ ಪೇಯಗಳನ್ನು ಸೋಡಾ ಮತ್ತು ನೀರಿನ ಜೊತೆಗೆ ಸೇರಿಸಿಕೊಂಡು ಕುಡಿಯುತ್ತಾರೆ. ವೈನ್‌ನ್ನು dilute ಮಾಡದೆ, ಅಂದರೆ ನೀರು ಬೆರೆಸಿಕೊಳ್ಳದೇ ನೇರವಾಗಿ ಕುಡಿಯುತ್ತಾರೆ. ಸುಮಾರು 60 ml ನಷ್ಟು ವೈನ್ ಕುಡಿದರೆ ಅಥವಾ 60 ml ವಿಸ್ಕಿ ಕುಡಿದರೆ ಅದರಲ್ಲಿ ಶೇಕಡಾವಾರು ಆಲ್ಕೋಹಾಲ್ ಪ್ರಮಾಣ ಹೆಚ್ಚು ಕಡಿಮೆ ಇರಬಹುದು. ಆದರೆ, ವೈನ್‌ನ್ನು ನೀರು ಮಿಶ್ರಣ ಮಾಡಿಕೊಳ್ಳದೇ ನೇರವಾಗಿ ಕುಡಿಯುವುದರಿಂದ ಆಲ್ಕೋಹಾಲ್ ಪ್ರಮಾಣ ನೇರವಾಗಿ ದೇಹವನ್ನು ಸೇರುತ್ತದೆ.

**ಸಭಾಪತಿಯವರು:–** ವೈನ್‌ನಲ್ಲಿ ಏನಿದೆ, ಏನಿಲ್ಲ ಎನ್ನುವ ಚರ್ಚೆ ಸಾಕು.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ. ಅಬಕಾರಿಯಿಂದ ವೈನ್ ಅನ್ನು ಆಹಾರದ ಪಟ್ಟಿಗೆ ತಂದರೆ ಒಳ್ಳೆಯದು. ವೈನ್‌ಗೆ ಸ್ಪಿರಿಟ್ ಮಿಶ್ರಣ ಮಾಡುವುದರಿಂದ ಆಲ್ಕೋಹಾಲ್ ಪ್ರಮಾಣ ಹೆಚ್ಚಾಗಿದೆ ಎನ್ನುವುದು ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರ ಗಮನಕ್ಕೆ ಬಂದಿದೆ. 'On the rock' ಎಂದು ಐಸ್ ಚೂರುಗಳನ್ನು ಹಾಕಿಕೊಂಡು ಇದನ್ನೂ ಕುಡಿಯುತ್ತಾರೆ. ಅದನ್ನೂ ಕುಡಿಯುತ್ತಾರೆ. ಆದರೆ, ವೈನ್‌ಗೆ ನೀರು ಸೇರಿಸಿಕೊಳ್ಳುವುದಿಲ್ಲ ಎನ್ನುವುದು ಸತ್ಯವಾದ ಮಾತಾಗಿದೆ. Alchoholic percentage will be more in whiskey, brandy and rum, rather than wine. ವೈನ್ ಎನ್ನುವುದು ಉತ್ಕೃಷ್ಟವಾಗಿರುವಂತಹ ಪೇಯ. ಅದು ಆರೋಗ್ಯಕ್ಕೆ ಒಳ್ಳೆಯದು. ಇದನ್ನು ಆಹಾರ ಪಟ್ಟಿಗೆ ತಂದರೆ ನಮ್ಮ ರೈತರಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ವಿಚಾರವನ್ನು ಹೇಳಿದ್ದೇನೆ. ಈಗಾಗಲೇ ಅದರ ಮೇಲೆ ವಿಧಿಸಿರುವಂತಹ ತೆರಿಗೆಯಲ್ಲಿ ಶೇಕಡಾ ಎರಡರಷ್ಟು ತೆರಿಗೆ ವಿನಾಯಿತಿ ನೀಡಬೇಕೆಂದು ಕೇಳಿಕೊಂಡಿದ್ದೇನೆ. It should be on par with Maharashtra. ದ್ರಾಕ್ಷಿ ಬೆಳೆಗಾರರು ಉಪಯೋಗಿಸುವಂತಹ

ಒಣ ದ್ರಾಕ್ಷಿ ರಾಶಿ ಮೆಶಿನ್, ಗ್ರೈಡಿಂಗ್ ಮೆಶಿನ್, ಔಷಧ ಸಿಂಪಡಣೆ ಮಾಡುವಂತಹ ಮೆಶಿನ್‌ಗಳಿಗೆ ಮತ್ತು ಮೇವು ಕತ್ತರಿಸುವ ಮೆಶಿನ್‌ಗಳಿಗೆ ಬಳಕೆಯಾಗುವಂತಹ ವಿದ್ಯುತ್ ಶುಲ್ಕವನ್ನು ತೆಗೆದು ಹಾಕಿದರೆ ತೋಟಗಾರಿಕೆ ಬೆಳೆಗಳನ್ನು ಬೆಳೆಯುವಂತಹ ರೈತರಿಗೆ ಅನುಕೂಲವಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಕಳೆದ ಎರಡು ವರ್ಷಗಳಿಂದ ಭೀಕರವಾಗಿರುವ ಬರಗಾಲದ ಹಿನ್ನೆಲೆಯಲ್ಲಿ ದ್ರಾಕ್ಷಿ ಬೆಳೆಗಾರರು ಮತ್ತು ಇನ್ನಿತರ ಬೆಳೆಗಾರರು ಸಂಕಷ್ಟಕ್ಕೆ ಈಡಾಗಿದ್ದಾರೆ. ಇವರು ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯನ್ನು ಅನುಭವಿಸಿದ್ದಾರೆ. ಆದ್ದರಿಂದ ದ್ರಾಕ್ಷಿ ಬೆಳೆಗಾರರಿಗೆ ವಿಶೇಷವಾಗಿರುವಂತಹ package ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕು. ರಾಜ್ಯ ಸರ್ಕಾರ ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸುವಂತಹ ಕೆಲಸವನ್ನು ಮಾಡಬೇಕು. ಕೇಂದ್ರದ ಕೃಷಿ ಸಚಿವರಾದ ಮಾನ್ಯ ಶರದ್ ಪವಾರ್ ಅವರು 'ನಿಮ್ಮ ರಾಜ್ಯ ಸರ್ಕಾರದಿಂದ ಒಂದು ಪ್ರಸ್ತಾವನೆ ಬರಲಿ, loan waive off scheme ನಲ್ಲಿ ನಾವು ಅದನ್ನು consider ಮಾಡುತ್ತೇವೆ' ಎಂದು ಹೇಳಿದ್ದಾರೆ. ತೋಟಗಾರಿಕೆ ಬೆಳೆಗಳಾದ, ನಿಂಬೆ, ದ್ರಾಕ್ಷಿ ಮತ್ತು ದಾಳಿಂಬೆ ಮುಂತಾದ ತೋಟಗಾರಿಕಾ ಬೆಳೆಗಾರರು ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯನ್ನು ಅನುಭವಿಸಿದ್ದಾರೆ. ಕೆಲವರು ಆತ್ಮಹತ್ಯೆಯ ದಾರಿಯನ್ನು ಹಿಡಿದಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಮತ್ತು ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದಾರೆ. ಆರ್ಥಿಕವಾಗಿ ಶೋಚನೀಯ ಸ್ಥಿತಿಯಲ್ಲಿ ಇರುವಂತಹ ಈ ರೈತರಿಗೆ ಸಹಾಯ ಮಾಡಬೇಕೆನ್ನುವ ಚಿಂತನೆ ಸರ್ಕಾರಕ್ಕೆ ಇದ್ದರೆ, ಅವರಿಗೊಂದು ಪಾಕೇಜ್‌ನ್ನು ಘೋಷಣೆ ಮಾಡಬೇಕಾಗುತ್ತದೆ ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ನಿನ್ನೆ ಕಬ್ಬು ಬೆಳೆಗೆ ಸಂಬಂಧಪಟ್ಟ ವಿಧೇಯಕ ಈ ಸದನದ ಮುಂದೆ ಬಂದಿತ್ತು. ಅದಕ್ಕೆ ನಾವು ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಮಹಾರಾಷ್ಟ್ರದಲ್ಲಿ ಒಂದು ಮೆಟ್ರಿಕ್ ಟನ್ ಕಬ್ಬಿನ ಮೇಲೆ ಶೇಕಡಾ 10ರಷ್ಟನ್ನು ಮಾತ್ರ ಖರೀದಿ ತೆರಿಗೆಯನ್ನಾಗಿ ವಿಧಿಸಲಾಗುತ್ತಿದೆ. ಆದರೆ, ನಮ್ಮ

ಕರ್ನಾಟಕ ರಾಜ್ಯದಲ್ಲಿ ಶೇಕಡಾ 75ರಷ್ಟು ಖರೀದಿ ತೆರಿಗೆಯನ್ನು ವಿಧಿಸಲಾಗುತ್ತಿದೆ. ನಮ್ಮ ನೆರೆಯ ರಾಜ್ಯವಾಗಿರುವಂತಹ ಮಹಾರಾಷ್ಟ್ರ ಯಾವ ರೀತಿಯಲ್ಲಿ ತೆರಿಗೆಯನ್ನು ವಿಧಿಸುತ್ತಿದೆ, ಅದೇ ರೀತಿಯಲ್ಲಿ ನಮ್ಮ ರಾಜ್ಯದವರೂ ಸಹ ತೆರಿಗೆಯನ್ನು ವಿಧಿಸಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಈ ರೀತಿಯಲ್ಲಿ ಸಂಗ್ರಹವಾದ ಹಣ ನೇರವಾಗಿ ರೈತರಿಗೆ ಮುಟ್ಟಿದರೆ, ಅವರಿಗೆ ಆರ್ಥಿಕವಾಗಿ ನೆರವಾಗುವಂತಹ ವಾತಾವರಣ ನಿರ್ಮಾಣವಾಗುತ್ತದೆ. ಸರ್ಕಾರ ಈ ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕೆನ್ನುವ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಈಗಾಗಲೇ ಸರ್ಕಾರ 43 ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಿದೆ. ಮೊನ್ನೆಯ ದಿವಸ ಕಿತ್ತೂರು ತಾಲ್ಲೂಕನ್ನು ಸೇರಿಸಿದರೆ 177 ತಾಲ್ಲೂಕುಗಳಾಗುತ್ತವೆ. 177 ತಾಲ್ಲೂಕುಗಳ ಜೊತೆಯಲ್ಲಿ 43 ತಾಲ್ಲೂಕು ಅಂದರೆ ಒಟ್ಟು 220 ತಾಲ್ಲೂಕುಗಳಾಗುತ್ತವೆ. ಆಡಳಿತಾತ್ಮಕವಾದ ದೃಷ್ಟಿಯಿಂದ ಸರ್ಕಾರ 43 ಹೊಸ ತಾಲ್ಲೂಕುಗಳನ್ನು ಘೋಷಣೆ ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಈ ರೀತಿ ತಾಲ್ಲೂಕುಗಳನ್ನು ಘೋಷಣೆ ಮಾಡುವಂಥ ಸಂದರ್ಭದಲ್ಲಿ ಶ್ರೀ ಎಂ.ಬಿ. ಪ್ರಕಾಶ್‌ರವರ ವರದಿ, ಶ್ರೀ ಗದ್ದೇಗೌಡರ ವರದಿ, ಶ್ರೀ ವಾಸುದೇವ್‌ರವರ ವರದಿ, ಬಾಗಲಕೋಟೆಯವರಾದ ಶ್ರೀ ಉಂಡೇಕರ್‌ರವರ ವರದಿ ಇವೆಲ್ಲವನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಂಡು ವೈಜ್ಞಾನಿಕವಾಗಿ ಈ ತಾಲ್ಲೂಕುಗಳನ್ನು ಘೋಷಣೆ ಮಾಡಲಾಗಿದೆ ಎಂದು ನಾನು ಭಾವಿಸುವುದಿಲ್ಲ. ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣರವರು ಉತ್ತರ ಕನ್ನಡ ಜಿಲ್ಲೆಯವರು. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ದಾಂಡೇಲಿ ಬಹಳ ಪ್ರಮುಖವಾದ, ಔದ್ಯಮಿಕವಾದ ಒಂದು ಪಟ್ಟಣ. ಈ ತಾಲ್ಲೂಕಿನಿಂದ ಸಾಕಷ್ಟು ಜನ ಬರುವವರು, ಹೋಗುವವರು ಇದ್ದಾರೆ. ದಾಂಡೇಲಿಗೆ ಹಳಿಯಾಳ ತಾಲ್ಲೂಕು ಬಹಳಷ್ಟು ದೂರವಾಗುತ್ತದೆ ಎನ್ನುವ ಮಾತು ಸಹ ಇದೆ. ಅದೇ ರೀತಿ ಬಾಗಲಕೋಟೆ ಜಿಲ್ಲೆಯ ತೇರದಾಳದ ಬಗ್ಗೆ ಹೇಳುವುದಾದರೆ, ತೇರದಾಳ ಐತಿಹಾಸಿಕವಾದ ಹಿನ್ನೆಲೆಯನ್ನು ಹೊಂದಿದೆ. ಬಂದವರೆಲ್ಲರೂ ತೇರದಾಳವನ್ನು ಒಂದು ತಾಲ್ಲೂಕು ಕೇಂದ್ರವನ್ನಾಗಿ ಮಾಡಿಕೊಡುತ್ತೇವೆಂದು

ಹೇಳಿದ್ದಾರೆ. ನಿನ್ನೆಯ ದಿವಸ ಸಮಾಜದ ಎಲ್ಲಾ ವರ್ಗದ ಜನ irrespective of party, caste, community and creed, ನೂರಾರು ಜನ ಬಂದು ತೇರದಾಳು ತಾಲ್ಲೂಕು ಆಗಿಲ್ಲ, ನಮಗೆ ಅನ್ಯಾಯವಾಗಿದೆ ಎಂದರು. ಬೇರೆ ತಾಲ್ಲೂಕುಗಳು ಆಗಿರುವುದರ ಬಗ್ಗೆ ಅವರಿಗೇನು ಅಭ್ಯಂತರವಿಲ್ಲ. ಅದೇ ರೀತಿ ಇವತ್ತು ದಾಂಡೇಲಿಯೂ ಸಹ ಬಹಳ ಪ್ರಮುಖವಾದ ಒಂದು ಪಟ್ಟಣ. ಈ ಬಗ್ಗೆ ಹಿಂದಿನ ಸಚಿವರಾದ ಶ್ರೀ ದೇಶಪಾಂಡೆಯವರು ಸಹ ಸಾಕಷ್ಟು ಪ್ರಯತ್ನ ಮಾಡಿದರು ಮತ್ತು ಈ ಸಂಬಂಧವಾಗಿ ಅವರು ಮುಖ್ಯಮಂತ್ರಿಗಳಿಗೂ ಸಹ ಭೇಟಿಯಾಗಿ ಹೇಳಿದ್ದರೂ ಎಂದು ಕಾಣುತ್ತದೆ. ಆದರೆ ಅದನ್ನು ಪರಿಗಣಿಸಿಲ್ಲ. ನಮ್ಮ ಮಾಜಿ ಹಂಗಾಮಿ ರಾಷ್ಟ್ರಪತಿಗಳಾದ ಶ್ರೀಮಾನ್ ಬಿ.ಡಿ. ಜತ್ತಿಯವರಿಗೆ ಜನ್ಮ ನೀಡಿದಂಥ ಸ್ಥಳ ಸಾವಳಗಿ. ಭೌಗೋಳಿಕವಾಗಿ ಸಾವಳಗಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವುದು ಸರಿ ಇದೆ. ಇದರ ಬಗ್ಗೆ ಮಾಹಿತಿಯನ್ನು ನೋಡಿದರೆ, ಇದನ್ನು ಏಕೆ ಮಾಡಲಿಲ್ಲವೆಂದೂ ತಮಗೂ ಸಹ ಮನಸ್ಸಿಗೆ ನೋವಾಗುತ್ತದೆ. ಅದರ ಜೊತೆಗೆ ನಾನು ಪಡೆದಂಥ ಮಾಹಿತಿ ಪ್ರಕಾರ ಶಿರಾಳಕೊಪ್ಪವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂಬ ಬೇಡಿಕೆ ಇತ್ತು. ಇದು ತಮ್ಮ ಜಿಲ್ಲೆ. ಆ ದೃಷ್ಟಿಯಿಂದ ಇವತ್ತು ಎಲ್ಲೆಲ್ಲಿ, ಯಾವ್ಯಾವ ತಾಲ್ಲೂಕುಗಳು ಬಿಟ್ಟು ಹೋಗಿದ್ದಾವೆ ಎನ್ನುವ ಬಗ್ಗೆ ನಾನು ಕೆಲವು ಉದಾಹರಣೆಗಳನ್ನು ಕೊಟ್ಟಿದೇನೆ. ದಾಂಡೇಲಿ, ತೇರದಾಳ, ಸಾವಳಗಿ, ಶಿರಾಳಕೊಪ್ಪ ಇಂತಹ ಅತ್ಯಂತ ಪ್ರಮುಖವಾದ ಸ್ಥಳಗಳಿದ್ದಾವೆ. ಈಗ ಸರ್ಕಾರ 43 ತಾಲ್ಲೂಕುಗಳನ್ನು ಮಾಡಿದೆ. ಇದರ ಜೊತೆಗೆ ಇನ್ನೊಂದು 25 ತಾಲ್ಲೂಕುಗಳನ್ನು ಮಾಡಿದರೆ what is wrong in it? ಆಶ್ಚರ್ಯವೆಂದರೆ ಆಂಧ್ರ ಪ್ರದೇಶ ರಾಜ್ಯದಲ್ಲಿ ಹೋಬಳಿಗೆ ಒಂದು ತಾಲ್ಲೂಕನ್ನು ಮಾಡಿದ್ದಾರೆ. It is subject to correction. 1200 ಹೋಬಳಿಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಮಾಡಿದ್ದಾರೆ. ಇದರಲ್ಲಿ ಏನು ತಪ್ಪಿದೆ? ಆಡಳಿತಾತ್ಮಕವಾದ ದೃಷ್ಟಿಯಿಂದ ಮಾಡಬಹುದು. ನಾನು ಹೊಸ ವಿಚಾರಗಳನ್ನು ಹೇಳುವುದಿಲ್ಲ. ಪಕ್ಕದ ಆಂಧ್ರ ಪ್ರದೇಶ ರಾಜ್ಯದಲ್ಲಿ ಆಗಿರುವಂಥ ಒಂದು ಘಟನೆ ಇದು. ಹೋಬಳಿ ಮಟ್ಟದಲ್ಲಿ ತಾಲ್ಲೂಕುಗಳನ್ನು ರಚನೆ ಮಾಡಲಾಗಿದೆ. 43 ತಾಲ್ಲೂಕುಗಳನ್ನು ಕೊಟ್ಟಿರುವುದು

ಬಹಳ ದೊಡ್ಡದಾದಂಥ ಒಂದು ಸಾಧನೆ ಎಂದು ನಾನು ಹೇಳುವುದಿಲ್ಲ. ಪ್ರತಿ ಹೋಬಳಿಗೆ ಒಂದೊಂದು ತಾಲ್ಲೂಕನ್ನು ಮಾಡಿ. ಆಡಳಿತಾತ್ಮಕವಾದ ದೃಷ್ಟಿಯಿಂದ ಬಹಳಷ್ಟು ಲಾಭ ಪಡೆದಂತಹ ಪಕ್ಕದ ಆಂಧ್ರ ಪ್ರದೇಶ ರಾಜ್ಯದ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿ ಏಕೆ ಸರ್ಕಾರ ಮಾಡಬಾರದು? There is nothing wrong in it. ಮಾನ್ಯ ಸಭಾಪತಿಯವರೇ, ಇದಕ್ಕೆ 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಒಂದು ಮನೆಯನ್ನು ಕಟ್ಟುವುದಕ್ಕೆ ಎಷ್ಟು ಖರ್ಚು ಬರುತ್ತದೆ? ಅಂದಾಜು ಒಂದು ಕೋಟಿ ಯಿಂದ ಎರಡು ಕೋಟಿ ರೂಪಾಯಿಗಳ ಖರ್ಚು ಬರಬಹುದು. ಅದೇ ರೀತಿ ಬೆಂಗಳೂರಿನಲ್ಲಿ ಮನೆಯನ್ನು ನಿರ್ಮಾಣ ಮಾಡಬೇಕಾದರೆ ಒಂದ ಚದರ ಅಡಿಗೆ ಎಷ್ಟು ಖರ್ಚು ಬರುತ್ತದೆ ಎಂದು ಯೋಚನೆ ಮಾಡಬೇಕು. ಚದರ ಅಡಿ ಎಂದರೆ ಅವರು ಉಪಯೋಗ ಮಾಡುವಂಥ ಸಾಮಗ್ರಿಗಳ ಮೇಲೆ ಅವಲಂಬಿತವಾಗುತ್ತದೆ. 2 ಕೋಟಿ ರೂಪಾಯಿ ಯಾವುದಕ್ಕೆ ಸಾಲುತ್ತದೆ? ಒಂದು ತಾಲ್ಲೂಕು ಕೇಂದ್ರವೆಂದರೆ ಅಲ್ಲಿ ಒಂದು ಮಿನಿ ವಿಧಾನ ಸೌಧ ಆಗಬೇಕು, ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳ ಕಛೇರಿ ಆಗಬೇಕು. ಅದೇ ರೀತಿ ತಾಲ್ಲೂಕು ಕಛೇರಿ, ಪೊಲೀಸ್ ಠಾಣೆ, ತಾಲ್ಲೂಕು ಪಂಚಾಯ್ತಿ ಕಛೇರಿ ಮತ್ತು ತಾಲ್ಲೂಕು ಪಂಚಾಯ್ತಿಗೆ ಸಂಬಂಧಪಟ್ಟ ಎಲ್ಲಾ ಸಭೆಗಳಾಗಬೇಕು. ಏಕೆಂದರೆ ಅಲ್ಲಿ ಶಾಸಕರು ಅದರ ಅಧ್ಯಕ್ಷರಿರುವುದರಿಂದ ಅರಣ್ಯ ಇಲಾಖೆ ಮುಂತಾದ ಎಲ್ಲಾ ಇಲಾಖೆಗಳ ತಾಲ್ಲೂಕು ಮಟ್ಟದ ಕಛೇರಿಗಳು ತಾಲ್ಲೂಕು ಮಟ್ಟದಲ್ಲಿ ಆಗಬೇಕು. 43 ತಾಲ್ಲೂಕುಗಳಿಗೆ 86 ಕೋಟಿ ರೂಪಾಯಿ ಎಂದು ಹೇಳಿದರೆ ಈ 2 ಕೋಟಿ ರೂಪಾಯಿಯಿಂದ ಏನಾಗುತ್ತದೆ. 2 ಕೋಟಿ ರೂಪಾಯಿಯಲ್ಲಿ ಒಬ್ಬರು ಒಂದು ಸಣ್ಣ ಕಛೇರಿಯನ್ನು ಕಟ್ಟುವುದಕ್ಕಾಗುವುದಿಲ್ಲ. ಔಪಚಾರಿಕವಾಗಿ ತಾಲ್ಲೂಕುಗಳನ್ನು ಮಾಡಿದ್ದೇವೆಂದು ಹೆಸರು ಪಡೆಯುವುದು ಮತ್ತು ಕ್ರಿಯಾತ್ಮಕವಾಗಿ ಅದು ಜಾರಿಯಲ್ಲಿ ಬರಲರದಂಥ ಒಂದು ಸ್ಥಿತಿ ಇವತ್ತು ನಿರ್ಮಾಣವಾಗಿದೆ. ನಾನು ಸರ್ಕಾರಕ್ಕೆ ಹೇಳುತ್ತೇನೆ. 2 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಹೇಗೆ ಮನಸ್ಸಾಯಿತು? 2 ಕೋಟಿ ರೂಪಾಯಿ ಜುಜುಬಿ ಹಣ. ಕಛೇರಿಗಳನ್ನು ಕಟ್ಟುವುದು ಬಿಡಿ, ಈ

ಹಣದಲ್ಲಿ ತಾಲ್ಲೂಕು ಮಟ್ಟದ ಒಬ್ಬ ಅಧಿಕಾರಿ ಒಂದು ಮನೆಯನ್ನು ಕಟ್ಟುವುದಕ್ಕಾಗುವುದಿಲ್ಲ. ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಕಛೇರಿಗಳು ಬೇಕು. ಎಲ್ಲರಿಗೂ ಬೇರೆ ಬೇರೆ ಕಛೇರಿಗಳು ಬೇಕು, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಇಂಜಿನಿಯರಿಂಗ್, ಕಂದಾಯ, ಅರಣ್ಯ ಮುಂತಾದ ಕಛೇರಿಗಳು ತಾಲ್ಲೂಕು ಮಟ್ಟದಲ್ಲಿರಬೇಕು. ಔಪಚಾರಿಕವಾಗಿ ತಾಲ್ಲೂಕು ಕೇಂದ್ರಗಳಿಗೆ 2 ಕೋಟಿ ರೂಪಾಯಿಗಳನ್ನು ಕೊಟ್ಟರೆ ಹೇಗಾಗುತ್ತದೆ?

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೋಬಳಿಗೆ ಒಂದು ತಾಲ್ಲೂಕನ್ನು ಮಾಡಿ ಎನ್ನುತ್ತಾರೆ, ಈಗಾಗಲೇ ಮಾಡಿರುವುದಕ್ಕೆ ವ್ಯವಸ್ಥೆ ಏನು ಮತ್ತು ಈಗ ಮಾಡಿರುವುದು ಸಹ ಸಮರ್ಪಕವಾಗಿ ಇಲ್ಲ. ಇದಕ್ಕೆ ಯಾವುದಾದರು ಒಂದು ಮಾನದಂಡ ಇಲ್ಲ, ಜನರಿಗೆ ಅನುಕೂಲವೂ ಇಲ್ಲ. ಸ್ವರ ಇದ್ದವರ, ಶಕ್ತಿ ಇದ್ದವರ ಪರವಾಗಿ ತೀರ್ಮಾನಗಳಾಗಿದ್ದಾವೆ. ಇದು ಸಾಮಾಜಿಕ ನ್ಯಾಯದಿಂದ ಆಗಿರುವುದು ಅಲ್ಲ, ಜನಾನುಕೂಲದ ಕೆಲಸ ಅಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾಲ್ಲೂಕುಗಳು ವೈಜ್ಞಾನಿಕವಾಗಿ ರಚನೆಯಾಗಬೇಕೆಂಬುದು ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರ ಒಂದು ವಿಚಾರ. ನಾನು ತಾಲ್ಲೂಕು ಮಾಡಬೇಕೆಂದರೆ ಮಾಡುವುದು, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಕೇಳಿದರೆ ತಾಲ್ಲೂಕನ್ನು ಮಾಡುವುದು ಹೀಗೆ ರಾಜಕಾರಣಿಗಳನ್ನು ಸಂತೋಷ ಪಡಿಸಲು ತಾಲ್ಲೂಕುಗಳನ್ನು ಕೊಡುವುದಲ್ಲ. ಭೌಗೋಳಿಕವಾಗಿ ಆ ಭಾಗದ ಜನರಿಗೆ ಅನುಕೂಲವಾಗುತ್ತದೆಯೋ ಇಲ್ಲವೋ ಎನ್ನುವ ಚಿಂತನೆ ಆಗಬೇಕು. ಎಷ್ಟೇ ತಾಲ್ಲೂಕುಗಳನ್ನು ಮಾಡಿದರೂ ಅಲ್ಲಿಗೆ ಬೇಕಾಗತಕ್ಕಂಥ ಎಲ್ಲಾ ಮೂಲಭೂತ ಸೌಕರ್ಯವನ್ನು ಒದಗಿಸುವುದಕ್ಕೆ ಹಣವನ್ನು ಒದಗಿಸಿದರೆ ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್‌ರವರು 43 ತಾಲ್ಲೂಕುಗಳನ್ನು ಮಾಡಿದ್ದಕ್ಕೆ ಅಡ್ಡಿ ಇಲ್ಲ, ಸಾರ್ಥಕ ಎನ್ನುವಂಥ ಮಾತನ್ನು ನಾನು ಹೇಳುತ್ತಿದ್ದೇನೆ. ಆದರೆ ಇವತ್ತು ಅದಕ್ಕೆ ಹಣದ ವ್ಯವಸ್ಥೆಯನ್ನು

ಮಾಡಿಲ್ಲ. ವೈಜ್ಞಾನಿಕವಾಗಿ ತಾಲ್ಲೂಕುಗಳನ್ನು ರಚನೆ ಮಾಡಿಲ್ಲ. ನಾನು ಹೇಳಿದ ಹಾಗೆ ಅದಕ್ಕೆ ಹೋಬಳಿ ಮಟ್ಟದಲ್ಲಿ ಮಾಡಿ ಎಲ್ಲಾ ಸೌಲಭ್ಯಗಳನ್ನು ಕೊಡಲಿಕ್ಕೆ ಸಲಹೆ ಮಾಡುತ್ತೇನೆ. ಹೋಬಳಿ ಮಟ್ಟದಲ್ಲಿ ತಾಲ್ಲೂಕುಗಳನ್ನು ಮಾಡಿದರೆ ಆ ಭಾಗದ ಜನರಿಗೆ ಬಹಳಷ್ಟು ಅನುಕೂಲವಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರಿಗೆ ಭೇಟಿಯಾಗುವುದಾಗಲಿ, ತಾಲ್ಲೂಕು ಪಂಚಾಯ್ತಿ Executive Officerಗೆ ಭೇಟಿಯಾಗುವುದಾಗಲಿ ಆಗಬೇಕು.

**ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ:–** ತಾಲ್ಲೂಕು ಮಟ್ಟದಲ್ಲಿ ಈಗ ಇರುವ ಕಛೇರಿಯಲ್ಲಿಯೇ ಒಬ್ಬರು, ಇಬ್ಬರು ಅಧಿಕಾರಿ ಇರುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದರ ಜೊತೆಗೆ ನೇಮಕಾತಿಯೂ ಸಹ ಆಗಬೇಕಲ್ಲ. ಕೇವಲ ತಾಲ್ಲೂಕುಗಳನ್ನು ಘೋಷಣೆ ಮಾಡಿದರೆ ಆಗಲಿಲ್. ಪ್ರತಿ ತಾಲ್ಲೂಕಿಗೆ ಬೇಕಾಗಿರತಕ್ಕಂಥ ಅಧಿಕಾರಿಗಳ ನೇಮಕಾತಿಯೂ ಸಹ ಆಗಬೇಕು. ಅವರು ಹೇಳುವ ಪ್ರಕಾರ ಇದ್ದಂಥ ತಾಲ್ಲೂಕು ಮಟ್ಟದ ಅಧಿಕಾರಿಗಳಲ್ಲಿಯೇ ಸಾಕಷ್ಟು shortage ಇದೆ, Vacancy ಬಹಳಷ್ಟಿದೆ. ಆ ದೃಷ್ಟಿಯಿಂದ ಸರ್ಕಾರ ಯಾವುದಾದರೂ ಒಂದು ನಿರ್ಣಯವನ್ನು ಕೈಗೊಂಡರೆ ಅದರ ಬಗ್ಗೆ ಸಂಪೂರ್ಣವಾಗಿ ಜಾರಿಯಲ್ಲಿ ಬರುವ ಹಾಗೆ, ಜನರಿಗೆ ಉಪಯೋಗವಾಗುವ ಹಾಗೆ ಆಗಬೇಕು. ಘೋಷಣೆಗಳು ಕೇವಲ ಬಜೆಟ್ ಪುಸ್ತಕದಲ್ಲಿ ಮಾತ್ರ ಉಳಿಯಬಾರದು. ಕೇವಲ ಬಜೆಟ್ ಪುಸ್ತಕದಲ್ಲಿ 'ನಾನು ತಾಲ್ಲೂಕುಗಳನ್ನು ಮಾಡಿದೆ, 2 ಕೋಟಿ ರೂಪಾಯಿಗಳನ್ನು ಕೊಟ್ಟೆ' ಎಂದರೆ ಏನಾಗಬೇಕು? ಅದು ಮಾಡಿಯೂ ಮಾಡಲಾರದ ಹಾಗೆ ಆಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇದರ ಬಗ್ಗೆ ಎಲ್ಲೆಲ್ಲಿ ಅವಶ್ಯಕತೆ ಇದೆ ಅದನ್ನು ಸರ್ವೇ ಮಾಡಿ. ನಾನು ಉದಾಹರಣೆಯನ್ನು ಹೇಳಿದೆ. ಇವುಗಳನ್ನು ಬಿಟ್ಟು ಬಹಳಷ್ಟು ಜನ ಈ ರಾಜ್ಯದಲ್ಲಿರಬಹುದು. ಆ ದೃಷ್ಟಿಯಿಂದ ಎಲ್ಲೆಲ್ಲಿ ಅವಶ್ಯಕತೆ ಇದೆ, ಎಲ್ಲಿ ಜನರಿಗೆ ಅನುಕೂಲ ಆಗಬೇಕಾಗಿದೆ ಅಲ್ಲಿ ತಾಲ್ಲೂಕು ಕೇಂದ್ರಗಳನ್ನಾಗಿ ಮಾಡುವುದರ ಜೊತೆಗೆ ಅವರಿಗೆ ಬೇಕಾಗತಕ್ಕಂಥ ಎಲ್ಲಾ ಮೂಲಭೂತ ಸೌಕರ್ಯಗಳಿಗೆ

ಅದು 10 ಕೋಟಿ ರೂಪಾಯಿ ಆಗಲಿ, 20 ಕೋಟಿ ರೂಪಾಯಿ ಆಗಲಿ ಅಥವಾ 50 ಕೊಟಿ ರೂಪಾಯಿ ಆಗಲಿ ಪ್ರತಿ ತಾಲ್ಲೂಕಿಗೆ ಹಣವನ್ನು ಒದಗಿಸುವಂಥ ಕೆಲಸವೂ ಸಹ ಆಗಬೇಕು. ಇಲ್ಲದಿದ್ದರೆ ಏನು 43 ತಾಲ್ಲೂಕುಗಳನ್ನು ಘೋಷಣೆ ಮಾಡಲಾಗಿದೆ, ಇದು ಬಜೆಟ ಪುಸ್ತಕದಲ್ಲಿ ಮಾತ್ರ ಉಳಿಯುತ್ತದೆ, ಆ ಭಾಗದ ಜನರಿಗೆ ಇದರ ಪ್ರಯೋಜನ ಎಳ್ಳಷ್ಟು ಆಗುವುದಿಲ್ಲ ಎನ್ನುವಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

2009ನೇ ಇಸವಿಯಲ್ಲಿ ಜಲಪ್ರಳಯವಾಯಿತು. ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳು ಭಾರಿ ಮಳೆಯಿಂದ ದೊಡ್ಡ ಪ್ರಮಾಣದಲ್ಲಿ ಹಾನಿಯನ್ನು ಅನುಭವಿಸಿದರು. ಈಗ 4 ವರ್ಷಗಳಾಯಿತು. ಇನ್ನು ಬಹಳಷ್ಟು ಕಡೆ ತಗಡಿನ ಶೆಡ್ಡಿನಲ್ಲಿದ್ದಾರೆ. ಇವತ್ತು ಸುಮಾರು 57,389 ಮನೆಗಳ ಪೈಕಿ ಇನ್ನು 7,274 ಮನೆಗಳು ಪೂರ್ತಿಯಾಗಿಲ್ಲ. 18,000 ಮನೆಗಳನ್ನು ಇನ್ನು ಹಸ್ತಾಂತರಿಸಿಲ್ಲ. ಇವೆಲ್ಲದರ ಜೊತೆಗೆ ತಾವು ಯಾವಾಗಲಾದರೂ ಆ ಕಡೆಗೆ ಬಂದಾಗ ನೋಡಿ ಇದ್ದ ಮನೆಗಳು ಯಾವ ರೀತಿ ಇದೆ ಎಂದರೆ ಒಬ್ಬ ರೈತ ಆ ಮನೆಯಲ್ಲಿ ಇರಲಿಕ್ಕೆ ಯೋಗ್ಯವಾಗಿದೆಯೇ ಇಲ್ಲವೇ ಎಂಬದನ್ನು ನೋಡಿ. ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಸಹ ಕೊಟ್ಟಿಲ್ಲ. ಅಲ್ಲಿ ವಿದ್ಯುತ್ ಕೊಟ್ಟಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ರಸ್ತೆಗಳಿಲ್ಲ. ರೈತರು ಅಲ್ಲಿ ಹೋಗಿ ವಾಸ ಮಾಡುವುದಕ್ಕೆ ಯೋಗ್ಯ ಮನೆಗಳಿಲ್ಲ. ಧನದ ಕೊಟ್ಟಿಗೆ ಇಲ್ಲ. Farmyard manure ಹಾಕಲಿಕ್ಕೆ ಜಾಗ ಇಲ್ಲ. ಇಂತಹ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲ. 4 ವರ್ಷಗಳಿಂದ ಮೂಲಭೂತ ಸೌಲಭ್ಯಗಳನ್ನು ಕೊಟ್ಟಿಲ್ಲ. ಆವತ್ತು ಕೇಂದ್ರ ಸರ್ಕಾರ 1700 ಕೋಟಿ ರೂಪಾಯಿಗಳನ್ನು ನೀಡಿತು. ಸಾರ್ವಜನಿಕರಿಂದ 500 ಕೋಟಿ ರೂಪಾಯಿಗಳಿಗಿಂತ ಹೆಚ್ಚು ವಂತಿಗೆ ಸಂಗ್ರಹವಾಯಿತು. ಇವಲ್ಲದೇ ಪರೋಪಕಾರಿ ಉದ್ದೇಶಕ್ಕಾಗಿ ಸಹಾಯ ಮಾಡುವಂತಹ ಅನೇಕ ಮಠಾಧೀಶರು, ದೊಡ್ಡ ದೊಡ್ಡ ಉದ್ಯೋಗಪತಿಗಳು ಕೆಲವು ಕಡೆ ಒಂದೊಂದು ಗ್ರಾಮಕ್ಕೆ ಬೇಕಾದಂತಹ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡಿದ್ದರೂ,

4 ವರ್ಷ ಕಳೆದರೂ ಒಂದು ಹಂತ ಬಂದು ತಲಿಪಿಲ್ಲ. ಸರ್ಕಾರ ಈಗ ಕೊನೆಯ ಹಂತಕ್ಕೆ ಬಂದಿದೆ. ಹೋಗುವುದಕ್ಕೆ ಮುಂಚೆ ಈ ಕೆಲಸಕಾರ್ಯಗಳನ್ನು ಮುಗಿಸಿ ಹೋಗಬೇಕೆನ್ನುವುದು ನನ್ನ ಅಭಿಲಾಷೆಯಾಗಿದೆ. ಹಳೆಯ ಊರಿನಲ್ಲಿದ್ದಾಗ ರೈತರಿಗೆ ಹಲವು ರೀತಿಯ ಸಮಸ್ಯೆಗಳಿತ್ತು ಆದರೆ ಈಗ ಹೊಸ ಊರಿನ ಸಮಸ್ಯೆ ಎಂದರೆ, ಅಲ್ಲಿನ ಜನ, ನಮ್ಮಲ್ಲಿ ವಿದ್ಯುತ್ ಇಲ್ಲ, ಕುಡಿಯುವುದಕ್ಕೆ ನೀರಿಲ್ಲ, ಟ್ಯಾಂಕರ್ ಬರುತ್ತಿಲ್ಲ, ಹೋಗಲಿಕ್ಕೆ ರಸ್ತೆ ಇಲ್ಲ, ನಮ್ಮನ್ನು ಸ್ಥಳಾಂತರ ಮಾಡಿಲ್ಲ, ಮನೆಗಳನ್ನು ಕೊಟ್ಟಿದ್ದರೂ ಒಳಗೆ ಹೋದರೆ ಎಲ್ಲಿ ಬಿದ್ದುಬಿಡುತ್ತದೆಯೋ ಎನ್ನುವ ಭಯ ಇರುತ್ತದೆ ಎಂದು ಹೇಳುತ್ತಾರೆ. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕು. ಉತ್ತರ ಕರ್ನಾಟಕದಲ್ಲಿ ಏನು ಜಲ ಪ್ರಳಯವಾಯಿತೋ ಆಗ ಬಾಧಿತರಿಗೆ ಪರಿಹಾರ ಕೊಡುವ ದಿಸೆಯಲ್ಲಿ ಇದ್ದ ಉತ್ಸಾಹ ಇವತ್ತು ಕಡಿಮೆ ಆಗಿಬಿಟ್ಟಿದೆ. ನಮ್ಮ ಸರ್ಕಾರದ ಅವಧಿ ಮುಗಿಯುತ್ತಿದೆ, ಆಗಿದ್ದು ಆಯಿತು, ಹೋಗಿದ್ದು ಹೋಯಿತು ಎನ್ನುವ ಮಟ್ಟಕ್ಕೆ ಬಂದಿದ್ದೀರಿ. ಇದರಿಂದ ನನಗೆ ಬಹಳ ನೋವೆನಿಸುತ್ತಿದೆ.

**ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–** ಮಾನ್ಯ ಸಭಾಪತಿಗಳೆ, ಉತ್ತರ ಕರ್ನಾಟಕದ ಭಾಗದಲ್ಲಿ ಅತಿವೃಷ್ಟಿ ಆದಾಗ ಅಥವಾ ಅಲ್ಲಿನ ನದಿಗಳು ಉಕ್ಕಿ ಹರಿದಾಗ ಸುತ್ತಮುತ್ತಲಿನ ಊರಿನ ಜನ ದಿಗ್ಭ್ರಮೆಗೆ ಒಳಗಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಮಳೆಯಾದಾ ತಮ್ಮ ಮನೆಗಳಲ್ಲಿ ಮಲಗದೇ ಇರುವಂತಹ ಸ್ಥಿತಿ ಇರುತ್ತಿತ್ತು. 2007 ರಲ್ಲಿ ಮಾನ್ಯ ಯಡಿಯೂರಪ್ಪನವರು ಒಂದು ದಿಟ್ಟ ನಿರ್ಧಾರ ತೆಗೆದುಕೊಂಡು, 300 ಗ್ರಾಮಗಳನ್ನು ಸ್ಥಳಾಂತರ ಮಾಡಬೇಕು ಎನ್ನುವ ದೃಷ್ಟಿಯಿಂದ ಒಂದೇ ವರ್ಷದಲ್ಲಿ, ತಾವಾಗಿಯೇ ಜಾಗ ಕೊಡಲು ಮುಂದೆ ಬದವರಿಂದ ಆವಶ್ಯಕ ಜಾಗವನ್ನು ಪಡೆದುಕೊಂಡು, ಸುಮಾರು 270 ಗ್ರಾಮದ ಜನರನ್ನು ಸ್ಥಳಾಂತರ ಮಾಡಿ ಅಲ್ಲಿ 30x40 ವಿಸ್ತೀರ್ಣದಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟರು. ಉದಾಹರಣೆಗೆ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳನ್ನು ತೆಗೆದುಕೊಂಡರೆ, ನಾನೇ ಜಿಲ್ಲಾ ಉಸ್ತುವಾರಿ

ಮಂತ್ರಿಯಾಗಿದ್ದಾಗ ಬಿಜಾಪುರದ 41 ಗ್ರಾಮಗಳ ಪೈಕಿ 40 ಗ್ರಾಮಗಳನ್ನು ಸ್ಥಳಾಂತರ ಮಾಡಲಾಗಿದೆ ಮತ್ತು ದನಗಳನ್ನು ಕಟ್ಟುವುದಕ್ಕೆ ಮುಂದೆ ಜಾಗವನ್ನು ನೀಡಲಾಗಿದೆ. ಇನ್ನು ಒಂದು ಗ್ರಾಮಕ್ಕೆ ಸಂಬಂಧ ಪಟ್ಟ ಹಾಗೆ, ಅಲ್ಲಿನ ರೈತರು ಜಾಗವನ್ನೇ ಕೊಡಲಿಲ್ಲ. ಬಾಗಲಕೋಟೆ ಜಿಲ್ಲೆಯ ಸುಮಾರು 38 ಗ್ರಾಮಗಳನ್ನು ಸ್ಥಳಾಂತರ ಮಾಡಿದ್ದೇವೆ. ಹೀಗೆ ಸ್ಥಳಾಂತರ ಮಾಡಬೇಕಾದ ಗ್ರಾಮಗಳ ಪೈಕಿ ಶೇಕಡ 90 ರಷ್ಟು ಗ್ರಾಮಗಳನ್ನು ಸ್ಥಳಾಂತರ ಮಾಡಲಾಗಿದೆ. ಅಲ್ಲಿ, ನೀರು, ದಾರಿದೀಪ ಇತ್ಯಾದಿಗಳನ್ನು ಕೊಟ್ಟಿದ್ದೇವೆ, garden ಗೆ ಜಾಗ ಬಿಟ್ಟಿದ್ದೇವೆ. ಎಲ್ಲರಿಗೂ 30x40 ಜಾಗದಲ್ಲೇ ಮನೆಗಳನ್ನು ಕಟ್ಟಿದ್ದೇವೆ. ಊರಿನಲ್ಲಿ ಬಡವರು, ಮಧ್ಯಮ ವರ್ಗದವರು ಮತ್ತು ಶ್ರೀಮಂತರಿರುತ್ತಾರೆ. ಶ್ರೀಮಂತರು ಸಾಮಾನ್ಯವಾಗಿ 4–5 ಸಾವಿರ ಚದರ ಅಡಿಗಳಲ್ಲಿ ವಾಸ ಮಾಡುತ್ತಿರುತ್ತಾರೆ. ಅಂಥವರಿಗೆ, ಸರ್ಕಾರಿ ಬೆಲೆಯಲ್ಲಿಯೇ ಹೆಚ್ಚಿನ ನಿವೇಶವನ್ನು ಕೊಡುವುದಕ್ಕೆ ಅನುಕೂಲತೆ ಮಾಡಿ, ಶೇಕಡ 20 ರಷ್ಟು ಜಾಗವನ್ನು ಮೀಸಲಿಟ್ಟಿದ್ದೇವೆ. ಇಡೀ ದೇಶದಲ್ಲೇ ಮಾಡದಿರುವಂಥದ್ದನ್ನು ನಾವು ಮಾಡಿದ್ದೇವೆ. ಉದ್ಯೋಗಪತಿಗಳು ದಾನ ಮಾಡಿದ್ದಾರೆ, ಟಿವಿ9 ಮಾಧ್ಯಮದವರು 2 ಗ್ರಾಮಗಳನ್ನು ನಿರ್ಮಾಣ ಮಾಡ ಕೊಟ್ಟಿದ್ದಾರೆ, ಸುತ್ತೂರು ಮಠದವರು 2 ಗ್ರಾಮಗಳನ್ನು ನಿರ್ಮಾಣ ಮಾಡಿಕೊಟ್ಟಿದ್ದಾರೆ. ಈ ರೀತಿ ಎಲ್ಲರ ಸಹಾಯದಿಂದ ಅದ್ಭುತವಾದ ಕೆಲಸವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸುತ್ತಿರುವಂತಹ ಸಣ್ಣಪುಟ್ಟ ಸಮಸ್ಯೆಗಳನ್ನು ಇದೇ ತಿಂಗಳಲ್ಲಿ ಪರಿಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಇವು ಸಣ್ಣ–ಪುಟ್ಟ ಸಮಸ್ಯೆಗಳಲ್ಲ. ಸಣ್ಣ–ಪುಟ್ಟ ಸಮಸ್ಯೆಗಳನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಬಾದಾಮಿ ತಾಲ್ಲೂಕಿನಲ್ಲಿ ಸುಲ್ಲ ಎನ್ನುವ ಒಂದು ಗ್ರಾಮವಿದೆ. ಅಲ್ಲಿಂದ ದಿವಸಕ್ಕೆ ಸುಮಾರು 10 ಸಲ ದೂರವಾಣಿ ಕರೆ ಬರುತ್ತದೆ. ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ, ವಿದ್ಯುತ್ ಇಲ್ಲ, ಹೋಗಲಿಕ್ಕೆ ರಸ್ತೆ ಇಲ್ಲ. ಅವರಿಗಿರುವುದಕ್ಕೆ ಯೋಗ್ಯವಾದ ಮನೆಯಿಲ್ಲ. ದಯವಿಟ್ಟು ತಾವು ಯೋಚನೆ ಮಾಡಿ. ನಾನು ರೈತ, ನೀವು ರೈತರು. ನಾವು 30x40 ವಿಸ್ತೀರ್ಣದ

ನಿವೇಶನದಲ್ಲಿದ್ದೇವೆಯೇ? ಅವೆಲ್ಲ 100ಕ್ಕೆ 90 ರಷ್ಟು ಕೃಷಿ ಆಧಾರಿತ ಕುಟುಂಬಗಳು. 43 ತಾಲ್ಲೂಕುಗಳನ್ನು ಘೋಷಣೆ ಮಾಡಿ ತಲಾ 2 ಕೋಟಿ ರೂಪಾಯಿಗಳನ್ನು ಕೊಟ್ಟರೆ ಹೇಗೇ? ಮೂಲಭೂತ ಸೌಲಭ್ಯಗಳನ್ನು ಕೊಡದೇ ಇದ್ದರೆ ಏನೂ ಉಪಯೋಗವಾಗುವುದಿಲ್ಲ. ಅಲ್ಲಿ ಹೋಗಿ ಏನು ಮಾಡಬೇಕು?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ನವಲಗುಂದ ತಾಲ್ಲೂಕು ಬಸ್ಸಾಪುರಕ್ಕೆ ಹೋಗಿದ್ದೆ. ದೊಡ್ಡ ದೊಡ್ಡ ಶ್ರೀಮಂತರಾಗಿದ್ದವರಿಗೂ ದನಗಳನ್ನು ಕಟ್ಟುವುದಕ್ಕೆ ಜಾಗ ಸಿಕ್ಕಿಲ್ಲ. 30x40 ಜಾಗಕ್ಕಿಂತಲೂ ಅವರಿಗೆ ಕೊಟ್ಟಿರುವ ಜಾಗ ಚಿಕ್ಕದಾಗಿದೆ. ಇಂಥವರು ದನಗಳನ್ನು ಎಲ್ಲಿ ಕಟ್ಟಬೇಕು? Slum ನವರಿಗೆ ಹೇಗೆ, ಒಂದು ಸಣ್ಣ ಹಾಲು, ಒಂದು ಸಣ್ಣ ಕೊಠಡಿ, ಅವ್ಯವಸ್ಥಿತ ಒಂದು ಸಣ್ಣ ಅಡುಗೆ ಮನೆ ಇರುತ್ತದೆಯೋ ಅವು ಕೂಡ ಹಾಗೆಯೇ ಇದೆ. ಮಾನ್ಯ ಸಚಿವರು, ಇಂಥದ್ದನ್ನು ನಮ್ಮ ಕಾಲದಲ್ಲಿ ಮಾಡಿದ್ದೇವೆ ಎಂದು ಹೇಳಿಕೊಂಡರು. ಈ ರೀತಿ ಜಲಪ್ರಳಯ ನಿಮ್ಮ ಕಾಲದಲ್ಲಲ್ಲದೇ ಬೇರೆ ಸಮಯದಲ್ಲಿ ಆಗಿರಲಿಲ್ಲ. ನಿಮ್ಮ ಕಾಲವೇ ಅದ್ಭುತವಾದುದು. ಎಲ್ಲಾ ಕಡೆ ಅನಾಹುತಗಳೇ ಜಾಸ್ತಿ. ಮಾನ್ಯ ಸಚಿವರೇ ನಾಳೆಯೇ ಬಿಜಾಪುರಕ್ಕೆ ಹೋಗೋಣ. ಅಲ್ಲಿ ಏನೇನು ಕಟ್ಟಿಕೊಟ್ಟಿದ್ದೀರಿ ಎನ್ನುವುದನ್ನು ನೋಡಿಕೊಂಡು ಬರೋಣ. Housing Board ನವರು ಕಟ್ಟುವ ಹಾಗೆ ಮನೆಗಳನ್ನು ಕಟ್ಟಿಬಿಟ್ಟರೆ ರೈತರು ಹೇಗೆ ಬದುಕುತ್ತಾರೆ? ಪ್ರಾಮಾಣಿಕವಾಗಿ ಮಾತನಾಡೋಣ.

**ಸಭಾಪತಿಯವರು:–** ಮಾನ್ಯ ಹೊರಟ್ಟಿಯವರೆ ಬಜೆಟ್ ಮೇಲೆ ಮಾತನಾಡಲು ಮುಂದಿನ ಅವಕಾಶ ನಿಮ್ಮದೇ ಆಗಿದೆ. ಆಗ ಮಾತನಾಡುತ್ತೀರೋ ಈಗಲೇ ಮಾತನಾಡಿ ಮುಗಿಸುತ್ತೀರೋ? ಮಾನ್ಯ ವಿರೋಧ ಪಕ್ಷದ ನಾಯಕರು ಒಟ್ಟು 2 ಗಂಟೆ 20 ನಿಮಿಷ ಮಾತನಾಡಿದ್ದಾರೆ. ಅವರದು ಮುಗಿದ ಮೇಲೆ ಬಾಕಿಯವರಿಗೆ ಮಾತನಾಡುವುದಕ್ಕೆ ಅವಕಾಶ ಇದೆ. ತಾವು ಇನ್ನೆಷ್ಟು ಮಾತನಾಡುತ್ತೀರಿ?

**ಶ್ರೀ ಎಸ್.ಆರ್. ಪಾಟೀಲ್:–** ಬೇಗ ಮುಗಿಸಿಬಿಡುತ್ತೇನೆ . . .

**ಸಭಾಪತಿಯವರು:–** ಬೇಗ ಮುಗಿಸುತ್ತೇನೆ ಎಂದು ಹೇಳುವ ಹಾಗಿಲ್ಲ. ಇಂತಿಷ್ಟು ಸಮಯ ಬೇಕಾಗುತ್ತದೆ ಎಂದು ಹೇಳಿ . . .

**ಶ್ರೀ ಎಸ್.ಆರ್. ಪಾಟೀಲ್:–** ಅದನ್ನು ಕಲ್ಪನೆ ಮಾಡಿಕೊಳ್ಳುವಂತಹ ಶಕ್ತಿ ನನಗಿಲ್ಲ . . .

**ಸಭಾಪತಿಯವರು:–** ಹಾಗಾದರೆ ನಾನೇನು ಮಾಡಬೇಕು? ಬಜೆಟ್ ಮೇಲೆ ಮಾತನಾಡಬೇಕು ಎಂದು ಅಭಿಪ್ರಾಯಪಟ್ಟಿರುವವರ ಸಾಕಷ್ಟು ಚೀಟಿಗಳು ನನ್ನ ಹತ್ತಿರ ಬಂದಿವೆ. ನಾನೇನು ಮಾಡಬೇಕು ಎಂದೂ ನನಗೂ ಕಷ್ಟವಾಗುತ್ತಿದೆ. ತಾವು ಯಾವಾಗ ಮುಗಿಸುತ್ತೀರಿ?

**ಶ್ರೀ ಎಸ್.ಆರ್. ಪಾಟೀಲ್:–** ಇನ್ನೊಂದು ಅರ್ಧಗಂಟೆಯಲ್ಲಿ ಮುಗಿಸುತ್ತೇನೆ. ಇದು ಈ ಸರ್ಕಾರದ ಕೊನೆಯ ಅಧಿವೇಶನವಾಗಿದೆ . . .

**ಸಭಾಪತಿಯವರು:–** ನಮ್ಮ ಸದಸ್ಯರುಗಳವರದೂ ಅದೇ ಸಮಸ್ಯೆ ...

**ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ:–** ಮಾನ್ಯ ವಿರೋಧ ಪಕ್ಷದ ನಾಯಕರೆ, ಇದರಲ್ಲಿ, ಅವರ ಚುನಾವಣಾ ಪ್ರಣಾಳಿಯಕೆಯನ್ನು ನಾವೆಷ್ಟು ಚರ್ಚೆ ಮಾಡಬೇಕು ಎನ್ನುವುದೂ ಸಹ ಇದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಒಂದೂವರೆ ತನಕ ಮಾತನಾಡಲಿ. ಅವರಾದ ಮೇಲೆ ಮಾನ್ಯ ಹೊರಟ್ಟಿಯವರು ಮಾತನಾಡುತ್ತಾರೆ. ಮಾನ್ಯ ಹೊರಟ್ಟಿಯವರು ಭಾಷಣ ಪ್ರಾರಂಭ ಮಾಡಿದ ಮೇಲೆ ಆಡಳಿತ ಪಕ್ಷದಿಂದ ಯಾವ ಸದಸ್ಯರು ಮಾತನಾಡಬೇಕು ಎಂದು ಅವರ ಹೆಸರನ್ನು ಹೇಳುತ್ತೇನೆ. ನಾನು ಎಲ್ಲರ ಹೆಸರುಗಳನ್ನೂ ಬರೆದುಕೊಂಡಿದ್ದೇನೆ. ನಿಮ್ಮ ನಿಮ್ಮ ನಾಯಕರು ನನಗೆ ಪಟ್ಟಿ ಕೊಟ್ಟಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್ :-** ಮೂಲಭೂತ ಸೌಲಭ್ಯಗಳನ್ನು ಒದಗಿಸುವ ವಿಚಾರವಾಗಿ ಸರ್ಕಾರ ಚಿಂತನೆ ಮಾಡಬೇಕು. ಅಲ್ಲಿ ರೈತರು ಇರುವ ಹಾಗೆ ಯೋಗ್ಯ ವ್ಯವಸ್ಥೆ ಮಾಡಬೇಕು. ಕೇಂದ್ರ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಹಣ ಕೊಟ್ಟಿದೆ, ದಾನಿಗಳು ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಗಳೆ, ಸರ್ಕಾರಿ ಸ್ವಾಮ್ಯದ ಬಹಳಷ್ಟು ಸಂಸ್ಥೆಗಳು ಇವತ್ತು ಹಾನಿಗೊಳಗಾಗಿವೆ. ಇವುಗಳ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. Mysore Paper Mills, ಸೋಪ್ಸ್ & ಡಿಟರ್ಜೆಂಟ್ ಸಂಸ್ಥೆಗಳಲ್ಲಿರುವ ತಂತ್ರಜ್ಞಾನ ಉನ್ನತೀಕರಣಗೊಂಡಿಲ್ಲ. ಅಲ್ಲಿ ಹಳೆಯ ಯಂತ್ರೋಪಕರಣಗಳಿವೆ. ಇಂತಹ ಕಡೆ ತಂತ್ರಜ್ಞಾನವನ್ನು ಉನ್ನತೀಕರಣಗೊಳಿಸಿ, ಹೊಸ ಯಂತ್ರೋಪಕರಣಗಳನ್ನು ಅಳವಡಿಸಬೇಕು. ಇಂತಹ ಸಂಸ್ಥೆಗಳು ಏತಕ್ಕಾಗಿ ಹಾನಿ ಅನುಭವಿಸುತ್ತಿವೆ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕು. ಸರ್ ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನದಲ್ಲಿ ಮೈಸೂರು ಮಹಾರಾಜರು ಪ್ರಾರಂಭ ಮಾಡಿದಂಥ ಮೈಸೂರು ಲ್ಯಾಂಪ್ಸ್ ಸಂಸ್ಥೆ ಮುಚ್ಚಿ 10 ವರ್ಷಗಳಾಯಿತು. ಇದರ 130 ಜನ ನೌಕರರ ಬಗ್ಗೆ ಸರ್ಕಾರದ ವತಿಯಿಂದ ಸೂಕ್ತ ಕ್ರಮವಾಗಿಲ್ಲ. ಸರ್ಕಾರಿ ಸ್ವಾಮ್ಯದ ಇಂತಹ ಸಂಸ್ಥೆಗಳು ಏಕೆ ಹಾನಿಯನ್ನು ಅನುಭವಿಸುತ್ತವೆ? ಮಾನ್ಯ ಸಭಾಪತಿಗಳೆ, ಇವತ್ತು ಖಾಸಗಿಯಾಗಿ ಒಂದು ಉದ್ಯಮವನ್ನು ಸ್ಥಾಪನೆ ಮಾಡುವವರು ಬಹಳ flourish ಆಗುತ್ತಾರೆ.

( 1 ಘಂಟೆ)

ಸಾಕಷ್ಟು ಅದರಲ್ಲಿ ಲಾಭ ಮಾಡುತ್ತರೆ. ಆದರೆ, ಇವತ್ತು public undertakings ಇದರ ಬಗ್ಗೆ ಯಾರಿಗೂ ಚಿಂತನೆಯೇ ಇಲ್ಲ. They are all under loss, ಇದರ ಬಗ್ಗೆಯೂ ಸರ್ಕಾರ ಚಿಂತನೆ ಮಾಡಬೇಕೆನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪಶುಸಂಗೋಪನೆ ಇಲಾಖೆಯ ಬಗ್ಗೆ ಹೇಳುವುದಾದರೆ, ಸದನದಲ್ಲಿ ಶ್ರೀಮಾನ್ ರೇವು ನಾಯಕ್ ಬೆಳಮಗಿಯವರು ಇದ್ದಾರೆ.

**(ಈ ಹಂತದಲ್ಲಿ ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಒಂದು ಕೋಟಿ ಮೂವತ್ತೊಂಬತ್ತು ಲಕ್ಷದಷ್ಟು ಜಾನುವಾರಗಳಿವೆ. ಮೇವು ಆಧಾರಿತ ಈ ಜಾನುವಾರುಗಳಿಗೆ ರಕ್ಷಣೆ ಮಾಡುವಂತಹ ಜವಾಬ್ದಾರಿಯಿಂದ ಸರ್ಕಾರ ವಿಮುಖವಾಗಿದೆ. ಏಕೆಂದರೆ, ಬರಗಾಲದಲ್ಲಿ ಗೋಶಾಲೆಗಳನ್ನು ತೆರೆದರು. ಆಮೇಲೆ ಒಂದು ದಿವಸ ಮಳೆಯಾಯಿತು ಎಂದು ಎಲ್ಲಾ ಗೋಶಾಲೆಗಳನ್ನು ಮುಚ್ಚಿಬಿಟ್ಟರು. ಮಳೆಯಾದ ಕೂಡಲೇ ಮೇವು ಒಂದೇ ರಾತ್ರಿಯಲ್ಲಿ ಬಂದುಬಿಡುತ್ತದೆಯೇ? ಸರ್ಕಾರಕ್ಕೆ ಚಿಂತನೆ ಇದೆಯೋ ಇಲ್ಲವೋ? ಕನಿಷ್ಠ ಜ್ಞಾನವಾದರೂ ಇಲ್ಲವೇ ಎಂದು ನನಗೆ ಆಶ್ಚರ್ಯವಾಗುತ್ತಿದೆ. ನಾವು ಭೇಟಿ ಕೊಡುವಂತಹ ಸಂದರ್ಭದಲ್ಲಿ, ಬರಗಾಲದ ಅಧ್ಯಯನದಲ್ಲಿರುವಂತಹ ಸಂದರ್ಭದಲ್ಲಿ ಒಂದು ದಿವಸ ಮಳೆಯಾಯಿತು. ಮರು ದಿವಸ ಎಲ್ಲಾ ಗೋಶಾಲೆಗಳನ್ನು ಮುಚ್ಚಿಬಿಟ್ಟಿದ್ದಾರೆ. ಏಕೆ ಮುಚ್ಚಿಬಿಟ್ಟಿದ್ದೀರಿ ಎಂದು ಜಿಲ್ಲಾಧಿಕಾರಿಯವರನ್ನು ಕೇಳಿದರೆ, ನಿನ್ನೆ ಮಳೆಯಾಯಿತಲ್ಲಾ ಅದಕ್ಕೆ ಎಂದು ಹೇಳಿದರು. ಅಂದರೆ, ನಿನ್ನೆ ಮಳೆಯಾದ ಕೂಡಲೇ ಮೇವು ಆಗಲೇ ಬೆಳೆದುಬಿಟ್ಟಿತೇ? ಇಷ್ಟು ಕನಿಷ್ಠ ಜ್ಞಾನ ಇಲ್ಲವೆಂದರೆ, ಅದರ ಬಗ್ಗೆ ಚಿಂತನೆ ಇಲ್ಲ ಎಂದರೆ ಇದೊಂದು ನಾಚಿಕೆಗೇಡಿನ ಸಂಗತಿ ಎಂದು ನಾನು ಭಾವಿಸುತ್ತಿದ್ದೇವೆ. ಕಳೆದ ವರ್ಷ ಕೇಂದ್ರ ಸರ್ಕಾರ ನೂರು ಕೋಟಿ ರೂಪಾಯಿಗಳ ಅನುದಾನವನ್ನು ಸಮಗ್ರ ಅಭಿವೃದ್ಧಿಗಾಗಿ ಒದಗಿಸಿದೆ. ಇದನ್ನು ಪರಿಣಾಮಕಾರಿಯಾಗಿ ಉಪಯೋಗ ಮಾಡಿಕೊಳ್ಳಬಹುದಾಗಿತ್ತಲ್ಲವೇ? ಈ ಬೇಸಿಗೆಯಲ್ಲಿ ಜಾನುವಾರುಗಳ ಬಗ್ಗೆ ಸ್ವಲ್ಪವಾದರೂ ಬಜೆಟ್‌ನಲ್ಲಿ ಪ್ರಸ್ತಾವನೆ ಮಾಡಬೇಕಾಗಿತ್ತಲ್ಲವೇ? ಜಾನುವಾರುಗಳ ಮೇವಿನ, ಬಗ್ಗೆ, ನೀರಿನ ಬಗ್ಗೆ, ಏನು ಪ್ರಸ್ತಾವನೆ ಇಲ್ಲ. ಗೋಶಾಲೆಗಳನ್ನು ಎಷ್ಟು ಪ್ರಾರಂಭ ಮಾಡಿದರು, ಕೊನೆ ಪಕ್ಷ ಒಂದು ಹೋಬಳಿ ಮಟ್ಟದಲ್ಲಿ ಗೋಶಾಲೆಗಳನ್ನು ಪ್ರಾರಂಭ ಮಾಡಬೇಕಾಗಿತ್ತು. ಒಂದು ಹೋಬಳಿಯಲ್ಲಿ 10–15 ಹಳ್ಳಿಗಳು ಇರುತ್ತವೆ. ಅವರೆಲ್ಲಾ ತಮ್ಮ ಜಾನುವಾರುಗಳನ್ನು ಗೋಶಾಲೆಗೆ ತರುವಂತಹ ವ್ಯವಸ್ಥೆ ಇದೆ.

157 ತಾಲ್ಲೂಕುಗಳಲ್ಲಿ ಬರಗಾಲವಿದೆ. ನಾನು 224 ತಾಲ್ಲೂಕುಗಳ ಬಗ್ಗೆ ಹೇಳುವುದಿಲ್ಲ. 177 ಹಳೇ ತಾಲ್ಲೂಗಳೇನಿವೆ ಅದರಲ್ಲಿ 157 ತಾಲ್ಲೂಕುಗಳಲ್ಲಿ ಭೀಕರ ಬರಗಾಲವಿದೆ. ಜನರಿಗೆ ಕುಡಿಯುವುದಕ್ಕೆ ನೀರಿಲ್ಲ, ಜಾನುವಾರುಗಳಿಗೆ ನೀರು, ಮೇವು ಇಲ್ಲ. ನಮ್ಮಲ್ಲಿ ಮೇವು ಇದೆಯೇ? We have got sufficient fodder in the State ಎಂದು ಹೇಳುತ್ತೀರಿ. ಮೇವು ಎಲ್ಲಿದೆ? ಮಳೆಯೇ ಇಲ್ಲದ ಮೇಲೆ ನಿಮಗೆ ಮೇವು ಎಲ್ಲಿಂದ ಬರುತ್ತದೆ? From where you are getting the fodder? ಮಳೆಯೇ ಆಗಿಲ್ಲ. ಆದರೆ ನಮಗೆ ಬೇಕಾದಷ್ಟು ಮೇವು ಇದೆ ಎಂದು ಹೇಳುತ್ತೀರಿ. ಹಣ ಕೊಟ್ಟರೂ ಸಿಗಲಾರದಂತಹ ದುಸ್ಥಿತಿ ಇದೆ. ಪಶುಸಂಗೋಪನಾ ಸಚಿವರೇ, ಕುರಿ–ಮೇಕೆಗಳಿಗೆ ಭಗವಂತನೇ ಮೇವು ಕೊಟ್ಟು, ನೀರು ಕುಡಿಸುತ್ತಾನೆಂದು ಕೆಳಮನೆಯಲ್ಲಿ ನೀವು ಹೇಳಿದ್ದೀರಿ. ನೀವು ಭಗವಂತನ ಮೇಲೆಯೇ ಭಾರವನ್ನು ಹಾಕಿಬಿಟ್ಟಿದ್ದೀರಿ. ನೀವು ಮಂತ್ರಿಗಳಲ್ಲವೆ?

**ಶ್ರೀ ಇ. ಕೃಷ್ಣಪ್ಪ:–** ಭಗವಂತನೇ ಕೊಡುತ್ತಾನೆಂದ ಮೇಲೆ ಖಾತೆ ಏಕೆ, ಸಚಿವರು ಏಕೆ ಬೇಕು?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಆ ಭಗವಂತನೇ ಮೇವು, ನೀರು ಕೊಡುತ್ತಾನೆ, ಅವನೇ ಕಾಳಜಿಯನ್ನು ತೆಗೆದುಕೊಳ್ಳುತ್ತಾನೆ ಎಂದು ಮಾನ್ಯ ಸಚಿವರು ಕೆಳಮನೆಯಲ್ಲಿ ಹೇಳಿಬಿಟ್ಟಿದ್ದಾರೆ. ಆಯಿತು, ಅವರು ಯಾವುದು ಏನೂ ಮಾಡುವುದೇ ಬೇಡ. ಎಲ್ಲಾ ಭಗವಂತನ ಮೇಲೆ ಹಾಕಿಬಿಡಲಿ.

**ಶ್ರೀ ನಾರಾಯಣ ಸಾ. ಬಾಂಡಗೆ:–** ನೀರು ಯಾರು ಕೊಡುತ್ತಾರೆ? ಭಗವಂತನೇ ನೀರು ಕೊಡುವುದು.

**ಶ್ರೀ ಬಸವರಾಜ ಹೊರಟ್ಟಿ:–** ಈ ಬಜೆಟ್‌ನ್ನು ಭಗವಂತನಿಗೆ ಕೊಟ್ಟುಬಿಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಇದನ್ನೆಲ್ಲಾ ಹೇಳಬಾರದು.

**ಶ್ರೀ ಬಿ. ರಾಮಕೃಷ್ಣ:–** ಈ ಬಜೆಟ್ ಹಣವನ್ನೆಲ್ಲಾ ಭಗವಂತನಿಗೇ ಕೊಟ್ಟುಬಿಡಲಿ. ಅವರು ಮೇವು ಕೊಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ಕೋಟಿ ಮೂವತ್ತೊಂಬತ್ತು ಲಕ್ಷ ಜಾನುವಾರುಗಳು ಮೇವನ್ನು ಅವಲಂಬಿಸಿರುವಂತಹ ಜಾನುವಾರುಗಳಿಗೆ ಈ ರಾಜ್ಯದಲ್ಲಿ ಮೇವು, ನೀರು ಇರಲಾದಂತಹ ಪರಿಸ್ಥಿತಿ ಇದೆ. ಅದರ ಬಗ್ಗೆ ಸರ್ಕಾರ ಕನಿಷ್ಠ ಚಿಂತನೆಯನ್ನಾದರೂ ಮಾಡಬೇಕಲ್ಲವೆ? ಅದರ ಬಗ್ಗೆ ಏನು ಚಿಂತನೆಯನ್ನೇ ಮಾಡಿಲ್ಲ. ಈ ಜಾನುವಾರುಗಳ ಬಗ್ಗೆ ಬಹಳಷ್ಟು ದೊಡ್ಡ ದೊಡ್ಡ ಭಾಷಣಗಳನ್ನು ಮಾಡುತ್ತಾರೆ. ಈ ಜಾನುವಾರುಗಳ ಗತಿ ಏನು? ಆನರು ಎಲ್ಲಾದರೂ ಹೋಗಿ ತಮಗೆ ಬೇಕಾದ್ದನ್ನು ಪಡೆದುಕೊಳ್ಳುತ್ತಾರೆ. ಮೂಕ ಜಾನುವಾರುಗಳಿಗೆ ಭಗವಂತನ ಮೇಲೆ ಹಾಕಿ ಕೈಚೆಲ್ಲಿ ಕುಳಿತುಕೊಂಡರೆ ಇದಕ್ಕೆ ಏನು ಹೇಳಬೇಕು? It is really shame on the part of this Government. They would have taken the appropriate steps. ಈ ಗೋಶಾಲೆಗಳನ್ನು ಮುಚ್ಚುವ ಅವಶ್ಯಕತೆ ಇದೆಯೇ? ಇನ್ನೂ ಗೋಶಾಲೆಗಳನ್ನು ಹೆಚ್ಚಿಗೆ ಪ್ರಾರಂಭ ಮಾಡಬೇಕಾಗಿದೆ. ಈ ಸರ್ಕಾರಕ್ಕೆ ತಮ್ಮ ಮುಖಾಂತರ ಹೇಳುವುದೇನೆಂದರೆ, ರಾಜ್ಯದಲ್ಲಿ ಎಷ್ಟು ಗೋಶಾಲೆಗಳು ಅವಶ್ಯಕತೆ ಇದೆ ಅಷ್ಟು ಗೋಶಾಲೆಗಳನ್ನು ಪ್ರಾರಂಭ ಮಾಡಿ. You should provide funds for cattleheads. ಈ ರಾಜ್ಯದಲ್ಲಿರುವಂತಹ ಜಾನುವಾರುಗಳಿಗೆಲ್ಲಾ funds ಕೊಡಿ, ನೀರು ಮೇವಿನ ವ್ಯವಸ್ಥೆ ಮಾಡಿ. ಇಲ್ಲದಿದ್ದರೆ ಅದು ಬಹಳ ದೊಡ್ಡ ಪಾಪ. ಈ ಭೀಕರ ಬರಗಾಲವನ್ನು ನೆನಪಿಸಿಕೊಂಡರೆ ನನಗೆ ಭಯವಾಗುತ್ತದೆ. ಈ ರಾಜ್ಯದಲ್ಲಿ ಕುಡಿಯುವ ನೀರಿನ ಸಲುವಾಗಿ ಜನರೇ ದಂಗೆ ಏಳುವಂತಹ ಪರಿಸ್ಥಿತಿ ಇದೆ. ಈ ರಾಜ್ಯದಲ್ಲಿ ಮೂರನೇ ಮಹಾಯುದ್ಧ ಆಗುತ್ತದೆ ಎಂದು ಜನರು ಹೇಳುತ್ತಿದ್ದರು. ಕುಡಿಯುವ ನೀರಿಗಾಗಿ ಮೂರನೇ ಮಹಾಯುದ್ಧ ಆಗಬಹುದು. ಮತ್ತೆ ಯಾವುದಕ್ಕೂ ಯುದ್ಧ ಆಗುವುದಿಲ್ಲ. ಅಷ್ಟರ ಮಟ್ಟಿಗೆ ಜನರು ಮಾತನಾಡುವುದನ್ನು ಇವತ್ತು ನಿಜವಾಗಿ ಪರಿಣಮಿಸುವಂತಹ ಕಾಲ ಬಂದಿದೆ. ಇಷ್ಟು ಭಯಾನಕವಾದಂತಹ ಬರಗಾಲ ನಮ್ಮ ಎದುರಿಗೆ ಇರುವಾಗ

ಭೀಕರವಾದಂತಹ ಬೇಸಿಗೆ ಇರುವಂತಹ ಸಂದರ್ಭದಲ್ಲಿ ಕುಡಿಯುವುದಕ್ಕೆ ಜನ, ಜಾನುವಾರುಗಳಿಗೆ ನೀರು ಇರಲಾರದಂತಹ ಸಂದರ್ಭದಲ್ಲಿ, ಜನಕ್ಕೆ ಕೂಲಿ ಕೆಲಸ ಇರಲಾರದಂತಹ ಸಂದರ್ಭದಲ್ಲಿ, ಜಾನುವಾರುಗಳಿಗೆ ಮೇವು ಇರಲಾರದಂತಹ ಸಂದರ್ಭದಲ್ಲಿ ಇದರ ಬಗ್ಗೆ ಚಿಂತನೆಯಾಗಬೇಕಲ್ಲವೆ? ಬಜೆಟ್ ಮಂಡಿಸುವ ಉದ್ದೇಶ ಎಲ್ಲಾ tax payer' money ಮನಸ್ಸಿಗೆ ಬಂದ ಹಾಗೆ ಸರ್ಕಾರ ತನ್ನ ಜನಪ್ರಿಯತೆಯನ್ನು ಪಡೆಯುವ ಸಲುವಾಗಿ ಅಥವಾ ಮತಗಳ ಮೇಲೆ ಕಣ್ಣಿಟ್ಟು tax payer's money distribute ಮಾಡಿದರೆ it can't be justified. I don't agree with it. Tax payers' money should be utilized properly and judiciously. ಮಾನ್ಯ ಪಶುಸಂಗೋಪನಾ ಸಚಿವರು ಇಲ್ಲೇ ಇದ್ದಾರೆ. ಮಾನ್ಯ ಸಚಿವರೇ, ನೀವು ದಯಮಾಡಿ ದೇವರ ಮೇಲೆ ಭಾರ ಹಾಕಿ ಕೊರಬೇಡಿ. ನೀವು ಮಾಡುವ ಪ್ರಯತ್ನ ಮಾಡಿ. You put all your good efforts. ಪ್ರಾಮಾಣಿಕವಾದಂತಹ ಪ್ರಯತ್ನ ಮಾಡಿ. Hard efforts ಮಾಡಿ. ಆಮೇಲೆ ಭಗವಂತನಿಗೆ ಬಿಡಿ. ನೀವು ಎಲ್ಲಾ ಭಗವಂತನೇ ಮಾಡುತ್ತಾನೆಂದು ಹೇಳಿ ಸುಮ್ಮನಾಗಿಬಿಟ್ಟರೆ ರಾಜ್ಯದ ಗತಿ ಏನು, ಜನರ ಗತಿ ಏನು, ಜಾನುವಾರುಗಳ ಗತಿ ಏನು ಎಂಬುದನ್ನು ಹೇಳಿ?

**ಶ್ರೀ ರೇವುನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು):–** ಮಾನ್ಯ ಸಭಾಪತಿಯವರೇ, ಇಡೀ ಕರ್ನಾಟಕ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯನ್ನು ಎದುರಿಸಬೇಕೆಂದು ನಮ್ಮ ಸರ್ಕಾರ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡಿ ಬರಗಾಲ ಇರಲಿ ಬಿಡಲಿ, ಜಿಲ್ಲಾಧಿಕಾರಿಗಳ ಮುಖಾಂತರ ಮತ್ತು ಇಲಾಖಾ ಉಪ ನಿರ್ದೇಶಕರ ಮುಖಾಂತರ, ಗೋಶಾಲೆ ತೆರೆಯುವ ಕಾರ್ಯಕ್ರಮವನ್ನು ಜಾರಿಗೊಳಿಸುವಂತೆ ಸೂಚಿಸಿದೆ. ಇದಕ್ಕಾಗಿ ಒಂದು ಟಾಸ್ಕ್‌ಫೋರ್ಸ್ ಕಮಿಟಿಯನ್ನು ರಚನೆ ಮಾಡಿದ್ದು ಶಾಸಕರು ಅದರ ಅಧ್ಯಕ್ಷರಾಗಿರುತ್ತಾರೆ. ಈ ಟಾಸ್ಕ್‌ಫೋರ್ಸ್ ಕಮಿಟಿಯು ಮೇವಿನ ಅವಶ್ಯಕತೆ ಇರಬಹುದು, ಕುಡಿಯುವ ನೀರಿನ ಅವಶ್ಯಕತೆ ಇರಬಹುದು, ಅದು ಎಲ್ಲಯೂ ಕೊರತೆಯಾಗದಂತೆ ನೋಡಿಕೊಳ್ಳುತ್ತದೆ. ಇಡೀ ರಾಜ್ಯದಲ್ಲಿ ಎಷ್ಟು ಬೇಕಾದರೂ ಗೋಶಾಲೆಯನ್ನು ತೆರಿಸಿ ಎಂದು ಆದೇಶ ಮಾಡಿದ್ದೇವೆ. 244

ಗೋಶಾಲೆಗಳಿದ್ದವು. ಈಗ 6 ಗೋಶಾಲೆಗಳು ಉಳಿದಿವೆ. ಏಕೆಂದರೆ, ಅಲ್ಲಿದ್ದಂತಹ ಶಾಸಕರು, ಜಿಲ್ಲಾಡಳಿತ ಮತ್ತು ನಮ್ಮ ಇಲಾಖಾ ಉಪ ನಿರ್ದೇಶಕರುಗಳಿಗೆ ಯಾವುದೇ ನಿರ್ಬಂಧ ಇಲ್ಲ. ಎಲ್ಲಿ ಬೇಕಾದರೂ ಗೋಶಾಲೆಯನ್ನು ತೆರೆಯಬಹುದು, ಗೋಶಾಲೆ ಕೊರತೆಯಾಗಬಾರದು ಎಂದು ಹೇಳಿದ್ದೇವೆ. ಮೊನ್ನೆ ಕೂಡ ನಮ್ಮ ಉಪ ಮುಖ್ಯಮಂತ್ರಿ ಈಶ್ವರಪ್ಪನವರ ನೇತೃತ್ವದಲ್ಲಿ ಎರಡು ಸಭೆಗಳನ್ನು ಮಾಡಿದ್ದೇವೆ. ಅದಕ್ಕೆ ಬೇಕಾಗಿರುವಂತಹ ಹಣವನ್ನು ಒದಗಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ. ಎಲ್ಲಿ ಗೋಶಾಲೆ ಅವಶ್ಯಕತೆ ಇದೆ ಅಲ್ಲಿ ಗೋಶಾಲೆಯನ್ನು ತೆರೆಯಬೇಕೆಂದು ಹೇಳಿದ್ದೇವೆ. ಕುಡಿಯುವ ನೀರಿನ ಸಮಸ್ಯೆ ಪರಿಹಾರ ಮಾಡಬೇಕೆಂದು ಹೇಳಿದ್ದೇವೆ. ಪ್ರತಿ ಗೋಶಾಲೆಗಳಿಗೆ 30 ಲಕ್ಷ ರೂಪಾಯಿಯಷ್ಟು ಹಣವನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ ಮತ್ತು ಹೆಚ್ಚಿನ ಬೇಕಾದಂತಹ ಹಣ ಕೂಡ ಬಿಡುಗಡೆ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾರ್ಗದರ್ಶನವನ್ನು ಮಾಡಿದ್ದಾರೆ. ಅದರ ಜೊತೆಗೆ ಎಸ್.ಆರ್. ಪಾಟೀಲ್‌ರವರು ಕುಡಿಯುವ ನೀರಿನ ಬಗ್ಗೆ ಹೇಳಿದರು. ವಿಧಾನಸಭೆಯಲ್ಲಿ ಮಾನ್ಯ ಸಿದ್ದರಾಮಯ್ಯನವರು ಒಂದು ಪ್ರಸ್ತಾವನೆಯನ್ನು ಮಾಡಿದರು. ಮೇವಿಗಾಗಿ ಜಾನುವಾರುಗಳು ಸತ್ತವು ಎಂದು ಹೇಳಿದರು. ಮೇವಿಗಾಗಿ ಎಲ್ಲಿಯೂ ಸತ್ತಿಲ್ಲ ಎಂದು ನಾನು ಹೇಳಿದೆ. ಯಾವುದೋ ರೋಗ-ರುಜಿನದಿಂದ ಸತ್ತಿರಬಹುದು. ದನ, ಕುರಿ, ಇತರೆ ಜಾನುವಾರುಗಳನ್ನು ಕಾಯುವವರಿಗೆ ಅವು ಧನಲಕ್ಷ್ಮಿ ಇದ್ದಂತೆ. ಹೆಚ್ಚು ಕುರಿ, ದನ, ಈ ಪ್ರಾಣಿಗಳನ್ನು ಕಾಯುವವರಿಗೆ ಎಷ್ಟೇ ದೂರ ಮೇಯಿಸಲು ಹೋದರೂ ಯಾವುದೇ ಸ್ಥಳದಲ್ಲಾಗಲಿ ನೀರು, ಮೇವು ಇದ್ದಲ್ಲಿಯೇ ಹೋಗಿ ಮೇಯಿಸುತ್ತಾರೆ. ಹೆಚ್ಚು ಜಾನುವಾರುಗಳನ್ನು ಸಾಕಿದವರನ್ನು ನೋಡಿ ತಮಗೆ ತಿಳಿಯುತ್ತದೆ. ಅವರು ಎಷ್ಟೇ ದೂರ ಹೋಗಿ ಮೇಯಿಸಿದರು ಮೇವು ಮತ್ತು ನೀರು ಸಿಗುತ್ತದೆ. ಆದ್ದರಿಂದ ನಾನು ಭಗವಂತ ಮೇವು ಮತ್ತು ನೀರು ಒದಗಿಸುತ್ತಾನೆ ಎಂದು ಹೇಳಿದೆ. ಅದನ್ನು ಬಹಳ ದೊಡ್ಡದಾಗಿ highlight ಮಾಡಿ, ನೀವು ಮಂತ್ರಿಯಾಗಿ ಏಕಿರಬೇಕು, ಎಲ್ಲಾ ಭಗವಂತನ ಮೇಲೆ

ಹಾಕಿಬಿಡಲಿ ಎಂದು ಹೇಳುತ್ತಿದ್ದೀರಿ. ನನ್ನ ಅನುಭವವನ್ನು ನಾನು ಹೇಳುತ್ತಿದ್ದೇನೆ. ನಾನು ಕುರಿ, ಹಸುಗಳನ್ನು ಕಾಯುವವನಾಗಿದ್ದೆ. ಅದಕ್ಕೆ ನನಗೆ ಈ ಖಾತೆಯನ್ನು ಕೊಟ್ಟಿದ್ದಾರೆ. ನಾನು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ, ಅಪ್ರಮಾಣಿಕವಾಗಿ ಕೆಲಸ ಮಾಡಿಲ್ಲ. ಇಡೀ ರಾಜ್ಯಕ್ಕೆ ನಾನು ಮಾರ್ಗದರ್ಶನ ಮಾಡಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಈಗ ಆರೇ ಉಳಿದಿರುವುದು ಎಂದು ಹೇಳಿದ್ದೀರಿ. ಉಳಿದ ಗೋಶಾಲೆಗಳನ್ನು ಏಕೆ ಬಂದ್ ಮಾಡಿದ್ದೀರಿ?

**ಶ್ರೀ ರೇವುನಾಯಕ ಬೆಳಮಗಿ:–** ಬಂದ್ ಮಾಡಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಆರೇ ಉಳಿದಿವೆ ಎಂದು ನೀವೇ ಹೇಳಿದ್ದೀರಿ.

**ಶ್ರೀ ರೇವುನಾಯಕ ಬೆಳಮಗಿ:–** ಬಂದ್ ಮಾಡಿಲ್ಲ. ನೀವು ನಾನು ಏನು ಹೇಳುತ್ತಿದೇನೆ ಎಂಬುದನ್ನು ತಿಳಿದುಕೊಳ್ಳಿ. ಇಡೀ ರಾಜ್ಯದಲ್ಲಿ ಗೋಶಾಲೆಗಳನ್ನು ತೆರೆಯಿರಿ ಎಂದು ಹೇಳಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:–** ರೆಕಾರ್ಡ್‌ಗೆ ಹೋಗಲಿ. ಎಷ್ಟು ಗೋಶಾಲೆಗಳನ್ನು ತೆರೆದಿದ್ದೀರಿ?

**ಶ್ರೀ ರೇವುನಾಯಕ ಬೆಳಮಗಿ:–** 244 ಗೋಶಾಲೆಗಳನ್ನು ತೆರೆದಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಈಗ ಆರೇ ಉಳಿದಿರುವುದು ಎಂದು ಹೇಳಿದ್ದೀರೋ ಇಲ್ಲವೋ?

**ಶ್ರೀ ರೇವುನಾಯಕ ಬೆಳಮಗಿ:–** ಮೇವು ಬಂದಿದೆ ಎಂದು ಬಂದ್ ಮಾಡಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮೇವು ಎಲ್ಲಿ ಬಂದಿದೆ ಎಂಬುದನ್ನು ಹೇಳಿ? ಮಳೆಯೇ ಬಂದಿಲ್ಲ.

**ಶ್ರೀ ರೇವುನಾಯಕ ಬೆಳಮಗಿ:–** ಟಾಸ್ಕ್‌ಫೋರ್ಸ್ ಕಮಿಟಿಯ ಛೇರ್ಮನ್ ಶಾಸಕರಾಗಿರುತ್ತಾರೆ, ಅವರೇ ಗೋಶಾಲೆಗಳನ್ನು ತೆರೆಯಬೇಕು, ಅವರೇ ಹೇಳಬೇಕು.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ನಾನು ಅದರ ಬಗ್ಗೆ ಹೇಳುತ್ತೇನೆ. ನಿಮ್ಮ ಹತ್ತಿರ ಮೇವು ಏನಾದರೂ ಇದೆಯೇ? ಯಾವುದಾದರೂ ರಾಜ್ಯದಿಂದ ಮೇವು ಅನ್ನು ತಂದಿದ್ದೀರಾ? ಎಲ್ಲಿಂದಲೂ ಸಹ ನೀವು ಮೇವನ್ನು ತಂದಿರುವುದಿಲ್ಲ. ಗೋ–ಶಾಲೆಯನ್ನು ಬಂದ್ ಮಾಡಿದ್ದೀರಿ.

**ಶ್ರೀ ರೇವು ನಾಯಕ್ ಬೆಳಮಗಿ:–** ಗೋ–ಶಾಲೆಯನ್ನು ಬಂದ್ ಮಾಡಿ ಎಂದು ಹೇಳಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ನೀವು ಶಿರಹಟ್ಟಿಗೆ ಹೋಗಿ ನೋಡಿ.

**ಶ್ರೀ ರೇವು ನಾಯಕ್ ಬೆಳಮಗಿ:–** ನಿಮಗೆ ಎಷ್ಟು ಗೋ–ಶಾಲೆಗಳು ಬೇಕು?

**ಶ್ರೀ ಬಸವರಾಜ ಹೊರಟ್ಟಿ:–** ನಾನು ಈ ವಿಚಾರಕ್ಕೆ ಏತಕ್ಕೆ ಬಂದೆ ಎಂದು ನಾನು ಹೇಳುತ್ತೇನೆ. ದನಗಳಿಗೆಲ್ಲಾ ಹುಣ್ಣೆ ಹತ್ತಿಕೊಂಡು ದನಗಳು ನಿಲ್ಲುವುದಕ್ಕೆ ಬರುವುದಿಲ್ಲ. ಎಷ್ಟೋ ಕಡೆ ದನಗಳು ಸಾಯುವ ಸ್ಥಿತಿಯಲ್ಲಿದ್ದಾಗ ಅವುಗಳನ್ನು ತೆಗೆದುಕೊಂಡು ಹೋಗಿ ಮಾರಿದ್ದಾರೆ. ಬೇಕಾದರೆ ನೀವು ಶಿರಹಟ್ಟಿಗೆ ನನ್ನ ಜೊತೆ ಬನ್ನಿ ತೋರಿಸುತ್ತೇನೆ. ನಾನು ಸ್ವತಃ ಹೋಗಿ ನೋಡಿಕೊಂಡು ಬಂದಿದ್ದೇನೆ.

**ಶ್ರೀ ರೇವು ನಾಯಕ್ ಬೆಳಮಗಿ:–** ಅವುಗಳ ಬಗ್ಗೆ ನಿಮಗೆ ಎಷ್ಟು ಕಳಕಳಿ ಇದೆ, ಅಷ್ಟೇ ಕಳಕಳಿ ನಮ್ಮ ಸರ್ಕಾರಕ್ಕೂ ಇದೆ. ನಾನು ಪ್ರವಾಸ ಮಾಡಿದ್ದೇನೆ.

**ಶ್ರೀ ಎಸ್.ಕೆ. ಬೆಳ್ಳುಬ್ಬಿ (ಹಜ್ ಮತ್ತು ವಕ್ಫ್ ಹಾಗೂ ಎಪಿಎಂಸಿ ಸಚಿವರು):–** ಮಾನ್ಯ ಸಭಾಪತಿಯವರೆ, ಬೆಳಗಾಂ ಜಿಲ್ಲೆ, ಬಿಜಾಪುರ ಜಿಲ್ಲೆ, ಬಾಗಲಕೋಟೆ ಜಿಲ್ಲೆ, ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಹಿಂಗಾರು ಮಳೆಯಾದ ಮೇಲೆ ಬಿಳಿ ಜೋಳ ಬಿತ್ತನೆಯಾಯಿತು. ಅದು ಬೆಳೆಯಿತು. ಆದರೆ, ಅದರಲ್ಲಿ ಕಾಳು ಸರಿಯಾಗಿ ಬಂದಿಲ್ಲ. ಅದಕ್ಕೆ ತಕ್ಕಂತೆ ಮಳೆಯಾಗಲಿಲ್ಲ. ಈಗ ಗೋ–ಶಾಲೆಯಲ್ಲಿನ ಗೋವುಗಳನ್ನು ಮಾಲೀಕರು ಸ್ವತಃ ತೆಗೆದುಕೊಂಡು ಹೋಗದೇ ವಿನಃ ಸರ್ಕಾರ ಗೋ–ಶಾಲೆಗಳನ್ನು ಬಂದ್ ಮಾಡಲಿಕ್ಕೆ ಹೋಗಿಲ್ಲ. ತಾವು ಸಹ ಬಂದು ನೋಡಬಹುದು. ಜೋಳ ಬಂದಿಲ್ಲ. ಜೋಳದ ತೆನೆ ಬಂದಿದೆ ಅಷ್ಟೆ. ಹೀಗಾಗಿ, ಮಾಲೀಕರು ದನಗಳನ್ನು ತೆಗೆದುಕೊಂಡು ಹೋಗಿದ್ದಾರೆಯೇ ವಿನಃ ಅವರು ಗೋ–ಶಾಲೆ ಬಂದ್ ಆಗಿದೆ ಎಂದು ಹೋಗಿಲ್. ಇವತ್ತು ಕೊಡ ದನಗಳನ್ನು ಗೋ–ಶಾಲೆಗೆ ತಂದು ಬಿಡುತ್ತೇವೆಂದರೆ ಇವತ್ತು ಸಹ ಗೋ–ಶಾಲೆಗಳನ್ನು ತೆರೆಯುತ್ತೇವೆ. ಅದರ ಪ್ರಶ್ನೆ ಇಲ್ಲ. ನೀವು ಬೆಳಗಾಂ, ಬಿಜಾಪುರ, ಬಾಗಲಕೋಟೆ ಮತ್ತು ಗುಲ್ಬರ್ಗ ಜಿಲ್ಲೆಗೆ ಬಂದು ನೋಡಿ. ಬಿಳಿ ಜೋಳ ಬೆಳೆದಿದೆ. ಆದರೆ, ಕಾಳು ಬರುವಷ್ಟು ಮಳೆಯಾಗಿರುವುದಿಲ್ಲ. ಹೀಗಾಗಿ ಮೇವಿಗೆ ತೊಂದರೆಯಿಲ್ಲ. ಹೀಗಾಗಿ, ಆ ರೀತಿಯಲ್ಲಿ ಆಗಿದೆಯೇ ವಿನಃ ಸರ್ಕಾರದ ವೈಪಲ್ಯದಿಂದ ಅಲ್ಲ.

(ಗೊಂದಲ)

ಮಾಲೀಕರು ದನಗಳಿಗೆ ಮೇವು ಲಭ್ಯವಾದ ಮೇಲೆ ಗೋ–ಶಾಲೆಯಿಂದ ತೆಗೆದುಕೊಂಡು ಹೋಗಿದ್ದಾರೆಯೇ ವಿನಃ ಗೋ–ಶಾಲೆಗಳನ್ನು ನಾವು ಬಂದ್ ಮಾಡಿರುವುದಿಲ್ಲವೆನ್ನುವ ವಿಚಾರವನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಎಷ್ಟು ರಾಜ್ಯಗಳಿಂದ ಎಷ್ಟು ಮೇವು ತರಿಸಿದ್ದಾರೆನ್ನುವುದಕ್ಕೆ ಸರ್ಕಾರದಿಂದ ಉತ್ತರ ಬೇಕು. ಈ ಬಗ್ಗೆ ನಾಳೆ ಉತ್ತರವನ್ನು ಹೇಳಲಿ. ಈಗ ಬೇಡ. ನೀವು ಈಗ ಮಳೆಯಾಗಿದೆ ಎಂದು ಹೇಳುತ್ತೀರಿ. ಮಳೆಯಾಗಿದೆ ಎಂದು ನನಗೂ ಗೊತ್ತಿದೆ.

ನಾವು ಸಹ ದನಗಳನ್ನು ಸಾಕಿದ್ದೇವೆ. ದನಗಳಿಗೆ ಮೇವು ಇಲ್ಲ. ಈಗ ಸುಮಾರು 15 ದಿವಸಗಳಿಂದ ಮೇವನ್ನು ಕಟಾವ್ ಮಾಡಿದ್ದಾರೆ. ಆದರೆ, ಗೋ–ಶಾಲೆಗಳು ಒಂದು ತಿಂಗಳ ಹಿಂದೆಯೇ ಬಂದ್ ಆಗಿವೆ. ಯಾವ ರಾಜ್ಯದಿಂದ ಎಷ್ಟು ಮೇವನ್ನು ತರಿಸಿದ್ದೀರಿ ಎನ್ನುವುದನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. ಹಿಂದೆ ಶ್ರೀಯುತ ಎಸ್.ಆರ್. ಬೊಮ್ಮಾಯಿ ಅವರು ಕಂದಾಯ ಸಚಿವರಿದ್ದಾಗ ಪಂಜಾಬ್ ಮತ್ತು ಹರಿಯಾಣದಿಂದ ಟ್ರೈನ್‌ನಲ್ಲಿ ದಿವಸಕ್ಕೆ ಒಂದು ಲೋಡ್ ಮೇವನ್ನು ತರಿಸಿದ್ದರು. ಆಗ ತರಿಸಿ ಎಲ್ಲಾ ಕಡೆ ಮೇವನ್ನು ಕೊಟ್ಟಿದ್ದೇವೆ. ನೀವು ಎಷ್ಟು ತರಿಸಿದ್ದೀರಿ ಎನ್ನುವುದನ್ನು ಹೇಳಿ. ಇವತ್ತು ಉತ್ತರ ಬೇಡ. ನಾಳೆ ಇದಕ್ಕೆ ಉತ್ತರವನ್ನು ಕೊಡಿ.

**ಶ್ರೀ ರೇವು ನಾಯಕ್ ಬೆಳಮಗಿ:–** ನಾಳೆ ಇದಕ್ಕೆ ಮಾಹಿತಿಯನ್ನು ಕೊಡುತ್ತೇನೆ ಸರ್.

**ಶ್ರೀ ಬಸವರಾಜ ಹೊರಟ್ಟಿ:–** ಎಷ್ಟು ಮೇವು ತರಿಸಿದ್ದಾರೆ, ಎಷ್ಟು ಗೋ–ಶಾಲೆಗಳಿದ್ದವು, ಎಷ್ಟು ಗೋ–ಶಾಲೆಗಳು ಬಂದ್ ಆಗಿವೆ, ಏತಕ್ಕೆ ಬಂದ್ ಆಗಿವೆ, ಯಾರು ಗೋವುಗಳನ್ನು ತೆಗೆದುಕೊಂಡು ಹೋಗಿದ್ದಾರೆನ್ನುವುದನ್ನು ನಾಳೆ ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಶ್ರೀಯುತ ರೇವುನಾಯಕ್ ಬೆಳಮಗಿಯವರು ಮುಗ್ಧರಿದ್ದಾರೆ. ನಿಮ್ಮ ಪ್ರಮಾಣಿಕತೆಯನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಹಿಂದೆ ನೀವು ಏನೋ ಹೇಳಲಾರದೆ, ಮಾಧ್ಯಮದವರು ಏನೋ ಬರೆದುಬಿಟ್ಟಿದ್ದರು ಎಂದು ಹೇಳಿದ್ದೀರಿ.

**ಶ್ರೀ ಎಸ್.ಕೆ. ಬೆಳ್ಳುಬ್ಬಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರಾದ ಶ್ರೀಯುತ ರೇವುನಾಯಕ್ ಬೆಳಮಗಿಯವರು ಮುಗ್ದರಲ್ಲ, ಅವರು ಸ್ವತಃ ಒಕ್ಕಲುತನವನ್ನು ಮಾಡಿದವರು. ಅವರು ದನವನ್ನು ಮೇಯಿಸಿದ್ದಾರೆ, ಕುರಿಗಳನ್ನು ಮೇಯಿಸಿದ್ದಾರೆ. ಅವರು ಪ್ರಾಕ್ಟೀಕಲ್ ಆಗಿ ಅವರು ರೈತರಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ನನಗೆ ಆ ವಿಚಾರ ಗೊತ್ತಿದೆ.

**ಶ್ರೀ ಬಸವರಾಜ ಹೊರಟ್ಟಿ:–** ಶ್ರೀಯುತ ಬೆಳ್ಳುಬ್ಬಿ ಅವರೇ, ಅವರು ಮೇವು ಇಲ್ಲದೇ ಹೇಗೆ ದನ–ಕುರಿಗಳನ್ನು ಮೇಯಿಸುತ್ತಾರೆ?

**ಶ್ರೀ ಎಸ್.ಕೆ. ಬೆಳ್ಳುಬ್ಬಿ:–** ದನಗಳಿಗೆ ನಾವು ಮೇವನ್ನು ಹಾಕಬೇಕು. ಆದರೆ, ಕುರಿಗಳಿಗೆ ನಾವು ಎಂದಾದರೂ ಮೇವನ್ನು ತಯಾರು ಮಾಡುತ್ತೇವೆಯೇ? ಮಳೆಯಾದ ಮೇಲೆ ಮೇವು ತಾನಾಗಿಯೇ ಬೆಳೆಯುತ್ತದೆ. ಆ ಮೇವನ್ನು ತಿಂದು ಕುರಿಗಳು ಬೆಳೆಯುತ್ತವೆ. ಕುರಿಗಳಿಗೆ ಎಂದೂ ಸಹ ಕಟ್ಟಿ ಮೇವು ಹಾಕುವುದಿಲ್ಲ. ದನಗಳಿಗೆ ಮಾತ್ರ ಮೇವು ಅನ್ನು ಹಾಕುತ್ತೇವೆ.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಆದರೆ, ಮಳೆಯಾಗಿ ಮೇವು ಆಗಬೇಕಲ್ಲವೇ? ಮಳೆಯಾಗದಿದ್ದರೆ ಕುರಿಗಳು ಹೇಗೆ ಮೇಯುತ್ತವೆ?

**ಶ್ರೀ ಎಸ್.ಕೆ. ಬೆಳ್ಳುಬ್ಬಿ:–** ಮಳೆಯಾಗಿದೆ. ಅದು ಎಷ್ಟರ ಮಟ್ಟಿಗೆ ಆಯಿತು ಎಂದರೆ, ಮೇವು ಬರುವ ರೀತಿಯಲ್ಲಿ ಮಳೆಯಾಗಿದೆ. ಆದರೆ, ಕಾಳು ಬರುವಷ್ಟು ಮಳೆಯಾಗಲಿಲ್ಲ. ಮೇವು ಬಂದಿದೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ನೋಡಿ, ನೀವು ರೈತರಿದ್ದೀರಿ, ನಾವು ಸಹ ರೈತರಿದ್ದೇವೆ.

**ಶ್ರೀ ಎಸ್.ಕೆ. ಬೆಳ್ಳುಬ್ಬಿ:–** ಬಿಜಾಪುರ, ಬಾಗಲಕೋಟೆ ಜಿಲ್ಲೆಗೆ ಬಂದು ನೋಡಿ.

**ಶ್ರೀ ರೇವು ನಾಯಕ್ ಬೆಳಮಗಿ:–** ಶ್ರೀಯುತ ಪಾಟೀಲ್‌ರವರೆ, ನಾವು ಮೊನ್ನೆತಾನೆ, ಮಾನ್ಯ ಈಶ್ವರಪ್ಪನವರ ಜೊತೆ ಸಭೆಯನ್ನು ಮಾಡಿದ್ದೇವೆ. ಎಲ್ಲೆಲ್ಲಿ ಅವಶ್ಯಕತೆ ಇದೆ, ಅಲ್ಲಿ ಗೋ–ಶಾಲೆಯನ್ನು ತೆರೆಯಿರಿ. ನೀರಿನ ಕೊರತೆಯಾಗಬಾರದು, . . . .

**ಶ್ರೀ ಎಸ್.ಆರ್. ಪಾಟೀಲ್:-** ನಾನು ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಶಾಸಕರು ಟಾಸ್ಕ್‌ಫೋರ್ಸ್ ಅಧ್ಯಕ್ಷರಿದ್ದಾರೆ ಮತ್ತು ಈ ವಿಚಾರವಾಗಿ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆಂದು ತಾವು ಹೇಳಿದ್ದಿ ನಾನು ಕೊಪ್ಪಳ ಜಿಲ್ಲೆಗೆ ಭೇಟಿ ಕೊಟ್ಟಿದ್ದೆ. ಬರಗಾಲ ವೀಕ್ಷಣೆ ಸಂದರ್ಭದಲ್ಲಿ ನಾನು ಜಿಲ್ಲಾಧಿಕಾರಿಗಳ ಸಭೆಯನ್ನು ಸಹ ಮಾಡಿದ್ದೇನೆ. ಮಳೆಯಾಗಿರುವ ಬಗ್ಗೆ ಮಹಿಳಾ ಜಿಲ್ಲಾಧಿಕಾರಿಗಳು ಹೇಳಿದರು. ನನಗೆ ಮಹಿಳೆಯರ ಬಗ್ಗೆ ಬಹಳ ಗೌರವವಿದೆ. ಅವರು ಎರಡು ದಿನಗಳಿಂದ ಮಳೆಯಾಗಿದೆ. ಅದಕ್ಕೋಸ್ಕರ ನಾವು ಗೋ-ಶಾಲೆಗಳನ್ನು ಬಂದ್ ಮಾಡಿದ್ದೇವೆ ಎನ್ನುವಂತಹ ಮಾತನ್ನು ಹೇಳಿದರು. ಜೊತೆಗೆ ಇವತ್ತು ನರೇಗಾ ಯೋಜನೆಯಡಿಯಲ್ಲಿ ಎಷ್ಟು ಹಣವನ್ನು ಬಳಕೆ ಮಾಡಿಕೊಳ್ಳಬೇಕಾಗಿದೆ, ಅಷ್ಟು ಹಣವನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಅವರು ವಿಫಲರಾಗಿದ್ದಾರೆ. ಅದನ್ನು ರೈತರಿಗೆ ಒಡ್ಡು ಹಾಕಲಿಕ್ಕೆ, ಸಮತಟ್ಟು ಮಾಡಲಿಕ್ಕೆ ಹಣ ದುರುಪಯೋಗವಾಗುತ್ತಿದ್ದು, ಅದಕ್ಕೆ ಹಣವನ್ನು ಕೊಟ್ಟಿಲ್ಲವೆಂದು ಹೇಳಿದರು. ಈಗ ನೆಗಡಿ ಬಂದಿದೆ ಎಂದರೆ ಮೂಗು ತೆಗೆಯಲಿಕ್ಕೆ ಆಗುತ್ತದೆಯೇ? ಅದಕ್ಕೆ ಚಿಕಿತ್ಸೆಯನ್ನು ಮಾಡಬೇಕಲ್ಲವೇ? ಆ ಹಣ ದುರುಪಯೋಗವಾಗದಂತೆ ಜಿಲ್ಲಾಧಿಕಾರಿಗಳು ನೋಡಿಕೊಳ್ಳಬೇಕು. ಬೇಕಾದಷ್ಟು ಗೋ-ಶಾಲೆಗಳನ್ನು ತೆಗೆಯಿರಿ ಎಂದು ಮಂತ್ರಿಗಳಾದ ತಾವು ಹೇಳಿರುತ್ತೀರಿ. ಆದರೆ, ಅದು ಜಾರಿಯಲ್ಲಿ ಬರಬೇಕು. ಮಂತ್ರಿಗಳಾದ ನೀವು ಪ್ರತಿಕ್ರಿಯೆಯನ್ನು ತೆಗೆದುಕೊಳ್ಳಬೇಕು. ನಾವು ಗೋ-ಶಾಲೆಗಳನ್ನು ತೆಗೆಯಿರಿ ಎಂದು ಹೇಳಿದ್ದು, ನೀವು ಏತಕ್ಕೆ ಗೋ-ಶಾಲೆಗಳನ್ನು ತೆರೆದಿಲ್ಲ, ಅಲ್ಲಿ ಏತಕ್ಕೆ ತೊಂದರೆಗಳಿವೆ ಎನ್ನುವ ವಿಚಾರದಲ್ಲಿ ಸಭೆ ಮಾಡಿ ಕೇಳಿ. ನೀವು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳಬೇಕು. ನೀವು ಅಧಿಕಾರಿಗಳಿಗೆ ಹೇಳಿರಬಹುದು, ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನೂ ಸಹ ಕರೆದಿರಬಹುದು. ಆದರೆ ಅದನ್ನು ನೀವು ನೋಡಬೇಕಲ್ಲವೇ? ಕೆಳಹಂತಕ್ಕೆ ನಿಮ್ಮ ಆದೇಶ ಹೋಗಿ ಮುಟ್ಟಿ, ಅದು ಜಾರಿಯಾಗಿದೆಯೇ ಇಲ್ಲವೇ ಎನ್ನುವುದನ್ನು ನೋಡುವ ಜವಾಬ್ದಾರಿ ಕೂಡ ತಮಗಿದೆ. ನೀವು ಮುಗ್ದವಾಗಿ ಹೇಳಿರಬಹುದು. ನಾವು

ಹೇಳಿದ್ದು, ಜಾರಿಯಾಗುತ್ತದೆ ಎಂದು ನೀವು ನಂಬಲಿಕ್ಕೆ ಹೋಗಬಾರದು. ಅದು ನಿಮ್ಮ ವೈಯಕ್ತಿಕ ವಿಚಾರ. ನೀವು ಆಸ್ತಿಕರಿರಬಹುದು, ಅದರ ಬಗ್ಗೆ ನಾನು ಹೇಳುವುದಿಲ್ಲ. ಆದರೆ, ನೀವು ಮಾಡತಕ್ಕಂತಹ ಕೆಲಸವನ್ನು ಕ್ರಿಯಾಶೀಲವಾಗಿ ಮಾಡಿ.

**ಶ್ರೀ ರೇವು ನಾಯಕ್ ಬೆಳಮಗಿ:-** ನಾನು ನಿಮ್ಮಂತಹವರ ಮನೆಯಲ್ಲಿ ದುಡಿದಂತಹ ಮನುಷ್ಯ. ನಾನು ಕೂಲಿ-ನಾಲಿ ಮಾಡಿ ಬಂದಂತಹ ಮನುಷ್ಯ ಭಗವಂತನನ್ನು ನಂಬಿದ್ದೇನೆ, ಕ್ಷೇತ್ರದ ಜನರನ್ನು ನಂಬಿ ಈ ಸ್ಥಾನಕ್ಕೆ ಬಂದಿದ್ದೇನೆ. ದೇವರ ಆಶೀರ್ವಾದದಿಂದ ಬಂದಿರುವ ನಾನು ದೇವರನ್ನು ನಂಬುತ್ತೇನೆ, ಕ್ಷೇತ್ರದ ಜನರನ್ನು ನಾನು ನಂಬುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಂತ್ರಿಗಳೇ, ಜನ ಸೇವೆಯೇ ಜನಾರ್ಧನ ಸೇವೆ ಎನ್ನುತ್ತಾರೆ. ನನ್ನ ದೃಷ್ಟಿಯಲ್ಲಿ ಜನರೆಂದರೆ ಜನಾರ್ಧನ. ಜನರನ್ನೇ ನಾನು ದೇವರೆಂದು ಭಾವಿಸಿದ್ದೇನೆ. ನೀವು ಸಹ ಭಾವಿಸಿ. ಜನರನ್ನು ನಂಬಿದ್ದೇನೆಂದು ತಾವು ಹೇಳಿದ್ದೀರಿ ಸರಿ. ಜನರನ್ನು ದೇವರೆಂದು ಕಾಣಬೇಕು. ನಾವು ಜನ ಪ್ರತಿನಿಧಿಗಳು. ನಾವು ಜನರ ಸೇವಕರು. Wec are all public servants. ಆ ಕಡೆ ಇದ್ದವರು ಸರ್ಕಾರಿ ನೌಕರರು. ನಾವು ಜನರ ನೌಕರರು. ನಾವು ಜನರ ನೌಕರರು We are amenable to the people. Our masters are people. ಪ್ರಜಾಪ್ರಭುತ್ವ ಎಂದರೆ ಪ್ರಜೆಗಳು ಪ್ರಭುಗಳು. ನಾವು ಅವರ ಸೇವಕರು.

**Sri K.B. SHANAPPA:-** Are we the servant of the people? How can it be?

**ಶ್ರೀ ಎಸ್.ಆರ್. ಪಾಟೀಲ್:-** ಈ ದೇಶದ ಪ್ರಧಾನ ಮಂತ್ರಿಯೂ ಸಹ ಜನರು ಸೇವಕರು. What do you menat by public servant? What is the definition of Democracy? ಪ್ರಜಾಪ್ರಭುತ್ವ ಎಂದರೆ ಪ್ರಜೆಗಳು ಪ್ರಭುಗಳು. ಪ್ರಜೆಗಳು ಪ್ರಭುಗಳೆಂದರೆ ನಾವು ಅವರ ಪ್ರತಿನಿಧಿಗಳಾಗಿದ್ದು, ಅವರ ಸೇವಕರು. In my opinion, I will define like this. ಶ್ರೀಯುತ ಕೆ.ಬಿ.

ಶಾಣಪ್ಪನವರು ರಾಜ್ಯಶಾಸ್ತ್ರದಲ್ಲಿ ಮಾಸ್ಟರ್ ಪದವಿಯನ್ನು ಪಡೆದಿರುತ್ತಾರೆ. ನಾನು ಬಿಎಸ್ಸಿ ಪದವೀಧರನಾಗಿದ್ದೇನೆ.

**Sri K.B. SHANAPPA:-** We are the legislators to protect the interest of the people of the State. For that we have been asked to represent them here in the Council.

**Sri S.R. PATIL:-** Are you not a Master?

**Sr K.B. SHANAPPA:-** No. I am not a Master.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, people are Masters. ಇದು ನನ್ನ ವ್ಯಾಖ್ಯಾನ. ಶ್ರೀಯುತ ಶಾಣಪ್ಪನವರು ರಾಜಕೀಯ ಶಾಸ್ತ್ರದಲ್ಲಿ ಮಾಸ್ಟರ್ ಪದವಿಯನ್ನು ಪಡೆದಂತಹವರು. ನಾನು ಬಿಎಸ್ಸಿ ಪದವೀಧರ. ನಂತರ ಕಾನೂನು ಅಧ್ಯಯನ ಮಾಡಿದ್ದೇನೆ. ಆದರೆ, ನಾನು ತಿಳಿದುಕೊಂಡಂತೆ . . . .

**Sri K.B. SHANAPPA:-** You have got a lot of experience.

**Sri S.R. PATIL:-** You are also.

**Sri K.B. SHANAPPA:-** Because, you are legal prudent. More ever you have got a lot of things here to speak and ask …

**ಶ್ರೀ ಎಸ್.ಆರ್. ಪಾಟೀಲ್:-** ನೀವು ಮೇಲೆ ಹೋಗಿ ಬಂದಿದ್ದೀರಿ. ಅಂದರೆ, ದೆಹಲಿಗೆ ಹೋಗಿ ಬಂದಿದ್ದೀರಿ. ಆದರೆ, ನಾನು ಕೆಳಮನೆಗೆ ಸಹಿತ ಹೋಗಿಲ್ಲ.

**ಶ್ರೀ ಕೆ.ಬಿ. ಶಾಣಪ್ಪ:-** ನನಗೆ ತಿಳಿದಿದ್ದನ್ನು ಹೇಳಿದೆ. I don't know how you take that.

**ಶ್ರೀ ಎಸ್.ಕೆ. ಬೆಳ್ಳುಬ್ಬಿ:-** ಮಾನ್ಯ ಸಭಾಪತಿಯವರೆ, ಆಳುಗಳ ಮೂಲಕ ಒಕ್ಕಲುತನವನ್ನು ಮಾಡಿದಂತಹವರು, ಒಬ್ಬರು ಸ್ವತಃ

ಒಕ್ಕಲುತನವನ್ನು ಮಾಡಿದಂತಹವರು. ಅದೇ ರೀತಿಯಲ್ಲಿ ನಮ್ಮ ಪಶುಸಂಗೋಪನಾ ಸಚಿವರು ಮತ್ತು ನಾವು ಸ್ವತಃ ಒಕ್ಕಲುತನವನ್ನು ಮಾಡಿದಂತಹವರು. ಏಕೆಂದರೆ, 4–5 ಎಕರೆ ಜಮೀನು ಇಟ್ಟುಕೊಂಡು ನಾವು ಬೆಳೆಯನ್ನು ಬೆಳೆದಿದ್ದೇವೆ. ಕೆಲವು ಜನರು ರೈತರು ಎಂದು ಹೇಳಿಕೊಂಡು ಆಳುಗಳ ಮೂಲಕ ಒಕ್ಕಲುತನವನ್ನು ಮಾಡುವವರು ಇರುತ್ತಾರೆ. ಅದಕ್ಕೆ ಅವರು ಮುಗ್ದರಲ್ಲ, ಅವರು ಸ್ವತಃ ರೈತರು ಎಂದು ಹೇಳಲಿಕ್ಕೆ ಬಯಸುತ್ತೇನೆ. ಅವರು ಸ್ವತಃ ಬಿತ್ತುವಂತಹ ಕೆಲಸವನ್ನು ಮಾಡಿ ಎಂದರೆ ಅವರು ಮಾಡುತ್ತಾರೆ. ಎಲ್ಲಾ ಕೆಲಸವನ್ನು ಮಾಡುತ್ತಾರೆ. ಆ ಒಂದು ಅನುಭವ ಅವರಿಗೆ ಎಂದು ಹೇಳುತ್ತಿದ್ದೇನೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಎಲ್ಲರೂ ಒಕ್ಕಲುತನದಿಂದಲೇ ಬಂದವರಾಗಿದ್ದೇವೆ.

(ಗೊಂದಲ)

**ಶ್ರೀ ಎಸ್.ಕೆ. ಬೆಳ್ಳುಬ್ಬಿ:–** ಸ್ವತಃ ಗಿಡ ತೆಗೆದು, ಬಾವಿ ತೆಗೆದು, ಒಡ್ಡು ಹಾಕಿ, ನೀರನ್ನು ಹಾಯಿಸಿ ಅನುಭವ ಇದ್ದವರು ಎಂದು ಹೇಳಿದ್ದೇನೆ ಅಷ್ಟೆ.

**ಶ್ರೀ ಎಸ್.ಆರ್. ಪಾಟೀಲ್:–** ನಾವೆಲ್ಲರೂ ರೈತರೆ. ಶ್ರೀಯುತ ಬಸವರಾಜ ಹೊರಟ್ಟಿಯವರ ಮನೆಯಲ್ಲಿ 100 ಜಾನುವಾರುಗಳಿವೆ.

(ಗೊಂದಲ)

ಶ್ರೀಯುತ ರೇವು ನಾಯಕ್ ಬೆಳಮಗಿಯವರು ಮುಗ್ದರಿದ್ದಾರೆ. ಅದನ್ನು ನಾನು ಒಪ್ಪಿಸಿಕೊಳ್ಳುತ್ತೇನೆ. ಅವರ ಜೊತೆ ನಾನು ಹೆಚ್ಚು ವಾದ–ವಿವಾದಕ್ಕೆ ಹೋಗುವುದಿಲ್ಲ. ಇಲ್ಲಿ ನಮ್ಮ 'ಗಾರ್ಡನ್ ಸಿಟಿ' ಬೆಂಗಳೂರು ಏನಾಗಿದೆ ಎಂದು ನೋಡಿ. 'ಉದ್ಯಾನನಗರ' ಎಂದು ಪ್ರಸಿದ್ಧಿಯನ್ನು ಪಡದಂತಹ ಬೆಂಗಳೂರು ನಗರ ಇವತ್ತು garbage city ಆಗಿದೆ. ಇಲ್ಲಿ ಕಸದ ವಿಲೇವಾರಿ ಸಹಿತ ಸರಿಯಾಗಿ ಆಗುತ್ತಿಲ್ಲ. ಇಡಿ ಏಷ್ಯಾದಲ್ಲಿ ಬೆಂಗಳೂರು ನಗರ ಎಷ್ಟು ಪ್ರಾಮುಖ್ಯತೆಯನ್ನು ಪಡೆದಿತ್ತು ಎಂದರೆ ಹೆಚ್ಚು ವೇಗವಾಗಿ

ಬೆಳೆಯುತ್ತಿರುವಂತಹ ಸಿಟಿ ಎನ್ನುವಂತಹ ಒಂದು ದೊಡ್ಡದಾದ ಹೆಸರು ಪಡೆದು, 'ಗಾರ್ಡನ್ ಸಿಟಿ' ಎನ್ನಿಸಿಕೊಳ್ಳುವಂತಹ, 'ಕ್ಲೀನ್ ಸಿಟಿ' ಎನಿಸಿಕೊಳ್ಳುವಂತಹ ಬೆಂಗಳೂರು ನಗರ ಇವತ್ತು ಕಸದಲ್ಲಿ ಮುಚ್ಚಿ ಮರೆಯಾಗುತ್ತಿದೆ. ವಿಶ್ವಸಂಸ್ಥೆಯ ಅಂಕಿಸಂಖ್ಯೆಯ ಪ್ರಕಾರ ಭಾರತದ 120 ಕೋಟಿ ಜನಸಂಖ್ಯೆಯಲ್ಲಿ ಶೇಕಡ 77 ರಷ್ಟು ಜನ ಈ ಕಲುಷಿತ ಪಟ್ಟಣದಲ್ಲಿ ಬದುಕುತ್ತಿದ್ದಾರೆ. ಬೆಂಗಳೂರಿನಲ್ಲಿ 100ಕ್ಕೆ 100 ರಷ್ಟು ಜನ ಕಲುಷಿತ ವಾತಾವರಣದಲ್ಲಿ ಇದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಈ ಸರ್ಕಾರ ಅಸಮರ್ಥವಾಗಿದೆ. ಇದು ನನಗೆ ಬಹಳ ನೋವೆಂದು ಅನ್ನಿಸುತ್ತಿದೆ. ಜರ್ಮನಿ ಸರ್ಕಾರ ಈ ಕುರಿತು ಸುಲಭ ತಂತ್ರಜ್ಞಾನವನ್ನು ಕೊಡುವುದಕ್ಕೆ ಸಿದ್ಧವಿದೆ. ತರಬೇತಿಯನ್ನು ಕೊಡುವುದಕ್ಕೆ ಕೂಡ ಸಿದ್ಧವಿದೆ. ಆದರೆ ಸರ್ಕಾರ ಅದನ್ನು ಅರ್ಥ ಮಾಡಿಕೊಂಡು ಈ ತ್ಯಾಜ್ಯ ವಿಲೇವಾರಿಗೆ ಒಂದು ಉತ್ತಮ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ವಿಫಲವಾಗಿದೆ. ಬೆಂಗಳೂರು ಸಿಟಿ ಇಂದು ಗಾರ್ಬೇಜ್ ಸಿಟಿಯಾಗಿ convert ಆಗಿದೆ. ಪ್ರತಿ ವರ್ಷ ಇದಕ್ಕೆ 430 ಕೋಟಿ ಹಣ ಖರ್ಚಾಗುತ್ತದೆ. ಇದಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವಂತಹ ಬಾಂಬೆಯಲ್ಲಾಗಲಿ, ದೆಹಲಿಯಲ್ಲಾಗಲೀ ಇದಕ್ಕೆ ಇಷ್ಟು ಹಣ ಖರ್ಚಾಗುವುದಿಲ್ಲ. ಬಾಂಬೆಯಲ್ಲಿ ದೆಹಲಿಗಿಂತ ಕಡಿಮೆ ಜನಸಂಖ್ಯೆ ಇದ್ದರೂ ಇದಕ್ಕೆ ಹಣ ಖರ್ಚಾಗುತ್ತಿದೆ. 16,800 ಪೌರಕಾರ್ಮಿಕರು ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ 2794 ಆಟೋರಿಕ್ಷಾ, 791 ಟಿಪ್ಪರ್, 196 Compactors, 11,000 ತಳ್ಳುವ ಗಾಡಿಗಳ ಮೂಲಕ ನಗರದ ಕಸವನ್ನು ವಿಲೇವಾರಿ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಇದಕ್ಕಾಗಿ ಪ್ರತಿ ವರ್ಷ ನಗರ ಪಾಲಿಕೆಯಿಂದ 430 ಕೋಟಿ ರೂಪಾಯಿ ಹಣ ಪಡೆಯುತ್ತಿದ್ದಾರೆ. ಆದರೆ ಅಲ್ಲಿ ನಿಜಕ್ಕೂ 4000 ಗುತ್ತಿಗೆ ಆಧಾರದ ಮೇಲೆ ಪೌರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. 500 ಆಟೋರಿಕ್ಷಾಗಳು 150 ಟಿಪ್ಪರ್‌ಗಳು 38 Compactorsಗಳು ಹಾಗೂ 2000 ತಳ್ಳುವ ಗಾಡಿಗಳು ಮಾತ್ರ ಕಾರ್ಯ ನಿರ್ವಹಿಸುತ್ತಿವೆ. ಅಂದರೆ ಈ ಹಣ ಎಲ್ಲಿ ಹೋಗುತ್ತಿದೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕಾಗಿದೆ. ಬೆಂಗಳೂರು ಪ್ರಖ್ಯಾತಿಯನ್ನು

ಪಡೆದಿತ್ತು. ಬೇರೆ ದೇಶದವರು ಮೊದಲು ಬೆಂಗಳೂರಿಗೆ ಬರುತ್ತಿದ್ದರು. ಐ.ಟಿ. ಬಿ.ಟಿ ಗೆ ಪ್ರಖ್ಯಾತಿಯನ್ನು ಪಡೆದಿರುವಂತಹ ಪ್ರಮುಖವಾದ ರಾಜ್ಯದ ರಾಜಧಾನಿಯನ್ನು ಈ ಮಟ್ಟಕ್ಕೆ ತಂದು ಇಟ್ಟಿದ್ದಾರೆ. ಇನ್ನು ಬಿ.ಡಿ.ಎ. ಬಗ್ಗೆ ಹೇಳುವುದಾದರೆ ಇದೋಂದು White Elephant. ಇವರು ಈ 5 ವರ್ಷದ ಅವಧಿಯಲ್ಲಿ ಒಂದೇ ಒಂದು ಬಡಾವಣೆಯನ್ನು ರಚಿಸಿ ಒಂದು ನಿವೇಶನವನ್ನು ಸಹ ನೀಡಿರುವುದಿಲ್ಲ. ಈ ಸಿ.ಎ.ಜಿ. ವರದಿಯನ್ನು ನೋಡಿದರೆ denotification ಮೂಲಕ ಏನು ಮಾಡಿದ್ದಾರೆ ಇದರಿಂದಾಗಿ ಸರ್ಕಾರಕ್ಕೆ 24,075 ಕೋಟಿ ರೂಪಾಯಿ ನಷ್ಟವಾಗಿದೆ. In CAG report it is very clear, denotification ಮೂಲಕ 24,075 ಕೋಟಿ ರೂಪಾಯಿ ನಷ್ಟವಾಗಿದೆ. 56 ಉದ್ಯಾನವನಗಳನ್ನು ಅತಿಕ್ರಮಣ ಮಾಡಿದ್ದಾರೆ. ಇದರ ಜೊತೆಗೆ ಬದಲಿ ಮೂಲೆ ನಿವೇಶನವನ್ನು ಹಂಚುವಲ್ಲಿ ಸಂಪೂರ್ಣವಾಗಿ ನಿಯಮವನ್ನು ಉಲ್ಲಂಘನೆ ಮಾಡಿದ್ದಾರೆ. ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕೆ ಟೆಂಡರ್ ಅನ್ನು ಕರೆದರೆ 10 ಪರ್ಸೆಂಟ್ 20 ಪರ್ಸೆಂಟ್ ಇಲ್ಲವೇ ಶೇಕಡ 30 ಪರ್ಸೆಂಟ್ above ಹಾಕುತ್ತಾರೆ. ಆದರೆ ಇಲ್ಲಿ 106 ಪರ್ಸೆಂಟ್ ಹೆಚ್ಚಿಗೆ ಹಾಕಿದ್ದಾರೆ. ಈ ಭ್ರಷ್ಟಾಚಾರಕ್ಕೆ ಇತಿಮಿತಿ ಇಲ್ಲದಂತಾಗಿದೆ. ಅಷ್ಟು ಪ್ರಖಾಂಡವಾದ ಭ್ರಷ್ಟಾಚಾರ ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿದೆ. ಇದೆಲ್ಲವನ್ನೂ ನೋಡಿದರೆ ನಮಗೆ ನೋವು ಎಂದು ಅನ್ನಿಸುತ್ತದೆ. ಸರ್ಕಾರದ ದಿವ್ಯ ನಿರ್ಲಕ್ಷ್ಯ ಪ್ರಮುಖವಾಗಿ ಕಂಡು ಬರುತ್ತಿದೆ. ಯಾವುದೇ ದೃಷ್ಟಿಯಿಂದಲೂ ಕೂಡ ಹದ್ದುಬಸ್ತಿನಲ್ಲಿ ಇಡುವುದಕ್ಕೆ ಈ ಸರ್ಕಾರ ವಿಫಲವಾಗಿದೆ.

**ಶ್ರೀ ವಿ. ಸೋಮಣ್ಣ:–** ನಾಲ್ಕು ಒಳ್ಳೆಯ ಮಾತುಗಳನ್ನೂ ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ಕೆಲವು ಅಂಶಗಳನ್ನು ಸ್ವಾಗತ ಮಾಡಿದ್ದೇನೆ. ಅಂದರೆ ನಿಮ್ಮ ಕಡೆ ಸ್ವಾಗತ ಮಾಡುವುದನ್ನು ಬಿಟ್ಟಿದ್ದೇನೆ. ಈ ರಾಜ್ಯದಲ್ಲಿ ಇನ್ನೂ ಪ್ರಮುಖ ಪ್ರಖರವಾದ ಬೇಸಿಗೆ ಇನ್ನೂ ಆರಂಭವಾಗಿಲ್ಲ. ಆಗಲೇ load shedding ಶುರುವಾಗಿದೆ. ಇದರಿಂದಾಗಿ ಕೈಗಾರಿಕೆ ತೋಟಗಾರಿಕೆ,

ಕೃಷಿ ಹಾಳಾಗಿದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಈ ವಿದ್ಯುತ್ ಇರದೇ ಇದ್ದುದರಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಬೋರ್‌ವೆಲ್‌ನಿಂದ ನೀರನ್ನು ಮೇಲಕ್ಕೆ ಎತ್ತುವುದಕ್ಕಾಗುತ್ತಿಲ್ಲ. ಇದರಿಂದಾಗಿ ಕುಡಿಯುವ ನೀರಿನ ಸಮಸ್ಯೆ ಬಹಳ ದೊಡ್ಡದಾಗಿದೆ. 175 ಮಿಲಿಯನ್ ಯೂನಿಟ್ಸ್ ವಿದ್ಯುತ್ ನಮ್ಮ ರಾಜ್ಯಕ್ಕೆ ಬೇಕಾಗಿದೆ. ಆದರೆ ಇಲ್ಲಿ ಪೂರೈಕೆ ಆಗುತ್ತಿರುವುದು 150 ಮಿಲಿಯನ್ ವಿದ್ಯುತ್ ಮಾತ್ರ. ಇದರಿಂದಾಗಿ ಇನ್ನೂ 25 ಮಿಲಿಯನ್ ಯೂನಿಟ್ಸ್‌ನಷ್ಟು ಕೊರತೆ ಇದೆ. ಇದು ಇದಕ್ಕೆಲ್ಲಾ ಕಾರಣ. ಈ ಸಂದರ್ಭದಲ್ಲಿ ಹೋದ ಸಲ ಪ್ರಮುಖವಾಗಿ ಜಲ ವಿದ್ಯುತ್ ಕೇಂದ್ರಗಳಿಂದ 40 ಮಿಲಿಯನ್ ಯೂನಿಟ್ಸ್ ಉತ್ಪಾದನೆಯಾಗುತ್ತಿತ್ತು. ಆದರೆ ಈ ಬಾರಿ ನೀರಿನ ಕೊರತೆಯಿಂದಾಗಿ 17 ಮಿಲಿಯನ್ ಯೂನಿಟ್ಸ್ ಉತ್ಪಾದನೆಯಾಗಿದೆ. ಮತ್ತು Transmission loss, Power Theft ದಿಂದಾಗಿ 18 ಮಿಲಿಯನ್ ಯೂನಿಟ್ಸ್ ನಮಗೆ ಹಾನಿಯಾಗಿದೆ.

Government has to plug this Transmission loss and Power Theft. ಇವೆಲ್ಲದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಬೇಕು. ಈ ವಿದ್ಯುತ್ ಬಗ್ಗೆ ನಿಮಗೆ ಹೇಳುವುದಾದರೆ ವಿದ್ಯುತ್ ಖರೀದಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ವಿದ್ಯುತ್ ಉತ್ಪಾದನೆಗೆ 10,000 ಕೋಟಿಗಿಂತ ಹೆಚ್ಚು ಹಣ ವಿನಿಯೋಗ ಮಾಡಲಾಗಿದೆ. ಆದರೆ ವಿದ್ಯುತ್ ಉತ್ಪಾದನೆಗೆ 4,000 ಕೋಟಿ ಚಿಲ್ಲರೆ ಹಣವನ್ನು ಖರ್ಚು ಮಾಡಿದ್ದಾರೆ. ನೀವು ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದೇ ಆದರೆ, ಮುಂದಿನ ದಿನಮಾನಗಳಲ್ಲಿ ನಮ್ಮ ರಾಜ್ಯಕ್ಕೆ ಅನುಕೂಲವಾಗುತ್ತದೆ. ವಿದ್ಯುತ್ ಖರೀದಿಗೆ ಹೆಚ್ಚಿನ ಹಣವನ್ನು ಖರ್ಚು ಮಾಡಿದರೆ ಇದರಿಂದಾಗಿ ಇವತ್ತಿನ ವಿದ್ಯುತ್ ತೊಂದರೆಯನ್ನು ಮಾತ್ರ ನಿವಾರಿಸಬಹುದಾಗಿದೆ. ಇದು ತಮಗೆ ಬಹಳ ಭೀಕರವಾದಂತಹ ಮತ್ತು ತಲೆ ತಿನ್ನುವ ಸಮಸ್ಯೆಯಾಗಿದೆ. ಇನ್ನೂ ಮುಂದೆ ಬಹಳ ಭೀಕರವಾದ, ಭಯಾನಕವಾದ ದಿನಗಳು ಇವೆ. ಜಲಾಶಯದಲ್ಲಿ ನೀರು ಇಲ್ಲ. ಜಲ ವಿದ್ಯುತ್ ಉತ್ಪಾದನೆ ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ. ಬೇರೆ ರಾಜ್ಯದಲ್ಲಿ surplus power ಇರಬಹುದು ಆದರೆ ಅದನ್ನು ಇಲ್ಲಿಗೆ ತರುವುದಕ್ಕೆ ಅಗತ್ಯವಾದ power corridor ಇಲ್ಲ. ಅದರ ಬಗ್ಗೆ ಚಿಂತನೆ ಮಾಡಬೇಕು. ಅದರ ಬದಲಿಗೆ ನಮ್ಮ

ಮೇಲೆಯೇ ಹೇಳುತ್ತಾ ಬಂದಿದ್ದೀರಿ. ನಿಮ್ಮ ಸರ್ಕಾರದ ಅವಧಿ 5 ವರ್ಷ ಮುಗಿಯುತ್ತಾ ಬಂತು. ಇವರುಗಳು ತಮ್ಮ ಭಾಷಣದಲ್ಲಿ ಹೇಳುತ್ತಿದ್ದ ಒಂದು ಅಂಶ ನನಗೆ ನೆನಪಿಗೆ ಬರುತ್ತಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ದಿನದ 24 ತಾಸು 10 ಹೆಚ್.ಪಿ ಮೋಟಾರಿಗೆ ಪುಕ್ಕಟೆ ವಿದ್ಯುತ್ ಅನ್ನು ನೀಡುತ್ತೇವೆಂದು ಹೇಳಿದರು. ಅದಕ್ಕೆ ಸಮಯವಾದರೂ ಬೇಕೋ ಬೇಡವೋ? ನಮ್ಮ ಗ್ರಾಮೀಣ ಭಾಗದಲ್ಲಿ 3 ಫೇಸ್ ವಿದ್ಯುತ್ ಎಲ್ಲಿದೆ? ಇವರು ಹಗಲು 3 ಗಂಟೆ ರಾತ್ರಿ 3 ಗಂಟೆ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ನಮ್ಮ ಗ್ರಾಮೀಣ ಭಾಗದಲ್ಲಿ ಒಂದೆರಡು ಗಂಟೆಗಳ ಕಾಲ ಮಾತ್ರ ವಿದ್ಯುತ್ ಇರುತ್ತದೆ. ಪಂಪ್‌ಸೆಟ್ ಮೋಟಾರಿನಿಂದ ನೀರು ಹೊರಕ್ಕೆ ಬರಲು ಶುರುವಾಗುತ್ತಿದ್ದ ಹಾಗೆ ಕರೆಂಟ್ ಹೋಗಿ ಟ್ರಿಪ್ ಆಗುತ್ತದೆ. ನಂತರ ಮತ್ತೆ ಕರೆಂಟ್ ಬಂದ ತಕ್ಷಣ ಸ್ವಿಚ್ ಅನ್ನು ಹಾಕಿ ಚಾಲು ಮಾಡಿದರೆ ಆ ನೀರು ಏನು ಇದೆ ಅದು ಮಡಿ ಮುಟ್ಟುವುದೇ ಇಲ್ಲ. 3 ಫೇಸ್ ವಿದ್ಯುತ್ ಅನ್ನು 6 ಗಂಟೆಗಳ ಕಾಲ ಕೊಡುತ್ತೇವೆಂದು ಏನು ಹೇಳಿದ್ದಿರಿ ಅದು ನಿಮಗೆ ನಿಗಾ ಇದೆಯೋ ಇಲ್ಲವೋ ಹೇಳಿ. ನಾನು ಒಬ್ಬ ರೈತನಾಗಿ ನೀರು ಹಾಯಿಸುವುದನ್ನು ಸಮೀಪದಿಂದ ನೋಡುತ್ತೇನೆ. ಕರೆಂಟ್ ಹೋದಾಗ ಹೋಗುತ್ತದೆ ಬಂದಾಗ ಬರುತ್ತದೆ ಎಂದು ನೋಡಿದ ರೈತರು automatic starter ಅನ್ನು ಹಾಕಿದ್ದಾರೆ. ಇದೆಲ್ಲವನ್ನೂ ಬಿಟ್ಟು ನೀವು ಏನು ಹೇಳಿದ್ದರಿ ಅಷ್ಟಾದರೂ ವಿದ್ಯುತ್ ಕೊಡಿ. Load shedding ಅನ್ನು ಮಾಡಿದ್ದೀರಿ. 6 ಗಂಟೆ 3 ಫೇಸ್ ಕರೆಂಟ್ ಕೊಡಬೇಕಲ್ಲವೇ? ಸಿಂಗಲ್ ಫೇಸ್ 12 ಗಂಟೆಗಳ ಕಾಲ ಕೊಡುತ್ತೇವೆಂದು ಹೇಳಿದ್ದರು. ಆದರೆ ಅದೂ ಇಲ್ಲ. ಗ್ರಾಮೀಣ ಭಾಗದಲ್ಲಿ ಬಹಳ ಭಯಾನಕವಾದ ಪರಿಸ್ಥಿತಿ ಇದೆ. ಈಗ ಇನ್ನೂ ಫೆಬ್ರವರಿ ತಿಂಗಳಿನ ಮಧ್ಯ ಭಾಗದಲ್ಲಿ ನಾವು ಇದ್ದೇವೆ. ಇನ್ನೂ ಮಾರ್ಚ್, ಏಪ್ರಿಲ್, ಮೇ ತಿಂಗಳಿನಲ್ಲಿ ಬಿಸಿಲಿನ ಪ್ರಖರತೆ ಹೆಚ್ಚಾಗುತ್ತದೆ. ಏಪ್ರಿಲ್ – ಮೇ ತಿಂಗಳಿನಲ್ಲಿ 44–45 ಸೆಂಟಿಗ್ರೇಡ್‌ವರೆಗೆ ಉಷ್ಣತೆ ಇರುತ್ತದೆ. ಗುಲ್ಬರ್ಗಾದಲ್ಲಿ ನಮಗಿಂತ ಹೆಚ್ಚಿನ ಬಿಸಿಲು ಇರುತ್ತದೆ. ಮೈ ಮೇಲೆ ಬೊಬ್ಬೆ ಬರುತ್ತದೆ. ಅಂತಹ ಸಮಯದಲ್ಲಿ ವಿದ್ಯುತ್ ಇಲ್ಲವೆಂದರೆ ಪರಿಸ್ಥಿತಿ ಹೇಗೆ ಇರುತ್ತದೆ ವಿಚಾರ

ಮಾಡಿ. Section 11 of the Electricity Act 2003 ರ ಪ್ರಕಾರ ರಾಜ್ಯದಲ್ಲಿ ತೀವ್ರವಾದ ವಿದ್ಯುತ್ ಬರ ಇದ್ದರೆ ರಾಜ್ಯದಲ್ಲಿಯೇ ವಿದ್ಯುತ್ ಅನ್ನು ಸಪ್ಲೈ ಮಾಡಬೇಕೆಂದು ಇದೆ. ಜಿಂದಾಲ್‌ನವರು 400 ಮೆಗಾವ್ಯಾಟ್ ವಿದ್ಯುತ್ ಅನ್ನು ಆಂಧ್ರಕ್ಕೆ ಕೊಡುತ್ತಾರೆ. ಅವರಿಗೆ ಒಂದು ನೋಟೀಸ್ ಕೊಟ್ಟು ಅದನ್ನು ನಿಲ್ಲಿಸಿ. 2002 ರಲ್ಲಿ ಕೇಂದ್ರ ಸರ್ಕಾರದವರು ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆಯಾಗಬೇಕು ಎಂದು ಹೇಳಿದರು.

( 1.30)

ಕೇಂದ್ರದವರು ಹೇಳಿ ಒಂದು ದಶಕವಾಗಿದೆ. ಆದರೆ ಎಲ್ಲಿ ಸ್ವಾವಲಂಬನೆಯಾಗಿದೆ? ಈಗ 2013ನೇ ಇಸವಿಯಲ್ಲಿದ್ದೇವೆ. 10 ವರ್ಷಗಳಾದರೂ ಕೂಡ ನಾವು ವಿದ್ಯುತ್ ಕ್ಷೇತ್ರದಲ್ಲಿ ಸ್ವಾವಲಂಬಿಗಳಾಗಿಲ್ಲ. ಮೊನ್ನೆಯ ದಿವಸ ರಾಜ್ಯಪಾಲರ ಭಾಷಣದಲ್ಲಿ 4,593 ಮೇಗಾವ್ಯಾಟ್ ವಿದ್ಯುತ್‌ಚ್ಛಕ್ತಿಯನ್ನು ಹೆಚ್ಚುವರಿಯಾಗಿ ಸೇರಿಸಿದ್ದೇವೆಂದು ಹೇಳಿದ್ದಾರೆ. ಎಲ್ಲಿ ಸೇರಿಸಲಾಗಿದೆ? ಒಂದು ಮೆಗಾವ್ಯಾಟ್ ವಿದ್ಯುಚ್ಛಕ್ತಿನ್ನು ಕೂಡ ಸೇರಿಸಿಲ್ಲ. ಇವರು ವಿದ್ಯುತ್ ಉತ್ಪಾದನೆಯನ್ನು ಹೆಚ್ಚು ಮಾಡಿಕೊಳ್ಳುತ್ತಾ ಬಂದಿದ್ದರೆ ಇವತ್ತಿನ ದಿವಸ ವಿದ್ಯುತ್ ಪೂರೈಕೆಯಲ್ಲಿ ಇಷ್ಟೊಂದು ತೊಂದರೆಯಾಗುತ್ತಿರಲಿಲ್ಲ. ಇದರ ಬಗ್ಗೆ ಬಿಜೆಪಿ ಸರ್ಕಾರ ಹೊಸದಾಗಿ ಅಧಿಕಾರಕ್ಕೆ ಬಂದಾಗ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ವಿದ್ಯುತ್ ಉತ್ಪಾದನೆಯನ್ನು ಮಾಡಲಿಲ್ಲ. ಈಗ ವಿದ್ಯುತ್ ಸಮಸ್ಯೆ ಬಹಳ ಇದೆ. ದಿನದ 24 ಗಂಟೆಗಳಲ್ಲಿ 24 ಗಂಟೆಗಳ ಕಾಲವೂ ರೈತರ ಪಂಪ್‌ಸೆಟ್‌ಗಳಿಗೆ ಅವ್ಯಾಹತವಾಗಿ ಉಚಿತ ವಿದ್ಯುತ್ ಕೊಡುತ್ತೇವೆಂದು ಹೇಳಿದರು. ಆದರೆ ಈಗ ದಿನದ 24 ಗಂಟೆಗಳ ಕಾಲ ಕರೆಂಟ್ ಇರುವುದಿಲ್ಲ, ಹೀಗಾಗಿ ಬಿಲ್ ಕೂಡ ಬರುವುದಿಲ್ಲ. ಇದು ಬಹಳ ಒಳ್ಳೆಯದು. ಅದನ್ನು ಸರ್ಕಾರದವರು ಚೆನ್ನಾಗಿ ವಿಚಾರ ಮಾಡಿದ್ದಾರೆ. ಕರೆಂಟ್ ಇಲ್ಲದೇ ಇರುವುದರಿಂದ ಕರೆಂಟ್ ಬಿಲ್ ಕೊಡುವ ಹಾಗೆಯೇ ಇಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ನೀವು ನಿಮ್ಮ ಭಾಷಣವನ್ನು 1 ಗಂಟೆ 30 ನಿಮಿಷಕ್ಕೆ ಮುಕ್ತಾಯ ಮಾಡುತ್ತೀರಾ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಬೇಗನೇ ಮುಗಿಸುತ್ತೇನೆ. ನಾನು ಇನ್ನು ಆನೇಕ ವಿಚಾರಗಳ ಬಗ್ಗೆ ಮಾತನಾಡುವಂತಹ ವಿಚಾರ ಇತ್ತು. ಹೆಚ್ಚು ಮಾತನಾಡುವುದಿಲ್ಲ. ಕೊನೆಯದಾಗಿ conclude ಮಾಡಿಬಿಡುತ್ತೇನೆ. ಐದು ವರ್ಷಗಳ ಹಿಂದೆ ಶೇಕಡ 16.20ರಷ್ಟು ರಾಜ್ಯದ ಒಟ್ಟು ಆತಂರಿಕ ಉತ್ಪನ್ನ. ಈ.ಎಸ್.ಡಿ.ಪಿ. ಇದ್ದದ್ದು, ಪ್ರಸಕ್ತ ಹಣಕಾಸಿನ ವರ್ಷದ ಅಂತ್ಯಕ್ಕೆ 13.33 ಇಳಿದಿದೆ. ಇದು ಏನಾಗಿದೆ ಎಂದರೆ, ರಾಜ್ಯದ ಪ್ರತಿ ನಾಲ್ಕು ಜನರಲ್ಲಿ ಒಬ್ಬ ಬಡತನ ರೇಖೆಗಿಂತ ಕೆಳಗಡೆ ಇದ್ದಾನೆ, ಬಹುತರವಾಗಿ ಯಾರೇ ಸರ್ಕಾರವನ್ನು ನಡೆಸುವವರು ಇರಲಿ, ಯಾವುದೇ ಪಕ್ಷದ ಸರ್ಕಾರ ಇರಲಿ ಇದು ನಾಚಿಕೆಯಿಂದ ತಲೆ ತಗ್ಗಿಸುವಂತಹ ವಿಚಾರ ಎಂದು ಹೇಳಬಯಸುತ್ತೇನೆ.

ಕೊನೆಯದಾಗಿ ಪ್ರವಾಸೋದ್ಯಮದ ಬಗ್ಗೆ ಮಾತನಾಡಬಯಸುತ್ತೇನೆ. ಪ್ರವಾಸೋದ್ಯಮ ಕ್ಷೇತ್ರಕ್ಕೆ ಬಜೆಟ್‌ನಲ್ಲಿ 50 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಒದಗಿಸಿರುವುದಾಗಿ ತಿಳಿಸಿದ್ದಾರೆ. ಇವತ್ತು ನಮ್ಮ ರಾಜ್ಯಕ್ಕೆ ದೇಶ ವಿದೇಶಗಳಿಂದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಅದರಲ್ಲಿಯೂ ನಮ್ಮ ಜಿಲ್ಲೆಯಲ್ಲಿರುವಂತಹ ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮ, ಗೋಲಗುಂಬಜ್, ಇಬ್ರಾಹಿಂ ರೋಜಾ ಇಂತಹ ಐತಿಹಾಸಿಕ ಸ್ಥಳಗಳಿಗೆ ಭೇಟಿ ಕೊಡುತ್ತಾರೆ. ನಮ್ಮ ಬಾದಾಮಿ ದೇವಸ್ಥಾನದ ರೀತಿಯಲ್ಲಿಯೇ ಚೆನ್ನೈಗೆ ಬಹಳ ಸಮೀಪದಲ್ಲಿರುವಂತಹ ಮಹಾಬಲಿಪುರಂ ದೇವಸ್ಥಾನಕ್ಕೆ ನಾನು ಮೊನ್ನೆಯ ದಿವಸ ಭೇಟಿ ಕೊಟ್ಟಿದ್ದೆನು. ಅಲ್ಲಿರುವಂತಹ ಮೂಲಭೂತ ಸೌಕರ್ಯಗಳನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಅಲ್ಲಿ 10 ಪಂಚತಾರಾ ಹೋಟೆಲ್‌ಗಳಿವೆ. ಅಲ್ಲಿರುವಂತಹ ಮೂಲಭೂತ ಸೌಕರ್ಯಗಳಲ್ಲಿ 10% ಕೂಡ ನಮ್ಮಲ್ಲಿಲ್ಲ. ಅಲ್ಲಿ ಪ್ರವಾಸೋದ್ಯಮ ಸೌಲಭ್ಯಗಳಾದ ರಸ್ತೆಗಳಾಗಲಿ, ಕುಡಿಯುವ ನೀರಿನ ವ್ಯವಸ್ಥೆಯಾಗಲಿ, ವಿದೇಶಿ ಪ್ರವಾಸಿಗರಿಗೆ ಅನುಕೂಲತೆಗಳನ್ನು

ಕಲ್ಪಿಸುವುದಾಗಲಿ ಬಹಳ ಅದ್ಭುತವಾದಂತಹ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮದ ಸ್ಥಳಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? ನಾನು ಒಂದನ್ನು ಹೇಳುತ್ತೇನೆ. Tourism is a seond Largest industry in the world. Money will come like a flow.

ಪ್ರಪಂಚದ ಆನೇಕ ರಾಷ್ಟ್ರಗಳಲ್ಲಿ ಪ್ರವಾಸೋದ್ಯಮದ ಮೇಲೆಯೇ ಅವಲಂಬಿಸಿ ಅತ್ಯಂತ ಸಮೃದ್ಧವಾದಂತಹ, ಸಂಪದ್ಭರಿತವಾದಂತಹ ರಾಷ್ಟ್ರಗಳಿವೆ. ಪ್ರವಾಸೋದ್ಯಮದಲ್ಲಿ ಮುಂದುವರೆದಿರುವಂತಹ ಸಿಂಗಾಪುರ್‌ನ್ನೇ ತೆಗೆದುಕೊಳ್ಳಿ. ಎಲ್ಲಾ ಕೃತಕವಾಗಿ ಮಾಡಿದ್ದಾರೆ. ಅಲ್ಲಿ ಪ್ರವಾಸೋದ್ಯಮದ ಮೇಲೆಯೇ ಆ ದೇಶ ನಡೆಯುತ್ತಿದೆ. ಆದರೆ ನಮ್ಮ ದೇಶದಲ್ಲಿ ನೈಸರ್ಗಿಕವಾಗಿರುವಂತಹ ಐತಿಹಾಸಿಕ ಸ್ಥಳಗಳಿವೆ. ಬಹಳ ಮಹತ್ವವಾದಂತಹ ಪ್ರಾಚ್ಯ ವಸ್ತುಗಳು ರಾಜ್ಯದ ಉದ್ದಗಲಕ್ಕೂ ಸಿಗುತ್ತದೆ. ಅವುಗಳನ್ನು ಅಭಿವೃದ್ಧಿ ಮಾಡುವಂತಹ ಕೆಲಸವನ್ನು ಮಾಡಿದ್ದೇ ಆದರೆ, ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವ ಮೂಲಕ ರಾಜ್ಯದ ಬೊಕ್ಕಸಕ್ಕೆ ಮಹಾಪೂರದಂತೆ ಹಣ ಬರುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಈ ಸಾಲಿನ ಬಜೆಟ್‌ನಲ್ಲಿ 50 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿರುವುದಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಆ 50 ಕೋಟಿ ರೂಪಾಯಿಗಳು ಒಂದು ಪ್ರವಾಸೋದ್ಯಮ ಸ್ಥಳವನ್ನು ಅಭಿವೃದ್ಧಿ ಪಡಿಸುವುದಕ್ಕೆ ಕೂಡ ಸಾಕಾಗುವುದಿಲ್ಲ. ನಮ್ಮ ರಾಜ್ಯದ ಪ್ರವಾಸೋದ್ಯಮದ ಸ್ಥಳಗಳಲ್ಲಿ ಆನೇಕ ಕಡೆ ಕನಿಷ್ಠ ಮೂಲಭೂತ ಸೌಕರ್ಯವಾಗಿರುವಂತಹ ಶೌಚಾಲಯದ ವ್ಯವಸ್ಥೆ ಕೂಡ ಇಲ್ಲ. ದಯಮಾಡಿ ತಮ್ಮ ಮುಖಾಂತರ ಈ ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರ ಪ್ರವಾಸೋದ್ಯಮದ ಅಭಿವೃದ್ಧಿಗೆ ವಿಶೇಷವಾದಂತಹ ಆಸಕ್ತಿಯನ್ನು ವಹಿಸಿದರೆ, ನಮ್ಮ ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಹಣ ಬರುತ್ತದೆ. ನಮ್ಮ ದೇಶಕ್ಕೆ ದೇಶ ವಿದೇಶಿಗಳಿಂದ ಬಹಳಷ್ಟು ಜನ ಪ್ರವಾಸಿಗರು ಬರುತ್ತಾರೆ. ನಮ್ಮ ದೇಶದ ಇತರ

ಭಾಗಗಳಿಂದಲೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ಪ್ರವಾಸಿಗರು ನಮ್ಮ ರಾಜ್ಯಕ್ಕೆ ಬರುವುದಕ್ಕೆ ಅವಕಾಶ ಇದೆ. ಒಟ್ಟಾರೆ ಪ್ರವಾಸೋದ್ಯಮ ಇಲಾಖೆಯನ್ನೇ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ. ಆದ್ದರಿಂದ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಿರುವಂಥವರಿಗೆ 20 ಕೆ.ಜಿ. ಅಕ್ಕಿಯನ್ನು ಒಂದು ಕೆ.ಜಿ.ಗೆ ಎರಡು ರೂಪಾಯಿಗಳಂತೆ ಕೊಡುತ್ತೇವೆಂದು ಬಡ್ಜೆಟ್‌ನಲ್ಲಿ ಹೇಳಿದ್ದಾರೆ. ಇದನ್ನು ಮಾತ್ರ ನಾನು ಸ್ವಾಗತ ಮಾಡುತ್ತೇನೆ, ಬೇರೆ ಯಾವುದನ್ನೂ ಕೂಡ ಸ್ವಾಗತಿಸುವುದಿಲ್ಲ. ಆದರೆ ಅದೇ ಸಮಯದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ ಸರ್ಕಾರ ಯಾವ ರೀತಿಯಾಗಿರಬೇಕೆಂದರೆ ಹಸಿವಾದಾಗ ಮೀನನ್ನು ಕೊಡುವಂತಹ ಕೆಲಸ ಮಾಡಬಾರದು. ಇವತ್ತು ನನಗೆ ಹಸಿವಾಗಿದೆ ಎಂದು ಮಾನ್ಯ ಸಭಾಪತಿಯವರ ಹತ್ತಿರ ಹೋದ ಕೂಡಲೆ ನನಗೆ ಅವರು ಒಂದು ಮೀನನ್ನು ಕೊಟ್ಟರೆ ಇವತ್ತು ಮಧ್ಯಾಹ್ನದ ಊಟವೇನೋ ಮುಗಿಯುತ್ತದೆ, ಆದರೆ ಮತ್ತೆ ರಾತ್ರಿ ಊಟಕ್ಕೆ ನಾನು ಅವರನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅಂದರೆ ಹೊತ್ತು ಹೊತ್ತಿಗೆ ತುತ್ತಿನ ಚೀಲ ತುಂಬಿಸಿಕೊಳ್ಳಬೇಕಲ್ಲವೇ? ಹಾಗಾಗಿ ಮತ್ತೆ ನಿಮ್ಮ ಹತ್ತಿರ ಬರಬೇಕು. ನಾನು ಹೇಳುವುದೇನೆಂದರೆ ಮೀನನ್ನು ಹಿಡಿಯುವಂತಹ ಕಲೆಯನ್ನು ಕಲಿಸಿಕೊಡಬೇಕು, ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವಂತೆ ಸ್ವಾವಲಂಬಿಯಾಗಿ ಬದುಕುವುದನ್ನು ಕಲಿಸಬೇಕು. ಸ್ವಾವಲಂಬಿಯಾಗಿ ಬದುಕುವುದಕ್ಕೆ ಅವರಿಗೆ ತರಬೇತಿಯನ್ನು ಕೊಡಬೇಕು. ಅದಕ್ಕಾಗಿ ಅವರಿಗೆ ಶಿಕ್ಷಣ ತರಬೇತಿ ಮತ್ತಿತರ ಅವಶ್ಯಕತೆಗಳನ್ನೆಲ್ಲಾ ಕೊಟ್ಟು ಅವರು ತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲುವಂತೆ ಸಶಕ್ತರನ್ನಾಗಿ ಮಾಡಬೇಕೇ ಹೊರತು ಅವರನ್ನು ನಿರ್ವೀರ್ಯರನ್ನಾಗಿ ಮಾಡುವಂತಹ ಕೆಲಸವನ್ನು ಮಾಡಬಾರದು.

ಹಸಿದಾಗ ಒಂದು ಮೀನನ್ನು ಕೊಡುವುದರ ಬದಲು ಅವರಿಗೆ ಮೀನು ಹಿಡಿಯುವುದನ್ನೇ ಕಲಿಸಿಬಿಡಿ. ಮಾನ್ಯ ರೇವು ನಾಯಕ್‌ರವರು ಅವನಿಗೆ ಅದನ್ನು ಕಲಿಸಿಬಿಟ್ಟರೆ ಅವನು ನಮ್ಮನ್ನು ಮರೆತೇ ಬಿಡುತ್ತಾನೆಂದು ಹೇಳಬಹುದು. ಆದರೆ ಅವನಿಗೆ ದುಡಿದು ತಿನ್ನುವುದನ್ನು ಕಲಿಸಿದರೆ ನಿಮಗೆ ಪುಣ್ಯ ಬರುತ್ತದೆ. ಆ ರೀತಿ ದುಡಿದು ತಿನ್ನುವುದನ್ನು ಕಲಿಸುವುದು ಒಂದು ಸರ್ಕಾರ ಮಾಡುವಂತಹ ಕೆಲಸ. ಬಡವರಿಗೆ 2 ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಜನರನ್ನು ಸಶಕ್ತರನ್ನಾಗಿ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಅಂದರೆ ಅವರಿಗೆ ತರಬೇತಿಯನ್ನು ಕೊಡಿ. ಕೌಶಲ್ಯವನ್ನು ಕೊಡಿ. ಆಮೇಲೆ ಅದರ ಮುಖಾಂತರ ಅವರ ತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲುವಂತಹ ಸಾಮರ್ಥ್ಯವನ್ನು ಕೊಡುವಂತಹ ಕೆಲಸವಾಗಬೇಕು. ಬರೀ ಚುನಾವಣೆಯಲ್ಲಿ ಮತವನ್ನು ಪಡೆಯುವುದೇ ಒಂದು ಏಕೈಕ ಉದ್ದೇಶವನ್ನಾಗಿಸಿಕೊಂಡರೆ ಅದು ಸರಿಯಾಗುವುದಿಲ್ಲ. ಎಲ್ಲಾ ಪಕ್ಷದವರು ಒಂದು ಕಡೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ನಾವೆಲ್ಲರೂ ಕುಳಿತು ಇದರ ಬಗ್ಗೆ ಚಿಂತನೆ–ಮಂಥನವನ್ನು ಮಾಡುವಂತಹ ಕಾಲ ಬಂದಿದೆ. ಎಲ್ಲಾ cheap popular scheme ಗಳು. ಈ ಚುನಾವಣೆಯಲ್ಲಿ ಯಾವ್ಯಾವ scheme ಗಳಿಗೆ ಹಣವನ್ನು ಕೊಟ್ಟರೆ ನಮಗೆ ಮತಗಳು ಬರುತ್ತದೆ ಎಂದು ಗೊತ್ತಾಗಿ ಮತಗಳ ಮೇಲೆ ಕಣ್ಣಿಟ್ಟು ಬಜೆಟ್ ಮಂಡಿಸಿದರೆ ತೆರಿಗೆಯನ್ನು ಕಟ್ಟುವಂತಹ ಜನರಿಗೆ ತಾವು ನ್ಯಾಯವನ್ನು ದೊರಕಿಸಿಕೊಟ್ಟಂತಾಗುವುದಿಲ್ಲ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಕೊನೆಯದಾಗಿ ಹೇಳುವುದಾದರೆ, ರಾಜ್ಯದಲ್ಲಿ 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ 5.7 ರಷ್ಟು ಅಭಿವೃದ್ಧಿಯನ್ನು ನಿರೀಕ್ಷೆ ಮಾಡಿದ್ದೆವು. ಆದರೆ ಸಾಧಿಸಿದ್ದು 3.3 ರಷ್ಟು ಮಾತ್ರ. 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ 4.63ರಷ್ಟು ಎಂದು ಅಭಿವೃದ್ಧಿ ಗುರಿಯನ್ನು ನಿಗದಿಪಡಿಸಿಕೊಳ್ಳಲಾಗಿತ್ತು. ಆದರೆ ಕಳೆದ ವರ್ಷ 1.8 ರಷ್ಟು ಗುರಿಯನ್ನು ಮಾತ್ರ ಸಾಧಿಸಲಾಗಿದೆ. ಅಂದರೆ ಇದು ನಿಜವಾಗಿಯೂ ಅತ್ಯಂತ ನಿರಾಶಾದಾಯಕವಾದಂತಹ ಚಿತ್ರ

ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಹೇಳಬಯಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ನಿಮ್ಮ ಭಾಷಣವನ್ನು ಮುಗಿಸುತ್ತೀರಾ? ಏಕೆಂದರೆ ಮುಂದೆ ಶ್ರೀ ಬಸವರಾಜ ಹೊರಟ್ಟಿಯವರು ಮಾತನಾಡುವುದಕ್ಕೆ ಕಾಯುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಒಂದೆರಡು ನಿಮಿಷದಲ್ಲಿ ಮುಗಿಸುತ್ತೇನೆ. 2013–14ನೇ ಸಾಲಿನ ಮುಂಗಡ ಪತ್ರ ಏನಿದೆ, ಇದು ಬಹುತರವಾಗಿ ಉದ್ಯಮಿಗಳು ತಮ್ಮ ವಸ್ತುಗಳನ್ನು ಮಾರಾಟ ಮಾಡಬೇಕಾದರೆ ರೂಪದರ್ಶಿಗಳನ್ನು ತೋರಿಸಿ ಜನರಿಗೆ ಮೋಹ ಮಾಡುವಂತಹ ಕೆಲಸವನ್ನು ಮಾಡುತ್ತಾರೆ, ಆ ರೀತಿಯಾಗಿದೆ. ಅಂದರೆ ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ಚಿಂತನೆ ಆಗಿಲ್ಲ, tax payer's money ಸದ್ಬಳಕೆ ಆಗಿಲ್ಲ. ಇದು ಮುಂಬರುವಂತಹ ವಿಧಾನಸಭಾ ಚುನಾವಣೆಯನ್ನು ಗುರಿಯಾಗಿಟ್ಟುಕೊಂಡು ತಂದಿರುವಂತಹ ಒಂದು ಬಡ್ಜೆಟ್ ಎಂದು ಹೇಳಬೇಕಾಗುತ್ತದೆ. ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರ ಮೇಲೆ ಬಹಳಷ್ಟು ಒತ್ತಡ ಇತ್ತು. ಕಳೆದ ಸಾಲಿನ ಆಯವ್ಯಯವನ್ನು ಮಂಡಿಸುವಂತಹ ಸಂದರ್ಭದಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ಯಡಿಯೂರಪ್ಪನವರು ನಾನು ಆಯವ್ಯಯವನ್ನು ಮಂಡಿಸುತ್ತೇನೆ ಎಂದು ಹೇಳಿದರು. ಇಲ್ಲ, ನಾನೇ ಒಂದು ಲಕ್ಷ ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡಿಸುತ್ತೇನೆ ಎಂದು ಹೇಳಿ ಶ್ರೀಮಾನ್ ಡಿ.ವಿ. ಸದಾನಂದಗೌಡರು ಆ ಮುಂಗಡ ಪತ್ರವನ್ನು ಮಂಡಿಸಿದರು. ಅಂದರೆ ಆ ಆಯವ್ಯಯವನ್ನು ಮಂಡಿಸುವ ಸಂದರ್ಭದಲ್ಲಿ ಅವರ ಪಕ್ಷದಲ್ಲಿನ ಆಂತರಿಕ ಬೇಗುದಿ ಹೆಚ್ಚಾಗಿರುತ್ತದೆ. ಕೊನೆಗೆ ಅದು ಪರಿಷ್ಕೃತ 1 ಲಕ್ಷ 4 ಕೋಟಿ ರೂಪಾಯಿಗಳ ಬಜೆಟ್ ಆಯಿತು. ಈಗಲೂ ಅಂತಹ ಒಂದು ಪರಿಸ್ಥಿತಿಯೇ ಇತ್ತು, ಬಜೆಟ್ ಮಂಡಿಸುವುದಕ್ಕೆ ನಾವು ಬಿಡುವುದಿಲ್ಲ ಎಂದರು, 12 ಜನ ಶಾಸಕರು ರಾಜಿನಾಮೆ ಕೊಟ್ಟರು, ಇಬ್ಬರ ರಾಜಿನಾಮೆ ವಿಚಾರ ಇನ್ನೂ

ಪೆಂಡಿಂಗ್‌ನಲ್ಲಿದೆ. ಮಾನ್ಯ ರೇವುನಾಯಕ್ ಬೆಳಮಗಿಯವರು ಸದನದಲ್ಲಿದ್ದಾರೆ. ಆದರೆ ಅವರ ಬಗ್ಗೆ ಮಾತನಾಡುವುದಕ್ಕೆ ನನಗೆ ಮನಸ್ಸಾಗುತ್ತಿಲ್ಲ. ಹಾಗಾಗಿ ನಾನು ಅವರ ಬಗ್ಗೆ ಮಾತನಾಡುವುದಿಲ್ಲ. ರಾಜ್ಯದಲ್ಲಿ ಅಂತಹ ಒಂದು ಅತಂತ್ರ ಪರಿಸ್ಥಿತಿ ಇತ್ತು. ಹೀಗಾಗಿ ರಾಜ್ಯದ ಜನರೆಲ್ಲಾ ಈ ಸರ್ಕಾರ ಇರುತ್ತದೆಯೋ ಹೋಗುತ್ತದೆಯೋ ಎನ್ನುವಂತಹ ಗೊಂದಲದಲ್ಲಿದ್ದರು. ಆದರೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಈ ಎಲ್ಲ ಆಂತರಿಕ ಗಲಭೆಗಳ ಮಧ್ಯದಲ್ಲಿ ಈ ಸಾಲಿನ ಮುಂಗಡಪತ್ರವನ್ನು ಮಂಡಿಸಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ರೇವುನಾಯಕ್ ಬೆಳಮಗಿಯವರು ಅಗಿಂದಾಗ್ಯೆ ಎಣ್ಣೆ ಹಚ್ಚಿಕೊಳ್ಳುತ್ತಾರೆ, ಹಾಗಾಗಿ ಎಂತಹ ಪರಿಸ್ಥಿತಿಯಲ್ಲಿಯೂ ಅವರು ಜಾರಿಕೊಳ್ಳುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಹೌದು, ಅವರು ಮೈತುಂಬಾ ಎಣ್ಣೆ ಹಚ್ಚಿಕೊಂಡಿರುತ್ತಾರೆ, ಹಾಗಾಗಿ ಎಲ್ಲಿ ಹಿಡಿದರೂ ಜಾರಿಕೊಳ್ಳುತ್ತಾರೆ. ಅವರು ನಮ್ಮ ಪಕ್ಕದಲ್ಲಿ treadmill ಮೇಲೆ ಓಡುವುದಕ್ಕೆ ಪ್ರಾರಂಭಿಸಿದ್ದರು. ನಾವು ಶೂ ಧರಿಸಿ treadmill ಮೇಲೆ ಐದು ಕಿಲೋ ಮೀಟರ್ ಸ್ಪೀಡ್ ಇಟ್ಟು ನಡೆಸಿದರೆ ಇವರು ಬರಿಗಾಲಿನಲ್ಲಿ ನಮಗಿಂತ ಹೆಚ್ಚು ಅಂದರೆ ಸುಮಾರು ಆರೇಳು ಕಿಲೋಮೀಟರ್ ಸ್ಪೀಡ್ ಇಟ್ಟು ನಡೆಸುತ್ತಿದ್ದರು. ಆ ಬಗ್ಗೆ ನಾನು ಅವರನ್ನು ಪ್ರಶ್ನಿಸಿದಂತಹ ಸಂದರ್ಭದಲ್ಲಿ ಅವರು ಹೇಳಿದರು, ನಾವು ಲಂಬಾಣಿ ಜನಾಂಗದವರು, ಅಡವಿ, ಬೆಟ್ಟ–ಗುಡ್ಡಗಳಲ್ಲೆಲ್ಲಾ ಅಡ್ಡಾಡಿರುವುದರಿಂದಾಗಿ ನಮ್ಮ ಕಾಲುಗಳು ಅಷ್ಟು ಗಟ್ಟಿಯಾಗಿವೆ, ಹಾಗಾಗಿ ನಾವು ನಿಮ್ಮ ಹಾಗಲ್ಲ, ಬಹಳ ಗಟ್ಟಿ ಎಂದರು. Really we must appreciate him. He has got that much of good health. ಅವರಿಗೆ ಒಳ್ಳೆಯ ಆರೋಗ್ಯ ಇದೆ.

**ಶ್ರೀ ರೇವುನಾಯಕ್ ಬೆಳಮಗಿ (ಸಮೂಹ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ, ಪಶು ಸಂಗೋಪನೆ):–** ಸನ್ಮಾನ್ಯ ಸಭಾಪತಿಯವರೇ, ಗುಡ್ಡಗಾಡು ಪ್ರದೇಶದಲ್ಲಿ ಹುಟ್ಟಿ ಬೆಳೆದ ನಾನು ನಮ್ಮ

ಹಿರಿಯರ ಮಾರ್ಗದರ್ಶನದಲ್ಲಿ ಸುಮಾರು ಹತ್ತು-ಹದಿನೈದು ವರ್ಷಗಳ ಕಾಲ ರೈತಾಪಿ ಕೆಲಸ ಮಾಡಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ವಿಚಾರದಲ್ಲಿ ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೇನೆ. ಆದರೆ ಇವರ (ಬಿಜೆಪಿಯವರ) ಕೈಯಲ್ಲಿ ಸಿಕ್ಕಿ ನೀವು ಬಹಳ ತಪ್ಪು ಮಾಡಿದಿರಿ ಎಂದಷ್ಟೇ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

**ಶ್ರೀ ರೇವುನಾಯಕ್ ಬೆಳಮಗಿ:-** ಮಾನ್ಯ ಸಭಾಪತಿಯವರೇ, ನನಗೆ ರಾಜಕೀಯದ ಬಗ್ಗೆ ಗೊತ್ತೇ ಇರಲಿಲ್ಲ. ಆದರೆ ನಿಮ್ಮಂತಹವರ ಕೃಪೆ, ಭಗವಂತನ ಕೃಪೆ, ನನ್ನ ಕ್ಷೇತ್ರದ ಜನರ ಕೃಪೆಯಿಂದ ನನಗೆ ಸತತವಾಗಿ ನಾಲ್ಕು ಬಾರಿ ಅವರು ಆಶೀರ್ವಾದ ಮಾಡಿದ್ದಾರೆ ಎಂದರೆ ಅವರ ಋಣ ತೀರಿಸುವುದಕ್ಕೆ ನನಗೆ ಸಾಧ್ಯವಿಲ್ಲವೆನಿಸುತ್ತದೆ. ಆದರೆ ಹಿಂದಿನ ದಿನಮಾನಗಳನ್ನು ಕೂಡ ನಾನು ನೆನಪು ಮಾಡಿಕೊಳ್ಳುತ್ತೇನೆ. ನಾನು ಎಲ್ಲಿದ್ದೆ, ಜನ ನನ್ನನ್ನು ಎಲ್ಲಿಗೆ ತಂದುಬಿಟ್ಟರು, ಅವರ ಋಣ ತೀರಿಸುವುದಕ್ಕಾಗುವುದಿಲ್ಲ ಎನ್ನುವಂತಹ ಮಾತನ್ನು ನಾನು ಹೃದಯ ಬಿಚ್ಚಿ ಹೇಳುತ್ತಿದ್ದೇನೆ. ಆದರೆ ನಮ್ಮ ತಾಯಿ-ತಂದೆಗಳ ಪುಣ್ಯ ದೊಡ್ಡದು.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನೀವು ಬಹಳ ನಿಷ್ಠೆಯಿಂದ ಬಂದಿದ್ದೀರಿ, ಮಾನ್ಯ ಯಡಿಯೂರಪ್ಪನವರನ್ನು ಬಿಟ್ಟು ನಾನಿರುವುದೇ ಇಲ್ಲ ಎಂದು ಏನು ಹೇಳಿದ್ದಿರಿ ಆ ಯಡಿಯೂರಪ್ಪನವರನ್ನು ಬಿಟ್ಟು, ತಾವೀಗ ನಿಷ್ಠೆ ಬದಲು ಮಾಡಿದ್ದೀರಿ ಅಷ್ಟೆ.

**ಶ್ರೀ ರೇವುನಾಯಕ್ ಬೆಳಮಗಿ:-** ಮಾನ್ಯ ಸಭಾಪತಿಯವರೇ, ನಮ್ಮ ನಾಯಕರು ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾಗ ನಾನು ಮಂತ್ರಿಯಾಗಿ ಮೆರೆಯಬಾರದು ಎಂಬ ಕಾರಣಕ್ಕಾಗಿ ಎಲ್ಲರಿಗಿಂತ ಮೊದಲು ರಾಜಿನಾಮೆ ಕೊಟ್ಟವನು ನಾನು. ಅಲ್ಲದೆ ಎಂ.ಎಲ್.ಎ. ಸ್ಥಾನಕ್ಕೆ ಕೂಡ ಮೊದಲು ರಾಜಿನಾಮೆ ಕೊಟ್ಟವನು ನಾನೆ. ನನ್ನ ಕ್ಷೇತ್ರದ ಜನ ಆಶೀರ್ವಾದ ಮಾಡಿದ್ದಾರೆ, ಅವರನ್ನು ಕೇಳಿ ರಾಜಿನಾಮೆ ಕೊಡುತ್ತೇನೆ ಎಂದು ಹೇಳಿದವನು ಕೂಡ ನಾನೆ.

**ಶ್ರೀ ಎಸ್.ಆರ್. ಪಾಟೀಲ್:–** ನಿಮ್ಮ ನಾಯಕರಿಗೆ ನೀವು loyal ಇದ್ದೀರಿ. ಅಂದರೆ ನಿಮ್ಮ ನಾಯಕರ ಬಗ್ಗೆ ನಿಮಗೆ ನಿಷ್ಠೆ ಇದೆ. ಆ ನಿಷ್ಠೆಯನ್ನು ನೀವು ಮುಂದುವರೆಸಿಕೊಂಡು ಹೋಗಿ.

**ಶ್ರೀ ಮುರುಗೇಶ್ ಆರ್. ನಿರಾಣಿ:–** ಈಗ ಆ ವಿಷಯದ ಬಗ್ಗೆ ಏಕೆ ಚರ್ಚೆ ಮಾಡುತ್ತೀರಿ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ನಾನು ಒಂದು ವಿಚಾರವನ್ನು ತಿಳಿಸಬಯಸುತ್ತೇನೆ. 1,17,005 ಕೋಟಿ ರೂಪಾಯಿಗಳ ಮೊತ್ತದ ಆಯವ್ಯಯವನ್ನು ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಅವರ ಪಕ್ಷದ ಆಂತರಿಕ ಬೇಗುದಿಗಳ ಮಧ್ಯದಲ್ಲಿಯೇ ಮಂಡಿಸಿದ್ದಾರೆ. ಇದು ಮುಂದಿನ ಚುನಾವಣೆಗೆ ಮತ ಸೆಳೆಯಲಿಕ್ಕೆ ಅನುಕೂಲಕರವಾದಂತಹ ಅತ್ಯಂತ ಸುಂದರವಾದಂತಹ ಒಂದು ಬಜೆಟ್ ಎಂದು ಹೇಳಬಹುದಾಗಿದೆ. ಇಡೀ ಕರ್ನಾಟಕ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ಎಳ್ಳಷ್ಟೂ ಚಿಂತನೆ ಮಾಡಲಾರದಂತಹ ಒಂದು ಬಜೆಟ್ ಆಗಿದ್ದು, ಕೇವಲ ಮತಗಳನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡು populist schemes ಮುಖಾಂತರ ಮತಗಳನ್ನು ಸೆಳೆಯಲಿಕ್ಕಾಗಿ ಈ ಬಜೆಟ್ ತಯಾರಿಸಿದ್ದು, ಅದರ ಮುಖಾಂತರ ಕರ್ನಾಟಕ ರಾಜ್ಯ ಅಭಿವೃದ್ಧಿ ಪಥದಲ್ಲಿ ಮುನ್ನಡೆಯಲಿಕ್ಕೆ ಅಸಾಧ್ಯವಾದಂತಹ ಬಜೆಟ್ ಎಂದು ಹೇಳಬಹುದು. ಇದು ಒಂದು ರೀತಿಯಲ್ಲಿ ಅಂಗೈಯಲ್ಲಿ ಅರಮನೆ ತೋರಿಸಿದಂತಹ ಒಂದು ಬಜೆಟ್. ಸ್ವರ್ಗವನ್ನೇ ಧರೆಗಿಳಿಸುವಂತಹ ರೀತಿಯಲ್ಲಿ ಅವರೇನು ಆಯವ್ಯಯದಲ್ಲಿ ತಿಳಿಸಿದ್ದಾರೆ ಇದು ಕೇವಲ ತೋರಿಕೆಯ ಬಜೆಟ್ ಆಗಿದೆಯೇ ಹೊರತು ಸ್ವಾಭಾವಿಕವಾದಂತಹ ಬಜೆಟ್ ಅಂತೂ ಅಲ್ಲ. ಆ ದೃಷ್ಟಿಯಿಂದ 2013–14ನೇ ಸಾಲಿನ ಈ ಬಜೆಟ್ ಏನಿದೆ ಇದು ಈ ರಾಜ್ಯದ ಅಭಿವೃದ್ಧಿಗೆ ಪೂರಕವಾದಂತಹ ಬಜೆಟ್ ಅಲ್ಲ ಎನ್ನುವಂತಹ ಮಾತುಗಳನ್ನು ಹೇಳಿ ಕೇವಲ ಚುನಾವಣೆಯನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡು ಮತಗಳನ್ನು ಸೆಳೆಯಲಿಕ್ಕೆ ಇವರು ಬಹಳ ಸುಂದರವಾದ ಈ ಮುಂಗಡಪತ್ರವನ್ನು ಮಂಡಿಸಿದ್ದಾರೆ

ಎನ್ನುವಂತಹ ಮಾತುಗಳನ್ನು ಹೇಳುತ್ತಾ, ನನಗೆ ಈ ಸಾಲಿನ ಆಯವ್ಯಯದ ಬಗ್ಗೆ ಮಾತನಾಡಲು ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ಹೃದಯಪೂರ್ವಕವಾದಂತಹ ಕೃತಜ್ಞತೆ ಮತ್ತು ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೊನೆಯದಾಗಿ 'ಇದು ಸುಂದರವಾದಂತಹ ಬಜೆಟ್' ಎಂಬುದನ್ನು ಒಪ್ಪಿದ್ದಕ್ಕಾಗಿ ನಾವು ಸಹ ಅವರಿಗೆ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ 'ಮತಗಳನ್ನು ಪಡೆಯಲಿಕ್ಕಾಗಿ ಇದು ಸುಂದರವಾದ ಬಜೆಟ್' ಎನ್ನುವಂತಹ ಮಾತುಗಳನ್ನು ನಾನು ಈಗಾಗಲೇ ತಿಳಿಸಿದ್ದೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಹೌದು, ಅದು ಫ್ಯಾಕ್ಟ್.

**ಶ್ರೀ ಮುರುಗೇಶ್ ಆರ್. ನಿರಾಣಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸುಮಾರು ಮೂರು ಗಂಟೆಗಳ ಕಾಲ ಇಷ್ಟೆಲ್ಲಾ ಮಾತನಾಡಿ ಕೊನೆಯ ವಾಕ್ಯದಲ್ಲಿ ತಮ್ಮ ಚರ್ಚೆಯನ್ನೇನು ಮುಕ್ತಾಯಗೊಳಿಸಿದ್ದಾರೆ ಅದು ಬಹಳ ಚೆನ್ನಾಗಿದೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರದ ಈ ಸಾಲಿನ ಬಜೆಟ್ ಏನಿದೆ ಇದು ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬರುವಂತಹ ಬಜೆಟ್ ಅಲ್ಲವೇ ಅಲ್ಲ. ಇವೊತ್ತು ಚುನಾವಣೆ ಘೋಷಣೆಯಾದರೆ ನೀತಿಸಂಹಿತೆ ಜಾರಿಗೆ ಬರುತ್ತದೆ. ಹಾಗಾಗಿ ಇವುಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಕೂಡ ಇವರಿಗೆ ಅವಕಾಶ ಇರುವುದಿಲ್ಲ. ಈ ಆಯವ್ಯಯವನ್ನು ಮಂಡಿಸಿರುವಂತಹ ಈ ಸರ್ಕಾರದವರು ಮತ್ತೆ ಜನಾದೇಶವನ್ನು ಪಡೆದು ಆಡಳಿತ ಪಕ್ಷದ ಸ್ಥಾನಕ್ಕೆ ಬರುವುದಿಲ್ಲ, ವಿರೋಧ

ಪಕ್ಷದ ಸ್ಥಾನಕ್ಕೆ ಬರುತ್ತಾರೆ ಎನ್ನುವಂತಹ ಮಾತನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಎಲ್ಲಿ ಬಂದರೂ ಸಹ ಅವರು ಈ ಮುಂಗಡಪತ್ರವನ್ನಂತೂ ಓದುತ್ತಾರೆ ಅಲ್ಲವೆ?

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಆಯವ್ಯಯದ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ಜಿಲ್ಲೆಗಳ ಸಮಸ್ಯೆಗಳ ಬಗ್ಗೆಯೂ ಅವರು ಪ್ರಸ್ತಾಪ ಮಾಡುತ್ತಾರೆ ಎಂದು ನಾನು ಭಾವಿಸಿದ್ದೆ. ಆದರೆ ಅವರ ಭಾಷಣದಲ್ಲಿ ಸಂಪೂರ್ಣವಾಗಿ ಉತ್ತರ ಕರ್ನಾಟಕದ ಬಗ್ಗೆ ಮಾತ್ರ ಮಾತನಾಡಿದರು. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಬರಗಾಲದಿಂದ ಜನರು ಸಾಯುತ್ತಿದ್ದಾರೆ. ಅದಕ್ಕೋಸ್ಕರ ಅವರು ಬಜೆಟ್ ಮೇಲಿನ ತಮ್ಮ ಚರ್ಚೆಯಲ್ಲಿ ಕೇವಲ ಉತ್ತರ ಕರ್ನಾಟಕ ಭಾಗಕ್ಕಷ್ಟೇ ಸೀಮಿತವಾಗಿ ಮಾತನಾಡಿದ್ದಾರೆಯೋ ಅಥವಾ ದಕ್ಷಿಣ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆಯೋ ಎಂದಷ್ಟೇ ನಾನು ಈ ಸಂದರ್ಭದಲ್ಲಿ ಅವರನ್ನು ಕೇಳಬಯಸುತ್ತೇನೆ.

**ವೈಸ್ ಛೇರ್ಮನ್:–** ವಿರೋಧ ಪಕ್ಷದ ನಾಯಕರು ಈಗಾಗಲೇ ಎತ್ತಿನಹೊಳೆ ಯೋಜನೆಯ ಬಗ್ಗೆ ಮಾತನಾಡಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ನೆನ್ನೆಯ ದಿವಸ ಆಯವ್ಯದ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಸದನದಲ್ಲಿ ಉಪಸ್ಥಿತರಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. 9 ಬಯಲು ಸೀಮೆ ಜಿಲ್ಲೆಗಳಿಗೆ ಅನ್ವಯವಾಗುವಂತೆ ಡಾ॥ ಪರಮಶಿವಯ್ಯನವರ ವರದಿಯನ್ನು ಜಾರಿಗೊಳಿಸಬೇಕು, 190 ಟಿ.ಎಂ.ಸಿ. ನೀರಿನ ಯೋಜನೆಯ ಬಗ್ಗೆ ಅವರ ವರದಿಯಲ್ಲೇನು ಶಿಫಾರಸ್ಸು ಮಾಡಿದ್ದಾರೆ ಅದನ್ನು ಚಾಚೂ ತಪ್ಪದೆ ಸಂಪೂರ್ಣವಾಗಿ ಜಾರಿಗೆ ತಂದು ಬಯಲು ಸೀಮೆಯ 9 ಜಿಲ್ಲೆಗಳಿಗೆ

ವರದಾನವಾಗುವಂತಹ ಕೆಲಸವನ್ನು ಮಾಡಬೇಕೆಂದು ನಾನು ನೆನ್ನೆಯ ದಿವಸವೇ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದನ್ನು ಮತ್ತೆ ಇವೊತ್ತು ಪುನರಾವರ್ತನೆ ಮಾಡುವುದಕ್ಕೆ ಹೋಗಿಲ್ಲ. ಆ ಸಂದರ್ಭದಲ್ಲಿ ಅವರು ಸದನದಲ್ಲಿ ಉಪಸ್ಥಿತರಿರಲಿಲ್ಲವೆಂದು ಕಾಣುತ್ತದೆ. ಅಷ್ಟೇ ಅಲ್ಲದೆ 24 ಟಿ.ಎಂ.ಸಿ. ನೀರಿನ ಎತ್ತಿನಹೊಳೆ ಯೋಜನೆಯ ಬಗ್ಗೆ ತಾವೇನು ಪ್ರಸ್ತಾಪ ಮಾಡಿದ್ದೀರಿ ಇದರಿಂದ ಪೂರ್ತಿಯಾಗುವುದಿಲ್ಲ, 190 ಟಿ.ಎಂ.ಸಿ. ನೀರಿಗೆ ಸಂಬಂಧಿಸಿದಂತೆ ಡಾ॥ ಪರಮಶಿವಯ್ಯನವರ ವರದಿಯ ಮುಖಾಂತರ 9 ಬಯಲುಸೀಮೆ ಜಿಲ್ಲೆಗಳೇನು ಬರದಿಂದ ಪರಿತಪಿಸುವಂತಹ ಜಿಲ್ಲೆಗಳಿವೆ, ಇವೊತ್ತು ಕೃಷ್ಣ ಬೇಸಿನ್ ಯೋಜನೆಯಲ್ಲಾಗಲೀ ಅಥವಾ ಕಾವೇರಿ ಬೇಸಿನ್‌ನಲ್ಲಾಗಲಿ ಅವರಿಗೆ ನೀರಾವರಿ ಸೌಲಭ್ಯ ಸಿಕ್ಕಿಲ್ಲ. ಆ ದೃಷ್ಟಿಯಿಂದ ಅವರಿಗೆ ಉಪಯೋಗವಾಗಲಿ ಎನ್ನುವಂತಹ ಕಾರಣಕ್ಕಾಗಿ ಡಾ॥ ಪರಮಶಿವಯ್ಯನವರು ಸಲ್ಲಿಸಿರುವಂತಹ ವರದಿಯ ಶಿಫಾರಸ್ಸುಗಳನ್ನು ಚಾಚೂ ತಪ್ಪದಂತೆ ಜಾರಿಗೆ ತರಲು ಚಿಂತನೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಪಡಿಸಿದ್ದೇನೆ. ಬಹುಶಃ ಆ ಸಂದರ್ಭದಲ್ಲಿ ಮಾನ್ಯ ನಾರಾಯಣಸ್ವಾಮಿಯವರು ಸದನದಿಂದ ಹೊರಗಡೆ ಹೋಗಿದ್ದರೆಂದು ಕಾಣುತ್ತದೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸುಮಾರು 3 ಗಂಟೆಗಳ ಕಾಲ ಎಲ್ಲಾ ರೀತಿಯಿಂದ ಈ ಸರ್ಕಾರದ ವೈಫಲ್ಯಗಳ ಬಗ್ಗೆ ಮಾತನಾಡಿದ್ದಾರೆ. ಮುಖ್ಯಮಂತ್ರಿಗಳಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ಆಯವ್ಯಯವನ್ನು 2 ಭಾಗಗಳಾಗಿ ಮಾಡಿದ್ದಾರೆ. ಈ ಸರ್ಕಾರಕ್ಕೆ ಅಧಿಕಾರಕ್ಕೆ ಬಂದ ಮೇಲೆ 3 ಜನ ಮುಖ್ಯಮಂತ್ರಿಗಳಾದರು. ಆ ಮೂರು ಜನ ಮುಖ್ಯಮಂತ್ರಿಗಳು ಸಹ ಆಯವ್ಯಯವನ್ನು ಕೃಷಿ ಬಜೆಟ್ ಮತ್ತು ಜನರಲ್ ಬಜೆಟ್ ಈ ರೀತಿಯಾಗಿ ಎರಡೆರಡು ಭಾಗವಾಗಿ ಮಂಡಿಸಿದ್ದಾರೆ. ಕೃಷಿ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ ಎಂದರೆ 3ನೇ ಬಾರಿಗೆ ಮಂಡಿಸಲಾಗುತ್ತಿರುವಂತಹ ಕೃಷಿ ಆಯವ್ಯಯ ಅತ್ಯಂತ ಸಂತೋಷದ ಸಂಗತಿಯಾಗಿದೆ. ಹಲವಾಲು ರಾಜ್ಯಗಳಲ್ಲಿ ಈ ಬಗ್ಗೆ ವಿಶೇಷ ಆಸಕ್ತಿ ವಹಿಸಿವೆ

ಎನ್ನುವಂತಹ ಮಾತುಗಳನ್ನು ಅವರು ತಿಳಿಸಿದ್ದಾರೆ. ದಯಮಾಡಿ ಸರ್ಕಾರ ಯಾರ ಕಣ್ಣಿಗೂ ಮಣ್ಣೆರಚುವಂತಹ ಕೆಲಸವನ್ನು ಮಾಡಬಾರದು. ಹಲವಾರು ರಾಜ್ಯಗಳು ಆಸಕ್ತಿ ವಹಿಸಿವ ಎಂಬ ಬಗ್ಗೆ ತಮಗೆ ಯಾವಾಗ ಮಾಹಿತಿ ಬಂತು, ಅವರು ನಿಮ್ಮ ಕೃಷಿ ಬಜೆಟ್ ಉತ್ತಮವಾಗಿದೆ ಎಂದು ಯಾವಾಗ ಹೇಳಿದರು? ಇದನ್ನು ಅನುಷ್ಠಾನಕ್ಕೆ ತರುವುದಕ್ಕೆ ಆ ರಾಜ್ಯಗಳವರು ಏನಾದರೂ ಪ್ರಯತ್ನಗಳನ್ನು ನಡೆಸಿದ್ದಾರೆಯೇ? ಇದರ ಬಗ್ಗೆ ಸ್ಪಷ್ಟವಾದಂತಹ ಮಾಹಿತಿಯನ್ನು ಸರ್ಕಾರ ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ನೀಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ನಾನು ಕೃಷಿ ಆಯವ್ಯಯದ ವಿಚಾರವಾಗಿ ಹೆಚ್ಚು ಮಾತನಾಡಬಯಸುತ್ತೇನೆ. “ಕೃಷಿ ಕ್ಷೇತ್ರವನ್ನು ಸಮಗ್ರವಾಗಿ ಬಲಪಡಿಸಲು ರೈತರ ಭೂಮಿಗೆ ಅಗತ್ಯವಿರುವಂತಹ ನೀರು ಮತ್ತು ಗೊಬ್ಬರವನ್ನು ಪೂರೈಸಿ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರಕಿಸಿಕೊಡುವ ಸಲುವಾಗಿ ಪೂರಕ ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸಿಕೊಡಲು ನಮ್ಮ ಸರ್ಕಾರ ಬದ್ಧವಾಗಿದೆ” ಎಂದು ಆಯವ್ಯಯದಲ್ಲಿ ತಿಳಿಸಲಾಗಿದೆ. ನಾನು ಉದಾಹರಣೆಗಾಗಿ ಒಂದು ವಿಚಾರವನ್ನು ತಿಳಿಸಬಯಸುತ್ತೇನೆ. ಇವೊತ್ತು ಹೇಳಿದ್ದಾರೆ, ಬರಗಾಲ, ಮಳೆ ಆಯಿತು, ನಾವು ಜೋಳ ಬೆಳೆದಿದ್ದೇವೆ. ಜೋಳದ ಬೆಲೆ ಕ್ವಿಂಟಾಲ್‌ಗೆ 3800 ಇತ್ತು, ಕೃಷಿ ಮಾರುಕಟ್ಟೆ ಸಚಿವರು ಬಿಜಾಪುರ ಜಿಲ್ಲೆಯವರಾಗಿದ್ದು ಅವರು ಈ ವಿಚಾರವನ್ನು ಗಮನಿಸಬೇಕಾಗುತ್ತದೆ. ಈಗ ಜೋಳದ ಬೆಳೆ ಬಂದಿದೆ. ನನ್ನ ಜಮೀನಿನಲ್ಲಿ ಸುಮಾರು 60 ಕ್ವಿಂಟಾಲ್ ಬಿಳಿಜೋಳ ಬೆಳೆದಿದ್ದು ಅದನ್ನು ಮಾರಾಟ ಮಾಡುವುದಕ್ಕಾಗಿ ಬಸವೇಶ್ವರ ಟ್ರೇಡಿಂಗ್ ಕಂಪನಿಯವರ ಜೊತೆಯಲ್ಲಿ ಮಾತನಾಡಿದಂತಹ ಸಂದರ್ಭದಲ್ಲಿ ಅವರು ಹೇಳಿದರು ಕ್ವಿಂಟಾಲ್‌ಗೆ 1200 ರಿಂದ 1500ರಂತೆ ಖರೀದಿಸುವುದಾಗ ತಿಳಿಸಿದರು. ಹಾಗಾದರೆ ಜೋಳವನ್ನು ಮಾರಾಟ ಮಾಡುವುದೇ ಬೇಡ, ದನಗಳಿಗೆ ಮೇವಿನ ರೂಪದಲ್ಲಿ ಬಳಕೆ ಮಾಡಿ ಎಂದು ನಮ್ಮ ಕೆಲಸಗಾರರಿಗೆ ತಿಳಿಸಿದ್ದೇನೆ. ಅಂದರೆ ಬೆಲೆ ಯಾವ ರೀತಿ ಇಳಿಮುಖವಾಗಿದೆ ಎಂಬುದನ್ನು ತಾವು

ದಯಮಾಡಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಸರ್ಕಾರ ಕೃಷಿ ಬಜೆಟ್‌ನ್ನು ಬಹಳ ಸುಂದರವಾದ ಪುಸ್ತಕದ ರೂಪದಲ್ಲಿ ತಂದಿದೆ, ಆದರೆ ಜೋಳದ ಬೆಲೆ ಯಾವ ರೀತಿ ಕುಸಿದಿದೆ ಎಂಬುದನ್ನು ಸರ್ಕಾರದವರು ನೋಟ್ ಮಾಡಿಕೊಂಡು ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಈ ವಿಚಾರದ ಬಗ್ಗೆ ನನಗೆ ಮಾಹಿತಿ ನೀಡಬೇಕಾಗುತ್ತದೆ. ಇವತ್ತಿನ ದಿವಸ ರೈತ ಬೆಳೆದಂತಹ ಬೆಳೆಗಳಿಗೆ ಬೆಲೆ ಎಲ್ಲಿ ಇದೆ ಹೇಳಿ? ಕೃಷಿ ಬಜೆಟ್ ಪುಸ್ತಕದಲ್ಲಿ ಯಾವ ರೀತಿ ಹೇಳಿದ್ದರೆಂರೆ ಬರಗಾಲ ಪರಿಹಾರಕ್ಕೆ ತಾಲ್ಲೂಕು ಮಟ್ಟದಲ್ಲಿ ಸ್ಥಾಪನೆಯಾದ ನಿಯಂತ್ರಣ ಕೊಠಡಿಗಳನ್ನು ಚುರುಕುಗೊಳಿಸಿ, ದೂರು ಸ್ವೀಕೃತಿಯಾದ 24 ಗಂಟೆಯೊಳಗೆ ಸ್ಪಂದಿಸಿ, ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲಾಯಿತು. ಜೊತೆಗೆ, ವಿದ್ಯುತ್ ವ್ಯತ್ಯಯಉಂಟಾದಾಗ ಡೀಸೆಲ್ ಜನರೇಟರ್‌ಗಳನ್ನು ಪೂರೈಸಲಾಯಿತು. ರಾಜ್ಯದ ಒಟ್ಟಾರೆ 3,524 ಸಣ್ಣ ನೀರಾವರಿ ಕೆರೆಗಳ ಪೈಕಿ ಮಳೆ ಕೊರತೆಯಿಂದ 28 ಕೆರೆಗಳು ಮಾತ್ರ ಪೂರ್ತಿ ತುಂಬಿದ್ದು, 844 ಕೆರೆಗಳಲ್ಲಿ ನೀರಿನ ಶೇಖರಣೆ ಕೇವಲ ಶೇ. 30 ರಷ್ಟಾಗಿದ್ದು, 2,249 ಕೆರೆಗಳಲ್ಲಿ ನೀರು ತುಂಬಿರುವುದಿಲ್ಲ ಎಂದು ಹೇಳಲಾಗಿದೆ. ದಯಮಾಡಿ ನೀವು ಎಲ್ಲಿ ಡೀಸಲ್ ಜನರೇಟರ್‌ಗಳನ್ನು ಕೊಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು. ಮಾನ್ಯ ಸಭಾಪತಿಯವರೇ, ಈ ಸರ್ಕಾರಕ್ಕೆ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳ ಸಾಲ ಇದೆ. ನನಗೆ ತಿಳಿದಿರುವಂತಹ ಮಾಹಿತಿ ಪ್ರಕಾರ ಸರ್ಕಾರ ಬಂದಾಗ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾದಾಗ ನಲವತ್ತೆಂಟು ಸಾವಿರ ಕೋಟಿ ರೂಪಾಯಿ ಸಾಲ ಇತ್ತು. ಇದು ಅದು ಹೆಚ್ಚು ಕಡಿಮೆ ಇದ್ದರೆ ಸರಿಪಡಿಸಿ. ಇವತ್ತು ನನಗೆ ತಿಳಿದಿರುವ ಪ್ರಕಾರ ಒಂದು ಲಕ್ಷ ಹದಿನೇಳು ಸಾವಿರ ಕೋಟಿ ಸಾಲ ಮಾಡಿದ್ದಾರೆ ಎಂಬುದನ್ನು ನಾನು ಅಂಕಿ–ಅಂಶಗಳನ್ನು ನೋಡಿದ್ದೇನೆ. ಈಗ ಮತ್ತೊಬ್ಬರು ಮಾಹಿತಿ ಕೊಟ್ಟರು ಒಂದು ಲಕ್ಷ ಇಪ್ಪತ್ತು ಸಾವಿರ ಕೋಟಿ ಸಾಲ ಇದೆ ಎಂದು ಹೇಳಿದ್ದಾರೆ. ಅಂದರೆ ಇವರು ಬಂದು ಸುಮಾರು ಎಪ್ಪತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಜಾಸ್ತಿ ಮಾಡಿದರು. ಈ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ,

ಮಾನ್ಯ ಜಗದೀಶ್ ಶೆಟ್ಟರ್‌ರವರು ನಾಲ್ಕೈದು ಗಂಟೆಗಳ ಕಾಲ ಭಾಷಣ ಮಾಡಿದರು. ಮಾನ್ಯ ಮುರುಗೇಶ್ ನಿರಾಣಿಯವರು ಇದ್ದಾರೆ, ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರದ ತೆರಿಗೆ ಸಂಗ್ರಹದ ಮಟ್ಟಿಗೆ ಹೇಳುವುದಾದರೆ ಬಜೆಟ್ ಪ್ರಸ್ತಾಪಗಳು ಆಶಾದಾಯಕವಾಗಿದೆ ಎಂಬ ಮಾತನ್ನು ಹೇಳುತ್ತೇನೆ. ಆದರೆ, ನಿಮ್ಮ ಡೀಸೆಲ್ ಬೆಲೆ, ಮತ್ತು ಇದಕ್ಕೆ ಮಾರ್ಗೋಪಾಯ ಏನು ಮಾಡಬೇಕು ಎಂಬುದರ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಇಷ್ಟೆಲ್ಲಾ ನಾವು ಮಾಡಿದ್ದೇವೆ, ಇಷ್ಟು ಇನ್‌ವೆಸ್ಟ್ ಮಾಡಿದ್ದೇವೆ ಎಂಬುದನ್ನೆಲ್ಲಾ ಹೇಳಿ ಆಶಾದಾಯಕವಾಗಿದೆ ಎಂದು ಹೇಳಿದ್ದೀರಿ. ನೀವು ಹೇಳುವಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪ್ರ್ಯಾಕ್ಟಿಕಲ್ ಆಗಿ ನೋಡಿದರೆ ಅದು ಎಲ್ಲಿಯವರೆಗೆ ಬಂದಿದೆ ಎಂಬುದರ ಬಗ್ಗೆ ತಿಳಿಸಿಲ್ಲ. ಈಗ ರೈತರ ಮನವೊಲಿಕೆಗೆ ಚುನಾವಣೆಯೇ ಮುಖ್ಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಕೃಷಿ ಕ್ಷೇತ್ರಕ್ಕೆ ಒತ್ತು ಕೊಟ್ಟಂತೆ ಮಾಡಿ just farce ಅಂದರೆ "ದೂರದ ಬೆಟ್ಟ ನುಣ್ಣಗೆ" ಎನ್ನುವಂತೆ ಮಾಡಿದ್ದಾರೆ. ಅಂದರೆ ಮುಂದೆ ಬರುವಂತಹ ರಾಜ್ಯ ವಿಧಾನಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಬಜೆಟ್ ಮಂಡನೆ ಮಾಡಿದ್ದಾರೆಂದು ಯಾರಾದರು ಹೇಳಬಹುದು. ಈ ಸರ್ಕಾರಕ್ಕೆ ರಾಜ್ಯದ ಬಗ್ಗೆಯಾಗಲಿ, ಜನರ ಬಗ್ಗೆಯಾಗಲಿ ಕಾಳಜಿ ಇಲ್ಲ. ಬಿಜೆಪಿ ಸರ್ಕಾರ ಏನು ಮಾಡಿದೆ ಎಂದರೆ, ಸರ್ಕಾರದ ಖರ್ಚಿನಲ್ಲಿ ನಿಮ್ಮ ಪಬ್ಲಿಸಿಟಿ ಮಾಡಿಕೊಂಡಿದ್ದೀರಿ ವಿನಃ ಬೇರೇನು ಮಾಡಿಲ್ಲ. 2013–14ನೇ ಸಾಲಿಗೆ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ 22,130 ಕೋಟಿ ಅನುಧಾನವನ್ನು ಒದಗಿಸಲಾಗಿದೆ ಎಂದು ಹೇಳಿದ್ದೀರಿ. ಇದು ಕಳೆದ ವರ್ಷಕ್ಕಿಂತ 13.5ರಷ್ಟು ಹೆಚ್ಚಾಗಿದೆ. ಆದರೆ ಇದರಲ್ಲಿ ಶೇಕಡ 50ರಷ್ಟು ನೀರಾವರಿಗೆ ಮೀಸಲು ಇಡಲಾಗಿದೆ. ಅಂದರೆ 11,500 ಕೋಟಿ ಹಣವನ್ನು ನೀರಾವರಿಗೆ ಒದಗಿಸಲಾಗಿದೆ. ಇಲ್ಲಿ ಕೃಷಿಗೆ ಸಿಕ್ಕಿರುವುದು ಕೇವಲ 10,181 ಕೋಟಿ ರೂ ಮಾತ್ರ. ಇದು ಗಮನಿಸಬೇಕಾಗಿರುವಂತಹ ಅಂಶ. ನಮ್ಮ ಬಿಜಾಪುರದ ಕಡೆ ಶೆಟ್ಟರ ಲೆಕ್ಕ ಎಂದು ಒಂದು ಮಾತು ಹೇಳುತ್ತಾರೆ. ಶೆಟ್ಟರ ಲೆಕ್ಕ ಏನು ಎಂಬುದು ಗೊತ್ತಿದೆ ಅಲ್ಲವೆ. ಶೆಟ್ಟರ ಲೆಕ್ಕ ಎಂದರೆ ಹಳ್ಳಿಯಲ್ಲಿ ಒಬ್ಬ ರೈತ ಅಂಗಡಿಗೆ ಹೋಗುತ್ತಾರೆ. ಈಗ ಪೀಠದಲ್ಲಿ ಕುಳಿತಿರುವಂಥವರು ಶೆಟ್ಟರು,

ಅವರ ಹಿಂದೆ ಇರುವಂಥವರು ಶೆಟ್ಟರು. ಇಲ್ಲಿ ಏನು ನಡೆದಿದೆ ಎಂದರೆ, ನಮ್ಮ ರಾಜ್ಯದಲ್ಲಿ ಶೆಟ್ಟರ ಮತ್ತು ಭಟ್ಟರ ಸರ್ಕಾರ ನಡೆದಿದೆ ವಿನಃ ಬೇರೆ ಯಾರ ಸರ್ಕಾರವೂ ನಡೆದಿಲ್ಲ. ನೀವೆಲ್ಲಾ ಭಟ್ಟರು, ಇವರೆಲ್ಲಾ ಶೆಟ್ಟರು. ಇವರಿವರ ಸರ್ಕಾರವೇ ನಡೆದಿದೆ ಇಲ್ಲಿ. ಒಬ್ಬರು ತೂಕ ಮಾಡುವವರು ಮತ್ತೊಬ್ಬರು ಲೆಕ್ಕ ಬರೆಯುವವರು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಶೆಟ್ಟರ ಸಾಲ ಶೆಟ್ಟರು ಸತ್ತಾಗಲೇ ಅಂತೆ ತಿಳಿಯುವುದು. ಅಂದರೆ ಶೆಟ್ಟರು ಅಧಿಕಾರದಿಂದ ಕೆಳಗೆ ಇಳಿದ ಮೇಲೆ ಇವರ ಬಣ್ಣ ಬಯಲಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಬೆಳ್ಳುಬ್ಬಿಯವರೇ, ತಾವು ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರಿದ್ದೀರಿ ಇದರಲ್ಲಿ ರೈತರಿಗೆ ನೇರವಾಗಿ ಸಿಕ್ಕಿರುವುದು ಎಷ್ಟೆಂದರೆ 3091 ಕೋಟಿ ರೂ ನಮ್ಮ ರಾಜ್ಯದಲ್ಲಿ ರೈತರಿಗೋಸ್ಕರ ಹಣ ಕೃಷಿ ಬಜೆಟ್‌ನಲ್ಲಿ ಖರ್ಚು ಮಾಡುತ್ತಿರುವುದು ಎಷ್ಟೆಂದರೆ 3091 ಕೋಟಿ ರೂ ಮಾತ್ರ ಖರ್ಚು ಮಾಡುತ್ತಿರುವುದು. ಇನ್ನು ತೋಟಗಾರಿಕೆ 1,310 ಕೋಟಿ ಪಶುಸಂಗೋಪನೆಗೆ 1,118 ಕೋಟಿ. ಮೀನುಗಾರಿಕೆಗೆ 238 ಕೋಟಿ, ಸಹಕಾರ ಸಂಘಗಳಿಗೆ 1,221 ಕೋಟಿ. ಕೃಷಿ ಮಾರುಕಟ್ಟೆಗೆ 1,428 ಕೋಟಿ. ಆಡಳಿತ ಸುಧಾರಣೆಗೆ ಬಜೆಟ್‌ನಲ್ಲಿ ಪ್ರತಿಶತ ಶೇಕಡ 60ರಷ್ಟು ಮೀಸಲು ಇಡಲಾಗಿದೆ. ಇಲ್ಲಿ ಕೃಷಿ ಕ್ಷೇತ್ರವನ್ನು ಕಡೆಗಣಿಸಲಾಗಿದೆ ಎಂದು ಸ್ಪಷ್ಟವಾಗಿ ಮೇಲಿನ ಅಂಕಿ–ಅಂಶಗಳ ಮುಖಾಂತರ ಹೇಳುತ್ತೇನೆ. ನೀವು ಕೇವಲ ಹೇಳಿದರೆ ಆಗುವುದಿಲ್ಲ. ಕಾಗದದಲ್ಲಿ ಮಾತ್ರ ತೋರಿಸಿದ್ದೀರಿ, ಆದರೆ ಪ್ರ್ಯಾಕ್ಟಿಕಲ್ ಆಗಿರಬೇಕು. ರೈತರಿಗೆ 3091 ಕೋಟಿ ರೂ ಕೊಟ್ಟಿದೆ. ರೈತರಿಗೆ ಬೀಜ, ಗೊಬ್ಬರ ಬಿಟ್ಟರೆ ಬೇರೊಂದು ಇಲ್ಲ. ರೈತರಿಗೆ ಮೀನುಗಾರಿಕೆ ಹೇಗೆ ಬರುತ್ತದೆ ಹೇಳಿ ನೋಡೋಣ. ರೈತರ ಉಪ ಕಸುಬುಗಳು ಬೇರೆ. ಆದರೆ ನಮ್ಮ ರಾಜ್ಯದಲ್ಲಿ ಶೇಕಡ 72ರಷ್ಟು ಜನ ರೈತರು ಕೃಷಿಯ ಮೇಲೆ ಅವಲಂಬಿಸಿದ್ದಾರೆ. ಈ 72 ಪರ್ಸೆಂಟ್ ರೈತರಿಗೆ ಏನು ಮಾಡಿದ್ದೀರಿ ಎಂಬುದು ನನ್ನ ಪ್ರಶ್ನೆ. ಈಗ ನಾನು

ರೈತನಿದ್ದೇನೆ. ನನಗೆ ಕೃಷಿ ಬರಲಿಲ್ಲ ಎಂದರೆ ತೋಟಗಾರಿಕೆ ಮಾಡುತ್ತೇನೆ, ನಂತರ ಮೀನುಗಾರಿಕೆ ಮಾಡುತ್ತೇನೆ. ಮಳೆಯೇ ಆಗದಿದ್ದರೆ ಕೆರೆಗೆ ಹೇಗೆ ಮೀನು ಬರುತ್ತದೆ? ನಮ್ಮ ಕಡೆ ಶೆಟ್ಟರ ಲೆಕ್ಕ ಎಂದು ಇದೆ. ಒಬ್ಬ(ರೈತ) ಅಂಗಡಿಗೆ ಬಂದು ಒಂದು ಕೆ.ಜಿ. ಬೆಲ್ಲದ ಬೆಲೆ ಎಷ್ಟು ಎಂದು ಕೇಳುತ್ತಾನೆ. ಆಗ ಅಂಗಡಿಯ ಮಾಲೀಕರಾದ ಶೆಟ್ಟಿ ಹತ್ತು ರೂಪಾಯಿ ಎಂದು ಹೇಳುತ್ತಾನೆ. ಅದಕ್ಕೆ ರೈತ ಎರಡು ಕೆ.ಜಿ. ಬೆಲ್ಲ ಕೊಡಿ ಎಂದು ಕೇಳುತ್ತಾನೆ. ಆಗ ಶೆಟ್ಟರು 20 ರೂಪಾಯಿ ಬರೆಯುವ ಬದಲು 24 ರೂಪಾಯಿ ಲೆಕ್ಕ ಬರೆಯುತ್ತಾನೆ. ಆ ರೀತಿ ಇದಾಗಿದೆ. ಇನ್ನು ಮುಂದಕ್ಕೆ ಇವರು ಇರುವುದಿಲ್ಲ. ಆದರೆ ಮುಂದೆ ಯಾರು ಹಣಕಾಸಿನ ಸಚಿವರಾಗಿ ಬರುತ್ತಾರೋ ಅವರು ಕಲ್ಲು ತೆಗೆದುಕೊಂಡು ತಲೆ ಚಚ್ಚಿಕೊಳ್ಳಬೇಕಾದಂತಹ ಪರಿಸ್ಥಿತಿ ಬರುತ್ತದೆ. ಹಾಗಾಗಿ ಈ ಸರ್ಕಾರಕ್ಕೆ ಚುನಾವಣೆಯೇ ಮುಖ್ಯ ವಿಷಯವಾಗಿತೇ ವಿನಃ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಯಾವ ರೀತಿಯಾಗಿಯೂ ವಿಚಾರ ಮಾಡಿಲ್ಲ. ಅಧಿಕಾರ ಬರುತ್ತದೆ, ಹೋಗುತ್ತದೆ. ಆದರೆ ರಾಜ್ಯದ ಪ್ರತಿಯೊಬ್ಬ ಜನತೆಗೂ ಅನುಕೂಲವಾಗುವಂತಹ ಕೆಲಸ ಮಾಡಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ ಇಲ್ಲಿ ಆ ರೀತಿ ಇಲ್ಲವೇ ಇಲ್ಲ. ನಾನು ಇಡೀ ಸಂಪೂರ್ಣವಾಗಿ ಬಜೆಟ್ ಪುಸ್ತಕವನ್ನು ಓದಿದಾಗ ಎಲ್ಲಿಯೂ ಸಹ ಜನಪರವಾದಂತಹ ಕಾರ್ಯಕ್ರಮಗಳು ಇಲ್ಲ. ಇದು ಒಂದು ರೀತಿಯಲ್ಲಿ "ಕನ್ನಡಿಯೊಳಗಿನ ಗಂಟು" ಇದ್ದಂತೆ ಇದೆ ಎನ್ನುವುದು ನನ್ನ ಭಾವನೆ. ಇನ್ನು ನೀರಾವರಿ ವಿಷಯದ ಬಗ್ಗೆ ಹೇಳಬೇಕೆಂದರೆ, ನಿರಂತರ ವಿದ್ಯುತ್ ಒದಗಿಸುತ್ತೇವೆಂದು ಹೇಳಿದ್ದರು. ಪ್ರಾಮಾಣಿಕವಾಗಿ ಹೇಳಿ ಎಲ್ಲಿ ನಿರಂತರವಾಗಿ ವಿದ್ಯುತ್‌ಚ್ಛಕ್ತಿ ಇದೆ. ನಿನ್ನೆ ದಿವಸ ನಾನೆ ಬೆಸ್ಕಾಂ ಇಂಜಿನೀಯರ್‌ಗೆ ಹತ್ತು ಸಲ ಫೋನ್ ಮಾಡಿದೆ. ಕಳೆದ ಎರಡು ದಿವಸದಿಂದ ವಿದ್ಯುತ್ ಇಲ್ಲ. ದನಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ಕೇಳಿದರೆ ಅಲ್ಲಿ ಕೆಟ್ಟಿದೆ, ಇಲ್ಲಿ ಕೆಟ್ಟಿದೆ ಎಂದು ಹೇಳುತ್ತಲೇ ಬಂದರು. ಇವತ್ತಿನವರೆವಿಗೂ ಸರಿಯಾಗಿ ವಿದ್ಯುತ್ ಕೊಟ್ಟಿಲ್ಲ. ಆದುದರಿಂದ ನಾವು ಏನು ಹೇಳಿದ್ದೇವೆ ಎಂದರೆ ಸ್ಪಷ್ಟವಾಗಿ ಹೇಳಿದ್ದೇವೆ ದಿವಸಕ್ಕೆ ಆರು ತಾಸು ವಿದ್ಯುತ್ ಕೊಡಿ ಎಂದು. ವಿದ್ಯುತ್ ಏನು ನಮ್ಮ ಮನೆಯಲ್ಲಿ ತಯಾರಿಸುವುದಿಲ್ಲ.

ವಿದ್ಯುತ್ ನಮ್ಮ ರಾಜ್ಯದಲ್ಲಿ ತಯಾರಿಸುವುದಿಲ್ಲ ಎಂಬ ವಿಷಯವು ಸಹ ನಮಗೆ ತಿಳಿದಿದೆ. ಆದರೆ ನಿರ್ಧಿಷ್ಟವಾಗಿ ಹೇಳುವುದಿಲ್ಲ. ಅಂದರೆ ಬೆಳಿಗ್ಗೆ 6 ಗಂಟೆಯಿಂದ 10 ಗಂಟೆಯವರೆವಿಗೆ ವಿದ್ಯುತ್ ತೆಗೆಯುತ್ತೇವೆ, ಅಥವಾ ಮಧ್ಯಾಹ್ನ 3 ಗಂಟೆಯಿಂದ 6 ಗಂಟೆಯವರೆಗೆ ತೆಗೆಯುತ್ತೇವೆ ಎಂದು ಸ್ಪಷ್ಟವಾಗಿ ಏನಾದರೂ ಹೇಳಬೇಕಲ್ಲವೆ. ಅದು ಬಿಟ್ಟು ಅವರಿಗೆ ಬೇಕಾದಾಗ ಹಾಕುತ್ತಾರೆ, ಬೇಡವಾದಾಗ ಆಫ್ ಮಾಡುತ್ತಾರೆ. ಇವತ್ತು ದೂರದರ್ಶನದಲ್ಲಿ ತಾವೆಲ್ಲರೂ ನೋಡಿರಬಹುದು. ನಿನ್ನೆ ದಿವಸ ಬೆಳಿಗ್ಗೆ 6 ಗಂಟೆಯಿಂದ ಸಂಜೆ 5 ಗಂಟೆಯವರೆವಿಗೆ ಸತತವಾಗಿ ತೋರಿಸಿದರು. ಎಲ್ಲಾ ರಸ್ತೆಯಲ್ಲಿ ವಿದ್ಯುತ್ ಕಂಬದಲ್ಲಿ ವಿದ್ಯುತ್ ಉರಿಯುತ್ತಿತ್ತು. ಕಾನೂನಿನ ಪ್ರಕಾರ ಸಂಜೆ 5 ಗಂಟೆಗೆ ದೀಪ ಹಾಕಬೇಕು. ನಾನು ಎಷ್ಟು ಸಲ ಹೇಳುತ್ತೇನೆ, ಬಿಸಿಲು ಇದ್ದಾಗಲೂ ಅದೇ ರೀತಿ ಇರುತ್ತದೆ, ಮಳೆ ಇದ್ದಾಗಲೂ ಅದೇ ರೀತಿ ಇರುತ್ತದೆ. ಲೈನ್‌ಮನ್ ಕೇಳಿದರೆ ಸರ್ ನಮಗೆ ಐದೂವರೆ ಗಂಟೆಗೆ ಹಾಕಿ ಎಂದು ಹೇಳುತ್ತಾರೆ ಎಂದು ಹೇಳುತ್ತಾನೆ. ಬೇಕಾದರೆ ನೀವು ಟ್ರೈನ್‌ನಲ್ಲಿ ಬರಬೇಕಾದರೆ ನೋಡಿ ಬೆಳಿಗ್ಗೆ ಎಂಟು ಗಂಟೆಯಾದರೂ ಬೀದಿ ದೀಪಗಳನ್ನು ಆರಿಸಿರುವುದಿಲ್ಲ. ಸಾಮಾಜಿಕ ಕಳಕಳಿ ಇರಬೇಕು. ಇಂತಹ ಒಂದು ಕಠಿಣವಾದಂತಹ ಪರಿಸ್ಥಿತಿಯಲ್ಲಿ ಅವರನ್ನು ಕೂಡ ನಿಮ್ಮ ಅಡ್ಮಿನಿಸ್ಟ್ರೇಷನ್ ಸರಿ ಇಲ್ಲವೆಂದರೆ ಅರ್ಥವೇನು? ನಿನ್ನೆ ದಿವಸ ಕು;ಶೋಭ ಕರಂದ್ಲಾಜೆ ಅವರನ್ನು ಕೇಳಿದೆ, ಏನಮ್ಮ ಬೆಳಿಗ್ಗೆ ಆದರೂ ಇನ್ನು ಬೀದಿ ದೀಪಗಳನ್ನು ಆಫ್ ಮಾಡಿಲ್ಲವಲ್ಲ ಎಂದು. ಅದಕ್ಕೆ ಅವರು ಹೇಳಿದರು, ಏನು ಮಾಡಲಿ ಸಾರ್ ನನಗೂ ಹೇಳಿ ಹೇಳಿ ಸಾಕಾಗಿದೆ ಎಂದು ಹೇಳಿದರು. ಕಾನೂನು ಇದೆ. ಋತುಮಾನಕ್ಕೆ ತಕ್ಕಂತೆ ದೀಪಗಳನ್ನು ಹಾಕಬೇಕು. ಸಂಜೆ ಆರೂವರೆ ಗಂಟೆಗೆ ಹೊತ್ತುಮುಳುಗಿದರೆ ನೀವು ಸಂಜೆ ಐದು ಗಂಟೆಗೆ ಬೀದಿ ದೀಪ ಹಾಕಿದರೆ ಅರ್ಥವಿದೆಯೇ? ಸೀಸ್‌ನ್ ಪ್ರಕಾರ ಬದಲಾವಣೆ ಮಾಡಬೇಕಲ್ಲವೆ? ಬೆಳಿಗ್ಗೆ ಆರೂವರೆಗೆ ಬೆಳಕಾದರೆ ಬೆಳಿಗ್ಗೆ ಆರು ಗಂಟೆಗೆ ದೀಪ ಆರಿಸುವುದು. ಇದರ ಬಗ್ಗೆ ಸಣ್ಣದೊಂದು ವಿಚಾರವನ್ನು ಹೇಳಬಯಸುತ್ತೇನೆ. ಪಾರ್ಲಿಮೆಂಟಿನಲ್ಲಿ ನಾರಾಯಣ್ ಎಂಬ ಒಬ್ಬ ಎಂ.ಪಿ. ಇದ್ದರು. ಸರ್ಕಾರಿ ನೌಕರರು

ಕಾಯಿದೆಯನ್ನು ಯಾವ ರೀತಿ interpret ಮಾಡುತ್ತಾರೆ ಎಂಬುದರ ಬಗ್ಗೆ ಒಂದು ಮಾತು ಹೇಳಿದರು. ಒಂದು ದೇವಸ್ಥಾನ ಇತ್ತು. ಆ ದೇವಸ್ಥಾನಕ್ಕೆ ಕೆಲವು ಜನ ಚಪ್ಪಲಿ ಹಾಕಿಕೊಂಡು ಹೋಗುತ್ತಿದ್ದರು, ಇನ್ನು ಕೆಲವು ಜನ ಬಿಟ್ಟು ಹೋಗುತ್ತಿದ್ದರು. ಕಡೆಗೆ ಬೇಸತ್ತು 'ಪಾದರಕ್ಷೆಗಳನ್ನು ಇಲ್ಲಿಯೇ ಬಿಟ್ಟುಹೋಗಬೇಕು' ಎಂದು ಒಂದು ಬೋರ್ಡ್ ಹಾಕಿದರು.

( 2 ಘಂಟೆ)

ಅದಕ್ಕೂ ಸಹ ಕೆಲವರು care ಮಾಡಲಿಲ್ಲ, ಕೊನೆಗೆ ಅಲ್ಲಿಗೊಬ್ಬ security ನ್ನು ಹಾಕಿದರು, ಆದರೆ ಜನರು ಆತನ ಮಾತನ್ನು ಕೇಳಲಿಲ್ಲ. ಇದರಿಂದ ಗುಡಿ ಕಟ್ಟಿದಂತಹ ಜನರು ಬೇಸತ್ತು ಜಿಲ್ಲಾಧಿಕಾರಿ ಮತ್ತು S.P., ಒಳಗೆ ಹೋಗಿ, ಈ ರೀತಿ ಎಲ್ಲಾ ಆಗಿದೆ, ಒಬ್ಬ ಪೇದೆಯನ್ನು ಕೊಡಿ ಎಂದು ಕೇಳಿಕೊಂಡರು. ಆಗ ಅವರು ಒಬ್ಬ ಪೇದೆಯನ್ನು ನೀಡಿದರು. ಆಗ ಪೊಲೀಸ್ ಬಂದು ಅಲ್ಲಿ ಕುಳಿತುಕೊಂಡ, ಪೊಲೀಸಿನವರ ಕೆಲಸ ಗೊತ್ತಿದೆಯಲ್ಲಾ, ಅತ ಬಡಗಿ ತೆಗೆದುಕೊಂಡು ಬಡಿಯುತ್ತಿದ್ದ ಅವರು ಪಾದರಕ್ಷೆ ಹಾಕಲಿ ಬಿಡಲಿ, ಆತ ಸುಮ್ಮನೆ ಇರುತ್ತಿದ್ದನ್ನು ಕಂಡು ಅವನಿಂದಲೂ ಸಹ ಜನರು ಬೇಸತ್ತು ಹೋದರು. ಕಡೆಗೆ S.P., ಒಬ್ಬ ಮಾಜಿ ಸೈನಿಕರನ್ನು ಕೊಡುತ್ತೇವೆ, ಯಾವುದೇ ಮಂತ್ರಿ ಬಂದರೂ ಸಹ ಆತ ಬಿಡಲ್ಲ ಎಂದು ಹೇಳಿದರು. ಮಾಜಿ ಸೈನಿಕ ಬಂದು ಗುಡಿಯ ಬಳಿ ಕಾನೂನಿನ ಪ್ರಕಾರ ನಡೆಸಿದ, ಯಾರೇ ಬಂದರೂ ಅಲ್ಲಿ ಪಾದ ರಕ್ಷೆಯನ್ನು ಬಿಟ್ಟು ಹೋಗಬೇಕಾಗಿತ್ತು. ಆಗ ಅವನನ್ನು ಹೊಗಳಿ ಸತ್ಕಾರವನ್ನು ಮಾಡಿದರು. ಒಂದು ದಿವಸ ಬೆಳಿಗ್ಗೆ ನಮ್ಮ ಕೆ.ಬಿ. ಶಾಣಪ್ಪನಂತವರು, Communist ಬಿಜೆಪಿ ಎಲ್ಲಾ ಇದ್ದಾರೆ, ಅವರಿಗೆ ದೇವರಲ್ಲಿ ನಂಬಿಕೆ ಇದ್ದಿದ್ದಿಲ್ಲ, ಈಗ ನಂಬಿಕೆ ಇದೆ, ಇವರಂಥ ಒಬ್ಬ ವ್ಯಕ್ತಿ ಬಂದು ಬೆಳಿಗ್ಗೆಯೇ ಸ್ನಾನ ಎಲ್ಲಾ ಮಾಡಿ ಪರಿಶುದ್ಧರಾಗಿ ಪಂಚೆ ಉಟ್ಟುಕೊಂಡು ದೇವಸ್ಥಾನಕ್ಕೆ ಬಂದರು. ಮಾಜಿ ಸೈನಿಕ ಅವರಿಗೆ ಪಾದ ರಕ್ಷೆಯನ್ನು ಇಲ್ಲಿಯೇ ಬಿಡಿ ಎಂದಿದ್ದ ಬೋರ್ಡನ್ನು ತೋರಿಸಿದ., ಅವರು ನಾನು ಪಾದರಕ್ಷೆ ಹಾಕಿಕೊಂಡು ಬಂದೇ ಇಲ್ಲ ಎಂದರು, ನಮ್ಮ ಕಾನೂನಿನ ಪ್ರಕಾರ ಇಲ್ಲಿ

ಪಾದರಕ್ಷೆ ಬಿಡಲೇಬೇಕು, ಮನೆಗೆ ಹೋಗಿ ಪಾದರಕ್ಷೆಯನ್ನು ಹಾಕಿಕೊಂಡು ಬನ್ನಿ ಎಂದು ಹೇಳಿದನು. ಇದೇ ರೀತಿ ನಮ್ಮ ದೇಶದ ಕಾನೂನು., ಬೀದಿ ದೀಪಗಳನ್ನು ಐದೂವರೆ ಗಂಟೆ ಹಾಕಬೇಕೆಂದರೆ ಅದೇ ಸಮಯಕ್ಕೆ ಹಾಕುವುದು. ಅಧಿಕಾರಿಗಳಿಗೆ electricity ಯನ್ನು ಯಾವ ರೀತಿ ಬಳಕೆ ಮಾಡಬೇಕೆನ್ನುವುದರ ಬಗ್ಗೆ ಕಾಳಜಿ ಇರಬೇಕು.

ಈ ಬರಗಾಲದಲ್ಲಿ ಯಾವ ರೀತಿಯಲ್ಲಿ ರೈತರಿಗಾಗಲೀ, ಸಾರ್ವಜನಿಕರಿಗಾಗಲೀ ತೊಂದರೆಯಾಗಿದೆ ಎನ್ನುವುದನ್ನು ಹಳ್ಳಿಯಿಂದ ಬಂದಿರತಕ್ಕ ನೀವುಗಳು ಸಹ ವಿಚರವನ್ನು ಮಾಡಬೇಕಾಗುತ್ತದೆ. ಹಳ್ಳಿಯ ಜನರ ಪರಿಸ್ಥಿತಿಯ ಬಗ್ಗೆ ಇಲ್ಲಿ ಸರ್ಕಾರ ಪ್ರಾಮಾಣಿಕವಾಗಿ ಮಾತನಾಡಬೇಕಾಗುತ್ತದೆ. ಹೆಚ್ಚಿನ ಕರೆಂಟನ್ನು ಕೊಡಿ ಎಂದು ನಾನು ಕೇಳುವುದಿಲ್ಲ. ಇರುವ electricity ಯನ್ನೇ ಸಾಮಾನ್ಯ ಜನರಿಗೆ ಹಳ್ಳಿಯ ಜನರಿಗೆ ಸರಿಯಾಗಿ ನೀಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಈ ಜನರ ಪರಿಸ್ಥಿತಿ ಏನು ಎನ್ನುವುದನ್ನು ದಯಮಾಡಿ ಸಚಿವರು ಅರ್ಥ ಮಾಡಿಕೊಂಡು ಸುಧಾರಣೆಯನ್ನು ಮಾಡಬೇಕು. ಸುಧಾರಣೆಗಳನ್ನು ಸರ್ಕಾರ ಮಾಡುತ್ತದೆ, ಆದರೆ ಅದರ implement ಯಾವ ರೀತಿ ಆಗುತ್ತಿದೆ ಎನ್ನುವುದನ್ನು ಸರ್ಕಾರ ವಿಚಾರ ಮಾಡಬೇಕು. ಇದು ಬಹಳ ಮಹತ್ವದ ವಿಚಾರ ಎನ್ನುವುದನ್ನು ನಾನಿಲ್ಲ ಹೇಳುವುದಕ್ಕೆ ಇಷ್ಟಪಡುತ್ತೇನೆ.

ರೈತರು ಒಂದು ಸಲ ಜೋಳ ಬಿತ್ತಿದ್ದರೆ ಅದನ್ನೇ ಬೆಳೆಯುತ್ತಿರುತ್ತಾರೆ, ಗೋವಿನಜೋಳ ಬಿತ್ತದ್ದರೆ ಅದನ್ನೇ ಬೆಳೆಯುತ್ತಿರುತ್ತಾರೆ. ಇದರ ಬಗ್ಗೆ ಇವತ್ತಿನವರೆಗೆ ಯಾವುದೇ ಕೃಷಿ ತಜ್ಞರು ಅಥವಾ ಕೃಷಿ ಇಲಾಖೆಯಾಗಲಿ ರೈತರಿಗೆ ಮಾರ್ಗದರ್ಶನವನ್ನು ಮಾಡುತ್ತಿಲ್ಲ. ಯಾವ ಬೆಳೆ ಬೆಳೆದರೆ ಸೂಕ್ತ ಎಂದು ಯಾರು ಅವರಿಗೆ ಸಹಾಯ ಮಾಡುವುದಿಲ್ಲ. ಇದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈಗ ಇನ್ನಷ್ಟು ಜವಾಬ್ದಾರಿಯೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣ ಆಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಈಗ ಈ ಸರ್ಕಾರ ಬಂದ ಮೇಲೆ ಪ್ರತ್ಯೇಕವಗಿ ಕೃಷಿ ಬಜೆಟನ್ನು ಮಂಡನೆ ಮಾಡಲಾಗುತ್ತಿದೆ. ಇಲ್ಲಿ ಯಾವುದೇ ಪ್ರತ್ಯೇಕ ಸವಲತ್ತುಗಳಿಲ್ಲ, ಆದರೆ ಎರಡು ಬೇರೆ ಬೇರೆ ಪುಸ್ತಕಗಳಿವೆ. ಹಿಂದಿನ ಸರ್ಕಾರಗಳು ಸಹ ಕೃಷಿಗೆ ಅನುದಾನವನ್ನು ನೀಡುತ್ತಿದ್ದರೂ ಸಹ ಪ್ರತ್ಯೇಕವಾಗಿ ಆಯವ್ಯಯವನ್ನು ಮಂಡನೆ ಮಾಡುತ್ತಿರಲಿಲ್ಲ. ಶೇಕಡ 70–72ರಷ್ಟು ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ. ಈ ಜನರಿಗೆ ಈ ಸರ್ಕಾರ 1 ಲಕ್ಷ 17 ಸಾವಿರ ಕೋಟಿ ರೂಪಾಯಿಗಳ ಬಜೆಟನ್ನು ಮಂಡನೆ ಮಾಡಲಾಗಿದೆ. ಈ ಜನರ ಉದ್ಧಾರಕ್ಕಾಗಿ ಸರ್ಕಾರ 50,000 ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡನೆ ಮಾಡಬೇಕಾಗಿತ್ತು. ಇವತ್ತು ನಾವು ಎಲ್ಲಾದಕ್ಕೂ ರೈತರ ಮೇಲೆ depend ಆಗಿದ್ದೇವೆ. ಇವತ್ತು ದೇಶಕ್ಕೆ ಅನ್ನ ನೀಡುವವನು ರೈತ, ರೈತರು ಬೆಳೆಯಲಿಲ್ಲ ಎಂದರೆ ದೇಶದ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು 2 ರೂಪಾಯಿಯ ಹಾಗೆ ಅಕ್ಕಿಯನ್ನು ಕೊಡುವ ಮಾತನ್ನು ಹೇಳಿದರು. ಯಾವುದೇ ಸರ್ಕಾರ ಆಗಲಿ ಚುನಾವಣೆಯ ದೃಷ್ಟಿಯನ್ನಿಟ್ಟುಕೊಂಡು 2 ರೂಪಾಯಿಯ ಹಾಗೆ ಅಕ್ಕಿಯನ್ನು ಕೊಡುತ್ತೇವೆ, ಇದರಿಂದ ಮುಂದೆ ಏನೇನು ಅನಾಹುತಗಳಾಗುತ್ತವೆ ಎನ್ನುವುದನ್ನು ಸಹ ನೋಡಬೇಕಾಗುತ್ತದೆ. ಹುಬ್ಬಳ್ಳಿ–ಧಾರವಾಡದಲ್ಲಿ ನಾನು ಒಂದು ಸಭೆಯನ್ನು ನಡೆಸಿದ್ದೆನು. 1188 ಜನ ರೈತರು ತಮ್ಮ ರೈತಾಪಿ ಕೆಲಸವನ್ನು ಬಿಟ್ಟು ಪಟ್ಟಣಕ್ಕೆ ಬಂದು ಜೀವನ ನಡೆಸುತ್ತಿದ್ದಾರೆ. ಬಿಜಾಪುರ, ಬಾಗಲಕೋಟೆ, ಹಾವೇರಿ, ಗದಗ ಹೀಗೆ ಹಲವು ಕಡೆಗಳಿಂದ 1188 ಜನ ರೈತ ಕುಟುಂಬಗಳು ತಮ್ಮ ಹೊಲಗಳನ್ನು ಬಿಟ್ಟು ಪಟ್ಟಣಕ್ಕೆ ಬಂದಿದ್ದಾರೆ, ಏಕೆಂದರೆ ಹಳ್ಳಿಗಳಲ್ಲಿ ಹೊಲದಲ್ಲಿ ಕೆಲಸ ಮಾಡಲು ಆಳುಗಳು ಸಿಗುತ್ತಿಲ್ಲ. ಸರ್ಕಾರ popular scheme ಅಡಿಯಲ್ಲಿ ಎರಡು ರೂಪಾಯಿಯ ಹಾಗೆ ಅಕ್ಕಿಯನ್ನು ಕೊಡುತ್ತದೆ, ಮಾರ್ಕೆಟ್‌ನಲ್ಲಿ ಅದರ ಬೆಲೆ 35 ರೂಪಾಯಿ ಇದೆ. ಒಂದು ಕುಟುಂಬದಲ್ಲಿ ಹತ್ತು ಜನರನ್ನು ತೋರಿಸಿ, 1–2 ಕ್ವಿಂಟಾಲ್ ಅಕ್ಕಿಯನ್ನು ಪಡೆದು 25 ಕೆ.ಜಿ ಅಕ್ಕಿಯನ್ನು ತಾವು ಇಟ್ಟುಕೊಂಡು 75 ಕೆ.ಜಿ ಅಕ್ಕಿಯನ್ನು ಮಾರಾಟ ಮಾಡುತ್ತಾರೆ. ಇದಕ್ಕೆ checks and balances ಏನೂ ಇಲ್ಲ.

NREGA Scheme ನಲ್ಲಿ ಕೆಲಸ ಮಾಡುತ್ತಾರೆ. ಇಂತಹವರನ್ನೆಲ್ಲ ಗಟ್ಟಿಯಾದ ಕೆಲಸ ಮಾಡುವುದಕ್ಕೆ ಏಕೆ ಸೇರಿಸಬಾರದು. ಎಲ್ಲಾ ಸಕಾರಗಳು ಸವಲತ್ತುಗಳನ್ನು ಕೊಡುತ್ತವೆ, ಆದರೆ ಅದನ್ನೆಲ್ಲ ಈ ರೀತಿ ಬಳಕೆ ಮಾಡಿದಲ್ಲಿ ಮುಂದೆ ನಮ್ಮ ಪರಿಸ್ಥಿತಿ ಏನಾಗುತ್ತದೆ? ರಾಜ್ಯ bankrupt ಆಗುತ್ತದೆ. ಆದ್ದರಿಂದ ಪಕ್ಷಾತೀತವಾಗಿ ಯಾವುದೇ ಸರ್ಕಾರ ಆಗಲಿ popular scheme ನ್ನು ನಮ್ಮ ಮತಕ್ಕಾಗಿ ಬಳಸಿಕೊಳ್ಳಬಾರದು. ಇವತ್ತು ಹಳ್ಳಿಗಳಲ್ಲಿ ಕೆಲಸ ಮಾಡಲು ನಮಗೇ ಆಳುಗಳೇ ಸಿಗುತ್ತಿಲ್ಲ. ನಮ್ಮ ಬೆಳ್ಳುಬ್ಬಿಯವರು ನಾವು ರೈತಾಪಿಯನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಅವರು ಮಾಡಬಹುದು, ನಮ್ಮಂಥವರು ಏನು ಮಾಡಬೇಕು? ಹೊಲದಲ್ಲಿ ಒಬ್ಬರೇ ಕೆಲಸವನ್ನು ಮಾಡಲು ಸಾಧ್ಯವೇ? ಹಳ್ಳಿಗಳಲ್ಲಿ ಜನರು ಕೆಲಸಕ್ಕೆ ಬರಬೇಕಲ್ಲವೇ; ಆಳುಗಳು ಬರದೇ 50 ಎಕರೆ ಜಮೀನಿನಲ್ಲಿ ಒಬ್ಬರಿಂದ ಕೆಲಸ ಮಾಡಲು ಸಾಧ್ಯವೇ? ನನ್ನ ಬಳಿ 125 ದನಗಳು ಇದ್ದಾವೆ, ನನ್ನೊಬ್ಬನಿಂದ 125 ದನಗಳ ಸಗಣಿಯನ್ನು ಬಳಿಯಲು ಆಗುವುದೇ? ರೈತರಿಗಗಿ ಏನನ್ನು ಮಾಡಲಾಗಿದೆ ಎನ್ನುವುದನ್ನು ಸರ್ಕಾರ ದಯಮಾಡಿ ಮತ್ತೊಂದು ಸಲ ಯೋಚನೆಯನ್ನು ಮಾಡಬೇಕು. ಇಲ್ಲಿ ಖಾಸಗಿ ಅಥವಾ ಪಕ್ಷದ ಮಾತು ಬೇಡ. ಶೇಕಡ 72ರಷ್ಟಿರುವ ರೈತರ ಬಗ್ಗೆ ಮಾತನಾಡೋಣ, ಅವರು ಗಂಭೀರ ಪರಿಸ್ಥಿತಿಯಲ್ಲಿದ್ದು, ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಇದು ಏಕಾಗುತ್ತಿದೆ ಎನ್ನುವುದರ ಬಗ್ಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರೆಲ್ಲರೂ, ಜವಾಬ್ದಾರಿಯುತವಾದ ಈ ಸ್ಥಾನದಲ್ಲಿರುವವರು ಪ್ರಶ್ನೆಯನ್ನು ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣ ಆಗಿದೆ.

ಈ ಬಾರಿ ಬಜೆಟ್‌ನ ಗಾತ್ರವನ್ನು ಶೇಕಡ 20ರಷ್ಟು ಹೆಚ್ಚಿಸಲಾಗಿದೆ. ಬಜೆಟ್‌ನ ಗಾತ್ರವನ್ನು ಹೆಚ್ಚಿಗೆ ಮಾಡುವುದರಿಂದ ಯವ ರೀತಿಯ ಸಾಧನೆಯನ್ನು ಮಾಡಿದಂತಾಗಿದೆ? ಕಳೆದ ಎರಡು ವರ್ಷಗಳಲ್ಲಿ ಮಂಡಿಸಿರುವ ಕೃಷಿ ಬಜೆಟ್‌ನಲ್ಲಿ ಯಾವುದೇ ಸ್ಪಷ್ಟ ನಿರೂಪಣೆ ಇಲ್ಲ. ಯಡಿಯೂರಪ್ಪನವರು ಮಂಡಿಸಿದ ಬಜೆಟ್‌ನಲ್ಲಿ ಎಷ್ಟು ಕಾರ್ಯರೂಪಕ್ಕೆ ಬಂದಿದೆ? ಸದಾನಂದಗೌಡ ಮಂಡಿಸಿದ ಆಯವ್ಯಯದಲ್ಲಿ ಎಷ್ಟು ಕಾರ್ಯಕ್ರಮಗಳು

ಕಾರ್ಯರೂಪಗೊಂಡಿವೆ? ಎನ್ನುವುದನ್ನು ಸರ್ಕಾರ ಹೇಳಬೇಕು. ಹಿಂದಿನ ಆಯವ್ಯಯದಲ್ಲಿ ಎಷ್ಟು ಕಾರ್ಯಕ್ರಮಗಳು ಜಾರಿಗೊಂಡಿವೆ, ಅದಕ್ಕಾಗಿ ಎಷ್ಟು ಹಣ ಖರ್ಚಾಗಿದೆ, ಅದರ ಸಾಧನೆಗಳೇನು ಎನ್ನುವುದನ್ನು ಹೇಳಬೇಕಾಗುತ್ತದೆ. ಒಂದು ಎರಡು ಲಕ್ಷ ರೂಪಾಯಿಗಳ ಬಜೆಟ್ ಮಂಡನೆಯನ್ನು ಸರ್ಕಾರ ಮಾಡಿದೆ, ಆದರೆ ಅದರ ಪ್ರಗತಿ ಜನರಿಗೆ ಎಲ್ಲಿ ಮುಟ್ಟಿದೆ? ಇದು ಬಹಳ ಮಹತ್ವವಾದುದು ಎನ್ನುವುದನ್ನು ನಾನು ಹೇಳಲಿಚ್ಛಿಸುತ್ತೇನೆ.

ಈಗ ಎಲ್ಲಾ ಬೆಲೆಗಳು ನಿರಂತರವಾಗಿ ಏರುತ್ತಿದೆ. ಒಂದು ಮಾತನ್ನು ಬಹಳ ನೋವಿನಿಂದ ಹೇಳುತ್ತೇನೆ. ಇವತು ಅಕ್ಕಿಯ ಬೆಲೆ 35–40 ರೂಪಾಯಿಗಳಾಗಿದೆ. ಜನಸಾಮಾನ್ಯರು ಸಣ್ಣ ಸಣ್ಣ ನೌಕರಿಯನ್ನು ಮಾಡುವವರ ಪರಿಸ್ಥಿತಿ ಏನಾಗಿದೆ? ನಿನ್ನೆಯ ದಿವಸ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಸಚಿವರು, ಆಂಧ್ರಪ್ರದೇಶದಲ್ಲಿ ಅಕ್ಕಿಯ ಬೆಲೆ ಹೆಚ್ಚಾಗಿದೆ. ನಮಗೆ ಗಾಡಿಗಳು, ಟ್ರಕ್‌ಗಳು ಸಿಗುವುದಿಲ್ಲ ಆದ್ದರಿಂದ ಮಾರುವುದಕ್ಕೆ ಸಾಧ್ಯವಾಗುತ್ತಿಲ್ಲ, ರೇಟು ಅಲ್ಲಿ ಹೆಚ್ಚಾದಲ್ಲಿ ಕಳುಹಿಸುತ್ತೇವೆ ಎನ್ನುವ ಮಾತನ್ನು ಹೇಳಿದರು. ಇದರಲ್ಲಿ ಜವಾಬ್ದಾರಿಯಿದೆ, ಒಂದು ಕಾಯಿದೆಯನ್ನು ತಂದು ಅಕ್ಕಿ ಕೊಡುವುದನ್ನು ನಿರ್ಬಂಧ ಮಾಡಬೇಕು. ಇವತ್ತು ನಮ್ಮ ರಾಜ್ಯದಲ್ಲಿ 224 ಗೋಶಾಲೆಗಳನ್ನು ತೆರೆಯಲಾಗಿದೆ. ನಾನು ಎಲ್ಲಾ ಬಾರ್ಡರ್‌ಗಳನ್ನು ಸಹ ಗಮನಿಸಿದ್ದೇವೆ, ಬೆಳಗಾವಿ, ಬಿಜಾಪುರ ಬಾರ್ಡರ್‌ನಿಂದ ಸುಮಾರು 8 ರಿಂದ 10 ಟ್ರಕ್‌ಗಳು ಮೇವನ್ನು ಸಾಗಾಣಿಕೆ ಮಾಡುತ್ತವೆ. ಈ ವಿಷಯವನ್ನು ಬೆಳಗಾವಿ ಜಿಲ್ಲೆಯ ಉಸ್ತುವಾರಿ ಸಚಿವರಾದ ಉಮೇಶ್ ಕತ್ತಿಯವರಿಗೂ ಸಹ ಈ ವಿಚಾರವನ್ನು ಹೇಳಿದ್ದೇನೆ. ಮುಖ್ಯಮಂತ್ರಿಗಳಿಗೂ ಈ ವಿಚಾರವನ್ನು ಹೇಳಿದ್ದೇನೆ. ಸದನದಲ್ಲಿ ಎರಡೂ ಬಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ರೈತರು ಬೆಳೆಯತಕ್ಕ ಪಪಾಯ ಹಣ್ಣನ್ನು ಮಹಾರಾಷ್ಟ್ರಕ್ಕೆ ಕಳುಹಿಸಲಾಗುತ್ತಿದೆ, ಇಲ್ಲಿ ನಮಗೆ ಮೇವು ಏನೂ ಸಿಗುವುದಿಲ್ಲ, ಎಲ್ಲಿ ನಿರ್ಬಂಧ ಮಾಡಲಾಗಿದೆ, ನಾವು ಗಲಾಟೆ ಮಾಡಿದಾಗ ಒಂದಿಬ್ಬರನ್ನು ಹಿಡಿದು ಕೇಸು ಹಾಕುತ್ತರೆ, ಮತ್ತೇ ಬಿಡುತ್ತಾರೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನಲ್ಲಿ ಯಾದವಾಡ ಎನ್ನುವ ಊರು ಇದೆ. ಅಲ್ಲಿ

ಕಟ್ಟಿಗೆ ಕಟ್ ಮಾಡುವ 22 ಮೆಷಿನ್ ಇದ್ದಾವೆ. ಅದಕ್ಕೆ ಕುಟ್ಟಿ ಕಟ್ ಮಾಡುವುದು ಎಂದು ಹೇಳುತ್ತಾರೆ. ಮೇವನ್ನು ಸಣ್ಣ ಸಣ್ಣದಾಗಿ ಕಟ್ ಮಾಡಿ ಅದನ್ನು ಮಾರುತ್ತಾರೆ. ಇದು ಒಂದು ದೊಡ್ಡ ದಂಧೆ ಇವತ್ತಿನವರೆಗೆ ಅದನ್ನು ನಿಲ್ಲಿಸತಕ್ಕ ಕೆಲಸವನ್ನು ಸರ್ಕಾರ ಮಾಡಲಿಲ್ಲ. ಬಿಜಾಪುರ, ಬೀದರ್ ನಿಂದ ಈ ಮೇವು ಮಹಾರಾಷ್ಟ್ರಕ್ಕೆ ಹೋಗುತ್ತದೆ. ಹೀಗಾದರೆ ನಮ್ಮ ರೈತರ ಏನು ಮಾಡಬೇಕು? ನಮ್ಮ ದನಕರುಗಳಿಗೆ ಏನನ್ನು ನೀಡಬೇಕು?

**ಶ್ರೀ ಉಮೇಶ್ ಕತ್ತಿ (ಕೃಷಿ ಸಚಿವರು):–** ಮಾನ್ಯ ಸಭಾಪತಿಗಳೇ, ಈ ವಿಚಾರ ನಮ್ಮ ಗಮನಕ್ಕೆ ಬಂದ ಮೇಲೆ 22 ಕಟ್ಟಿಗೆ ಕಟ್ ಮೆಷಿನ್‌ಗಳನ್ನು seize ಮಾಡಿದ್ದೇವೆ. ಮತ್ತು ಅದನ್ನು ಗಮನಿಸಲು ತಲಾಟೆಗಳನ್ನು ಹಾಕಿದ್ದೇವೆ. ಇವತ್ತು ಪೂರ್ತಿ ಬಾರ್ಡರ್ ಅನ್ನು ಚೆಕ್ ಮಾಡಿ ಹೇಳಲಿ. ಎಲ್ಲಾದರೂ ಒಂದು ಸಿಕ್ಕರೆ ನಾನು ಅವರು ಹೇಳಿದಂತೆ ಕೇಳುತ್ತೇನೆ. ಕಳೆದ ಒಂದು ವರ್ಷದಿಂದ ನಾವು ಎಲ್ಲಾ ಬಾರ್ಡರ್‌ಗಳಲ್ಲೂ ಸಹ ಮೇವಿನ ಸಾಗಾಣಿಕೆಯನ್ನು ban ಮಾಡಿದ್ದೇವೆ. ಈಗ ಇದರ ಬಗ್ಗೆ ಯಾವುದಾದರೂ ಉದಾಹರಣೆ ಅಥವಾ ಮಾಹಿತಿಯನ್ನು ನೀಡಿದಲ್ಲಿ ಖಂಡಿತ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ರೇವೂ ನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಾಗಿದೆ. ಆದರೆ ಇದು ಆಗಿರುವುದು ಹಿಂದಿನ ವರ್ಷ. ಆಗ ನಾವು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಮಾತನಾಡಿ, ಜಿಲ್ಲಾ ವರಿಷ್ಠಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಒಂದು ನಿರ್ದೇಶನವನ್ನು ಕಳುಹಿಸಲಾಯಿತು. ನಮ್ಮ ಜಿಲ್ಲೆಯಿಂದ ಹೊರಗೆ ಯಾವುದೇ ಮೇವು ಹೋಗದ ಹಾಗೆ ನೋಡಿಕೊಳ್ಳಿ ಎಂದು ಹೇಳಲಾಗಿತ್ತು. ಆದರೆ ಬೆಳಗಾವಿದಲ್ಲಿ ಮೇವು ಕಟ್ ಮಾಡಿ ಮೇಲೆ ಬೇರೆ ವಸ್ತುವಿನಿಂದ ಅದನ್ನು ಮುಚ್ಚಿಕೊಂಡು ತೆಗೆದುಕೊಂಡು ಹೋಗುತ್ತಿರುವುದು ಕಂಡುಹಿಡಿದು ಅದನ್ನು seize ಮಾಡಿ, ಕೇಸ್ ಮಾಡಿ ಈಗ ಬಂದ್ ಮಾಡಿದ್ದಾರೆ. ಇದು ನನ್ನ ಹತ್ತಿರ ಇರುವ ಮಾಹಿತಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಎಷ್ಟು ಮೇವನ್ನು ತೆಗೆದುಕೊಂಡು ಹೋಗುತ್ತಿರುವ ಟ್ರಕ್‌ಗಳನ್ನು ಹಿಡಿಯಲಾಗಿದೆ, ಎಷ್ಟು ಮೇವನ್ನು ವಾಪಸ್ ತೆಗೆದುಕೊಂಡು ಬರಲಾಗಿದೆ ಎನ್ನುವ ಉತ್ತರವನ್ನು ನಾಳೆ ಸರ್ಕಾರ ಕೊಡಬೇಕು. ಜಿಲ್ಲಾ ಉಸ್ತುವಾರಿ ಸಚಿವರನ್ನು ಅಥವಾ ಯಾರಾದರು ಅಧಿಕಾರಿಗಳನ್ನು ಕಳುಹಿಸಿ ಅಲ್ಲಿಗೆ, ಅಲ್ಲಿ ಮೇವು ಕಟ್ ಆಗಿತ್ತಿದೆಯೇ ಇಲ್ಲವೆ ಎನ್ನುವುದನ್ನು ನೋಡಿ. ಅದು ಎಲ್ಲಿಗೆ ಹೋಗುತ್ತದೆ? ನಮ್ಮಲ್ಲಿ ಕಟ್ ಮಾಡಿರುವ ಮೇವನ್ನು ಯಾರು ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಅದು ಒಂದು ಕೆ.ಜಿ.8 ರೂಗಳನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ನಮ್ಮ ಕಡೆ ಯಾರು ತೆಗೆದುಕೊಳ್ಳುವುದಿಲ್ಲ. ಅದನ್ನು ಮಹಾರಾಷ್ಟ್ರದವರೆ ತೆಗೆದುಕೊಳ್ಳಬೇಕು. ಯಾವ ರೈತ ಕಣಕಿಯನ್ನು ಒಂದು ಕೆ.ಜಿ.ಗೆ 8 ರೂಗಳನ್ನು ಕೊಟ್ಟು ಕೊಂಡುಕೊಳ್ಳಲು ವಾಸ್ತವಿಕವಾಗಿ ಸಾಧ್ಯವೆ ಹೇಳಿ. ಸಣ್ಣ–ಪುಟ್ಟ ರೈತರು ಮೇವನ್ನು ಬೆಳೆದಿರುತ್ತಾರೆ, ಮಹಾರಾಷ್ಟ್ರದವರು ಅವರಿಗೆ ಹಣವನ್ನು ಜಾಸ್ತಿ ಕೊಡುತ್ತಾರೆ. ಎರಡು ಎತ್ತಿನ ಒಕ್ಕಲುತನ ಇರುವವರು ತಮ್ಮ ಒಕ್ಕಲುತನವನ್ನು ತೆಗೆದುಬಿಡುತ್ತಾರೆ. ಅವರಿಗೆ ಎರಡು–ಮೂರು ಚಕ್ಕಡಿ ಕಣಿಕೆ ಉಳಿಯುತ್ತದೆ. ಅದನ್ನು ಅವರು ಮಾರಾಟ ಮಾಡುತ್ತಾರೆ. ನಾವು ಒಂದು ಟ್ರಾಕ್ಟರ್‌ಗೆ 4000 ದಿಂದ 5000 ರೂಗಳನ್ನು ಕೊಡುತ್ತೇವೆ. ಅವರು 10,000 ರೂಗಳನ್ನು ಕೊಟ್ಟು ತೆಗೆದುಕೊಂಡು ಕಟ್ ಮಾಡಿಕೊಂಡು 14,000 ರೂಗಳಿಗೆ ಮಾರಿ ಲಾಭವನ್ನು ಪಡೆಯುತ್ತಾರೆ. ಇದೊಂದು ವ್ಯಾಪಾರ ನಡೆದಿದೆ. ಇದು ಬಾಂಬೆ ಮತ್ತು ಪೂನಾಕ್ಕೆ ಮಾತ್ರ ಹೋಗುತ್ತಿದೆ. ಇದು ನಡೆದಿರುವ ಸಂಗತಿ ಅದನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ಎಸ್.ಕೆ. ಬೆಳ್ಳುಬ್ಬಿ (ಕೃಷಿ ಮಾರುಕಟ್ಟೆ, ಹಜ್ ಮತ್ತು ವಕ್ಫ್ ಸಚಿವರು):– ಮಾನ್ಯ ಸಭಾಪತಿಗಳೆ,** ಮೇವು ಇಲ್ಲ ಮೇವು ಇಲ್ಲ ಎಂದು ಇವರೇ ಹೇಳುತ್ತಾರೆ, ಈಗ ಮೇವು ಹೊರಗಡೆ ಹೋಗುತ್ತಿದೆ ಎಂದು ಇವರೇ ಹೇಳುತ್ತಿದ್ದಾರೆ. ಮೇವು ಇಲ್ಲ ಎಂದು ಮೇಲೆ ಹೊರಗಡೆಗೆ ಹೇಗೆ ಹೋಗುತ್ತದೆ.

**ಶ್ರೀ ಉಮೇಶ್ .ವಿ. ಕತ್ತಿ:–** ಗೋಜಾಳ ಕಣಿಕಿ 12ಕ್ಕೆ ಸಿವುಡು ಇಲ್ಲವೆ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ತಮ್ಮ ಪೀಠವನ್ನು ಅಲಂಕರಿಸಿದರು)**

**ಶ್ರೀ ಬಸವರಾಜ ಹೊರಟ್ಟಿ:–** ಗೋಜಾಳ ಕಣಕಿ 4 ರೂಗೆ ಒಂದು ಸಿವುಡು. ಬಿಳಿಜೋಳದ ಕಣಕಿ 12 ರಿಂದ 25 ರೂಗಳಿಗೆ ಒಂದು ಸಿವುಡು.

**ಶ್ರೀ ಎಸ್.ಕೆ. ಬೆಳ್ಳುಬ್ಬಿ:– ನಮ್ಮ** ಕಡೆ ಇನ್ನು ಮೇವು ಕಟ್ ಮಾಡೇ ಇಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ನಾನು ಹೇಳುವುದನ್ನು ಸ್ವಲ್ಪ ಕೇಳಿ. ಮೊನ್ನೆ ಮಳೆಯಾದಾಗ ಸಣ್ಣ–ಸಣ್ಣ ರೈತರು ಜೋಳವನ್ನು ಬೆಳೆದಿದ್ದಾರೆ. ಹಿಂದೆಯೇ ದನಗಳನ್ನು ಮಾರಿ ಬಿಟ್ಟಿದ್ದಾರೆ. ಅವರಿಗೆ ಎರಡು–ಮೂರು ಟ್ರಾಕ್ಟರ್ ಅಥವಾ ಎರಡು–ಮೂರು ಚಕ್ಕಡಿ ಕಣಕಿ ಉಳಿಯುತ್ತದೆ ಅದನ್ನು ಅವರು ಮಾರಾಟ ಮಾಡುತ್ತಾರೆ. ಅವರು ಮೇವು ತೆಗೆದುಕೊಂಡು ಮಾರಲು ಹಳ್ಳಿ–ಹಳ್ಳಿ ತಿರುಗಾಡುತ್ತಾರೆ. ಬಾಗಲಕೋಟೆ D.C., ಯವರಿಗೆ ಕೇಳಿ ನಾನು phone ಮಾಡಿ ಹೇಳಿದಾಗ ಎರಡು ಟ್ರಕ್ ಮೇವಿನ ಕಳ್ಳ ಸಾಗಾಣಿಕೆಯನ್ನು ಹಿಡಿದು ನನಗೆ ನೀವು ಹೇಳಿದು ನಿಜ ಎಂದು ವಾಪಸ್ phone ಮಾಡಿ ತಿಳಿಸಿದ್ದಾರೆ. ಕಡಬಾಕಟ್ಟಿ ಮಾಡುತ್ತಾರೆ. ನಾವು ಏಕೆ ಸುಳ್ಳು ಹೇಳಬೇಕು? ಇರುವುದನ್ನು ಹೇಳುತ್ತಿದ್ದೇವೆ. ನಾವು ಸಮಸ್ಯೆಗಳನ್ನು ನೋಡುತ್ತಿದ್ದೇವೆ ಅದನ್ನು ಹೇಳುತ್ತೇವೆ. ತಾವು ಕಾರಿನಲ್ಲಿ ಹೋಗುವಾಗ ಸಾಲುಗಟ್ಟಲೆ ಕಟುಕರ ಮನೆಗೆ ದನಗಳನ್ನು ಹೊಡೆದುಕೊಂಡು ಹೋಗುವುದನ್ನು ನೀವು ನೋಡುತ್ತೀರಾ ಇಲ್ಲವೆ ಹೇಳಿ. 20% ವಯಸ್ಸಾದ ದನಗಳನ್ನು ಕಟುಕರ ಮನೆಗೆ ಹೊಡೆಯುತ್ತಾರೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ 100 ಕ್ಕೆ 50% ದನಗಳು ಕಟುಕರ ಮನೆಗೆ ಹೋಗುತ್ತಿವೆ. ರೈತರ ಹತ್ತಿರ ಮೇವು ಇಲ್ಲ ಅದಕ್ಕೆ ಅವರು ಕಟುಕರ ಮನೆಗೆ ದನಗಳನ್ನು ಮಾರುತ್ತಿದ್ದಾರೆ.

**ಶ್ರೀ ಎಸ್.ಕೆ. ಬೆಳ್ಳುಬ್ಬಿ:–** ಬರಗಾಲದ ಸಮಯದಲ್ಲಿ ದನಗಳನ್ನು ಕಟುಕರ ಮನೆಗೆ ಹೊಡೆಯಲಾಗುತ್ತಿತ್ತು.

**ಶ್ರೀ ಬಸವರಾಜ ಹೊರಟ್ಟಿ:–** ಕೋಣನ ಮುಂದೆ ಕಿನೂರಿ ಭಾರಿಸಿದ ಹಾಗೆ ಆಯಿತು ಬಿಡಿ. ಜ್ವರ ಬಂದರು ಕಾಯಿಲೆನೆ, ಕ್ಯಾನ್ಸರ್ ಆದರೂ ಕಾಯಿಲೆನೇ. ಸುಮ್ಮನೆ ಏನಾದರೂ ಒಂದು ಮಾತನಾಡುತ್ತಾರೆ ಮಂತ್ರಿಗಳು.

ಮಾನ್ಯ ವಿರೋಧ ಪಕ್ಷದ ನಾಯಕರು ಹೈದ್ರಾಬಾದ್ ಕರ್ನಾಟಕದ ಬಗ್ಗೆ ಮಾತನಾಡಿದ್ದಾರೆ. ಇದರ ಅಭಿವೃದ್ಧಿಗೆ ನಿಗದಿಯಾಗಿರುವ ಹಣ 2968 ಕೋಟಿ ರೂಗಳು ಇದು ನಂಜುಂಡಪ್ಪ ವರದಿ ಪ್ರಕಾರ ತೀರಾ ಕಡಿಮೆಯಾಗಿದೆ. 2002ರ ವರದಿ ಪ್ರಕಾರ 2000 ಕೋಟಿ ರೂಗಳನ್ನು ಪ್ರತಿ ವರ್ಷ ತೆಗೆದು ಇಡಬೇಕು ಎಂದು ಇದೆ. ಅಂದರೆ ಈಗ 4000 ಕೋಟಿ ರೂಗಳನ್ನು ಕೊಡಬೇಕಾಗಿತ್ತು. ಈ ರೀತಿ ಮಾಡಿದರೆ ಅದು ಹೇಗೆ ಅಭಿವೃದ್ಧಿಯಾಗುತ್ತದೆ. ಬಜೆಟ್‌ನ್ನು ಮಂಡನೆ ಮಾಡಿದ್ದೀರಿ ಅಷ್ಟೆ, ಆದರೆ ಎಲ್ಲಿಯು ನೋಡುವುದಿಲ್ಲ. ಈ ತಪ್ಪನ್ನು ಸರಿಪಡಿಸಿಕೊಳ್ಳಬೇಕು. ಇದರ ಸಲುವಾಗಿ ಸಾಕಷ್ಟು ಹೋರಾಟಗಳು ನಡೆದಿವೆ. ಆದರೆ ಇವತ್ತು ಭಾರತ ಸಂವಿಧಾನದ ಕಲಂ 371(ಜೆ) ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪವೇ ಇಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಬಜೆಟ್‌ನಲ್ಲಿ ಕಲಂ 371(ಜೆ) ಬಗ್ಗೆ ಪ್ರಸ್ತಾಪವಿದೆ.

**ಶ್ರೀ ಬಸವರಾಜ ಹೊರಟ್ಟಿ:–** ಎಲ್ಲಿ ಇದೆ ಓದಿ. ನಂತರ ನಾನು ಮಾತನಾಡುತ್ತೇನೆ. ಬರೀ ಭಾರತ ಸಂವಿಧಾನದ ಕಲಂ 371(ಜೆ) ಅನ್ನು ಸ್ವಾಗತ ಮಾಡುತ್ತೇವೆ ಎಂದು ಬರೆದರೆ ಆಗಲಿಲ್ಲ. ಪ್ರಸ್ತಾವನೆಯಲ್ಲಿ ಏನು ಇದೆ ಎಂದರೆ, ನಾನು ಹೇಳಿದರೆ ತಪ್ಪಾಗುತ್ತದೆ, ರಾಜ್ಯವು ಭೀಕರ ಬರಗಾಲವನ್ನು ಎದುರಿಸುತ್ತಿರುವಾಗ ಮಠ–ಮಾನ್ಯಗಳಿಗೆ ಅನುದಾನವನ್ನು ಸರ್ಕಾರ ಕೊಟ್ಟಿದೆ. ಕೊಟ್ಟವರಿಗೆ ಮತ್ತೆ–ಮತ್ತೆ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ 3332 ಮಠಗಳು ಇವೆ. ನಮ್ಮ ಕಡೆ "ಮುಖ ನೋಡಿ ಮಣೆ ಹಾಕುವುದು" ಎಂದು ಹೇಳುತ್ತಾರೆ. ಆ ರೀತಿ ಆಗಿದೆ ಈಗ. ಸಿದ್ದಗಂಗಾ ಮಠದಂತಹ ಮಠಗಳ ಬಗ್ಗೆ ನನ್ನ

ತಕರಾರು ಇಲ್ಲ. ಅವರು ಎಲ್ಲಾ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾರೆ.

**ಶ್ರೀ ಗೋ. ಮಧುಸೂದನ್:–** ಯಾವ–ಯಾವ ಮಠಗಳಿಗೆ ಕೊಡಬಾರದಿತ್ತು ಹೇಳಿ.

**ಶ್ರೀ ಬಸವರಾಜ ಹೊರಟ್ಟಿ:–** ಬ್ರಾಹ್ಮಣರ ಲೆಕ್ಕ ನನ್ನ ಮುಂದೆ ಹೇಳಬೇಡಿ. ಕಡ್ಡಿ ಕೊರೆಯುವ ಕೆಲಸ ಮಾಡಬೇಡಿ. ಮಠ–ಮಾನ್ಯಗಳಿಗೆ ಅನುದಾನವನ್ನು ಕೊಡಲಿ. ಆದರೆ ಪ್ರತಿಷ್ಠಿತ ಮಠಗಳಿಗೆ ಕೊಟ್ಟಿದ್ದೀರಿ. ಉಳಿದ ಮಠಗಳ ಗತಿ ಏನು? ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ. ಸಿದ್ದಗಂಗಾ ಮಠಕ್ಕೆ ಕೊಟ್ಟಿದ್ದೀರಿ ಅದಕ್ಕೆ ಒಪ್ಪಿಗೆ ಇದೆ, 10,000 ಮಕ್ಕಳಿಗೆ ಊಟ ಕೊಡುತ್ತೇವೆ ಎಂದು ಹೇಳಿದ್ದೀರಿ ಕೊಡಿ. ಸರ್ಕಾರ ಮಾಡುವ ಕೆಲಸವನ್ನು ಅವರು ಮಾಡುತ್ತಾರೆ. ಇನ್ನುಳಿದ 3–4 ಮಠಗಳು ಈ ರೀತಿಯ ಕೆಲಸನವನ್ನು ಮಾಡುತ್ತಿರಬಹುದು. ಉಳಿದ ಮಠಗಳಿಗೆ ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಭಾರತ ಸಂವಿಧಾನದ ಕಲಂ 371(ಜೆ) ಬಗ್ಗೆ ಯಾವುದೇ ಪ್ರಸ್ತಾಪ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಆಯವ್ಯಯ ಪತ್ರದ 106ನೇ ರಲ್ಲಿ ಈ ಪ್ರಸ್ತಾಪವಿದೆ. ಅನುಚ್ಛೇದ 371(ಜೆ) ರಡಿಯಲ್ಲಿ ಸಂವಿಧಾನದ 118ನೇ ತಿದ್ದುಪಡಿಯಲ್ಲಿ ಹೈದ್ರಾಬಾದ್–ಕರ್ನಾಟಕದ ಪ್ರದೇಶಗಳಾದ ಗುಲ್ಬರ್ಗಾ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ವಿಶೇಷ ಸ್ಥಾನ–ಮಾನವನ್ನು ನೀಡಿರುವುದು ನಮಗೆ ಬಹಳ ಸಂತೋಷದ ವಿಷಯವಾಗಿದೆ. ಈ ತಿದ್ದುಪಡಿಯಿಂದಾಗಿ, ಸ್ಥಳೀಯ ಜನರಿಗೆ ಉದ್ಯೋಗಾವಕಾಶಗಳು, ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಅಲ್ಲದೆ ಸದರಿ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಾಗಲು ಸಹಾಯವಾಗುತ್ತದೆ. ಈ ಸಂವಿಧಾನಿಕ ತಿದ್ದುಪಡಿಯನ್ನು ಪಾಲಿಸಲು ಮತ್ತು ಇದರ ಚಟುವಟಿಕೆಗಳ ಮೇಲುಸ್ತುವಾರಿಗಾಗಿ ವಿಶೇಷ ಕೋಶ ಸ್ಥಾಪನೆ ಮಾಡಲಾಗುವುದು. ಈ

ಪ್ರದೇಶದ ಆರು ಜಿಲ್ಲೆಗಳ ಪಂಚಾಯಿತಿ ರಾಜ್ ಸಂಸ್ಥೆಗಳಿಗೆ 3,114 ಕೋಟಿ ರೂಗಳನ್ನು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ 583 ಕೋಟಿ ರೂಗಳನ್ನು 2013–14ನೇ ಸಾಲಿನಲ್ಲಿ ಒದಗಿಸಲಾಗುವುದು. ಇಷ್ಟೆಲ್ಲಾ ಉಲೇಖವಿದೆ ಏನು ಇಲ್ಲ ಎಂದು ಹೇಳುತ್ತೀರಾ.

**ಶ್ರೀ ಬಸವರಾಜ ಹೊರಟ್ಟಿ;–** ಭಾರತ ಸಂವಿಧಾನದ ಕಲಂ 371(ಜೆ) ಎಂದು ಬರೆದು ಅದರ ಬಗ್ಗೆ ಸ್ವಲ್ಪ ವಿವರಣೆಯನ್ನು ಕೊಟ್ಟರೆ ಆಗುವುದಿಲ್ಲ. ನಂಜುಂಡಪ್ಪ ವರದಿ ಪ್ರಕಾರ 4000 ಕೋಟಿ ರೂಗಳನ್ನು ಬಿಡುಗಡೆಗೊಳಿಸಬೇಕಾಗಿತ್ತು. ಆದರೆ ಅಷ್ಟು ಹಣವನ್ನು ಬಿಡುಗಡೆಗೊಳಿಸಿರುವುದಿಲ್ಲ.

**ಶ್ರೀ ಶಶೀಲ್ .ಜಿ. ನಮೋಶಿ:–** ನಂಜುಂಡಪ್ಪ ವರದಿಯನ್ನು ಇದನ್ನು ಕೂಡಿಸಬೇಡಿ. ನಂಜುಂಡಪ್ಪ ವರದಿ ಪ್ರಕಾರ 2968 ಕೋಟಿ ರೂಗಳನ್ನು ಮೀಸಲಿಟ್ಟಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಕೊಟ್ಟಿರುವುದಿಲ್ಲ. ಬರಿ 2000 ಕೋಟಿ ರೂಗಳನ್ನು ಕೊಟ್ಟಿದ್ದಾರೆ.

**ಶ್ರೀ ಶಶೀಲ್ .ಜಿ. ನಮೋಶಿ:– ಮಾನ್ಯ ಸಭಾಪತಿಗಳೆ,** ಭಾರತ ಸಂವಿಧಾನದ ಕಲಂ 371(ಜೆ) ಬಗ್ಗೆ ಬಜೆಟ್‌ನಲ್ಲಿ ಯಾವುದೇ ಉಲ್ಲೇಖ ಮಾಡಿರುವುದಿಲ್ಲ ಎಂದು ತಾವು ಹೇಳಿದ್ದಿರಿ. ಆದರೆ ಸ್ಪಷ್ಟವಾಗಿ ಉಲ್ಲೇಖ ಮಾಡಲಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:–** ನಮೋಶಿಯವರೆ ತಾವು ಕೊಡಿ ಈ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ಹಿಂದಿನದೆಲ್ಲವನ್ನು ಹೇಳಬೇಕಾಗುತ್ತದೆ. ಹೇಳಿ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸೋಂದಾ ಸ್ವರ್ಣದಲ್ಲಿ ಸಂಸ್ಥಾನದ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿಯವರು 'ಮತ್ತೇ ನಮಗೆ ಜವಾಬ್ದಾರಿ ಜಾಸ್ತಿಯಾಗಿದೆ,

ಶ್ರೀಮಠದ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿರುವುದು ಸಂತಸದ ಸಂಗತಿ. ಇದರೊಂದಿಗೆ ಹೊಣೆಗಾರಿಯೂ ಹೆಚ್ಚಿದೆ. ಜನರ ತೆರಿಗೆಯ ಹಣವನ್ನೇ ಸರ್ಕಾರ ಅನುದಾನವಾಗಿ ನೀಡುವುದರಿಂದ ನಾವು ಜನರಿಗೆ ಸೇವೆಯ ಮೂಲಕ ಈ ಹಣವನ್ನು ವಾಪಸ್ ಮಾಡಬೇಕಿದೆ" ಎಂದು ಹೇಳಿದ್ದಾರೆ. ಈ ರೀತಿ ಎಲ್ಲಾ ಸ್ವಾಮಿಗಳು ಹೇಳಲಿ ಎಂದು ನಾನು ಹೇಳುತ್ತೇನೆ. ಇವರಿಗೆ conscious ಇದೆ. ಈ ರೀತಿ ಎಷ್ಟು ಮಂದಿ ಹೇಳಿದ್ದಾರೆ? ಕಳೆದ 3 ವರ್ಷಗಳಿಂದ ಬಜೆಟ್‌ನಲ್ಲಿ ಹಣವನ್ನು ಕೊಟ್ಟಿದ್ದರೂ ಎಷ್ಟು ಮಂದಿ ಹೇಳಿದ್ದಾರೆ? ಜವಾಬ್ದಾರಿಕೆ ಕೊಟ್ಟಿದ್ದಾರೆ, ಅದನ್ನು ಬೇಡ ಎಂದು ನಾನು ಹೇಳುವುದಿಲ್ಲ.

**ಶ್ರೀ ಗೋ. ಮಧುಸೂದನ್:–** ಆ ರೀತಿ ಹೇಳಿರುವವರು ಬ್ರಾಹ್ಮಣರ ಸ್ವಾಮಿಗಳಾಗಿದ್ದಾರೆಯೇ?

**ಶ್ರೀ ಬಸವರಾಜ ಹೊರಟ್ಟಿ:–** ಹೌದು.

**ಶ್ರೀ ಎ.ಎಚ್. ಶಿವಯೋಗಿಸ್ವಾಮಿ;–** ಎಲ್ಲಾ ಸ್ವಾಮಿಗಳ ಪರವಾಗಿ ಅವರು ಹೇಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಎಲ್ಲರ ಪರವಾಗಿ ಶ್ರೀ ಶಿವಯೋಗಿಸ್ವಾಮಿಗಳು ಇದ್ದರೆ ಸಾಕು, ಸದನ ಏಕೆ ಬೇಕು? 150 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಹಾಗೂ ಹಿಂದೆಯೂ ಕೊಟ್ಟಿದ್ದಾರೆ. ಮಠ–ಮಾನ್ಯಗಳಿಗೆ ಅವರು ಹಣವನ್ನು ಕೊಟ್ಟರೂ ಅವರು ಏನು ಮಾಡಿದರು ಎಂದು ಬೇಕಲ್ಲವೇ? ಏನು ಮಾಡಿದರು ಎಂದು ಏನೂ ಇಲ್ಲ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಸದಸ್ಯರು 3330 ಮಠಗಳಲ್ಲಿ 2700 ಅಥವ 2750 ಮಠಗಳಿದ್ದು, ಬೆಂಗಳೂರು ನಗರದಲ್ಲಿ 65 ಅಥವಾ 66 ಮಠಗಳು ಇದ್ದು, ಇನ್ನೂ 13 ಅಥವಾ 14 ಮಠಗಳು ಬಂದಿವೆ. ಕಂಬಳಿ ಸ್ವಾಮಿ ಮಠದಿಂದ ಅನೇಕ ಮಠಗಳು ಕ್ಷೀಣಿಸಿರುವ ಸಂದರ್ಭ ಇದೆ. ಕೆಲವು ಮಠಗಳು

ಧಾರ್ಮಿಕವಾಗಿ ಈ ರಾಜ್ಯ ಇತಿಹಾಸವನ್ನು ಮತ್ತು ರಾಷ್ಟ್ರದ ಸಂಸ್ಕೃತಿಯನ್ನು ಬಿಂಬಿಸುವ ಕೆಲಸವನ್ನು ಮಾಡುತ್ತಿವೆ. ಯಾವುದೇ ಮಠಕ್ಕಾದರೂ ಒಂದು ರೂಪಾಯಿಗಳನ್ನು ಕೊಡುವಾಗ ಅದರ ಉದ್ದೇಶವು ಆ ಮಠದ ಅಭಿವೃದ್ಧಿಯ ಜೊತೆಯಲ್ಲಿ ಸಾರ್ವಜನಿಕರ ಹಿತವನ್ನು ಕಾಯಬೇಕು. ಮಠ-ಮಾನ್ಯಗಳಿಗೆ ಹಣವನ್ನು ಕೊಡುವಾಗ ಜಿಲ್ಲಾಧಿಕಾರಿಗಳ ಆಯಾ ಜಿಲ್ಲೆಯ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಹಣ ಕೊಡುತ್ತಾರೆಯೇ ವಿನಃ ಯಾವುದೇ ಮಠದ ಅಕೌಂಟ್‌ನಲ್ಲಿ ಹಣವನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರವು ಮಾಡಿಲ್ಲ. ಅಲ್ಲದೇ ಕೆಲವರಿಗೆ ಹಣ ಕೊಟ್ಟಿರುವುದು ನಿಜವಾಗಲೂ ಅರ್ಥಪೂರ್ಣವಾಗಿದೆ ಎಂದು ಹೇಳಿದರು ಹಾಗೂ ಕೆಲವರಿಗೆ ಕೊಟ್ಟಿಲ್ಲ ಎಂದು ಹೇಳಿದರು. ಈ ಪ್ರಕ್ರಿಯೇ ಪ್ರಾರಂಭವಾದ ಮೇಲೆ ಆದಿಜಾಂಬವ ಮಠ ಇರಬಹುದು, ಉಪ್ಪಾರಸ್ವಾಮಿಗಳ ಮಠ ಇರಬಹುದು, ಕಾಗಿನೆಲೆ ಹಾಗೂ ಆದಿಚುಂಚನಗಿರಿ ಮಹಾಸಂಸ್ಥಾನ ಇರಬಹುದು, ಇಂತಹ ಬಹುತೇಕ ಮಠಗಳು ಹಳ್ಳಿಗಾಡಿನಲ್ಲಿ ಹೊಂದಿರುವ ವ್ಯವಸ್ಥೆ ಬಗ್ಗೆ ತಮಗೆಲ್ಲರಿಗೂ ತಿಳಿದಿದೆ. ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ ಅರಕೂಲಗೂಡಿನಲ್ಲಿ ಒಬ್ಬ ಸ್ವಾಮಿ ಒಂದು ಗಣೇಶನ ದೇವಸ್ಥಾನದಲ್ಲಿ 13 ವರ್ಷಗಳಿಂದ ವಾಸ್ತವ್ಯ ಹೂಡಿ ಸುಮಾರು 65-70 ಅನಾಥ ಮಕ್ಕಳ ಪೋಷಣೆಗೆ ಭಿಕ್ಷೆ ಮಾಡಿ ಜೀವನ ಮಾಡುತ್ತಿದ್ದುದ್ದನ್ನು ನೋಡಿ, ನಾನು ಸ್ವಲ್ಪ ಹಣ ಕೊಟ್ಟೆ. ಅಲ್ಲದೇ ಅಲ್ಲಿನ ಸ್ಥಳೀಯ ಜನ ಪ್ರತಿನಿಧಿಗಳಿಂದ ಸರ್ಕಾರವು ಕಣ್ಣು ತೆರದ ಮೇಲೆ ಅದು ಬಹಳ ಚೆನ್ನಾಗಿ ಬೆಳೆದಿದೆ. ಇವತ್ತು ಹೋಬಳಿ ತಾಲ್ಲೂಕುಗಳಲ್ಲಿರುವ ಸಣ್ಣ-ಪುಟ್ಟ ಮಠಗಳಿಗೂ ಆದ್ಯತೆಯನ್ನು ಕೊಟ್ಟಿದ್ದೇವೆ. ಕೆಲವು ಮಠಗಳಿಗೆ ಹತ್ತದಿನ್ನೈದು ಲಕ್ಷ ರೂಪಾಯಿಗಳನ್ನು ಕೊಟ್ಟಿರಬಹುದು ಮತ್ತು ಕೆಲವು ಮಠಗಳಿಗೆ ಕೋಟಿ ರೂಪಾಯಿಗಳನ್ನು ಕೊಟ್ಟಿರಬಹುದು. ಆದರೆ ಹಣ ಕೊಡುವ ಉದ್ದೇಶವೇನೆಂದರೆ ಮಠಗಳನ್ನು ಮಾಡಿರುವವರು ಮಕ್ಕಳ ವಿದ್ಯೆಗೆ ಮೊದಲನೆಯ ಆದ್ಯತೆ ಹಾಗೂ ಎರಡನೆಯದಾಗಿ ದಾಸೋಹ, ಮತ್ತೊಂದು-ಮಗದೊಂದು ಕೆಲಸ ಕಾರ್ಯಗಳು, ರಸ್ತೆ ಕುಡಿಯುವ ನೀರು ಇಂತಹ ಕೆಲಸಗಳಿಗೆ ಅನುಕೂಲವಾಗುವಂತೆ ಸರ್ಕಾರವು ಸ್ಪಂದಿಸುತ್ತದೆಯೇ ವಿನಃ

ಯಾವುದೇ ಉದ್ದೇಶದಿಂದ ಮತಗಳ ಅಥವಾ ಅವರ ಮನಗಳನ್ನು ಗೆಲ್ಲುವ ಉದ್ದೇಶ ಇಲ್ಲ. ಇದು ಕೂಡ ಸಾರ್ವಜನಿಕ ಸೇವೆಯಲ್ಲಿ ಧಾರ್ಮಿಕ ಸಂಸ್ಥೆಗಳಿಂದ ಆಗುವ ಸುದುದ್ದೇಶದ ಕೆಲಸವಾಗಿದೆ.

## 10. ಪ್ರಕಟಣೆ

**ಸಭಾಪತಿಯವರು:–** ನಮ್ಮ ಸದನದ ಕಲಾಪವನ್ನು ವೀಕ್ಷಣೆ ಮಾಡಲು ಬೇರೆ ದೇಶಗಳಿಂದ ವೀಕ್ಷಕರು ಆಗಮಿಸಿದ್ದಾರೆ. I recognize the presence of a delegation from United Kingdom visiting Bangalore for Group Study and Exchange of Views led by:-

1) Ms. Karen Manley

   Advisor on UK Immigration Legislation and Policy

2) Mrs. Sarah V. Bass

   Strategic Procurement Specialist and Holistic Therapist

3) Ms. Hannah Ward-Salt. Fundraiser (Charity)

4) Ms. Amy Clode, Project Manager (Public Sector)

5) Mrs. Tazmina Crisp

   Dietitian/ Governor of Independent Secondary School (National Health Services/School)

   Along with the Rotarians of Bangalore City and our State. I recongnize their presence.

## 11. ವಿತ್ತೀಯ ಕಾರ್ಯಕಲಾಪಗಳು

## 2013–2014ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ನಶಿಸಿ ಹೋಗುವ ಮಠಗಳಿಗೆ ಪ್ರೋತ್ಸಾಹ ಕೊಡುವುದಕ್ಕೆ ಯಾರ ವಿರೋಧವೂ ಇಲ್ಲ. ಆದರೆ ಇದಕ್ಕೊಂದು ಮಾನದಂಡ ಇರಬೇಕು, ಈ ಮಾನದಂಡ ಇಲ್ಲದೇ ಇರುವುದರಿಂದ ಟೀಕೆಗಳು ಬರುತ್ತಿವೆ. ಇದಕ್ಕೆ ಮಾನದಂಡ ಇಡಲು ಸಮಸ್ಯೆ ಏನು? ಇದರಲ್ಲಿ ಯಾರು ಅಭಿವೃದ್ಧಿ ಮಾಡುತ್ತಾರೆ, ಯಾವುದಕ್ಕೆ ಅವಶ್ಯಕತೆ ಇದೆ ಎಂಬುದನ್ನು ನೋಡಬೇಕು. ಅಲ್ಲದೇ ಯಾವುದನ್ನು ಬೆಳವಣಿಗೆ ಮಾಡಬೇಕೆಂಬ ಇಚ್ಛೆ ಇರುತ್ತದೆಯೋ, ಅವರಿಗೆ ಅವಕಾಶ ಕೊಡುವಂತಾಗುತ್ತದೆ. ಇದಕ್ಕೆ ವಿವೇಚನಾ ಶಕ್ತಿಯಿಂದ ನಿರ್ಧಾರವಾಗುತ್ತದೆ. ಅದು ಸರಿಯಲ್ಲ, ಕೊಡಬೇಕಾಗಿರುವುದು ಸ್ವಾಭಾವಿಕವಾದ್ದರಿಂದ ಕೊಡಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರು 1–45 ನಿಮಿಷಗಳಿಗೆ ಪ್ರಾರಂಭ ಮಾಡಿ ಈಗ 40 ನಿಮಿಷಗಳು ಕಳೆದಿವೆ. ನಾನು note ಮಾಡಿಕೊಂಡಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಇನ್ನು 10 ನಿಮಿಷಗಳಲ್ಲಿ ಮುಕ್ತಾಯ ಮಾಡುತ್ತೇನೆ. ಹಣ ಕೊಡುವುದಕ್ಕೆ ಏನಾದರೂ ಒಂದು ಮಾನದಂಡ ಬೇಕು. ಗದಗ್ ತೋಂಟದಾರ್ಯ ಮಠದ ಸ್ವಾಮೀಜಿಗಳು ಈ ರಾಜ್ಯದಲ್ಲಿ ಜಾತ್ಯಾತೀತ ಪ್ರತೀಕತೆಯನ್ನು ವ್ಯಕ್ತಪಡಿಸುವ ಉತ್ತಮ ಸ್ವಾಮೀಜಿಗಳಾಗಿದ್ದಾರೆ. ಅವರು ಎಲ್ಲಾ ಕೇವಲ ಲಿಂಗಾಯಿತರನ್ನು ಮಾತ್ರವಲ್ಲದೇ ಎಲ್ಲಾ ಜಾತಿಯವರನ್ನು ಸಮಾನವಾಗಿ ನೋಡುತ್ತಾರೆ. ಅವರಿಗೆ ಒಂದು ಪೈಸೆಯನ್ನೂ ಕೊಡಲಿಲ್ಲ. ಇಷ್ಟೆಲ್ಲಾ ಪ್ರಗತಿಪರವಾದ ಸ್ವಾಮೀಜಿಗಳಿಗೆ ಒಂದು ನಯಾಪೈಸೆ ಕೊಡಲಿಲ್ಲ. ಏಕೆಂದರೆ ಟೀಕೆ ಮಾಡುತ್ತಾರೆ. ಸರ್ಕಾರ ಯಾವುದೇ ಇದ್ದರೂ ಅವರು ಟೀಕೆ ಮಾಡುತ್ತಾರೆ. ಎಲ್ಲ ಧರ್ಮದವರನ್ನು ಸಮಾನವಾಗಿ ನೋಡುವ ಗದಗಿನ ತೋಂಟದಾರ್ಯ ಮಠಕ್ಕೆ ಹಣವನ್ನು ಏಕೆ ಕೊಡಲಿಲ್ಲ? ಮೂರು

ವರ್ಷಗಳಿಂದ ಹತ್ತು ಪೈಸೆಯನ್ನು ಕೊಡಲಿಲ್ಲ. ಅವರು ನಿರ್ಭೀಡೆಯಿಂದ ಮಾತನಾಡುತ್ತಾರೆ. ಅಂತಹವರಿಗೆ ಏಕೆ ಮಾಡಲಿಲ್ಲ.

**ಶ್ರೀ ಗೋ. ಮಧುಸೂದನ್:–** ಅವರ ಸರ್ಕಾರ ಇದ್ದಾಗ ಹಣವನ್ನು ಕೊಟ್ಟಿತ್ತೇ?

**ಶ್ರೀ ಬಸವರಾಜ ಹೊರಟ್ಟಿ:–** ನಮ್ಮ ಸರ್ಕಾರ ಮಠಗಳಿಗೆ ಏನೂ ಕೊಟ್ಟಿಲ್ಲ. ಮಠಗಳಿಗೆ ಏಕೆ ಕೊಡಬೇಕು?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸದಸ್ಯರೇ, ಗದಗಿನ ತೋಂಟದಾರ್ಯ ಮಠವು ಅತ್ಯಂತ ಪ್ರಗತಿಪರ ವಿಚಾರಧಾರೆಗಳನ್ನು ಹೊಂದಿದೆ. Most secular ಮಠ ಕರ್ನಾಟಕ ರಾಜ್ಯದಲ್ಲಿ ಇದೆ ಎಂದಾದರೆ ಅದು ಗದಗಿನ ತೋಂಟದಾರ್ಯ ಶ್ರೀಗಳ ಮಠವಾಗಿದೆ.

**ಶ್ರೀ ಮುರುಗೇಶ್ ನಿರಾಣಿ:–** ಮಾನ್ಯ ಹೊರಟ್ಟಿಯವರು ಸಲಹೆ ಕೊಟ್ಟಿರುವುದು ಬಹಳ ಒಳ್ಳೆಯದಿದ್ದು, ನಾವು ಒಂದೇ ವರ್ಷದಲ್ಲಿ ರಾಜ್ಯದಲ್ಲಿರುವ ಎಲ್ಲಾ ಮಠಗಳಿಗೂ ಹಣ ಕೊಡುವುದಕ್ಕೆ ಆಗುವುದಿಲ್ಲ. ಇವತ್ತಿನ ಸಲಹೆಯಂತೆ ಹಂತಹಂತವಾಗಿ ಮುಂದಿನ ವರ್ಷದಲ್ಲಿ ನಮ್ಮದೇ ಸರ್ಕಾರ ಬರುತ್ತದೆ, ಆಗ ಹಣವನ್ನು ಕೊಡುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಅಲ್ಲಿನ ಅಕ್ಕಪಕ್ಕದ ಮಠಗಳಿಗೆ ಹಣವನ್ನು ಕೊಟ್ಟಿದ್ದಾರೆ. ಆದರೆ ಈ ಮಠಕ್ಕೆ ಹಣ ಏಕೆ ಕೊಟ್ಟಿಲ್ಲ ಎಂದು ಮಾನ್ಯ ಸಚಿವರಿಗೆ ಗೊತ್ತಿದೆ ಹಾಗೂ ನನಗೂ ಗೊತ್ತಿದೆ. ಪುನಃ ಅದನ್ನು ಇಲ್ಲಿ ತರುವುದು ಬೇಡ. ಏನೆಂದರೆ ಆ ಮಠದವರು ಅಲ್ಪಸಂಖ್ಯಾತರು, ಎಸ್.ಸಿ., ಎಸ್‌ಟಿ., ಎಲ್ಲರನ್ನು ಸಮಾನವಾಗಿ ನೋಡುತ್ತಾರೆ. ಅವರು ಎಸ್‌ಸಿ., ಎಸ್‌ಟಿ., ಮತ್ತು ಮುಸಲ್ಮಾನರನ್ನು ಜಾತ್ರೆಗಳಿಗೆ ಅಧ್ಯಕ್ಷರನ್ನಾಗಿ ಮಾಡುತ್ತಾರೆ.

**ಶ್ರೀ ವಿ. ಸೋಮಣ್ಣ:–** ಕಡತಕ್ಕೆ ತಪ್ಪಾಗಿ ಹೋಗುವುದು ಬೇಡ, ಎಲ್ಲಾ ಮಠಗಳು ಕೂಡ ಜಾತ್ಯಾತೀತವಾಗಿ ನಡೆದುಕೊಳ್ಳುತ್ತವೆ. ನಾವುಗಳು ಎಲ್ಲೋ ಒಂದು ಕಡೆ ಕವಲು ದಾರಿಗೆ ತೆಗೆದುಕೊಂಡು ಹೋಗುವುದು ಬೇಡ.

**ಶ್ರೀ ಬಸವರಾಜ ಹೊರಟ್ಟಿ:–** ನಾನು ಉಳಿದ ಮಠಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಮಠದ ಬಗ್ಗೆ ನಡೆದ ರಾಜಕಾರಣದ ಬಗ್ಗೆ ಹೇಳುತ್ತಿದ್ದೇನೆ. ನಾನು ಸಮೀಪದವನಾಗಿ ಹೇಳುತ್ತಿದ್ದೇನೆ. ಅವರು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಲಿ. ಮಾನ್ಯ ಮುರುಗೇಶ್ ನಿರಾಣಿಯವರು ಹಾಗೂ ಮಾನ್ಯ ಉಮೇಶ್ ಕತ್ತಿಯವರು ಹೇಳಲಿ. ಮೂರು ವರ್ಷಗಳಿಂದ ಎಲ್ಲಾ ಮಠಗಳಿಗೂ ಕೊಡುತ್ತಾ ಬಂದಿದ್ದಾರೆ, ಆದರೆ ಆ ಮಠ ಯಾರ ಕಣ್ಣಿಗೂ ಕಾಣಲಿಲ್ಲ. ಇಂತಹ ಪ್ರಗತಿಪರವಾದ ಮಠಕ್ಕೆ ಉತ್ತೇಜನ ಕೊಡಲಿಲ್ಲ. ಮಾನ್ಯ ಮಧುಸೂದನ್‌ರವರು ಮಾತನಾಡಿದ ವಿಷಯಕ್ಕೆ ನಾನು ಹೋಗಬೇಕಾಗುತ್ತದೆ. ಅದರಂತೆ ಮಧುಸೂದನ್‌ರವರಿಗೆ ಅನೇಕ ಬಾರಿ ಏಳಬೇಡಿ ಎಂದು ಹೇಳುತ್ತೇನೆ. ಜಾತ್ಯಾತೀತದಲ್ಲಿ ಎಲ್ಲರನ್ನು ಸಮಾನವಾಗಿ ನೋಡಿಕೊಂಡು ಹೋಗಬೇಕಾದ್ದು ನಮ್ಮ ಕರ್ತವ್ಯ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅಂತಹವರನ್ನು ಲಕ್ಷ್ಯ ಮಾಡಿಲ್ಲ. ಅವರು ಇವರನ್ನೇನೂ ಕೇಳುವುದಿಲ್ಲ. ಬೆಳಗಾವಿಯಲ್ಲಿನ ಕಾಡಸಿದ್ದೇಶ್ವರ ಮಠವು ರಾಜ್ಯದ ರೈತರಿಗೆ ಸಾವಯುವ ಕೃಷಿ ಮತ್ತು ರಸಗೊಬ್ಬರಗಳನ್ನು ಬಳಸದೇ ಬೆಳೆಗಳನ್ನು ಬೆಳೆಯುತ್ತದೆ. ರಾಜ್ಯದ ರೈತರಿಗೂ ಅನುಕೂಲವಾಗುತ್ತದೆ. ಅನೇಕರು ಅಲ್ಲಿಗೆ ಹೋಗಿದ್ದಾರೆ, ಆ ಮಠ ಎಷ್ಟು ಚೆನ್ನಾಗಿದೆ ಎಂದು ಹೇಳಲಿ. ಅಲ್ಲಿ ಹಲ್ಲುಪುಡಿಯನ್ನು ಬಳಸಿದರೆ ಹಲ್ಲು ನೋವು ಕಡಿಮೆಯಾಗುತ್ತದೆ. ಅಲ್ಲಿನ ಸೋಪನ್ನು ಬಳಸಿದರೆ ಚರ್ಮರೋಗ ಕಡಿಮೆಯಾಗುತ್ತದೆ. ಇಂತಹ ಉತ್ತಮವಾದ ಮಠವನ್ನು ಯಾರೂ ನೋಡಿಲ್ಲ. ಮೂರು ವರ್ಷಗಳಿಂದ ಎರಡೆರಡು ಕೋಟಿ ರೂಪಾಯಿಗಳನ್ನು ಕೆಲವು ಮಠಗಳಿಗೆ ಕೊಡುತ್ತಾ ಬಂದಿದ್ದು, ಅಲ್ಲಿ ಏನು progress ಇದೆ? ಆದ್ದರಿಂದ ನಾನು ಕೊಡುವುದು ತಪ್ಪು ಎಂದು ಹೇಳುವುದಿಲ್ಲ. ಆದರೆ ಸರ್ಕಾರ ಮಾಡುವ ಕೆಲಸವನ್ನು ಮಾಡುವ ಮಠಗಳಿಗೆ ಹಣವನ್ನು ಕೊಡಲಿ.

( 2–30 ಘಂಟೆ)

ಸನ್ಮಾನ್ಯ ಸಭಾಪತಿಯವರೇ, ಯಾವ ಮಠಗಳು ಸರ್ಕಾರ ಮಾಡುವಂತಹ ಕೆಲಸವನ್ನು ಮಾಡುತ್ತವೆಯೋ ಅಂತಹ ಮಠಗಳಿಗೆ ಹಣವನ್ನು ಕೊಡಲಿ ಬೇಡ ಎನ್ನುವುದಿಲ್ಲ. ಸರ್ಕಾರ ಹಣ ಕೊಟ್ಟ ನಂತರ, ಅದನ್ನು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗುತ್ತದೆ. ಯಾವ ಜಿಲ್ಲಾಧಿಕಾರಿಗಳು ನಮ್ಮ ಮಾತನ್ನು ತೆಗೆದು ಹಾಕುವುದಿಲ್ಲ. ಸರ್ಕಾರವನ್ನು ಟೀಕೆ ಮಾಡುವುದಕ್ಕಾಗಿಯೇ ನಾನು ಇಲ್ಲಿ ನಿಂತು ಮಾತನಾಡುತ್ತಿಲ್ಲ. ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇರಲಿ, ಸದನದಲ್ಲಿ ಮಂತ್ರಿಗಳು ಉತ್ತರವನ್ನು ನೀಡುವಂತಹ ಸಂದರ್ಭದಲ್ಲಿ, ಮಂತ್ರಿಗಳಿಗೆ ಅಧಿಕಾರಿಗಳು ಚೀಟಿ ಬರೆದುಕೊಡುತ್ತಾರೆ. ಅದನ್ನು ಮಂತ್ರಿಗಳು ಓದುತ್ತಾರೆ. ಈ ರೀತಿ ಅಧಿಕಾರಿಗಳು ಬರೆದುಕೊಟ್ಟ ಚೀಟಿಯನ್ನು ಓದುವಾಗ ಅದರಲ್ಲಿರುವ ಮಾಹಿತಿ ಮತ್ತು ಅಂಕಿಅಂಶಗಳ ಬಗ್ಗೆ ಮಂತ್ರಿಯಾದವರು ಗಮನ ಕೊಡಬೇಕೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಹಿಂದೆ ಶ್ರೀಯುತ ಎಸ್.ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಐದು ಗಂಟೆಗಳ ಕಾಲ ಆಯವ್ಯಯದ ಮೇಲೆ ಭಾಷಣ ಮಾಡಿದ್ದರು. ಅಷ್ಟು ದೀರ್ಘವಾಗಿರುವಂತಹ ಭಾಷಣ ಮಾಡಿ, ರೈತರ 10 ಹೆಚ್.ಪಿ. ಸಾಮರ್ಥ್ಯದ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್‌ನ್ನು ಕೊಡುವಂತಹ ಉತ್ತಮ ಕೆಲಸವನ್ನು ಮಾಡಿದ್ದರು. ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಮೂರು ಗಂಟೆಗಳ ಕಾಲ ನೀರು ಸಹ ಕುಡಿಯದಂತೆ ಆಯವ್ಯಯದ ಮೇಲೆ ಭಾಷಣ ಮಾಡಿದ್ದಾರೆ. ಇವರೂ ಸಹ ಮಾನ್ಯ ಬಂಗಾರಪ್ಪನವರು ಮಾಡಿದಂತೆ ರೈತರಿಗೆ ಅನುಕೂಲವಾಗುವಂತಹ ಯಾವುದಾದರೊಂದು ಒಳ್ಳೆಯ ಯೋಜನೆಯನ್ನು ಘೋಷಣೆ ಮಾಡಬೇಕಾಗಿತ್ತು ಅಥವಾ ರೈತರಿಗೆ ಸಹಾಯಕವಾಗುವಂತಹ ಏನಾದರೊಂದು ಕೊಡುಗೆಯನ್ನು ಆಯವ್ಯಯದಲ್ಲಿ ಕೊಡಬೇಕಾಗಿತ್ತು ಎನ್ನುವುದು ನನ್ನ ಅನಿಸಿಕೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ಆಯವ್ಯಯದಲ್ಲಿ ಶಿವಮೊಗ್ಗ ಜಿಲ್ಲೆಗೆ ಆದತ್ಯೆಯನ್ನು ಕೊಟ್ಟಿದ್ದರು, ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಹಾಸನ ಜಿಲ್ಲೆಗೆ ಆದ್ಯತೆಯನ್ನು ನೀಡಿದ್ದರು. ಮಾನ್ಯ ಡಿ.ವಿ. ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಮಂಗಳೂರು ಜಿಲ್ಲೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು. ಹಾಗೆಯೇ ಮಾನ್ಯ ಜಗದೀಶ್ ಶೆಟ್ಟರ್‌ರವರು ಉತ್ತರ ಕರ್ನಾಟಕ್ಕೆ ಆದ್ಯತೆಯನ್ನು ನೀಡಿದ್ದಾರೆ. ನಾನು ಅದನ್ನು ಸ್ವಾಗತಿಸುತ್ತೇನೆ ಮತ್ತು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಹಳ್ಳಿಗಳಲ್ಲಿ ಶೇಕಡಾ 75ರಷ್ಟು ಜನ ರೈತರು ಬಡತನದಲ್ಲಿ ಬೇಯುತ್ತಿದ್ದಾರೆ. ಅವರಿಗೊಂದು ಹೊಸ ಯೋಜನೆಯನ್ನು ರೂಪಿಸಿ ಅದಕ್ಕೊಂದಿಷ್ಟು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೆ, ಮಾನ್ಯ ಜಗದೀಶ್ ಶೆಟ್ಟರ್ ಅವರ ಹೆಸರು ಶಾಶ್ವತವಾಗಿ ಉಳಿಯುತ್ತಿತ್ತು ಎನ್ನುವುದು ನನ್ನ ಭಾವನೆಯಾಗಿದೆ. ಅವರು ಆ ಕೆಲಸವನ್ನು ಮಾಡುವುದಕ್ಕೆ ನಮ್ಮ ಮಧುಸೂದನ್ ಮತ್ತು ಕಂಪನಿಯವರು ಬಿಡುವುದಿಲ್ಲ. ಹೀಗೆ ಬರೆಯಬೇಕು, ಇಷ್ಟೇ ಕೊಡಬೇಕು ಎಂದು ಹೇಳುತ್ತಾರೆ. ಅವರ 'ರಿಮೋಟ್ ಕಂಟ್ರೋಲ್' ಅವರ ಕೈಯಲ್ಲಿ ಇರುವಾಗ ಮಾನ್ಯ ಮುಖ್ಯಮಂತ್ರಿಗಳು ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಮಾನ್ಯ ಮಧುಸೂದನ್‌ರವರು 'ರಿಮೋಟ್ ಕಂಟ್ರೋಲ್'ನ್ನು ಸಡಿಲಗೊಳಿಸಿದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. 2012-13ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು,

"ರಾಜ್ಯದಲ್ಲಿ ಶೇಕಡಾ 100ರಷ್ಟು ಶಾಲಾ ಪ್ರವೇಶಾವಕಾಶ ಒದಗಿಸಲಾಗಿದೆ. ಕಳೆದ 5 ವರ್ಷಗಳಲ್ಲಿ ಈ ಕೆಳಕಂಡ ಸಾಧನೆಗಳನ್ನು ಮಾಡಲಾಗಿದೆ;

1. ಪ್ರತಿವರ್ಷ 66 ಲಕ್ಷ ವಿದ್ಯಾರ್ಥಿಗಳಿಗೆ ಅಕ್ಷರದಾಸೋಹಕ್ಕಾಗಿ 228.30 ಕೋಟಿ ರೂಪಾಯಿಗಳನ್ನು ಪಠ್ಯಪುಸ್ತಕಕ್ಕಾಗಿ 320 ಕೋಟಿ ರೂಪಾಯಿಗಳನ್ನು ಮತ್ತು ಸಮವಸ್ತ್ರಕ್ಕಾಗಿ 367.50 ಕೋಟಿ ರೂಪಾಯಿಗಳ ವೆಚ್ಚ.

2. 8ನೇ ತರಗತಿಯಲ್ಲಿ ಓದುತ್ತಿರುವ 5.5 ಲಕ್ಷ ಮಕ್ಕಳಿಗೆ ಬೈಸಿಕಲ್ ವಿತರಣೆಗೆ ಒಟ್ಟು 740 ಕೋಟಿ ರೂಪಾಯಿಗಳ ವೆಚ್ಚ"

ಎಂದು ಹೇಳಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಅವರು ಈ ಮೇಲೆ ಹೇಳಿರುವ ಸಾಧನೆಗಳನ್ನು ಮಾಡಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿ ಇದ್ದಾಗ, ನಾನು ಶಿಕ್ಷಣ ಸಚಿವನಾಗಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ ಮಾಡುವ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಅದನ್ನು ಇವರ ಸಾಧನೆ ಎಂದು ಹೇಳಿಕೊಂಡಿದ್ದಾರೆ. ಶಾಲಾ ಕಟ್ಟಡಗಳು, ಪಂಚ ಸೌಲಭ್ಯಗಳು ಮತ್ತು ಇತ್ಯಾದಿಗಳಿಗೆ 551 ಕೋಟಿ ರೂಪಾಯಿಗಳ ವೆಚ್ಚ" ಎಂದು ಹೇಳಿದ್ದಾರೆ. ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಇದಕ್ಕಾಗಿ 500 ಕೋಟಿ ರೂಪಾಯಿಗಳನ್ನು ಪಡೆದುಕೊಳ್ಳಲಾಗಿತ್ತು. ಕಳೆದ ಐದು ವರ್ಷದಲ್ಲಿ ಇವರು ಕೇವಲ 51 ಕೋಟಿ ರೂಪಾಯಿಗಳನ್ನು ಮಾತ್ರ ಪಡೆದುಕೊಂಡಿದ್ದಾರೆ, 1,147 ಹೊಸ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಪ್ರಾರಂಭಿಸಲಾಗಿದೆ ಎಂದು ಹೇಳಿದ್ದಾರೆ. ಆಯವ್ಯಯದಲ್ಲಿಯೂ ಇವರು ಸುಳ್ಳು ಹೇಳುತ್ತಿದ್ದಾರೆ. ನಮ್ಮ ಸರ್ಕಾರದ ಅಧಿಕಾರ ಅವಧಿಯಲ್ಲಿ 1,039 ಪ್ರೌಢಶಾಲೆಗಳನ್ನು ಮತ್ತು 500 ಜೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದೆವು. ನಾನು ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರಿಗೆ ಚಾಲೆಂಜ್ ಮಾಡುತ್ತಿದ್ದೇನೆ. ಅವರ ಸರ್ಕಾರ ಅಧಿಕಾರಕ್ಕೆ ಬಂದ ಈ ಐದು ವರ್ಷದಲ್ಲಿ ಒಂದು ಸಕಾರಿ ಪ್ರೌಢ ಶಾಲೆಯನ್ನು ಅಥವಾ ಒಂದು ಜೂನಿಯರ್ ಕಾಲೇಜನ್ನು ಮಂಜೂರು ಮಾಡಿದ್ದರೆ ಮತ್ತು ಎಷ್ಟು ಜನ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿದ್ದಾರೆ ಎನ್ನುವುದನ್ನು ತಿಳಿಸಲಿ. ಸಮ್ಮಿಶ್ರ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರು ಹಣಕಾಸು ಸಚಿವರಾಗಿದ್ದ 20

ತಿಂಗಳ ಕಾಲಾವಧಿಯಲ್ಲಿ 54,000 ಜನ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿದ್ದೆವು. ಈಗ ಇವರು ಐದು ವರ್ಷಗಳ ಅವಧಿಯಲ್ಲಿ ಒಂದು ಶಾಲೆಯನ್ನು ತೆರೆದಿಲ್ಲ, ಒಬ್ಬ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿಲ್ಲ. ಈಗ ನಮ್ಮ ಒತ್ತಾಯದ ಮೇಲೆ 4,000 ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಇವರು ಒಂದೆರಡು ಒಳ್ಳೆಯ ಕೆಲಸ ಮಾಡಿರಬಹುದು, ಇಲ್ಲವೆಂದು ಹೇಳುವುದಿಲ್ಲ. ಆದರೆ, ಆಯವ್ಯಯದಲ್ಲಿ ಸುಳ್ಳು ಹೇಳುವುದಕ್ಕೆ ಏಕೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಸರ್ಕಾರ 2008ರಲ್ಲಿ ಅಧಿಕಾರಕ್ಕೆ ಬಂದ ನಂತರ ಇಲ್ಲಿಯವರೆಗೆ ಒಂದು ಪ್ರೌಢ ಶಾಲೆಯನ್ನು ಅಥವಾ ಒಂದು ಜೂನಿಯರ್ ಕಾಲೇಜನ್ನು ತೆರೆದಿದ್ದರೆ ಅದರ ಹೆಸರು ಹೇಳಿಬಿಡಲಿ. ಎಷ್ಟು ಜನ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ ಅದರ ವಿವರವನ್ನು ಹೇಳಲಿ. ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಸುಮಾರು 48,313 ಜನ ಶಿಕ್ಷಕರನ್ನು ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ನೇಮಕ ಮಾಡಿದ್ದೇವೆ. ಅದನ್ನು ಹೊರತುಪಡಿಸಿ, ಇವರು ಎಷ್ಟು ಹೊಸ ನೇಮಕಾತಿಗಳನ್ನು ಮಾಡಿಕೊಂಡಿದ್ದಾರೆ ಎನ್ನುವುದನ್ನು ಹೇಳಲಿ.

**ಶ್ರೀ ಗೋ. ಮಧುಸೂದನ್;–** ಸನ್ಮಾನ್ಯ ಸಭಾಪತಿಯವರೇ, ಅನುದಾನ ರಹಿತ ಶಾಲೆಗಳಿಗೆ ಅವರು ಅನುದಾನವನ್ನು ಕೊಟ್ಟಿರಲಿಲ್ಲ. ನಾವು ಸಾವಿರಾರು ಶಾಲೆಗಳಿಗೆ ಅನುದಾನವನ್ನು ನೀಡಿದ್ದೇವೆ. ಹಿಂದೆ ಆಡಳಿತ ಮಂಡಲಿಯವರು ನೀಡುತ್ತಿದ್ದ ಕನಿಷ್ಠ ಸಂಬಳವನ್ನು ಅಲ್ಲಿನ ಶಿಕ್ಷಕರು ತೆಗೆದುಕೊಳ್ಳುತ್ತಿದ್ದರು. ಈಗ ನಾವು ಸರ್ಕಾರಿ ಸಂಬಳವನ್ನು ತೆಗೆದುಕೊಳ್ಳುವ ಹಾಗೆ ಮಾಡಿದ್ದೇವೆ. ಮೊನ್ನೆ ಮೊನ್ನೆಯವರೆಗೆ ಅನುದಾನಕ್ಕೆ ಒಳಪಡಿಸುವ ಫೈಲ್‌ಗಳು ಕ್ಲಿಯರ್ ಆಗುತ್ತಿವೆ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ವಾಸ್ತವಾಂಶಗಳನ್ನು ನೋಡಿಕೊಂಡು ಮಾತನಾಡಬೇಕಾಗುತ್ತದೆ. ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಸುಮಾರು 23,000 ಅನುದಾನ ರಹಿತ ಶಾಲೆಗಳ ಶಿಕ್ಷಕರ ಸರ್ಕಾರಿ ಸಂಬಳವನ್ನು

ತೆಗೆದುಕೊಳ್ಳುವಂತೆ ಮಾಡಿದ್ದೆವು. ನಾನು ಶಿಕ್ಷಣ ಸಚಿವನಾಗಿದ್ದ ಕಾಲದಲ್ಲಿ, 1987–1994 ವರೆಗಿನ ಅನುದಾನ ರಹಿತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲಾಗಿತ್ತು. ಇದಕ್ಕಾಗಿ ನಾವು 50 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಇಟ್ಟಿದ್ದೆವು. ಈಗ ಇವರು ಆ ಹಣವನ್ನು ಉಪಯೋಗಿಸಿಕೊಂಡು 1994–95ನೇ ಸಾಲಿನಲ್ಲಿ ಪ್ರಾರಂಭವಾದ ಅನುದಾನರಹಿತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿದ್ದಾರೆ. ಆ ಅನುದಾನವನ್ನು ಪಡೆದುಕೊಳ್ಳುವುದಕ್ಕಾಗಿ ನಾನು ಅಮರಣಾಂತ ಉಪವಾಸ ಮಾಡಿದ್ದೆ. ಇವರು ಅಧಿಕಾರಕ್ಕೆ ಬಂದ ಮೇಲೆ ಕ್ರಿಶ್ಚಿಯನ್ ಆಡಳಿತ ಮಂಡಲಿಯ ಶಾಲೆಗಳು ಯಾವುದು ಇದೆ, ಮುಸ್ಲಿಂ ಆಡಳಿತ ಮಂಡಲಿಯ ಶಾಲೆಗಳು ಯಾವುದು ಇದೆ ಮತ್ತು ಹಿಂದು ಆಡಳಿತ ಮಂಡಲಿಯ ಶಾಲೆಗಳು ಯಾವುದು ಇವೆ ಎನ್ನುವುದನ್ನು ನೋಡಿ ನೋಡಿ ಅನುದಾನವನ್ನು ಕೊಟ್ಟಿದ್ದಾರೆ. ಇದಕ್ಕೆ ಬೇಕಾದರೆ ನಾನು ಮಾಹಿತಿಯನ್ನು ಕೊಡುತ್ತೇನೆ.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ನನ್ನ ಕ್ಷೇತ್ರವಾದ ಮೈಸೂರಿನಲ್ಲಿ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಆಡಳಿತ ಮಂಡಲಿಯ ಎರಡು ಶಾಲೆಗಳಿಗೆ ಅನುದಾನವನ್ನು ನೀಡಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಸುಮಾರು 398 ಕೋಟಿ ರೂಪಾಯಿಗಳಿಗೆ ಪ್ರಸ್ತಾವನೆಯನ್ನು ಕಳುಹಿಸಿ, ಹಣಕಾಸು ಇಲಾಖೆಯಿಂದ ಅನುಮೋದನೆಯನ್ನು ಪಡೆದುಕೊಂಡಿದ್ದೆವು. ಇವರು ಅದನ್ನು ಹಾಗೆಯೇ ಇಟ್ಟುಕೊಂಡು ಕುಳಿತುಕೊಂಡಿದ್ದರು. ನಾನು ಅಮರಣಾಂತ ಉಪವಾಸ ಮಾಡಿದ ಮೇಲೆ, ಆಗಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಯಡಿಯೂರಪ್ಪನವರು ಹಣವನ್ನು ಬಿಡುಗಡೆ ಮಾಡಿದರು.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಅವರು ಅಮರಣಾಂತ ಉಪವಾಸ ಕುಳಿತ ಮೇಲೆ ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ.

ಅನುದಾನ ಕೊಡುತ್ತೇವೆಂದು ಗೊತ್ತಾದ ಮೇಲೆ ಅವರು ಉಪವಾಸ ಕುಳಿತುಕೊಂಡರು.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾಚಿಕೆ ಮರ್ಯಾದೆ ಇರುವವರಿಗೆ ಹೇಳಬಹುದು ಎಲ್ಲ ಬಿಟ್ಟವರಿಗೆ ಏನು ಹೇಳುವುದು? 'ಎಲ್ಲ ಬಿಟ್ಟವರು ಊರಿಗೆ ದೊಡ್ಡವರು' ಎನ್ನುವ ಗಾದೆ ಮಾತಿದೆ. ನಾನು ಉಪವಾಸ ಕುಳಿತಾಗ ಅನುದಾನ ಕೊಡುತ್ತೇವೆಂದು ಲಿಖಿತರೂಪದಲ್ಲಿ ಭರವಸೆ ಕೊಟ್ಟರು. ಮಾನ್ಯ ಯಡಿಯೂರಪ್ಪನವರು ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ಅನುದಾನ ಬಿಡುಗಡೆ ಮಾಡುವಂತೆ ಹೇಳಿದರು. ಎಲ್ಲ ರಾಜಕಾರಣಿಗಳೂ ಸ್ವಾರ್ಥಿಗಳು, ಇಲ್ಲವೆಂದು ನಾನು ಹೇಳುವುದಿಲ್ಲ. ಸ್ವಾರ್ಥ ಇದ್ದರೂ ಕೂಡ ಸ್ವಲ್ಪವಾದರೂ ಜನಪರ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ಇವರು ಯಾವುದೇ ಜನಪರ ಕಾರ್ಯಕ್ರಮಗಳನ್ನು ಮಾಡಿಲ್ಲವೆಂದು ನಾನು ಹೇಳುತ್ತೇನೆ. ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಆಯವ್ಯಯವನ್ನು ಮಂಡಿಸಿದ್ದಾರೆ. ಜನ ಆಶೀರ್ವಾದ ಮಾಡಿ ಇವರಿಗೆ ಅಧಿಕಾರವನ್ನು ಕೊಟ್ಟರು, ಇವರು ಅಪರೇಶನ್ ಕಮಲ ಮಾಡಿಕೊಂಡು ಇಡೀ ಐದು ವರ್ಷಗಳ ಕಾಲ ಚುನಾವಣೆಗಳನ್ನೇ ನಡೆಸಿದ್ದಾರೆ. ಅವರು ಪಕ್ಷ ಬಿಟ್ಟರು, ಇವರು ಪಕ್ಷ ಬಿಟ್ಟರು ಎನ್ನುವುದೇ ದೊಡ್ಡ ಸಂಗತಿ ಆಯಿತು. ಈ ಐದು ವರ್ಷಗಳಲ್ಲಿ ರಾಜ್ಯದ ಜನರ ಕಲ್ಯಾಣಕ್ಕಾಗಿ ಯಾವುದಾದರೊಂದು ಕಾರ್ಯಕ್ರಮವನ್ನು ಮಾಡಿದ್ದರೆ ಅದನ್ನು ಅವರು ಹೇಳಲಿ.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಜೆ.ಓ.ಸಿ. ಶಿಕ್ಷಕರನ್ನು ಅನುದಾನಕ್ಕೆ ಒಳಪಡಿಸಿದ್ದೇವೆ ಅದನ್ನು ಅವರು ಹೇಳಬೇಕಾಗುತ್ತದೆ.

**ಸಭಾಪತಿಯವರು:–** ಮಾನ್ಯ ಮಧುಸೂದನ್‌ರವರೇ, ಮಾನ್ಯ ಹೊರಟ್ಟಿಯವರು ಮಾತುಗಳನ್ನು ಮುಗಿಸುವುದಕ್ಕೆ ನೀವು ಬಿಡುತ್ತಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಬಹಳಷ್ಟು ವಿಷಯಗಳ ಬಗ್ಗೆ ಮಾತನಾಡಬೇಕೆಂದು ನಾನು ತಯಾರಿ ಮಾಡಿಕೊಂಡು

ಬಂದಿದೆ ಆದರೆ, ಸಮಯದ ಅಭಾವ ಇರುವುದರಿಂದ ನನ್ನ ಮಾತುಗಳನ್ನು ಬೇಗ ಮುಗಿಸಬೇಕಾಗಿದೆ. ಸನ್ಮಾನ್ಯ ಸಭಾಪತಿಯವರೇ, ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಜನರನ್ನು ತಪ್ಪು ದಾರಿಗೆ ಎಳೆಯಲು ಈ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ. ಮುಂದೆ ಹೊಸದಾಗಿ ಬರುವ ಹಣಕಾಸು ಸಚಿವರಿಗೆ ಇವರು ತೊಂದರೆ ಕೊಡುತ್ತಿದ್ದಾರೆ. ಅವರು ಏನು ಮಾಡುತ್ತಾರೋ, ಏನು ಬಿಡುತ್ತಾರೋ ದೇವರಿಗೇ ಗೊತ್ತು. ಅವರು ಇವತ್ತು ಇರುತ್ತಾರೆ, ನಾಳೆ ಅಧಿಕಾರದಿಂದ ಹೊರಗೆ ಹೋಗುತ್ತಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಮುಂದೆಯೂ ನಾವೇ ಅಧಿಕಾರದಲ್ಲಿ ಇರುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಶೆಟ್ಟಿಯ ಲೆಕ್ಕದ ಕಥೆಯನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಒಬ್ಬ ಶೆಟ್ಟಿ ಎಲ್ಲರ ಬಳಿ ಸಾಲ ತೆಗೆದುಕೊಳ್ಳುತ್ತಾನೆ, ಸಾಲ ಹೆಚ್ಚಾದಾಗ ಮಧ್ಯ ರಾತ್ರಿ ಶೆಟ್ಟಿ ತನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಊರು ಬಿಟ್ಟು ಪಟ್ಟಣ ಸೇರಿಸಿಕೊಳ್ಳುತ್ತಾನೆ. ಅದಕ್ಕಾಗಿಯೇ 'ಶೆಟ್ಟಿ ಕೆಟ್ಟು ಪಟ್ಟಣ ಸೇರಿದ' ಎನ್ನುವ ಗಾದೆ ಮಾತಿದೆ. ಅದೇ ರೀತಿಯಲ್ಲಿ ಜಗದೀಶ್ ಶೆಟ್ಟರ್ ಅವರನ್ನು ಕೆಡಿಸಿ, ಇಡೀ ರಾಜ್ಯವನ್ನು ಹಾಳು ಮಾಡಿದ್ದೇವೆ ಎನ್ನುವ ರೀತಿಯಲ್ಲಿ ಈ ಆಯವ್ಯಯವನ್ನು ಮಂಡಿಸಲಾಗಿದೆ. ಇನ್ನು ಮೇಲಾದರೂ ಅವರಿಗೆ ಬುದ್ಧಿ ಬರಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಸಭಾಪತಿಯವರು:–** ಒಂದೆರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಈ ದಿನ ಒಟ್ಟು ಎಷ್ಟು ಸಮಯ ಚರ್ಚೆಗೆ ಲಭ್ಯವಿದೆ ಎನ್ನುವುದನ್ನು ಬೆಳಿಗ್ಗೆಯೇ ಹೇಳಿದ್ದೇನೆ. ಈಗ ಉಳಿದಿರು ಸಮಯವನ್ನು ದಾಮಾಷಾದಲ್ಲಿ ಹಂಚಬೇಕಾಗಿದೆ. ಈ ಸದನದ ಎಲ್ಲ ಪಕ್ಷಗಳ ಸದಸ್ಯರ ಸಂಖ್ಯೆಯ ಆಧಾರದ ಮೇಲೆ ನಾನು ಸಮಯವನ್ನು ಹಂಚಿಕೆ ಮಾಡಬೇಕಾಗುತ್ತದೆ. ಈ ರೀತಿ ಸಮಯವನ್ನು ಹಂಚತಕ್ಕಂಥ ಸಂದರ್ಭದಲ್ಲಿ ನನ್ನ ಹತ್ತಿರ ಇನ್ನೆಷ್ಟು ಸಮಯವಿದೆ ಎಂದು ನೋಡಿಕೊಂಡು ಹಂಚುತ್ತೇನೆ.

ಸದನವನ್ನು ಭೀಜನ ವಿರಾಮಕ್ಕಾಗಿ ಮುಂದೂಡಿ ನಂತರ ಸದನ ಸೇರಿದ ಮೇಲೆ ಇವತ್ತು ನನಗೆ ಇನ್ನು ಒಟ್ಟು ಮೂರರಿಂದ ಮೂರುವರೆ ಗಂಟೆಗಳ ಕಾಲ ಸಿಗುತ್ತದೆ. ಭೋಜನ ವಿರಾಮದ ನಂತರ 180+30 ಅಂದರೆ ಸುಮಾರು 200 ನಿಮಿಷಗಳ ಕಾಲ ನನಗೆ ಸಿಗುತ್ತದೆ. ಆ 200 ನಿಮಿಷಗಳನ್ನು ನಮ್ಮ ಪಕ್ಷಗಳಿಗೆ ಹೇಗೆ ಹಂಚಿಕೆ ಮಾಡಬಹುದು ಎಂಬುದನ್ನು ಯೋಚನೆ ಮಾಡಿ ನಾನು ಹಂಚಿಕೆ ಮಾಡಿದ್ದೇನೆ. ಅದರ ಪ್ರಕಾರ ಆಡಳಿತ ಪಕ್ಷಕ್ಕೆ ಸುಮಾರು 2 ಗಂಟೆಗಳ ಕಾಲ ಕೊಡಬಹುದು. ಒಟ್ಟು 200 ನಿಮಿಷಗಳಾಗುತ್ತದೆ. They are more than 2/3rd ಅವರು 45 ಜನರಿದ್ದಾರೆ. ಈಗ ನಾನೇನು ಮಾಡಬೇಕೆಂದು ನಿಮ್ಮ ಅಭಿಪ್ರಾಯವನ್ನು ಹೇಳಿ. ನಾನು ಹೇಳಿದ್ದು ಸರಿಯಿಲ್ಲವೆಂದರೆ ನಾನು ಏನು ಮಾಡಬೇಕೆಂಬುದನ್ನು ಹೇಳಿ. ಸರ್ಕಾರದವರು ಒಪ್ಪುವುದಾದರೆ ಪ್ರತಿಪಕ್ಷಗಳಿಗೆ ಪೂರ್ತಿ ಮೂರುವರೆ ಗಂಟೆಗಳ ಸಮಯವನ್ನು ಕೊಡೋಣ. ಆಡಳಿತ ಪಕ್ಷದ ಸದಸ್ಯರು ಮಾತನಾಡಲು ಸಮಯಾವಕಾಶವೇ ಬೇಡವೆಂದರೆ ಅದು ಹೇಗೆ ಸರಿಯಾಗುತ್ತದೆ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಸದಸ್ಯರು ಮಾತನಾಡಲು ಅವಕಾಶವನ್ನು ಕೊಡಿ, ಅವರು ಸಹ ಮಾತನಾಡಲಿ.

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅದು ಆಡಳಿತ ಪಕ್ಷದ ಸದಸ್ಯರಿರಬಹುದು, ವಿರೋಧ ಪಕ್ಷದ ಸದಸ್ಯರಿರಬಹುದು ಸದನದ ಎಲ್ಲಾ ಸದಸ್ಯರು ಮಾತನಾಡಬೇಕೆಂಬುದು ನನ್ನ ಒಂದು ಆಸೆ. ಇರುವ ಸಮಯವನ್ನೇ ನಾನು ಹಂಚಬೇಕಾಗುತ್ತದೆ. ಈ ರೀತಿ ನಾನು ಸಮಯನವನ್ನು ಹಂಚಬೇಕಾದಾಗ ಮಾತನಾಡುವವರು ಸಹಕಾರವನ್ನು ಕೊಡದೇ ಹೋದರೆ ಹೇಗೆ. ನಾನು ಪ್ರತಿಪಕ್ಷದ ನಾಯಕರಿಗೆ control ಮಾಡುವುದಿಲ್ಲ. ಅವರು ಸುಮಾರು ಮೂರುವರೆ ಗಂಟೆಗಳ ಕಾಲ ಮಾತನಾಡಿದರು. ಮಾನ್ಯ ನಾಣಯ್ಯನವರು ಇಲ್ಲವೆನ್ನುವ ಕಾರಣಕ್ಕಾಗಿ ಸನ್ಮಾನ್ಯ ಹೊರಟ್ಟಿಯವರು ಸುಮಾರು 55 ನಿಮಿಷಗಳ ಕಾಲ ಮಾತನಾಡಿದರು. ಅವರು

1.45ಕ್ಕೆ ತಮ್ಮ ಮಾತುಗಳನ್ನು ಪ್ರಾರಂಭ ಮಾಡಿ 2.40ಕ್ಕೆ ಮುಗಿಸಿದ್ದಾರೆ. ಸಮಯವಿದ್ದರೆ ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ. ಇನ್ನು ಮುಂದೆ ಮಾತನಾಡುವವರು, ನಾನು ಯಾರನ್ನೇ ಕರೆಯಲಿ ಅವರು ಹುಷಾರಾಗಿ.... ಇನ್ನೊಂದು ವಿಚಾರವೆಂದರೆ ಸದನದಲ್ಲಿ ನಾನು ಇರುವುದಿಲ್ಲ. ಆದರೆ ಭಾಷಣ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಯಾರಾದರೂ ಬಂದರೆ, ಯಾರ್ಯಾರು ಇದ್ದಾರೆ ಯಾರ್ಯಾರು ಇಲ್ಲವೆಂದು ನಾನು ಕಣ್ಣಿಟ್ಟು ನೋಡುತ್ತಿದ್ದೇನೆ. ಯಾರು ಹಾಜರಿ ಇಲ್ಲ ಅವರ ಹೆಸರನ್ನೇ ಕರೆಯುವುದಿಲ್ಲ. ದಯಮಾಡಿ ಯಾರೂ ಸಹ ತಪ್ಪು ತಿಳಿಯಬಾರದು. ಸದನದಲ್ಲಿ ಬೆಳಿಗ್ಗಿನಿಂದ ಹಾಜರಿಲ್ಲ ಅಥವಾ ಬಂದು ಸಹಿ ಮಾಡಿ ಹಾಗೆಯೇ ಹೋಗಿಬಿಟ್ಟಿದ್ದಾರೆ ಎಂದರೆ ಯಾರು ಸದನದಲ್ಲಿ ಕುಳಿತಿದ್ದಾರೆ, ಯಾರು ಸದನದಲ್ಲಿ ಕುಳಿತಿಲ್ಲ ಇಂತಹವುಗಳನ್ನೆಲ್ಲಾ ನಾನು ಗಮನಿಸುತ್ತಿದ್ದೇನೆ. ಅಂತಹವರಿಗೆ ನಾನು ಅವಕಾಶ ಕೊಡುವುದಿಲ್ಲ. ಇರುವ ಸಮಯದಲ್ಲಿ ನಾನು ಯಾರಿಗೆ ಅವಕಾಶವನ್ನು ಕೊಡುತ್ತೇನೆಯೋ ಅವರು ಮಿತವಾಗಿ ಒಂದು point ಮೇಲೆ ಮಾತನಾಡಿದರೆ 5 ನಿಮಿಷ ಅಥವಾ 8 ನಿಮಿಷಗಳ ಒಳಗಾಗಿ ಮುಗಿಸಲಿಕ್ಕೆ ಬರುತ್ತದೆ. ಕೆಲವರು ಮನೆಯಲ್ಲಿಯೇ ಕುಳಿತುಕೊಂಡು ಮಾಡುತ್ತಿದ್ದಾರೆ. ಅದಕ್ಕೆ ನಾನೇನು ಮಾಡಲಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ತಾವು ಕೊನೆಗೆ ಬಂದಾಗ 2 ನಿಮಿಷಗಳ ಕಾಲ ಮಾತ್ರ ಮಾತನಾಡಿ ಎಂದು ಹೇಳಿಬಿಡುತ್ತೀರಿ.

**ಸಭಾಪತಿಯವರು:-** ಮೊದಲು ಮಾತನಾಡುವವರು 25 ನಿಮಿಷಗಳ ಕಾಲ ಮಾತನಾಡಿದರೆ ನಾನೇನು ಮಾಡಬೇಕು. ಆದ್ದರಿಂದ ಈಗ ಪ್ರತಿಯಬ್ಬರು ನನ್ನ ಕೆಲಸವನ್ನು ನೀವೇ ಮಾಡಬೇಕು. ಸದನದಲ್ಲಿ 3 ಕಡೆಯೂ ಗಡಿಯಾರವಿದೆ. ನೀವು ಮಾತನಾಡಲು ಪ್ರಾರಂಭ ಮಾಡಿದಾಗ ತಾವೇ ತಮ್ಮ letter pad ಮೇಲೆ ನಾನು ಎಷ್ಟೊತ್ತಿಗೆ ನನ್ನ ಮಾತುಗಳನ್ನು ಪ್ರಾರಂಭ ಮಾಡಿದೆ ಎಂದು ಬರದುಕೊಳ್ಳಿ. ಅಲ್ಲಿಂದ 8 ನಿಮಿಷಗಳಿಗೆ ತಮ್ಮ ಮಾತುಗಳನ್ನು

ಮುಗಿಸುವುದಕ್ಕೆ ಪ್ರಾರಂಭ ಮಾಡಿ. ಕಡೇಪಕ್ಷ 9 ನಿಮಿಷಗಳಿಗಾದರೂ ತಾವು ತಮ್ಮ ಮಾತುಗಳನ್ನು ಮುಗಿಸಬೇಕು. ನೀವು ನನಗೆ ಆ ಕೆಲಸವನ್ನು ವಹಿಸಿದರೆ ನಾನು ರಿಂಗ್ ಮಾಸ್ಟರ್ ಆಗಬೇಕಾಗುತ್ತದೆ. ದಯಮಾಡಿ ನನಗೆ ಆ ಕೆಲಸವನ್ನು ವಹಿಸಬೇಡಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಒಂದು ಪರಿಹಾರವೇನೆಂದರೆ, ನೀವು ಹೊಸ ಸದಸ್ಯರಿಂದ ಆರಂಭಿಸಿ. ಅವರು to the point ಮಾತನಾಡುತ್ತಾರೆ. ಹಿರಿಯ ಸದಸ್ಯರಾದರೆ ನಿಮಗೂ ಸಹ ಸ್ವಲ್ಪ ಹೇಳುವುದು ಕಷ್ಟವಾಗುತ್ತದೆ. ಹೊಸ ಸದಸ್ಯರಿಂದ ಆರಂಭಿಸಿ ಕೊನೆಗೆ ಹಿರಿಯ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕೊಟ್ಟರೆ ಸರಿಯಾಗುತ್ತದೆ.

**ಸಭಾಪತಿಯವರು:–** ನಾನು ಸಭಾಪತಿಯಾದಾಗಿನಿಂದ ನನ್ನ ಮುಂದಿರುವ ಈ ಬೆಲ್‌ನ್ನು ಬಳಕೆ ಮಾಡಿಲ್ಲ. ಸದಸ್ಯರು ಮಾತನಾಡುವಾಗ ಮಧ್ಯದಲ್ಲಿ ಬೆಲ್ ಮಾಡಿ ಹೇಳುವುದಕ್ಕೆ ನನಗೆ ಇಷ್ಟವಿಲ್ಲ. ನಾನು ಇವತ್ತು ಸಹ ಬೆಲ್ಲನ್ನು ಮಾಡುವುದಿಲ್ಲ. ಮಾತನಾಡುವವರೆ ಸ್ವಯಂ ನಿಯಂತ್ರಣ ಮಾಡಿಕೊಳ್ಳಲು ನಾನು ಒಂದು ಸಣ್ಣ ಸಲಹೆಯನ್ನು ಕೊಡುತ್ತಿದ್ದೇನೆ. ನೀವು ಮಾತನಾಡಲು ಎದ್ದು ನಿಂತ ತಕ್ಷಣ ಮೂರು ಕಡೆ ಗಡಿಯಾರವಿದೆ ನಿಮ್ಮ ಎದುರಿಗಿರುವ letter pad ಮೇಲೆ ಸಮಯವನ್ನು ಬರೆದುಕೊಂಡು ಅಲ್ಲಿಂದ 8 ನಿಮಿಷಗಳೊಳಗಾಗಿ ನೀವು ನಿಮ್ಮ ಮಾತುಗಳನ್ನು ಮುಗಿಸಬೇಕು. ಏನೋ ತೊಂದರೆಯಾದರೆ ಅಥವಾ ಮಾತನಾಡುವ ಭರದಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾದರೆ ಇನ್ನೊಂದು ನಿಮಿಷದಲ್ಲಿ ನೀವು ಎಲ್ಲಿದ್ದರೋ ಅಲ್ಲಿಗೆ ಅದನ್ನು ಮುಕ್ತಾಯ ಮಾಡಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇವತ್ತು ಸದನವನ್ನು ಒಂದು ಗಂಟೆ ಕಾಲ ಹೆಚ್ಚಿಗೆ ನಡೆಸಿ. ಸದಸ್ಯರು ಮಾತನಾಡಲಿ. ರಾತ್ರಿ 8 ಗಂಟೆಯವರೆವಿಗೂ ನಡೆಸಿ. ನಾವುಗಳು ಕುಳಿತುಕೊಳ್ಳುತ್ತೇವೆ.

**ಸಭಾಪತಿಯವರು:–** ನಾನು ಎಲ್ಲವನ್ನು ಲೆಕ್ಕ ಇಟ್ಟುಕೊಂಡು ಮಾಡುತ್ತಿದ್ದೇನೆ. ಹೆಚ್ಚಿನ ಸಮಯ ಸದನವನ್ನು ನಡೆಸಲು ನಾನು

ತಯಾರಿದ್ದೇನೆ. ಆದರೆ ನಿನ್ನೆಯ ದಿವಸ ಕಾರಣಾಂತರದಿಂದ ಮಾನ್ಯ ಉಪ ಸಭಾಪತಿಯವರು ಪೀಠದಲ್ಲಿ ಕುಳಿತಿದ್ದರು. 7 ಗಂಟೆಗೆ ನೀವೆಲ್ಲರೂ ಸೇರಿ ಸದನವನ್ನು ಮುಂದೂಡಿ ಸಾಕು ಎಂದು ಹೇಳಿದಿರಿ. ಅಂತಹ ಸಂದರ್ಭದಲ್ಲಿ ನಾನೇನು ಮಾಡಲಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಲಿಕ್ಕೆ ತಯಾರಿದ್ದೆ. ಎಲ್ಲರೂ ಚೀಟಿಯನ್ನು ಕಳುಹಿಸಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇವತ್ತು ರಾತ್ರಿ 8.00 ಗಂಟೆಯವರೆವಿಗೂ ಸದನವನ್ನು ನಡೆಸಿ.

**ಸಭಾಪತಿಯವರು:–** ಬೇಕಾದರೆ ನಾನು ರಾತ್ರಿ 9.00 ಗಂಟೆಯವರೆವಿಗೂ ಸದನವನ್ನು ನಡೆಸುತ್ತೇನೆ. ಅದಕ್ಕೆ ನಾನು ಅವಕಾಶವನ್ನು ಕೊಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಎಲ್ಲಾ ಮಾನ್ಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಭಾಷಣ ಮುಗಿದ ಕೂಡಲೇ ನಾವು ಎದ್ದು ಹೋಗಬಾರದು. ನಾವೆಲ್ಲರೂ ಸದನದಲ್ಲಿ ಕುಳಿತುಕೊಳ್ಳಬೇಕು. ಸದನವನ್ನು 8 ಗಂಟೆಯವರೆವಿಗೂ ನಡೆಸೋಣ.

**ಸಭಾಪತಿಯವರು:–** ಮಾನ್ಯ ಹೊರಟ್ಟಿಯವರೆ, ನೀವು ಇನ್ನೊಂದು ಕಂಡೀಶನ್ ಸಹ ಹೇಳಬೇಕು. ನನ್ನ ಭಾಷಣ ಮುಗಿಯಿತು ನಾನು ಹೊರಟೆ ಎಂದು ಹೋಗಬಾರದು. ಈಗ ನನಗೆ ಒಂದು ಚೀಟಿ ಬಂದಿದೆ. ಅದರಲ್ಲೇನಿದೆ ಎಂದು ಹೇಳಬಾರದು ಆದರೆ ಹೇಳಿಬಿಡುತ್ತೇನೆ. "ನನ್ನ ಬಾಯಿಗೆ ಹೆದರಿ ಎಷ್ಟೊಂದು ಜನ ಸಚಿವರುಗಳು ಕುಳಿತಿದ್ದಾರೆ ನೋಡ್ರಿ" ಎಂದು ಒಂದು ಚೀಟಿಯನ್ನು ಕಳುಹಿಸಿದ್ದಾರೆ. ಹೆದರಿಕೊಂಡು ಅಲ್ಲ ವಿಶ್ವಾಸದಿಂದ ಬಂದು ಕುಳಿತಿದ್ದಾರೆ. ಇವತ್ತು ಸದನದಲ್ಲಿ ಬೆಳಿಗ್ಗೆಯಿಂದ 6 ಜನ ಸಚಿವರು ಬಂದು ಕುಳಿತಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರೆಲ್ಲರೂ ಸದನದಲ್ಲಿರುವುದರಿಂದ ನಾವು ಖುಷಿ ಪಡುತ್ತೇವೆ. ನಮಗೂ ಸಹ ಉತ್ಸಾಹವಿರುತ್ತದೆ. ನಾವು ರಾತ್ರಿ 8.00 ಗಂಟೆಯವರೆವಿಗೂ ಸದನವನ್ನು ನಡೆಸೋಣ. ಎಲ್ಲರೂ ಮಾತನಾಡಲಿ.

**ಸಭಾಪತಿಯವರು:–** ಈ ಬಗ್ಗೆ ನನಗೆ ತಾವುಗಳು ಸಹಕಾರವನ್ನು ಕೊಡಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಆಯಿತು.

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರು ನನಗೆ ಒಂದು ಪತ್ರವನ್ನು ಕೊಟ್ಟಿದ್ದಾರೆ. ಆ ಪತ್ರ ಸದನದ ಸ್ವತ್ತಾಗುವ ಕಾರಣಕ್ಕಾಗಿ ಅದನ್ನು ಅವರು ಸದನದಲ್ಲಿ ಓದಬೇಕು.

## 12. ಹಕ್ಕುಚ್ಯುತಿ ಮಂಡನೆ ವಿಷಯ:–

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ,

"ದಿ: 13–02–2013ರಂದು ಮಧ್ಯಾಹ್ನ 12.30ರ ಸಮಯದಲ್ಲಿ ನಾನು ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘದ ಅಧ್ಯಕ್ಷರಾದ ಪ್ರೊ॥ ಟಿ.ಎಂ. ಮಂಜುನಾಥ್ ಹಾಗೂ ಪ್ರಧಾನ ಕಾರ್ಯದರ್ಶಿಯಾದ ಪ್ರೊ॥ ಭಾಗ್ಯವಾನ ಎಸ್ ಮುದಿಗೌಡರ್ ಇವರೊಂದಿಗೆ ಬೆಂಗಳೂರು ನಗರದ ಶಿಕ್ಷಕರಿಗೆ **ಮನೆ ಬಾಡಿಗೆ ಮತ್ತು ನಗರ ಪರಿಹಾರ ಭತ್ಯೆಗಳ ಸೌಲಭ್ಯವನ್ನು ತಡೆಹಿಡಿದಿರುವ ವಿಷಯ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಉಪನ್ಯಾಸಕರ ಯು.ಜಿ.ಸಿ ಬಾಕಿ ವೇತನ ನೀಡುವ ವಿಷಯ, ಅನುದಾನರಹಿತ ಶಾಲಾ ಕಾಲೇಜುಗಳಿಗೆ ವೇತನಾನುದಾನ ನೀಡುವ ವಿಷಯ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ**

**ನೇಮಕಾತಿ ಸಂಬಂಧ ಚರ್ಚಿಸಲು** ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ನಾಗರಾಜನ್‌ರವರು ಆರ್ಥಿಕ ಇಲಾಖೆ, ವಿಧಾನ ಸೌಧ ಇವರನ್ನು ಭೇಟಿ ಮಾಡಲು ಅವರ ಕೊಠಡಿಗೆ ತೆರಳಿದ್ದೆವು. ಈ ಸಮಯದಲ್ಲಿ ಅವರ ಕಛೇರಿಯಲ್ಲಿ ಅರವಿಂದ್ ಶ್ರೀವಾತ್ಸವ. ಕಾರ್ಯದರ್ಶಿಗಳು, (ವೆಚ್ಚ) ಆರ್ಥಿಕ ಇಲಾಖೆ ಇವರು ಇದ್ದರು. ನಾನು ಪ್ರಧಾನ ಕಾರ್ಯದರ್ಶಿಯವರ ಜೊತೆ **ಮನೆ ಬಾಡಿಗೆ ಮತ್ತು ನಗರ ಪರಿಹಾರ ಭತ್ಯೆಗಳ ಸೌಲಭ್ಯವನ್ನು ತಡೆಹಿಡಿದಿರುವ ವಿಷಯದಲ್ಲಿ** ಈ ಹಿಂದಿನ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದ 108 ಗ್ರಾಮಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೀಡುತ್ತಿದ್ದ **ಮನೆ ಬಾಡಿಗೆ ಮತ್ತು ನಗರ ಪರಿಹಾರ ಭತ್ಯೆಗಳ ಸೌಲಭ್ಯವನ್ನು** ಸ್ಥಗಿತಗೊಳಿಸಲಾಗಿದೆ ಎಂದು ತಿಳಿಸಿದೆ. ಆಗ ಪ್ರಧಾನ ಕಾರ್ಯದರ್ಶಿಯವರು ಈ ವಿಷಯದ ಬಗ್ಗ ಒಂದು ಪ್ರತ್ಯೇಕ ಸಭೆ ನಡೆಸಿ ಸಮಸ್ಯೆ ಬಗೆಹರಿಸುವುದಾಗಿ ಹೇಳುತ್ತಿರುವಾಗ ಮಧ್ಯೆ ಪ್ರವೇಶಿಸಿದ ಅರವಿಂದ ಶ್ರೀವಾತ್ಸವ ರವರು ಈ ವಿಷಯದ ಬಗ್ಗೆ ಸಭೆಯ ಅವಶ್ಯಕತೆಯಿಲ್ಲ ನಾವು ಮಾಡಿರುವ ಆದೇಶಗಳ ಸರಿ ಎಂದು, There is no issue, talk to you latter ಎಂದು ಇಂಗ್ಲೀಷ್‌ನಲ್ಲಿ ಪ್ರಧಾನ ಕಾರ್ಯದರ್ಶಿಯವರಿಗೆ ಹೇಳಿದರು. ಆಗ ನಾನು issue ಇಲ್ಲದಿದ್ದರೆ ಬರುತ್ತಿರಲಿಲ್ಲ, ವಿಷಯವಿಲ್ಲವೆಂದು ಹೇಳಬೇಡಿ ಅದೇನಿದೆ ಅದನ್ನು ನನಗೂ ಕೂಡ ಮನವರಿಕೆ ಮಾಡಿಕೊಡಿ ಎಂದಾಗ ಅರವಿಂದ ಶ್ರೀವಾತ್ಸವರವರು ನಾನು ನಿಮ್ಮ ಬಳಿ ಮಾತನಾಡುತ್ತಿಲ್ಲ, ನಾನು ಮಾತನಾಡುತ್ತಿರುವುದು ಪ್ರಧಾನ ಕಾರ್ಯದರ್ಶಿಯವರ ಜೊತೆ ಎಂದರು. ಆಗ ನಾನು ಮಾತನಾಡುತ್ತಿರುವುದು ಪ್ರಧಾನ ಕಾರ್ಯದರ್ಶಿಯವರ

ಬಳಿಯೆ ನೀವು ಏಕೆ ಮಧ್ಯೆ ಪ್ರವೇಶಿಸುತ್ತಿರೆಂದು ಕೇಳಿದೆ. ಆಗ ಅರವಿಂದ ಶ್ರೀವಾತ್ಸವರವರು ಬಹಳ ಉದ್ಧಟತನ ಆಂಗಿಕ ಭಾಷೆಯಿಂದ ತುಂಬಾ ಒರಟಾಗಿ ನೀವು ಯಾರು ನನ್ನ ಬಳಿ ಮಾತನಾಡಲು ಎಂದರು. ಆಗ ನಾನು ಒಬ್ಬ ವಿಧಾನ ಪರಿಷತ್ ಸದಸ್ಯ ಹಾಗೂ ಮಾಜಿ ಉಪ ಸಭಾಪತಿ ಎಂದಾಗ, **'ಆದರೇನು ಎಂದರು'** ಆಗ ನಾನು ತೀವ್ರವಾಗಿ ಆಕ್ಷೇಪಿಸಿದೆ. ಅಲ್ಲದೆ ಅರವಿಂದ ಶ್ರೀವಾತ್ಸವರವರು ಬಹಳ ಕೆಟ್ಟದಾಗಿ ತುಂಬಾ ಒರಟು ಹಾಗೂ ಕೆಟ್ಟ ಶಬ್ದಗಳಲ್ಲಿ ಮಾತನಾಡಿದರು. ಆಗ ಮಧ್ಯ ಪ್ರವೇಶಿಸಿದ ಪ್ರಧಾನ ಕಾರ್ಯದರ್ಶಿಗಳು ಮುಂದಿನ ವಾರ ಸಭೆ ಕರೆದು ಪರಿಶೀಲಿಸುವುದಾಗಿ ಹೇಳಿದರು. ಆಗ ನಾವುಗಳು ಅವರ ಕಛೇರಿಯಿಂದ ಹೊರಗೆ ಬಂದೆವು. ಇದು ಶಾಸಕನಾದ ನನ್ನ ಮನಸ್ಸಿಗೆ ತುಂಬಾ ನೋವುಂಟಾಯಿತು. ಅಲ್ಲದೆ ಶಾಸಕನಾದ ನನಗೆ ನನ್ನ ಮತದಾರರ ಸಮಸ್ಯೆಗಳನ್ನು ಚರ್ಚಿಸಲು ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಬಳಿ ಹೋದಾಗ ಮಧ್ಯೆ ಪ್ರವೇಶ ಮಾಡಿ ನನ್ನ ಶಾಸಕ ಸ್ಥಾನದ ಹಕ್ಕು ಮತ್ತು ಕರ್ತವ್ಯಗಳಿಗೆ ಅಡ್ಡಿ ಉಂಟು ಮಾಡಿ ಚ್ಯುತಿ ತಂದಿದ್ದಾರೆ. ಆದ್ದರಿಂದ ಅರವಿಂದ ಶ್ರೀ ವಾತ್ಸವ ಇವರ ಮೇಲೆ ಹಕ್ಕುಚ್ಯುತಿಯನ್ನು ಮಂಡಿಸುತ್ತಿದ್ದು ತಾವು ಇದನ್ನು ಮಾನ್ಯ ಮಾಡಿ ಕೊಡಲೇ ಇವರ ಮೇಲೆ ಕ್ರಮ ಕೈಗೊಳ್ಳಲು ಹಕ್ಕುಚ್ಯುತಿ ಸಮಿತಿಗೆ ವಹಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ."

**ಸಭಾಪತಿಯವರು:-** ಇದರ ಬಗ್ಗೆ ವಿವರಣೆ ಬೇಡ. ನೀವು ಪತ್ರವನ್ನು ಓದಿದ್ದೀರಿ, ಕುಳಿತುಕೊಳ್ಳಿ. ಈ ವಿಷಯ ಬಹಳ ಗಂಭೀರವಾಗಿರತಕ್ಕಂಥಾದ್ದು. ಒಬ್ಬ ಗೌರವಾನ್ವಿತ ಸದಸ್ಯರ ಜೊತೆಗೆ ಅಧಿಕಾರಿಗಳು ನಡೆದುಕೊಳ್ಳುವ ರೀತಿ ಬಗ್ಗೆ ಹೇಳಿದರು. ಹಾಗಾಗಿ ಇದು ಒಳ್ಳೆಯ ಒಂದು ಪದ್ಧತಿ ಅಲ್ಲ. ಅಧಿಕಾರಿಗಳು ನಮ್ಮ ಸದನ ಅಷ್ಟೇ ಅಲ್ಲ, ಎಲ್ಲಾ ಶಾಸಕರಿಗೆ ಕೊಡಬೇಕಾದ

ಗೌರವ ಮತ್ತು ಸಾರ್ವಜನಿಕರಿಗೂ ಸಹ ಇದೇ ರೀತಿಯ ಗೌರವ ಕೊಡಬೇಕು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಅದನ್ನು ಅರ್ಥ ಮಾಡಿಕೊಂಡು ನಡೆಸಿಕೊಳ್ಳಬೇಕಾಗುತ್ತದೆ. ಆದರೆ ನೇರವಾಗಿ ಅವರು ಪತ್ರ ಕೊಟ್ಟರು ಎಂದು ನಾನು ಅದರ ಮೇಲೆ ಜಡ್ಜ್‌ಮೆಂಟ್ ಪಾಸ್ ಮಾಡುವುದಕ್ಕೆ ಬರುವುದಿಲ್ಲ. ಹಾಗಾಗಿ ಮಾನ್ಯ ಪುಟ್ಟಣ್ಣನವರು ತುಂಬಾ ನೊಂದುಕೊಂಡು ನನ್ನ ಹತ್ತಿರ ಬಂದು ಈ ವಿಷಯವನ್ನು ಹೇಳಿದರು. ನಾನು ಸದನ ನಡೆಯುತ್ತಿರುವ ಕಾರಣಕ್ಕಾಗಿ ಅದನ್ನು ಸದನದ ಆಸ್ತಿಯಾಗಿ ಪರಿಗಣನೆ ಮಾಡೋಣ ಎಂದು ಹೇಳಿದ್ದಕ್ಕೆ ಅವರು ಪತ್ರವನ್ನು ನನಗೆ ಕೊಟ್ಟು ಓದಿದ್ದಾರೆ. ಆ ಪತ್ರ ಸದನದ ಆಸ್ತಿಯಾಗಿದೆ. ಅವರು ಕೊಟ್ಟಿರತಕ್ಕಂಥ ಪತ್ರವನ್ನು ನಾನು ನಮ್ಮ ಸದನದ ಹಕ್ಕುಬಾಧ್ಯತಾ ಸಮಿತಿಗೆ refer ಮಾಡುತ್ತೇನೆ.

## 13 ಶಾಸನ ರಚನೆ

## ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕ, 2013

### ಮಂಡನೆಗೆ ಅನುಮತಿ ಕೋರಿಕೆ

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, 2013ನೇ ಸಾಲಿನ ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"2013ನೇ ಸಾಕಿನ ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿದೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, 2013ನೇ ಸಾಲಿನ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕವನ್ನು ಮಂಡಿಸುತ್ತೇನೆ.

**ಸಭಾಪತಿಯವರು:–** ವಿಧೇಯಕವನ್ನು ಮಂಡಿಸಲಾಗಿದೆ.

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕ, 2013**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು,):–** ಮಾನ್ಯ ಸಬಾಪತಿಗಳೆ, 2013ರ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಅರವಿಂದ ಲಿಂಬಾಳಿ (ಆರೋಗ್ಯ ಮತ್ತು ಕುಟಂಬ ಕಲ್ಯಾಣ ಸಚಿವರು):–** ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ಎನ್ನುವಂತಹ ಒಂದು ಪ್ರತಿಷ್ಠಿತ ಸಂಸ್ಥೆ ಇದು. ಅದರ ಅಧ್ಯಕ್ಷರು ಸ್ಯಾಮ್‌ಪಿತ್ರೋಡ. ಡಾ॥ ಬಾಲಸುಬ್ರಹ್ಮಣ್ಯಂ, Director of Indian Knowledge Systems, ಇವರೂ ಕೂಡ ಇದಕ್ಕೆ ಸದಸ್ಯರಾಗಿದ್ದಾರೆ. ಪದ್ಮಶ್ರೀ ದರ್ಶನ್‌ಶಂಕರ್‌ರವರು ಇದರ ಕಾರ್ಯದರ್ಶಿಗಳಾಗಿದ್ದಾರೆ. ಕಳೆದ 20 ವರ್ಷಗಳಿಂದ ಕರ್ನಾಟಕದಲ್ಲಿ ಆಯುರ್ವೇದ ಪ್ರಕೃತಿ ಚಿಕಿತ್ಸಾ ವಿಭಾಗದಲ್ಲಿ ಇವರು ಸೇವೆ ಸಲ್ಲಿಸುತ್ತಿದ್ದಾರೆ. ಈ ಸಂಸ್ಥೆಗೆ ಈಗಾಗಲೇ Excellence of

Ministry of Health & Family Welfare, Ministry of Ayush, Ministry of Science & Technology ಇವರೆಲ್ಲರೂ, ಇದೊಂದು ಉತ್ತಮ ಸಂಸ್ಥೆಯೆಂದು

ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. ಶ್ರೀ ರತನ್‌ಟಾಟಾ ರವರು ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕೆ ಆವರ್ತನಿಧಿಯಾಗಿ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ವಿಶೇಷವಾಗಿ, ಇದರ ಉದ್ದೇಶವೇನೆಂದರೆ, ಆಯುರ್ವೇದ ಮತ್ತು Indian system of Medicine ಏನಿದೆ, ಅದನ್ನು ಮತ್ತು ಟೆಕ್ನಾಲಜಿಯನ್ನು ಹೋಲಿಕೆ ಮಾಡಿ, ಹೊಸ ಅವಿಷ್ಕಾರಗಳ ಬಗ್ಗೆ ಸಂಶೋಧನೆ ಮಾಡುವುದು. PG Course ನಡೆಸುವಂತಹ ಒಂದು institute ನ್ನು ತೆಗೆಯುವುದು ಇದರ ಉದ್ದೇಶವಲ್ಲ. ನಮ್ಮ ಭಾರತೀಯ ವೈದ್ಯ ಪದ್ಧತಿ ಇಡೀ ಜಗತ್ತಿಗೆ ಗೊತ್ತಾಗಬೇಕು ಮತ್ತು scientific method ನಲ್ಲಿ ಹೋಲಿಕೆ ಮಾಡಿ, ಸಂಶೋಧನೆ ನಡೆಸಿ ಅದರಿಂದ ಇಡೀ ಪ್ರಪಂಚಕ್ಕೆ ಅನುಕೂಲವಾಗಬೇಕು ಎನ್ನುವ ಉದ್ದೇಶದಿಂದ ಈ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ, ಹಿಂದೆ State of Chittisgarh Vs Yashpal ಪ್ರಕರಣದಲ್ಲಿ, ಪ್ರತಿ ವಿಶ್ವವಿದ್ಯಾಲಯಗಳು ಸ್ಥಾಪನೆ ಆಗಬೇಕಾದರೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಹೊಸ ಕಾನೂನುಗಳನ್ನು ರೂಪಿಸಬೇಕು ಎಂದು ಜಡ್ಜ್‌ಮೆಂಟ್ ಬಂತು. ಆ ಹಿನ್ನೆಲೆಯಲ್ಲಿ ಈಗಾಗಲೇ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುತ್ತಿದ್ದೇವೆ. ಅದೇರೀತಿ ಉದ್ದೇಶಿತ ವಿಶ್ವವಿದ್ಯಾಲಯ ಆಗುತ್ತದೆ. ಇದಕ್ಕೆ ಬೆಂಗಳೂರಿನಲ್ಲಿ ಜಾಗ ಕೂಡ ಇದೆ. ಕರ್ನಾಟಕದ ಸಂಶೋಧನಾ ವಿದ್ಯಾರ್ಥಿಗಳಿಗೆ ಶೇಕಡ 40 ರಷ್ಟು ಅವಕಾಶ ನೀಡಲಾಗಿದೆ. ಮತ್ತೆ, fee structure ಗೂ ಕೂಡ ನಿಯಮಗಳನ್ನು ರೂಪಿಸಬೇಕು ಎನ್ನುವ ಷರತ್ತು ಇದೆ. ಮಾನ್ಯ ಸಭಾಪತಿಗಳೆ, ಇದರಲ್ಲಿ ಬಹಳ ಪ್ರತಿಷ್ಠಿತರಾದ ವ್ಯಕ್ತಿಗಳಿದ್ದಾರೆ. ಹೊಸ ತಂತ್ರಜ್ಞಾನ, ಮೊಬೈಲ್, information technology ಯಲ್ಲಿ ಆವಿಷ್ಕಾರ ಮಾಡಿರುವಂತಹ ಶ್ರೀ ಸ್ಯಾಮ್‌ಪಿತ್ರೋಡರವರೇ ಅಧ್ಯಕ್ಷರಾಗಿದ್ದಾರೆ. ಶ್ರೀ ರಾಜೀವ್‌ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ, ದೇಶಕ್ಕೆ 1500 ವಿಶ್ವವಿದ್ಯಾಲಯಗಳು ಬೇಕು ಎಂದು ಹೇಳಿದ್ದ ಶ್ರೀ ಸ್ಯಾಮ್‌ಪಿತ್ರೋಡರವರು ಈ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಇದಕ್ಕೆ ಸದನ ಅನುಮತಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“2013ರ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕವನ್ನು ಪರ್ಯಾಲೋಚಿಸುವುದು”

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 61ರವರೆಗೆ

**ಸಭಾಪತಿಯವರು:–** “ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 61ರವರೆಗೂ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಗಳೆ, 2013ರ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"2013ರ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

**ಶ್ರೀ ಅರುಣಾಷಹಪುರ:–** ಮಾನ್ಯ ಸಭಾಪತಿಗಳೆ, ವಿಧೇಯಕದ ಪುಟ ಸಂಖ್ಯೆ 11ರಲ್ಲಿ, "ವಿಶ್ವವಿದ್ಯಾಯಗಳ ಸ್ಥಾಪನೆಗೆ ಅಧಿಕಾರ" ಎಂದಿದೆ. ಅದು "ವಿದ್ಯಾಲಯಗಳ ಸ್ಥಾಪನೆಗೆ ಅಧಿಕಾರ" ಎಂದಾಗಬೇಕು. ಪುಟ ಸಂಖ್ಯೆ 13ರ ಸೆಕ್ಷನ್ 16 (ii) ರಲ್ಲಿ "ಸಂದರ್ಶಕರ ಮತ್ತು ಸಹ–ಸಂದರ್ಶಕರಿಬ್ಬರ ಗೈರು ಹಾಜರಿಯಲ್ಲಿ ಸಂಸ್ಥೆಯ ಎಲ್ಲ ಘಟಿಕೋತ್ಸವಗಳಲ್ಲಿ ಅಧ್ಯಕ್ಷತೆಯನ್ನು ವಹಿಸುವುದು" ಎಂದಿದೆ. ಆದರೆ ಸಹ–ಸಂದರ್ಶಕ ಎನ್ನುವ ಹುದ್ದೆ ಇಲ್ಲ. ಹಾಗಾಗಿ ಈ ಎರಡು ತಿದ್ದುಪಡಿಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ:–** ಆಯಿತು, ಮಾಡುತ್ತೇವೆ.

**(ಸದನವನ್ನು ಮಧ್ಯಾಹ್ನ 25.57 ಗಂಟೆಯಿಂದ 4 ಗಂಟೆಯವರೆಗೆ ಮುಂದೂಡಲಾಯಿತು)**

**ಸದನವು ಪುನಃ ಸಂಜೆ 4 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.**

**ಉಪ ಸಭಾಪತಿಯವರಾದ ಶ್ರೀಮತಿ ವಿಮಲಾಗೌಡ ಅವರು ಪೀಠದಲ್ಲಿ ಉಪಸ್ಥಿತರಿದ್ದರು**

## 14. ವಿತ್ತೀಯ ಕಾರ್ಯಕಲಾಪ

## 2013–2014ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದ 2013–14ನೇ ಸಾಲಿನ ಬಜೆಟ್ ಒಂದು ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ಶಕೆಯನ್ನು ಆರಂಭಿಸುವಲ್ಲಿ ಸಂಶಯವಿಲ್ಲವೆನ್ನುವ ಮಾತನ್ನು ಪ್ರಪ್ರಥಮವಾಗಿ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದು ಹೊಸ ಮನ್ವವಂತರವನ್ನೇ ಉಂಟು ಮಾಡಲಿದೆ ಎನ್ನುವ ಮಾತನ್ನು ಹೇಳಿದರು. ಕಳೆದ ಮೂರು ವರ್ಷಗಳಿಂದ ಕೃಷಿ ಬಜೆಟ್ ಅನ್ನು ಮಂಡನೆ ಮಾಡುತ್ತಾ ಬಂದಿದ್ದಾರೆ. ಈ ಬಾರಿ ಕೃಷಿಗೆ ಕೊಟ್ಟಿರುವ ಹಣ ಎಷ್ಟು ಎಂದು ಹೇಳಿದರೆ 22,310 ಕೋಟಿ ರೂಪಾಯಿಗಳು. ಇದು ಇಡಿ ದೇಶದಲ್ಲಿಯೇ ದಾಖಲೆಯ ಹಣವನ್ನು, ಮೊತ್ತವನ್ನು ಈ ಸರ್ಕಾರ ಕೊಟ್ಟಿರುವುದು ಒಂದು ಹೊಸ ಮನ್ವಂತರ ಅಲ್ಲದೇ ಏನು ಎನ್ನುವುದನ್ನು ಇನ್ನೊಂದು ಬಾರಿ ಮಾನ್ಯ ವಿರೋಧ ಪಕ್ಷದ ನಾಯಕರು ಯೋಚನೆ ಮಾಡಿ ಹೇಳಬೇಕಾಗಿದೆ. ಒಂದು ಕಡೆ ಈ ಸರ್ಕಾರ ಕೃಷಿಗೆ ಪ್ರಥಮ ಅದ್ಯತೆಯನ್ನು ಕೊಟ್ಟಿದ್ದರೆ, ಮತ್ತೊಂದು ಕಡೆ ಕೃಷಿಗೆ ಎರಡನೆ ಅದ್ಯತೆಯನ್ನು ಕೊಟ್ಟಿದೆ. ಕೃಷಿಗೆ ತತ್ಸಮಾನವಾದಂತಹ ಆದ್ಯತೆಯನ್ನು ಸರ್ಕಾರ ಇವತ್ತು ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಈ ಸರ್ಕಾರ ಕೊಟ್ಟಿರುವಂತಹದ್ದು 15,599 ಕೋಟಿ ರೂಪಾಯಿಗಳು. ಇದು ಇತಿಹಾಸದಲ್ಲಿಯೇ ಒಂದು ಹೊಸ ಮೈಲುಗಲ್ಲು ಆಗಿದೆ. ಇಡಿ ದೇಶದ ಯಾವುದೇ ರಾಜ್ಯದ ಬಜೆಟ್ ನೋಡಿ. ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಕ್ಕೆ ಕೊಟ್ಟಿರುವಂತಹದ್ದು ಎಲ್ಲಿಯೂ ನಿಮಗೆ ಸಿಗುವುದಿಲ್ಲ. ಅದರ ಜೊತೆಗೆ ಉನ್ನತ ಶಿಕ್ಷಣಕ್ಕೆ 3,067 ಕೋಟಿ ರೂಪಾಯಿಗಳು, ವೈದ್ಯಕೀಯ ಶಿಕ್ಷಣಕ್ಕೆ 1,266 ಕೋಟಿ ರೂಪಾಯಿಗಳನ್ನು ನೇರವಾಗಿ ಕೊಟ್ಟಿದ್ದಾರೆ. ನೇರವಾಗಿ ಕೊಟ್ಟಿರುವುದನ್ನೆಲ್ಲಾ ಸೇರಿಸಿದರೆ 20

ಸಾವಿರ ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕೆ ಕೊಟ್ಟಿದ್ದಾರೆ. 16% ಗಿಂತ ಹೆಚ್ಚು ಹಣವನ್ನು ಈ ಸರ್ಕಾರ ಶಿಕ್ಷಣಕ್ಕೆ ಕೊಟ್ಟಿದೆ. ಅದರ ಜೊತೆಗೆ ತೋಟಗಾರಿಕೆ ವಿಶ್ವವಿದ್ಯಾಲಯ, ವೈದ್ಯಕೀಯ ವಿಶ್ವವಿದ್ಯಾಲಯ, ಅದರ ಜೊತೆಗೆ ಇವತ್ತು ಕಾರ್ಮಿಕ ಇಲಾಖೆಯ ಮೂಲಕ ಐಟಿಐ ಶಿಕ್ಷಣಕ್ಕೆ ಹಣವನ್ನು ಕೊಟ್ಟಿದೆ. ಇವತ್ತು ಕೃಷಿ ಕ್ಷೇತ್ರಕ್ಕೆ ತತ್ಸಮಾನವಾದಂತಹ ಆದ್ಯತೆಯನ್ನು ಶಿಕ್ಷಣ ಇಲಾಖೆಗೆ ಈ ಸರ್ಕಾರ ಕೊಟ್ಟಿದೆ. ಪರೋಕ್ಷವಾಗಿ ಸಮಾಜ ಕಲ್ಯಾಣ ಇಲಾಖೆಯ ಮೂಲಕ, ಬಿಸಿಎಂ ಇಲಾಖೆಯ ಮೂಲಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಕೊಟ್ಟಿರುವಂತಹ ಹಣವನ್ನು ನಾನು ಇಲ್ಲಿ ಉಲ್ಲೇಖ ಮಾಡುತ್ತಿಲ್ಲ. ಇವತ್ತು ಈ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಈ ಮಟ್ಟದ ಆದ್ಯತೆಯನ್ನು ಕೊಟ್ಟಿರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಇಡೀ ಶಿಕ್ಷಣ ಕ್ಷೇತ್ರದ ಪರವಾಗಿ ಅಭಿನಂದಿಸಿ, ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಕಳೆದ ಬಾರಿ RTE (Right to Education) ಶಿಕ್ಷಣದ ಬಗ್ಗೆ ನಮ್ಮ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದೆ. ಸುಮಾರು 50 ಸಾವಿರ ಜನ ವಿದ್ಯಾರ್ಥಿಗಳಿಗೆ RTE ಅಡಿ ಇವತ್ತು ಪ್ರವೇಶಾವಕಾಶ ದೊರೆತಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಕೆಲವೊಂದು ಹೇಳಿಕೆಗಳನ್ನು ಸರಿಪಡಿಸಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರ ಅವರು ಶಿಕ್ಷಣ ಕ್ಷೇತ್ರಕ್ಕೆ 16% ಹಣವನ್ನು ಕೊಟ್ಟಿದೆ ಎಂದು ಹೇಳಿದರು. ಶಿಕ್ಷಣ, ಕ್ರೀಡೆ, ಕಲೆ, ಸಂಸ್ಕೃತಿ ಎಲ್ಲಾ ಸೇರಿ 9% ರಷ್ಟಿದೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಇದನ್ನು ನಾನು ಅಂಕಿ–ಅಂಶಗಳ ಸಮೇತ ಹೇಳುತ್ತಿದ್ದೇನೆ. ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸರಿಮಾಡಿಕೊಳ್ಳಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ನಾನು ಸರಿ ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮ ಬಜೆಟ್ ಬುಕ್ ಅನ್ನು ಸೇರಿ ಮಾಡಬೇಕು. ನೀವು ನಿಮ್ಮ ಬಜೆಟ್ ಬುಕ್ ಅನ್ನು ನೋಡಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿರುವಂತಹ ಚಾರ್ಟ್ ಅನ್ನು ನೋಡಬೇಕು. ಅದನ್ನು ಲೆಕ್ಕಾಚಾರ ಮಾಡಿ ನೋಡಿ.

**Sri S.R. PATIL:-** Final concluding ನೋಡಿದರೆ ಎಲ್ಲವೂ ಗೊತ್ತಾಗುತ್ತದೆ.

**ಶ್ರೀ ಅರುಣ ಶಹಾಪುರ:–** ದಯವಿಟ್ಟು ಪುಟ ಸಂಖ್ಯೆಯನ್ನು ಹೇಳಿ. ನಾನು ಅದರ ಬಗ್ಗೆ ಹೇಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಸಾರಿಗೆ 10%, ನೀರಾವರಿ 17%. . .

**ಶ್ರೀ ಅರುಣ ಶಹಾಪುರ:–** ತಾವು ಯಾವ ಲೆಕ್ಕದಲ್ಲಿ ಹೇಳುತ್ತಿದ್ದಿರೋ ಗೊತ್ತಾಗುತ್ತಿಲ್ಲ. ತಾವು ಪುಟ ಸಂಖ್ಯೆಯನ್ನು ಹೇಳಿದರೆ ನಾನು ಅದರ ಬಗ್ಗೆ ಹೇಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಪುಟ ಸಂಖ್ಯೆ 125 ಅನ್ನು ನೋಡಿ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಅವರು refer ಮಾಡಿರುವುದನ್ನೇ ತಮಗೆ ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಶಿಕ್ಷಣ ಕ್ಷೇತ್ರಕ್ಕೆ 16% ಎಂದು ಶ್ರೀಯುತ ಅರುಣ ಶಹಾಪುರ ರವರು ಹೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಅರುಣ ಶಹಾಪುರ:–** ಶಿಕ್ಷಣಕ್ಕೆ ಅತಿ ಹೆಚ್ಚು ಇರುವುದು ಯೋಜನೇತರದಲ್ಲಿ. ತಾವು ಹೇಳುತ್ತಿರುವುದು ಯೋಜನಾ ವೆಚ್ಚ ಮಾತ್ರ. ಅದರ ಹಿಂದಿನ ಪುಟಕ್ಕೆ ತಾವು ಬನ್ನಿ. 123 ಪುಟಕ್ಕೆ ಬನ್ನಿ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಪುಟ ಸಂಖ್ಯೆ 125 ಕೇವಲ ಯೋಜನಾ ವೆಚ್ಚ ಮಾತ್ರ ಇದೆ. ಏತಕ್ಕೆ 123 ಪುಟ ನೋಡಿ ಎಂದು

ಹೇಳುತ್ತಿದ್ದಾರೆಂದರೆ ಅಲ್ಲಿ ಯೋಜನಾ ಮತ್ತು ಯೋಜನೇತರ ಎರಡು ವೆಚ್ಚಗಳಿಗೆ ಸಂಬಂಧಪಟ್ಟಂತೆ ಇದೆ.

**ಶ್ರೀ ಎಸ್.ಆರ್. ಪಾಟೀಲ್:-** ಯೋಜನೇತರ ವೆಚ್ಚವನ್ನು ತೆಗೆದುಕೊಂಡು ಏನು ಮಾಡಬೇಕು ಹೇಳಿ.

**ಶ್ರೀ ಅರುಣ ಶಹಾಪುರ:-** ಶಿಕ್ಷಣ ಕ್ಷೇತ್ರದಲ್ಲಿ ಏನಿರುತ್ತದೆ ಎಂದರೆ ಶಿಕ್ಷಕರ ಸಂಬಳವೇ ಮುಖ್ಯವಾಗಿರುತ್ತದೆ.

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:-** ತಮಗೆ ಗೊತ್ತಿರುವಂತೆ ಶಿಕ್ಷಣದಲ್ಲಿ ಯೋಜನೇತರದಲ್ಲಿ ಹೆಚ್ಚು ಇರುತ್ತದೆ. ಯೋಜನೆ ಮತ್ತು ಯೋಜನೇತರ ಎರಡನ್ನೂ ಸೇರಿಸಿದಾಗ 16% ಬರುತ್ತದೆ.

**ಶ್ರೀ ಅರುಣ ಶಹಾಪುರ:-** 16% ಗಿಂತ ಹೆಚ್ಚು ಬರುತ್ತದೆ ಎಂದು ನಾನು ಗ್ಯಾರಂಟಿಯಾಗಿ ಹೇಳುತ್ತೇನೆ.

**Sri K.B. SHANAPPA:-** 16 per cent, it has been divided.

**ಶ್ರೀ ಪುಟ್ಟಣ್ಣ:-** ಬಜೆಟ್‌ನಲ್ಲಿ ಹಣವನ್ನು ಏನು ಶಿಕ್ಷಣಕ್ಕೆ ಕೊಟ್ಟಿದ್ದೀರಿ, ಅದ್ಯಾವುದನ್ನೂ ಸಹ ನೀವು ಖರ್ಚು ಮಾಡುವುದಿಲ್ಲ.

**ಶ್ರೀ ಅರುಣ ಶಹಾಪುರ:-** ಈ ಬಜೆಟ್ಟನಲ್ಲಿ 16% ರಷ್ಟು ಹಣವನ್ನು ಕೊಟ್ಟಿರುವುದನ್ನು ನೀವು ಮೊದಲು ಒಪ್ಪಿಕೊಳ್ಳಿ.

**ಎಸ್.ಆರ್. ಪಾಟೀಲ್:-** ಇದರಲ್ಲಿ ಯೋಜನೆ ಮತ್ತು ಯೋಜನೇತರ ಎರಡು ಸೇರಿ ಇದೆ. ನಾನು ಕೇಳುತ್ತಿರುವುದು ಯೋಜನಾ ವೆಚ್ಚದ ಬಗ್ಗೆ ಹೇಳುತ್ತಿದ್ದೇನೆ.

**ಶ್ರೀ ಅರುಣ ಶಹಾಪುರ:-** ಇವತ್ತು ನಾನು ನಿಮಗೆ ಬಹಿರಂಗವಾಗಿ ಹೇಳುತ್ತೇನೆ. ಶಿಕ್ಷಣ ಕ್ಷೇತ್ರಕ್ಕೆ ಈ ಪ್ರಮಾಣದ ಆದ್ಯತೆಯನ್ನು ಈ ದೇಶದ ಯಾವುದೇ ರಾಜ್ಯ ಕೊಟ್ಟಿದ್ದರೂ ಸಹ ನೀವು ಹೇಳಿದ್ದನ್ನು ನಾನು ಕೇಳುತ್ತೇನೆ.

ಈ ಪ್ರಮಾಣದ ಯೋಜನಾ ವೆಚ್ಚವನ್ನು ಶಿಕ್ಷಣ ಕ್ಷೇತ್ರಕ್ಕೆ ಯಾವುದೇ ರಾಜ್ಯ ಕೊಟ್ಟಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ನೀವು ಇದುವರೆವಿಗೂ ಬಜೆಟ್‌ನಲ್ಲಿ ಇಟ್ಟ ಹಣದಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವುದನ್ನು ತೋರಿಸಿ.

**ಶ್ರೀ ಅರುಣ ಶಹಾಪುರ:-** ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ತೆಗೆದು ನೋಡಿ. Action Taken Report ತೆಗೆದು ನೋಡಿ.

**ಶ್ರೀ ಎಸ್.ಆರ್. ಪಾಟೀಲ್:-** ಬಜೆಟ್‌ನಲ್ಲಿ ಮೀಸಲಿಟ್ಟ ಹಣದಲ್ಲಿ ಹೆಚ್ಚೆಂದರೆ 50–51% ಮಾತ್ರ ಹಣ ಖರ್ಚಾಗಿರಬಹುದು.

**ಶ್ರೀ ಸಿ.ಹೆಚ್. ವಿಜಯಶಂಕರ:-** ಮಾನ್ಯ ಸಭಾಪತಿಯವರೆ, ಒಂದು ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಶಿಕ್ಷಕರ ಸಂಬಳ ಯೋಜನೇತರದಲ್ಲಿ ಬರುತ್ತದೆ. ಅವರುಗಳಿಗೆ ಸಂಬಳವನ್ನು ಕೊಡಲೇ ಬೇಕು 3 ಲಕ್ಷ ಜನ ಶಿಕ್ಷಕರಿದ್ದಾರೆ. ಯೋಜನೆ ಮತ್ತು ಯೋಜನೇತರ ವೆಚ್ಚದ ವಿಂಗಡಣೆಗೆ ಸಂಬಂಧಪಟ್ಟಂತೆ ನೀವು ಬೇಕಾದರೆ ಕೇಳಿಕೊಳ್ಳಿ. ಒಟ್ಟು ಸೇರಿ, ಅವರು ಏನು ಅಂಕಿ–ಅಂಶಗಳನ್ನು ಉಲ್ಲೇಖ ಮಾಡಿದ್ದಾರೆ, ಅದು ಶಿಕ್ಷಣ ಕ್ಷೇತ್ರಕ್ಕೆ ಬರುತ್ತದೆ.

**ಶ್ರೀ ಅರುಣ ಶಹಾಪುರ:-** ಎಷ್ಟು ಹಣ ಬಂತು, ಎಷ್ಟು ಹಣ ಖರ್ಚಾಯಿತು ಎನ್ನುವ ವಿಚಾರಕ್ಕೆ ನಂತರ ಬರೋಣ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಬಜೆಟ್ provision ಮಾಡಿರುವಂತಹ ಮೊದಲ ಸಕಾರವೆಂದು ನಾವು ಹೇಳಿಕೊಳ್ಳುತ್ತೇವೆ. ಇಷ್ಟು ಪ್ರಮಾಣದ ಹಣವನ್ನು ಯಾವುದೇ ಸರ್ಕಾರ ಕೊಟ್ಟಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಬಜೆಟ್ provision ಮಾಡಲಿಕ್ಕೆ ನಿಸ್ಸೀಮರು, ಸಾಲ ತೆಗೆದುಕೊಳ್ಳುವುದಕ್ಕೆ ನಿಸ್ಸೀಮರು. ಆದರೆ, ಖರ್ಚು ಮಾಡಲಿಕ್ಕೆ ಏನೂ ಇಲ್ಲ. ಬಜೆಟ್‌ನ ಹಣವನ್ನು ಖರ್ಚು ಮಾಡುತ್ತಿಲ್ಲ. ಹಾಗೆಯೇ ಇದೆ.

**ಶ್ರೀ ಸೊಗಡು ಶಿವಣ್ಣ (ಪರಿಸರ, ಯೋಜನೆ ಮತ್ತು ಸಾಂಖ್ಯಿಕ ಸಚಿವರು):–** ತಾವು ಹಿಂದೆ ಸರ್ಕಾರ ನಡೆಸಿದ್ದೀರಿ. ಹಿಂದಿನದ್ದನ್ನು ತಾವು ಹೇಳಿಕೊಂಡು ಬನ್ನಿ.

**ಶ್ರೀ ಎಸ್.ಆರ್. ಪಾಟೀಲ್:–** ಕೆಲವೊಂದು ವಿಷಯಗಳಲ್ಲಿ ನೀವು ನಿಸ್ಸೀಮರು ಇದ್ದೀರಿ.

**ಶ್ರೀ ಅರುಣ ಶಹಾಪುರ:–** ಶಿಕ್ಷಣದ ಕ್ಷೇತ್ರದ Action Taken Report ತೆಗೆದು ನೋಡಿ. ಖಂಡಿತವಾಗಿ ಸಹ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಯಾಗಿದೆ. **ಆರ್‌ಟಿಇ** ಅನ್ನು ಜಾರಿಗೆ ತರಬೇಕಾದರೆ ಹಲವು ಸವಾಲುಗಳನ್ನು ಸರ್ಕಾರ ಎದುರಿಸಬೇಕಾಗಿ ಬಂತು. **ಆರ್‌ಟಿಇ** ಜಾರಿಗೆ ಹಲವು ಅಡೆತಡೆಗಳನ್ನು ನಾವು ನೋಡಿದ್ದೇವೆ. ಅದರ ಮದ್ಯೆದಲ್ಲಿಯೂ ಕೂಡ ಸರ್ಕಾರ ಇವತ್ತು 50 ಸಾವಿರ ಮಕ್ಕಳಿಗೆ ಆರ್‌ಟಿಇ ಅಡಿಯಲ್ಲಿ ಪ್ರವೇಶಾವಕಾಶವನ್ನು ನೀಡುವಲ್ಲಿ ಸಫಲವಾಗಿದೆ. 58 ಕೋಟಿ ರೂಪಾಯಿಗಳ ಶುಲ್ಕವನ್ನು ಕೊಡಲಿಕ್ಕೆ ಸಾಧ್ಯವಾಗಿದೆ. ಈ ಸಂದರ್ಭದಲ್ಲಿ ನಾನು ಶಿಕ್ಷಣ ಇಲಾಖೆಯನ್ನು ಅಭಿನಂದಿಸುವುದಕ್ಕೆ ಇಚ್ಚೆಪಡುತ್ತೇನೆ. ಶಾಲೆಗಾಗಿ ನಾವು ನೀವು ಎಂದು ಐ.ಟಿ. ಜಾಗೃತಿಗಾಗಿ ಎಲ್ಲಾ ಸ್ಥಳದ ಜನ ಪ್ರತಿನಿಧಿಗಳು ಶಾಲೆಗೆ ಹೋಗಿ ಕುಳಿತುಕೊಂಡು, ಅಲ್ಲಿ ಸರ್ಕಾರಿ ಕೊಟ್ಟಿರುವಂತಹ ಸವಲತ್ತುಗಳು ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮಾಡುವ ಕೆಲಸವನ್ನು ಸರ್ಕಾರ ಕೈಗೆತ್ತಿಕೊಂಡಿದೆ. ಅದರ ಪರಿಣಾಮದಿಂದಾಗಿಯೇ 50,000 ವಿದ್ಯಾರ್ಥಿಗಳಿಗೆ ಅಲ್ಲಿ admission ಸಿಗುವುದಕ್ಕೆ ಸಾಧ್ಯವಾಗಿದೆ. ಐ.ಟಿ. ಅಡಿಯಲ್ಲಿ ಇವತ್ತು 58 ಕೋಟಿ ರೂಪಾಯಿ ಹಣವನ್ನು ಸರ್ಕಾರ ಕೊಟ್ಟಿದೆ. ಈ ಶುಲ್ಕವನ್ನು ನಿಗದಿ ಮಾಡುವಲ್ಲಿ ಆಯಾಯ ಬ್ಲಾಕಿನ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ಕೊಡಲಾಗಿದೆ. ಈ RTE ಅಡಿಯಲ್ಲಿನ ಶುಲ್ಕದ ಹಣವನ್ನು ಅ ಅಧಿಕಾರಿಗಳಿಗೆ ಕೊಟ್ಟರೆ ಭ್ರಷ್ಟಾಚಾರ ಶುರುವಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ಮುಂದೆ ಬರುವಂತಹ ದಿನಗಳಲ್ಲಿ ಈ RTE ಅಡಿಯಲ್ಲಿ ಶುಲ್ಕ ನಿಗದಿ ಮಾಡುವಲ್ಲಿ ನೀವು ಏನಾದರೂ ಒಂದು mechanism ಅನ್ನು

ಮಾಡಬೇಕಾಗುತ್ತದೆ ಎಂಬ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ನಮ್ಮ ಕ್ಷೇತ್ರವಾದ ಬೆಳಗಾವಿ, ಬಿಜಾಪುರ, ಬಾಗಲಕೋಟೆಯಲ್ಲಿ ಈ ಸರ್ಕಾರ ಕೊಟ್ಟಿರುವಂತಹ ಕೊಡುಗೆಯನ್ನು ನಾವು ಹಿಂದೆ ಯಾವತ್ತೂ ಕೂಡ ನೋಡಿಲ್ಲ. ಹಿಂದೆ ಆಯವ್ಯಯದಲ್ಲಿ ನಮ್ಮ ಊರಿನ ಹೆಸರು ಬಂದಿರುವುದನ್ನು ನೋಡಿದರೆ, ನಮಗೆ ಅದ್ಭುತವಾದ ಅನುಭವ ಆಗುತ್ತಿತ್ತು. ಮಾನ್ಯ ಎಸ್.ಆರ್ ಪಾಟೀಲರೆ, ನಿಮ್ಮ ಪಕ್ಕದಲ್ಲಿನ ಮುಧೋಳದಲ್ಲಿ ಸಕ್ಕರೆ ತಾಂತ್ರಿಕ ಕಾಲೇಜಿನ ಒಂದು Feasibility Report ಅನ್ನು ಮಾಡಬೇಕೆಂದು ಇದೆ. ಅದರ ಜೊತೆಗೆ ಸ್ವಲ್ಪ ಹಣವನ್ನೂ ಕೂಡ ಕಾದಿರಿಸಬೇಕೆಂದು ವಿನಂತಿ. ನೀವು ತೆಗೆದುಕೊಂಡಿರುವ ಈ ಒಂದು ನಿರ್ಣಯದಿಂದ ಖಂಡಿತವಾಗಿ ಒಳ್ಳೆಯದಾಗುತ್ತದೆ. ಅಥಣಿಯಲ್ಲಿ ಕೃಷಿ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು ಏನು ಇದ್ದೀರಿ ಇದೂ ಕೂಡ ಸ್ವಾಗತಾರ್ಹವಾಗಿದೆ. ಇನ್ನು ಕರಿಮಸೂತಿ ಲಿಫ್ಟ್ ಇರಿಗೇಷನ್‌ನ ಮೂಲಕ ಅಥಣಿ ಭಾಗಕ್ಕೆ ಏನು ನೀರನ್ನು ಕೊಟ್ಟಿದ್ದೀರಿ ಅದು ನಿಜವಾಗಲೂ ಈ ಭೂಮಿಯ ಮೇಲೆ ಒಂದು ಭಗೀರಥ ಪ್ರಯತ್ನವಾಗಿದೆ. ನಾನು ಯಾರು ಪ್ರಾರಂಭ ಮಾಡಿದರು ಎಂಬ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಹೆಚ್.ಕೆ. ಪಾಟೀಲ್ ಅವರು ಜಲ ಸಂಪನ್ಮೂಲ ಸಚಿವರಾಗಿದ್ದಾಗ, ಈ ಕರಿಮಸೂತಿ ಲಿಫ್ಟ್ ಇರಿಗೇಷನ್‌ನ ಮೂಲಕ ಅಥಣಿ ಭಾಗಕ್ಕೆ ನೀರನ್ನು ಕೊಡುವ ಯೋಜನೆಯನ್ನು ಪ್ರಾರಂಭ ಮಾಡಿದ್ದರು. ಅವರ ಅಧಿಕಾರಾವಧಿ ಮುಗಿಯುವ ಹೊತ್ತಿಗೆ ಈ ಯೋಜನೆಯ ಶೇಕಡ 80 ಪರ್ಸೆಂಟ್ ಕೆಲಸ ಮುಗಿದಿತ್ತು. ಈಗ ನೀವು ಅಧಿಕಾರಕ್ಕೆ ಬಂದ ಮೇಲೆ ಅದನ್ನು ಉದ್ಘಾಟನೆ ಮಾತ್ರ ಮಾಡಿದ್ದೀರಿ. ಸಾವಳಗಿ, ಕರಿ ಮಸೂತಿ ಬಗ್ಗೆ ನಾನು ಬಹಳ ಸಮೀಪದಿಂದ ಬಲ್ಲೆ. ಅಥಣಿ, ಜಮಖಂಡಿ ತಾಲ್ಲೂಕಿಗೆ ಫಲಪ್ರದವಾಗುವ ಈ ಯೋಜನೆಯ ಉದ್ಘಾಟಕರು ನೀವು ಅಷ್ಟೆ.

**ಶ್ರೀ ಅರುಣ್ ಶಹಾಪುರ:–** ಇದು ನಮ್ಮ ಕಾಲದಲ್ಲಿ ಉದ್ಘಾಟನೆಯಾಗಿದೆ ಎಂಬ ಉದ್ದೇಶದಿಂದ ಈ ಎಲ್ಲಾ credit ನಮಗೇ ಬರುತ್ತದೆ ಎಂದು ನೀವು ಏಕೆ ಆತಂಕಗೊಳ್ಳುತ್ತಿದ್ದೀರಿ. ನೀವು ದಯವಿಟ್ಟು ಆತಂಕಗೊಳ್ಳಬೇಡಿ. ನೀವು ಬೇರೆ angle ನಲ್ಲಿ ನೋಡಿ. ಈ ಎಲ್ಲಾ ನೀರಾವರಿ ಯೋಜನೆಗಳಿಂದ ಕೃಷಿ . . . . .

**ಶ್ರೀ ಎಸ್.ಆರ್. ಪಾಟೀಲ್:–** ನನಗೆ ನಿಮ್ಮ ಬಗ್ಗೆ ಮರುಕ ಹುಟ್ಟುತ್ತದೆ. I feel pity for you. It is an outgoing Government for ever.

**ಉಪ ಸಭಾಪತಿಯವರು:–** ಮಾನ್ಯ ಅರುಣ್ ಶಹಾಪುರ ಅವರೇ ನಾವು ನಿಮಗೆ ಮಾತನಾಡುವುದಕ್ಕೆ 8 ರಿಂದ 10 ನಿಮಿಷ ಸಮಯ ಕೊಟ್ಟಿದ್ದೇವೆ. ನೀವು ಬೇರೆ ಸದಸ್ಯರಿಗೆ yield ಆದರೆ ನಿಮ್ಮ ಸಮಯ cut ಆಗುತ್ತದೆ. ಅಷ್ಟೆ ಬೇರೆ ಏನೂ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಅವರಿಗೆ ಮಾತನಾಡಲು ಇನ್ನು ಸ್ವಲ್ಪ ಹೆಚ್ಚಿನ ಸಮಯ ಕೊಡಿ.

**ಉಪ ಸಭಾಪತಿಯವರು:–** ಆಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ನಿಮ್ಮ ಮೇಲಿನ ಕಾಳಜಿಯಿಂದ ನನು ತಮಗೆ ಹೆಚ್ಚಿನ ಸಮಯ ಮಾತನಾಡಲು ಕಾಲಾವಕಾಶ ಕೊಡಿ ಎಂದು ಸನ್ಮಾನ್ಯ ಉಪ ಸಭಾಪತಿಯವರಲ್ಲಿ ಮನವಿ ಮಾಡಿದೆ.

**ಶ್ರೀ ಅರುಣ್ ಶಹಾಪುರ:–** ದಯವಿಟ್ಟು ಮಧ್ಯೆ ಪ್ರವೇಶ ಮಾಡಬೇಡಿ. ಬಹಳಷ್ಟು ವಿಷಯಗಳು ಇವೆ. ನಾನು ಬೇಗನೆ ಮಾತನಾಡಿ ಮುಗಿಸುತ್ತೇನೆ. ಇಷ್ಟೊಂದು ಅಸಹನೀಯವಾಗಿ ನಡೆದುಕೊಂಡರೆ ಹೇಗೆ? ನನ್ನ ಕ್ಷೇತ್ರದ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯಗಳಿಗೆ ಮತ್ತು ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಈ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿಗಾಗಿ 14 ಕೋಟಿ ರೂಪಾಯಿಯನ್ನು ಕೊಟ್ಟಿದೆ. ನಾನು ಇದನ್ನು ಬಹಳ ಮುಕ್ತವಾಗಿ ಸ್ವಾಗತಿಸುತ್ತೇನೆ. ಮಹಿಳಾ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದವರು

ಮರೆತರೂ ಕೂಡ ಈ ಸರ್ಕಾರ ಹಣವನ್ನು ನೀಡುವ ಕೆಲಸವನ್ನು ಮಾಡಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಒಟ್ಟು ಅನುದಾನ 3349 ಕೋಟಿ. ವಿಚಿತ್ರ ಸಂಗತಿ ಎಂದರೆ ಕಳೆದ 2–3 ವರ್ಷಗಳಿಂದ ಪ್ರಶ್ನೆಯನ್ನು ಕೇಳುತ್ತೇನೆ. ಪರಿಶೀಲಿಸುತ್ತೇವೆಂದು ಹೇಳುತ್ತಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದಲೂ ಈ ಮಹಿಳಾ ವಿಶ್ವವಿದ್ಯಾನಿಲಯಗಳಿಗೆ ಆಯವ್ಯಯದಲ್ಲಿ ಹಣವನ್ನು ನೀಡುವ ಕೆಲಸ ಆಗಬೇಕಾಗಿದೆ ಎಂಬ ಒಂದು ಸಲಹೆಯನ್ನು ನಾನು ನೀಡಬಯಸುತ್ತೇನೆ. ಬೆಳಗಾವಿ ವೈದ್ಯಕೀಯ ಮೂಲಭೂತ ಸೌಕರ್ಯವನ್ನು ಒದಗಿಸಿಕೊಡಬೇಕು. ಬಿಜಾಪುರದಲ್ಲಿ ಜನರು ಗುಳೆ ಹೋಗುವಂತಹ ಪರಿಸ್ಥಿತಿ ಇತ್ತು. ಅಲ್ಲಿ ಇರುವಂತಹ ಉದ್ಯೋಗ ವಿನಿಮಯ ಕೇಂದ್ರವನ್ನು ಸರ್ಕಾರ ಮಾನವಸಂಪನ್ಮೂಲ ಕೇಂದ್ರವನ್ನಾಗಿ ಮಾಡುವ ನಿರ್ಣಯವನ್ನು ಏನು ತೆಗೆದುಕೊಂಡಿದೆ ಅದನ್ನು ನಾನು ಸ್ವಾಗತಿಸುತ್ತೇನೆ. ಬಿಜಾಪುರ, ಬಾಗಲಕೋಟೆ ಕೃಷ್ಣಾ ಬೇಸಿನ್‌ನಿಂದ ಬರುವ ನೀರಾವರಿಯ ಪರಿಣಾಮದಿಂದಾಗಿ ಅಲ್ಲಿ ಕೃಷಿ ಚಟುವಟಿಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಆ ಜಿಲ್ಲೆಗಳ ಶಾಲೆಗಳಲ್ಲಿ ತೋಟ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸೇರಿಸಿರುವುದನ್ನು ಈ ಸಂದರ್ಭದಲ್ಲಿ ಸ್ವಾಗತಿಸುತ್ತೇನೆ. ಕೃಷ್ಣಾ ಮೇಲ್ದಂಡೆ, ಕೃಷ್ಣಾ ಕೊಳ್ಳದ ಯೋಜನೆಯ ಅಡಿಯಲ್ಲಿ ಸರ್ಕಾರ ಹೊಸದಾಗಿ ಹುನಗುಂದ ತಾಲ್ಲೂಕಿನ ರಾಮತಾಳ್, ಮತ್ತು ಮುರೋಳ ಏತ ನೀರಾವರಿ, ಮತ್ತು ಚಿಕ್ಕೋಡಿಯ ಬಸವೇಶ್ವರ ಯೋಜನೆಯನ್ನು ಹಮ್ಮಿಕೊಂಡಿರುವ ಕಾರ್ಯ ಏನು ಇದೆ ಇದು ಆ ಭಾಗದ ಜನರಿಗೆ ಬಹಳ ಒಳ್ಳೆಯ ಸಂಗತಿಯಾಗಿದೆ. ಕಬ್ಬಿನ ಬೆಳೆಯ ಹನಿ ನೀರಾವರಿಗೆ 25 ಕೋಟಿ ಹಣವನ್ನು ಸರ್ಕಾರ ಇಟ್ಟಿದೆ ಅದನ್ನು ನಾನು ಬಹಳ ಮುಕ್ತವಾಗಿ ಸ್ವಾಗತಿಸುತ್ತೇನೆ. ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಈ ಮೂರು ಜಿಲ್ಲೆಗಳು ಸಕ್ಕರೆಯ ನಾಡು ಎಂದರೆ ತಪ್ಪಾಗುವುದಿಲ್ಲ. ಅಂದರೆ ಇಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ. ಈ ಕುರಿತು ಮೂರು ಜಿಲ್ಲೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂಬುದು ನನ್ನ ಸಲಹೆ. ಆ ಏರಿಯಾವನ್ನು ಹಂಚಿ ಕೊಟ್ಟ ಹಿನ್ನೆಲೆಯಲ್ಲಿ ಹೇಳುವುದಾದರೆ, ಇವತ್ತು ಬಹುತೇಕ ಆ ಎಲ್ಲಾ ಏರಿಯಾವನ್ನು

ಹಂಚಿ ಆಗಿದೆ. ಅಲ್ಲಿ ಇರುವಂತಹ ಸಕ್ಕರೆ ಕಾರ್ಖಾನೆಗಳಿಗೆ ನಾವು ಏರಿಯಾವನ್ನು ಹಂಚಿ ಕೊಡುತ್ತೇವೆ. ಪ್ರತಿ ಸಕ್ಕರೆ ಕಾರ್ಖಾನೆಯಲ್ಲೂ ಒಬ್ಬ Cane Development Officer ಇರುತ್ತಾರೆ. ಅವರು ಆ ಸಕ್ಕರೆ ಕಾರ್ಖಾನೆಗೂ ಈ ಕಬ್ಬು ಬೆಳೆಗಾರರ ಮಧ್ಯೆ ಒಂದು ಸಮನ್ವಯವನ್ನು ಮಾಡಬೇಕಾಗುತ್ತದೆ.

**ಉಪ ಸಭಾಪತಿಯವರು:–** ನಿಮ್ಮ ಸಮಯ ಮುಗಿಯುತ್ತಾ ಬಂತು.

**ಶ್ರೀ ಅರುಣ್ ಶಹಾಪುರ್:–** ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಸರ್ಕಾರ ಬಹಳಷ್ಟು ಯೋಜನೆಗೆಳನ್ನು ನಮ್ಮ ಭಾಗಕ್ಕೆ ಕೊಟ್ಟಿದೆ. ಅದರಲ್ಲೂ ಒಟ್ಟು 43 ತಾಲ್ಲೂಕುಗಳ ಪೈಕಿ ಬಿಜಾಪುರ ಜಿಲ್ಲೆಗೆ 7 ತಾಲ್ಲೂಕುಗಳನ್ನು ಕೊಟ್ಟಿದೆ. ಹಿಂದೆ ಅಲಮೇಲು ತಾಲ್ಲೂಕನ್ನು ಇದರಲ್ಲಿ ಸೇರಿಸಬೇಕೆಂದು ಶಿಫಾರಸ್ಸು ಮಾಡಲಾಗಿತ್ತು. ಈ ಅಲಮೇಲು ತಾಲ್ಲೂಕನ್ನು ಕೂಡ ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂಬುದು ನನ್ನ ಸಲಹೆ. ಅದೇ ರೀತಿ ಬಾಗಲಕೋಟೆ ಜಿಲ್ಲೆಯ ಸಾವಳಗಿ, ತೇರದಾಳ ತಾಲ್ಲೂಕನ್ನು ಕೂಡ ಹಿಂದೆ ಶಿಫಾರಸ್ಸು ಮಾಡಲಾಗಿತ್ತು. ಇವೆರಡನ್ನೂ ಕೂಡ ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂಬುದು ನನ್ನ ಸಲಹೆ. 43 ತಾಲ್ಲೂಕುಗಳ ಜೊತೆ ಇವುಗಳನ್ನೂ ಕೂಡ ಸೇರಿಸಿ ಘೋಷಣೆಯನ್ನು ಮಾಡಬೇಕೆಂದು ವಿನಂತಿಸುತ್ತೇನೆ. ದೇವರ ಹಿಪ್ಪರಗಿ, ಮಡಿವಾಳ ಮಾಚಿದೇವ ಸ್ಮಾರಕಕ್ಕೆ 5 ಕೋಟಿ ರೂಪಾಯಿ ಕೊಟ್ಟಿದ್ದಾರೆ. ನೀವು ಅದನ್ನು ಕೂಡಲ ಸಂಗಮ ಪ್ರಾಧಿಕಾರಕ್ಕೆ ತಂದು ಅದರ ಮೂಲಕ ಇದರ ಅಭಿವೃದ್ಧಿಯನ್ನು ಮಾಡಬೇಕೆಂಬುದು ನಮ್ಮ ಬೇಡಿಕೆಯಾಗಿತ್ತು. ಬೆಂಗಳೂರು ನಗರದ ಸರ್ಕಾರಿ ನೌಕರರಿಗೆ 25 ಪರ್ಸೆಂಟ್ ಇದ್ದ ಮನೆ ಬಾಡಿಗೆ ಭತ್ಯೆಯನ್ನು 30 ಪರ್ಸೆಂಟಿಗೆ ಏರಿಸಿದ್ದಾರೆ. ಇಡೀ ರಾಜ್ಯದಲ್ಲಿರುವ ನಗರಗಳನ್ನು ಶ್ರೇಣೀಕರಣ ಆಗಬೇಕು ಎನ್ನುವುದನ್ನು ತಡೆಹಿಡಿಯುವುದು ಬೇಡ. ಬೆಂಗಳೂರು ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ನೌಕರರಿಗೆ ಶೇಕಡ 5 ಪರ್ಸೆಂಟ್ ಬಾಡಿಗೆ ಭತ್ಯೆಯನ್ನು ಏನು ಏರಿಕೆ ಮಾಡಿದ್ದೀರಿ ಅದನ್ನು ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೆ ಹೆಚ್ಚಳ ಮಾಡಬೇಕೆಂಬುದು ನನ್ನ ಸಲಹೆಯಾಗಿದೆ. ಕಳೆದ ಸಾರಿ

ವೇತನ ಶ್ರೇಣಿಯನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಮೊದಲು ಇದ್ದಂತಹ ಗ್ರಾಮೀಣ ಭತ್ಯೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಾಗಿದೆ. ಬೆಂಗಳೂರಿಗೆ ಹೆಚ್ಚಿನ ಆದ್ಯತೆಯನ್ನು ಏನು ಕೊಟ್ಟಿದೆ . . . .

**ಉಪ ಸಭಾಪತಿಯವರು:–** ನೀವು ಒಟ್ಟಾರೆಯಾಗಿ 8–10 ನಿಮಿಷದಲ್ಲಿ ಎಲ್ಲವನ್ನೂ ತೆಗೆದುಕೊಂಡು ಮಾತನಾಡುವುದಕ್ಕಾಗುವುದಿಲ್ಲ. ಬೇರೆಯವರಿಗೆ ಅವಕಾಶ ಕೊಡಬೇಕು ಬೇಗನೆ ಮುಗಿಸಿ.

**ಶ್ರೀ ಅರುಣ್ ಶಹಾಪುರ:–** 2–3 ವಿಚಾರಗಳನ್ನು ಹೇಳಿ ಮುಗಿಸುತ್ತೇನೆ. ಅಪರೂಪಕ್ಕೆ ಅವಕಾಶ ಸಿಕ್ಕಿದೆ. ಗ್ರಾಮೀಣ ಭತ್ಯೆಯನ್ನು ಏನು ಹಿಂದಕ್ಕೆ ಪಡೆಯಲಾಗಿದೆ ಆ ಗ್ರಾಮೀಣ ಭತ್ಯೆಯನ್ನು ಪುನಃ ನೀಡಬೇಕೆಂದು ವಿನಂತಿಸುತ್ತೇನೆ. ಗ್ರಾಮೀಣ ಭಾಗದಲ್ಲಿನ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತವನ್ನು, ನಗರ ಭಾಗದಲ್ಲಿನ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತವನ್ನು ನೋಡಿದಾಗ ಬಹಳಷ್ಟು ಸಮಸ್ಯೆ ಇರುವುದು ಕಂಡು ಬರುತ್ತದೆ. ಯಾರು ಗ್ರಾಮೀಣ ಭಾಗದಲ್ಲಿ ಹೋಗಿ ಕೆಲಸ ಮಾಡುತ್ತಾರೆಯೋ ಅವರಿಗೆ ಗ್ರಾಮೀಣ ಭತ್ಯೆಯನ್ನು ಪುನಃ ಕೊಡುವ ಕೆಲಸ ಆಗಬೇಕು. ಇನ್ನು ಪರಿಶಿಷ್ಟ ಜಾತಿ ಮತ್ತು ವರ್ಗದ ಮ್ಯಾನೇಜ್‌ಮೆಂಟ್‌ನವರಿಗೆ 1995 ರವರೆವಿಗೂ ಅನುದಾನ ಕೊಡುವ ಕೆಲಸವನ್ನು ಮಾಡಿದೆ. ಅದೇ ರೀತಿಯಲ್ಲಿ ಸಾಮಾನ್ಯ ವರ್ಗದ ಮ್ಯಾನೇಜ್‌ಮೆಂಟ್‌ನ ಪದವಿ ಕಾಲೇಜುಗಳವರಿಗೂ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಸಕಾರ ರೆವಿನ್ಯೂ ಮೂಲಕವಾಗಿ 37,000 ಕೋಟಿಯ ತೆರಿಗೆಯನ್ನು ಸಂಗ್ರಹ ಮಾಡುವ ಗುರಿಯನ್ನು ಇಟ್ಟುಕೊಂಡಿದೆ. ಈ ಎಲ್ಲಾ ಸಮಸ್ಯೆಗಳ ಬರದ ಮಧ್ಯೆಯಲ್ಲೂ ಕೂಡ ಈ 37,000 ಕೋಟಿಯ ಗುರಿಯನ್ನು ಖಂಡಿತವಾಗಿ ತಲುಪುತ್ತದೆ. ಕಳೆದ ಬಾರಿಯ ಸೋರಿಕೆಯನ್ನು ಸರ್ಕಾರ ಸಮರ್ಪಕವಾಗಿ ತಡೆಗಟ್ಟಿದೆ. ಅದರ ಪರಿಣಾಮದಿಂದಾಗಿ ಇದು ಖಂಡಿತವಾಗಿ ಆಗುತ್ತದೆ. ಯಾರು ತೆರಿಗೆದಾರರು ಇದ್ದಾರೆ ಯಾರು ತೆರಿಗೆಯನ್ನು ನೀಡುವ ವ್ಯಾಪಾರಿಗಳು, ಸಣ್ಣ ಉದ್ದಿಮೆದಾರರು ಇದ್ದಾರೆ ಅವರುಗಳ ಹಲವಾರು ಬೇಡಿಕೆಗಳು ಇವೆ.

ಪೆಟ್ರೋಲ್, ಡೀಸೆಲ್‌ನಲ್ಲಿ ಎಂಟ್ರಿ ತೆರಿಗೆಯನ್ನು ಕಡಿಮೆ ಮಾಡಿ ಎನ್ನುವಂಥಾದ್ದು ಇರಬಹುದು. ಇ–ಸುಗಮದಲ್ಲಿ ಬಹಳ ದೊಡ್ಡಾದಾಗಿ ಸಮಸ್ಯೆಯಾಗುತ್ತಿದೆ. ಇ–ಸುಗಮದಲ್ಲಿ ನಾವು return ಅನ್ನು ಕೊಡುವುದು ತಡವಾದರೆ ಅದನ್ನು block ಮಾಡುತ್ತಾರೆ. ಅದನ್ನು re-open ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಮತ್ತು ಅದು ಬಹಳ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುತ್ತದೆ. ಆದುದರಿಂದ ಈ ಇ–ಸುಗಮವನ್ನು ಇನ್ನೂ ಸರಳೀಕೃತಗೊಳಿಸುವ ಮೂಲಕ ವ್ಯಾಪಾರಿಗಳಿಗೆ ಅನುಕೂಲವನ್ನು ಮಾಡಿಕೊಡಬೇಕು. ಪ್ರತಿ ವರ್ಷ trade license ಅನ್ನು ತೆಗೆದುಕೊಳ್ಳುವುದಕ್ಕೆ KASSIA ದವರು ಬೇಡ ಎಂದು ವಿನಂತಿ ಇಟ್ಟುಕೊಂಡಿದ್ದರು. ಈಗ 5 ವರ್ಷದ trade license ಗೆ ಒಂದೇ ಸಲ ಹಣವನ್ನು ಕೊಡಿ ಎನ್ನುವ ಮಾತು ಇದೆ. ಅದನ್ನೂ ಕೂಡ ಪರಿಗಣಿಸಬೇಕು. 37,000 ಕೋಟಿಯ ತೆರಿಗೆಯನ್ನು ಸಂಗ್ರಹ ಮಾಡುವ ಗುರಿಯನ್ನು ಸರ್ಕಾರ ಏನು ಇಟ್ಟುಕೊಂಡಿದೆ. ಈ ಎಲ್ಲಾ ಸಮಸ್ಯೆಗಳ ಬರದ ಮಧ್ಯೆಯಲ್ಲೂ ಕೂಡ ಈ 37,000 ಕೋಟಿಯ ಗುರಿಯನ್ನು ಖಂಡಿತವಾಗಿ ತಲುಪುತ್ತದೆ. ಅದಕ್ಕಿಂತ ಹೆಚ್ಚಿನ ಗುರಿಯನ್ನು ತಲುಪುತ್ತದೆ ಎಂದು ಹೇಳಬಯಸುತ್ತೇನೆ.

**ಉಪ ಸಭಾಪತಿಯವರು:–** ಬೇಗನೆ ಮುಗಿಸಿ. ಇನ್ನೂ ಮಾತನಾಡುವವರಿದ್ದಾರೆ.

**ಶ್ರೀ ಅರುಣ್ ಶಹಾಪುರ್:–** ನಮ್ಮ ಆದಾಯಕ್ಕೆ ಇರುವಂತಹ ತೆರಿಗೆ ಬಾಬತ್ತುಗಳ ಮೂಲಕ ನಮ್ಮ ರಾಜ್ಯದ tourism ಅನ್ನು ಬೆಳೆಸುವುದರ ಮುಖಾಂತರ ಆದಾಯಕ್ಕೆ ಹೊಸ ಸೇರ್ಪಡೆ ಆಗುವ ನಿಟ್ಟಿನಲ್ಲಿ ಯೋಜನೆ ಮಾಡಬೇಕು. ನಮ್ಮಲ್ಲಿ ಬಹಳ ಜನ ಶಾಸಕರು ವಿದೇಶಿ ಪ್ರವಾಸವನ್ನು ಕೈಗೊಂಡಿದ್ದೇವೆ.

**ಉಪ ಸಭಾಪತಿಯವರು:–** ಆಡಳಿತ ಪಕ್ಷದವರಿಗೆ ನೀಡಿರುವ ಸಮಯವನ್ನು cut ಮಾಡಬೇಕಾಗುತ್ತದೆ.

**ಶ್ರೀ ಅರುಣ್ ಶಹಾಪುರ್:–** ಕೆಲವು ರಾಷ್ಟ್ರಗಳು tourism ಮೇಲೆ ಅವಲಂಬಿಸಿವೆ. ಈ tourism ನಿಂದ ಬರುವಂತಹ ಆದಾಯದಿಂದಲೇ ಅವರ ದೇಶದ ಆರ್ಥಿಕತೆಯನ್ನು ಸರಿದೂಗಿಸುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಆದರೆ ನಮ್ಮಲ್ಲಿ ಪ್ರವಾಸೋದ್ಯಮಕ್ಕೆ ಅಷ್ಟರ ಮಟ್ಟಿಗೆ ಗಮನಹರಿಸುತ್ತಿಲ್ಲ. ನಮ್ಮ ರಾಜ್ಯವೂ ಈ tourism ಮೂಲಕ ನಮಗೆ ಆದಾಯ ಬರುವಂತಹ ಯೋಜನೆಗಳನ್ನು ಮಾಡಬೇಕೆಂದು ಹೇಳುತ್ತಾ ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಉಪ ಸಭಾಪತಿಯವರು:–** ಮಾನ್ಯ ಘೋಟ್ನೇಕರ್ ಅವರೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ಸಮಯವನ್ನು ಲೆಕ್ಕಕ್ಕೆ ತೆಗದುಕೊಳ್ಳದೆ ತಮಗೆ 8 ನಿಮಿಷ ಅವಕಾಶ ಇದೆ. ನೀವು ಯಾವ ರೀತಿ ಸಮಯವನ್ನು ಸರಿ ಹೊಂದಿಸಿಕೊಳ್ಳುತ್ತೀರಿ ನೋಡಿ. ನೇರವಾಗಿ ವಿಷಯಕ್ಕೆ ಬನ್ನಿ.

**ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ನೇರವಾಗಿ ವಿಷಯಕ್ಕೆ ಬರುತ್ತಿದ್ದೇನೆ. ಇವರು ಇಂದು ಬಹಳ ದೊಡ್ಡ ಮೊತ್ತದ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ. ಇದು ಚುನಾವಣೆಯ ಸಲುವಾಗಿ ಮಾಡಿದಂತಹ ಆಯವ್ಯಯವಾಗಿದೆ. ನಮ್ಮಲ್ಲಿ ಒಂದು ಗಾದೆ ಇದೆ "ಸಾಲ ತೆಗೆದುಕೊಂಡು ಬಂದು ಹಬ್ಬ ಮಾಡಿದ ಹಾಗೆ" ಎಂಬಂತಹ ಆಯವ್ಯಯ ಇದಾಗಿದೆ. ಕಳೆದ ನಾಲ್ಕೂವರೆ ವರ್ಷದಲ್ಲಿ ಮಂಡಿಸಿದ ಆಯವ್ಯಯದಲ್ಲಿ ಎಲ್ಲಾ ಜಿಲ್ಲೆಗಳಿಗಿಂತ ಕಡಿಮೆ ಹಣ ಕೊಟ್ಟಂತಹ ಜಿಲ್ಲೆ ಎಂದರೆ ಅದು ಉತ್ತರ ಕನ್ನಡ ಜಿಲ್ಲೆಯಾಗಿದೆ.

( 4–30 ಘಂಟೆ)

ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಎಲ್ಲಾದರಲ್ಲಿಯೂ ಕಡಿಮೆ ಹಣವನ್ನು ಕೊಡಲಾಗುತ್ತದೆ. ನಮ್ಮ ಜಿಲ್ಲೆಗೆ ಯಾವ್ಯಾವ ರೀತಿಯಲ್ಲಿ ಅನ್ಯಾಯ ಮಾಡಿದ್ದಾರೆಂದು ಹೇಳಬೇಕಾಗುತ್ತದೆ. ಆದರೆ ನಮ್ಮ ಜಿಲ್ಲೆಯಿಂದ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಬಹಳಷ್ಟು ಹಣ ಬರುತ್ತದೆ. ನಮ್ಮ ಜಿಲ್ಲೆಯ ಹೈಡಲ್

ಪ್ರಾಜೆಕ್ಟ್‌ಗಳಿಂದ ಇಡೀ ಕರ್ನಾಟಕಕ್ಕೆ ಬೆಳಕನ್ನು ತಂದು ಕೊಡುವಂತಹ ಜಿಲ್ಲೆ ಎಂದರೆ ಉತ್ತರ ಕನ್ನಡ ಜಿಲ್ಲೆ. ಜಿಲ್ಲೆಯಲ್ಲಿ ಸಾಕಷ್ಟು ಹೈಡಲ್ ಪ್ರಾಜೆಕ್ಟ್, ಸೂಪ ಡ್ಯಾಂ, ಕಾಳಿ ಪ್ರಾಜೆಕ್ಟ್, ಹಾಗೂ Naval base ಇದೆಲ್ಲಾ ಪ್ರಾಜೆಕ್ಟ್‌ಗಳಿಗೆ ಲಕ್ಷ ಲಕ್ಷ ಎಕರೆಯನ್ನು ಜಮೀನು ಕಳೆದುಕೊಂಡು ಕರ್ನಾಟಕದ ಉದ್ಧಾರವನ್ನು ಮಾಡಿದಂತಹ ಈ ಜನರಿಗೆ ಇಲ್ಲಿಯವರೆಗೆ ಬಜೆಟ್‌ನಲ್ಲಿ ಹಣವನ್ನು ಕೊಟ್ಟಿಲ್ಲ. ಮತ್ತು ತಮಗೆಲ್ಲಾ ಗೊತ್ತಿರುವಂತೆ ಇಡೀ ಕರ್ನಾಟಕ ರಾಜ್ಯದಲ್ಲಿ ಎರಡನೇ ಅತೀ ಹೆಚ್ಚು ವಿಸ್ತೀರ್ಣವಾದಂತಹ ತಾಲ್ಲೂಕು ಜೋಯಿಡಾ ತಾಲ್ಲೂಕು, ಅತೀ ಹಿಂದುಳಿದ ತಾಲ್ಲೂಕು ಕೂಡ ಆಗಿದೆ. ಆದರೆ ಇವತ್ತಿನ ದಿವಸ ಜೋಯಿಡಾ ತಾಲ್ಲೂಕಿನಲ್ಲಿ ಏನಾಗಿದೆ ಎಂದರೆ ಈಗಲೂ ಕೂಡ ಕುಣಬಿ ಜನರು ಇದ್ದಾರೆ. ಅವರು ಈಗಲೂ ಸಹಾ ಗಿಡವನ್ನು ಕಡಿಯಬೇಕಾದರೆ ಅದಕ್ಕೆ ಪೂಜೆಯನ್ನು ಮಾಡುತ್ತಾರೆ. ಹುಲಿ ಹೆಜ್ಜೆ ಗುರುತು ಕಂಡರೆ ಅವರು ಸ್ನಾನ ಮಾಡಿ ಹುಲಿ ಹೆಜ್ಜೆಗೆ ಪೂಜೆಯನ್ನು ಮಾಡುತ್ತಾರೆ. ಈ ರೀತಿ ಇರುವಂತಹ ಜನ. ನಮ್ಮ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯವರು ಅಧ್ಯಯನ ಪ್ರವಾಸಕ್ಕೆ ಹೋದಂತಹ ಸಂದರ್ಭದಲ್ಲಿ ಕುಂಬರಿ ಜಮೀನು ಸಲುವಾಗಿ ಸ್ಥಳ ಪರಿಶೀಲಗಾಗಿ ಹೋಗಿದ್ದೇವು. ಅಲ್ಲಿ ಹೋಗಿ ನೋಡಿಕೊಂಡು ಬರಲಾಗಿದೆ. ಅದು ಬಹಳ ಹಿಂದುಳಿದಂತಹ ತಾಲ್ಲೂಕು ಆಗಿದೆ. ಕಾಳಿ ನದಿ ಉಗಮವಾಗಿದೆ. ಪಂಢರಿ ನದಿ ಉಗಮವಾಗಿದೆ. ಮತತೆ ಲ್ಲಿ ಹೈಡಲ್ ಪ್ರಾಜೆಕ್ಟ್ ಮಾಡಿ ರೈತರು ಎಲ್ಲಾ ಜಮೀನನ್ನು ಕಳೆದುಕೊಂಡಿದ್ದಾರೆ. ಅಲ್ಲಿಯ ರೈತರು ಈ ಪ್ರಾಜೆಕ್ಟ್ ಮಾಡಲು ಕೇವಲ 3,000 ರೂಪಾಯಿಗಳಿಗೆ ಒಂದೊಂದು ಎಕರೆ ಭೂಮಿಯನ್ನು ಕೊಟ್ಟಿದ್ದಾರೆ. ಜಮೀನು ಕಳೆದುಕೊಂಡಂತಹ ಕುಟುಂಬದವರಿಗೆ ನೌಕರಿಯನ್ನು ಕೊಡುತ್ತೇವೆಂದು ಹೇಳಿದ್ದರು ಆದರೆ ಇದುವರೆಗೂ ಒಬ್ಬರಿಗೂ ಕೂಡ ನೌಕರಿಯನ್ನು ಕೊಟ್ಟಿಲ್ಲ. ಮತ್ತು ಅಲ್ಲಿ ನಮ್ಮ ಕುಣಬಿ ಜನರು ಬ್ರಿಟಿಷ್ ಕಾಲದಿಂದಲೂ ವಾಸ ಮಾಡುತ್ತಿದ್ದಾರೆ. ಅವರಿಗೆ ಬ್ರಿಟಿಷರು ಬೌಂಡರಿಯನ್ನು ಫಿಕ್ಸ್ ಮಾಡಿ ಕಲ್ಲು ಹಾಕಿ ಏನು ಜಮೀನನ್ನು ವ್ಯವಸಾಯ ಮಾಡುವುದಕ್ಕೆ ಕೊಟ್ಟಿದ್ದಾರೆ ಆದರೆ ಈಗ ಅಲ್ಲಿ ಹೋಗಿ ವ್ಯವಸಾಯವನ್ನು ಮಾಡುವುದಕ್ಕೆ ಅರಣ್ಯ ಇಲಾಖೆಯವರು ಬಿಡುತ್ತಿಲ್ಲ. ಆ ಜಾಗದಲ್ಲಿ ಇವರು ರಾಗಿಯನ್ನು

ನವಣೆಯನ್ನು ಮಾತ್ರ ಬೆಳೆಯುತ್ತಿದ್ದರು ಈಗ ಅದಕ್ಕೂ ಕೂಡ ಅರಣ್ಯ ಇಲಾಖೆಯವರು ಅದನ್ನು ಬೆಳೆಯುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ. ಇವತ್ತು ಏನಾದರು ಅಲ್ಲಿ ಅರಣ್ಯ ಉಳಿದಿದ್ದರೆ ಈ ಕುಣಬಿ ಜನಾಂಗದವರಿಂದ ಮಾತ್ರ. ನಮಗೆ ಒಂದು ಖೇದಕರ ವಿಷಯ ಎಂದರೆ ಅಲ್ಲಿ ವರ್ಷ ವರ್ಷ ಗಡಿನಾಡು ಉತ್ಸವವನ್ನು ಮಾಡುತ್ತಾರೆ. ಅದಕ್ಕಾಗಿ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡುತ್ತಾರೆ. ಆದರೆ ಬೇಸರದ ಸಂಗತಿ ಎಂದರೆ ಬಾಡೂರು ಎನ್ನುವಂತಹ ಒಂದು ಹಳ್ಳಿ. ಈಗಾಗಲೇ ಅದು ಗಡಿಯನ್ನು ಅದು ಗಡಿಯನ್ನು ಗುರುತಿಸಿದ್ದಾರೆ. ಆದರೆ ಇವತ್ತು ಆ ಜಾಗ ಗೋವಾ ರಾಜ್ಯಕ್ಕೆ ಸೇರಿದ. ಇದು ನಮ್ಮ ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಗಡಿನಾಡು ಉತ್ಸವಕ್ಕಾಗಿ ಸರ್ಕಾರ ಲಕ್ಷಗಟ್ಟಲೆ, ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಾರೆ. ಆದರೆ ಅಲ್ಲಿ ವಾಸ ಮಾಡುವಂತಹ ಜನರು ಮಳೆಗಾಲ ಬಂದರೆ ಹೊರಗಡೆ ಹೋಗುವುದಕ್ಕೆ ಆಗದೇ ಮೂರು ತಿಂಗಳು, ನಾಲ್ಕು ತಿಂಗಳು ಮನೆಯಲ್ಲಿಯೇ ಉಳಿಯುತ್ತಾರೆ. ಏನಾದರು ಅಲ್ಲಿರುವಂತಹ ಜನರಿಗೆ ರೋಗ ಬಂದರೆ, pregnant ಆಗಿ delivery ಸಮಯ ಬಂದಾಗ ಕಂಬಳಿಯಲ್ಲಿ ಜನರನ್ನು ಎತ್ತಿಕೊಂಡು ಹೋಗುತ್ತಾರೆ. ಇದರ ಬಗ್ಗೆ ಹಕ್ಕುಚ್ಯುತಿ ಸಮಿತಿ ಬಂದಾಗ ಸಮಿತಿಗೆ ಅಲ್ಲಿಯ ಜನರು ಹೇಳಿಕೊಂಡಿದ್ದಾರೆ. ಇದುವರೆಗೂ ಅಲ್ಲಿ ಸೇತುವೆಗಳಿಲ್ಲ, ರಸ್ತೆಗಳಿಲ್ಲ. ಈ ಪ್ರದೇಶವನ್ನು ಡಾ॥ ನಂಜುಂಡಪ್ಪನವರ ವರದಿಯಲ್ಲಿಯೂ ಕೂಡ ಇದು ಅತ್ಯಂತ ಹಿಂದುಳಿದಂತಹ ಪ್ರದೇಶವೆಂದು ಗುರುತಿಸಿದ್ದಾರೆ. ಆದರೆ ಸರ್ಕಾರ ಇದುರೆಗೂ ಯಾವುದೇ ಸೌಲಭ್ಯಗಳನ್ನು ಕಲ್ಪಿಸುತ್ತಿಲ್ಲ. ಅದೇ ಪ್ರಕಾರ ಇವತ್ತು ನಮ್ಮ ಉತ್ತರ ಕರ್ನಾಟಕ ಜಿಲ್ಲೆಗೆ ಒಂದು ಸರ್ಕಾರಿ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡುತ್ತಾರೆಂದರೆ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಂತಹ ಸಮಯದಲ್ಲಿ ನಮ್ಮ ಜಿಲ್ಲೆಗೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ನಮ್ಮ ಜಿಲ್ಲೆಗೆ ಯಾವ ರೀತಿಯಾಗಿ ಸರ್ಕಾರದವರು ಮೋಸ ಮಾಡುತ್ತಾರೆಂದರೆ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಂತಹ ಸಮಯದಲ್ಲಿ ನಮ್ಮ

ಜಿಲ್ಲೆಗೆ ಬಂದಾಗ 100 ಕೋಟಿ ರೂಪಾಯಿಗಳ ಪ್ಯಾಕೇಜ್ ಕೊಡುತ್ತೇನೆಂದು ಘೋಷಣೆ ಮಾಡಿದರು. ಅವರು ಹೋದಮೇಲೆ ಶ್ರೀ ಸದಾನಂದಗೌಡರು ಮುಖ್ಯಮಂತ್ರಿಗಳಾದ ಮೇಲೆ ಅವರು ಕೂಡ ನಮ್ಮ ಜಿಲ್ಲೆಗೆ ಬಂದು ಶಿರಶಿಯಲ್ಲಿ ಮೀಟಿಂಗ್ ಮಾಡಿದರು. ಅವರು 100 ಕೋಟಿ ರೂಪಾಯಿಗಳನ್ನು ಪ್ಯಾಕೇಜ್ ಕೊಡುತ್ತೇವೆಂದು ಅದಕ್ಕೆ ಕ್ರಿಯಾ ಯೋಜನೆಯನ್ನು ತಯಾರು ಮಾಡಿ ಎಂದು ಹೇಳಿದರು. ಕ್ರಿಯಾ ಯೋಜನೆಗೆ ನಮ್ಮ ಜಿಲ್ಲಾ ಪಂಚಾಯಿತಿಯಿಂದ ಆರುವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು. ಆದರೆ 100 ಕೋಟಿ ರೂಪಾಯಿಗಳ ಪ್ಯಾಕೇಜ್ ಇದುವರೆಗೂ ಬಂದಿಲ್ಲ. ಅಂದರೆ ಕ್ರಿಯಾ ಯೋಜನೆಗಾಗಿ ಮಾಡಿದಂತಹ ಹಣ ಕೂಡ ಹೋಯಿತು. ಹಣನ್ನು ಹೋಯಿತು. ಗುಣನು ಹೋಯಿತು. ಆ ರೀತಿಯ ಪರಿಸ್ಥಿತಿ ನಮ್ಮ ಉತ್ತರ ಕನ್ನಡ ಜಿಲ್ಲೆಗೆ ಬಂದಿದೆ. ಅದೇ ಪ್ರಕಾರವಾಗಿ ನಾವೆಲ್ಲರೂ ಕನ್ನಡದ ಬಗ್ಗೆ ಬಹಳ ಮಾತನಾಡುತ್ತೇವೆ. ಬನವಾಸಿಯಲ್ಲಿ ಕನ್ನಡಾಂಬೆ ದೇವಸ್ಥಾನ ಇದೆ. ಕನ್ನಡಕ್ಕೆ ಅದು ಇದು ಎಲ್ಲಾ ಬೇಕೆಂದು ಹೇಳುತ್ತೇನೆ. ಆದರೆ ನಮ್ಮ ರಾಜ್ಯದಲ್ಲಿ ಕನ್ನಡಾಂಬೆಯ ದೇವಸ್ಥಾನ ಒಂದೇ ಇರುವುದು. ಅದಕ್ಕೆ ಆಯವ್ಯಯದಲ್ಲಿ ಎಷ್ಟು ಹಣವನ್ನು ನೀಡಲಾಗಿದೆ? ಕನ್ನಡಾಂಬೆಯ ದೇವಸ್ಥಾನಕ್ಕೆ ಏಕೆ ಒಂದು ರೂಪಾಯಿಗಳನ್ನು ಕೂಡ ಆಯವ್ಯಯದಲ್ಲಿ ಕೊಟ್ಟಿಲ್ಲ? ಈ ರೀತಿ ತಾರತಮ್ಯ ಏಕೆ? ಇನ್ನು ನಮ್ಮ ಜೋಯಿಡಾ ತಾಲ್ಲೂಕಿನ ಉಳವಿಯಲ್ಲಿ ಬಹಳ ದೊಡ್ಡ ಚನ್ನಬಸವೇಶ್ವರರ ದೇವಸ್ಥಾನ ಇದೆ. ಅದು 1932ನೇ ಅಲ್ಲಿ ಹುಲಿಗಳು ಬಹಳ ಇತ್ತು ಎಂದು ಬೇಟೆಯಾಡುವುದಕ್ಕೆ ಹೋದಾಗ ಚನ್ನಪ್ಪ ಕುತ್ತೂರು ಎಂದು ಇದ್ದರು ಅವರು ಹುಡುಕಿದಂತಹ ದೇವಸ್ಥಾನ. ಅದು ಬಹಳ ಪುರಾತನವಾದಂತಹ ದೇವಸ್ಥಾನ. ಈಗ ಅಲ್ಲಿ ಬಹಳಷ್ಟು ಜನರು ಬೇರೆ ಊರುಗಳಿಂದ ಬೇರೆ ರಾಜ್ಯಗಳಿಂದ ಬಂದು ಲಕ್ಷಗಟ್ಟಲೆ ಜನರು ಆ ದೇವಸ್ಥಾನಕ್ಕೆ ಬರುತ್ತಾರೆ. ಆದರೆ ಅಲ್ಲಿ ಜನರು ಉಳಿಯುವುದಕ್ಕೆ ವಸತಿ ಸೌಕರ್ಯ ಅಷ್ಟೊಂದು ಇಲ್ಲ. ಅದುದರಿಂದ ಉಳವಿಯಲ್ಲಿರುವಂತಹ ಚನ್ನಬಸವೇಶ್ವರ ದೇವಸ್ಥಾನಕ್ಕೆ 2-3 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಕೊಟ್ಟರೆ ಒಳ್ಳೆಯದಾಗುತ್ತದೆಂದು ತಮ್ಮ

ಮುಖಾಂತರ ಸರ್ಕಾರದವರನ್ನು ಕೇಳಿಕೊಳ್ಳುತ್ತಿದ್ದೇನೆ. ನಮ್ಮ ದಾಂಡೇಲಿಗೆ ಐ.ಎ.ಎಸ್. ಮತ್ತು ಐ.ಪಿ.ಎಸ್. ಹಾಗೂ ಐ.ಎಫ್.ಎಸ್ ಎಲ್ಲಾ ಅಧಿಕಾರಿಗಳು ಬರುತ್ತಾರೆ. ಯಾವುದಕ್ಕೋಸ್ಕರವಾಗಿ ಬರುತ್ತಾರೆಂದರೆ ದಾಂಡೇಲಿ ಟೀಕ್ ಮರಕ್ಕಾಗಿ ಬರುತ್ತಾರೆ. ನಮ್ಮ ದಾಂಡೇಲಿ ಟಿಕ್ ವುಡ್ ಜಗತ್ತಿನಲ್ಲಿಯೇ ಪ್ರಸಿದ್ಧವಾಗಿರುವಂಥದ್ದು. ಆದರೆ 5,400 ಜನಸಂಖ್ಯೆ ಇರುವಂತಹ ದಾಂಡೇಲಿ ಒಂದು ತಾಲ್ಲೂಕ್ ಆಗಿ ಮಾಡಬೇಕೆಂದು ಹುಂಡೇಕರ್ ಸಮಿತಿಯು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ಶ್ರೀ ಎಂ.ಪಿ. ಪ್ರಕಾಶ್‌ರವರ ಸಮಿತಿಯು ಕೂಡ ದಾಂಡೇಲಿಯನ್ನು ತಾಲ್ಲೂಕು ಆಗಿ ಮಾಡಬೇಕೆಂದು ಹೇಳಿದ್ದಾರೆ. ದಾಂಡೇಲಿ ತಾಲ್ಲೂಕು ಆಗಬೇಕೆಂದು 1980ನೇ ಇಸವಿಯಿಂದ ಬಹಳ ದಿವಸಗಳಿಂದ ಹೋರಾಟವನ್ನು ಮಾಡಿಕೊಂಡು ಬರಲಾಗುತ್ತದೆ. ಅಲ್ಲಿ West Coast Paper Mills ಎನ್ನುವ ಒಮದು ದೊಡ್ಡ ಪೇಪರ್ ಮಿಲ್ ಇದೆ. ಒಂದು ವಿಷಾದದ ಸಂಗತಿ ಎಂದರೆ ನಮ್ಮ ಅರಣ್ಯ ಸಚಿವರು ಅಲ್ಲಿ 100 ರಿಂದ 120 ರಷ್ಟು ಮೊಸಳೆಗಳು ಒಂದೇ ಕಡೆಯಲ್ಲಿದೆ. ಆದ್ದರಿಂದ ಅಲ್ಲಿ ಮೊಸಳೆ ಪಾರ್ಕ್ ಮಾಡುತ್ತೇವೆಂದು ಹೇಳಿದರು. ಆದರೆ ಇದುವರೆಗೂ ಕೂಡ ಏನು ಆಗಿಲ್ಲ. ನಮ್ಮ ಸ್ಥಳೀಯ ಪತ್ರಿಕೆಗಳಲ್ಲಿ ಇವರು ಬಂದು ಹೋದಾಗ ಬಂದ ಪುಟ್ಟ, ಹೋದ ಪುಟ್ಟ ಎಂದು ಬರೆದರು. ಇದುವರೆಗೂ ಏನು ಮಾಡಿಲ್ಲ. ಆ ಮೊಸಳೆಗಳ ಸಲುವಾಗಿ ನಮ್ಮ ಮಾದನಾಯಕ ತೀರಿಕೊಂಡು ಹೋದ. ಈಗ ಮೊಸಳೆಗಲ ಹತ್ತಿರ ಯಾರು ಹೋಗುವ ಹಾಗಿಲ್ಲವೆಂದು ನಿರ್ಬಂಧವನ್ನು ಹಾಕಿಬಿಟ್ಟಿದ್ದಾರೆ. ನಮ್ಮ ಹಳಿಯಾಳ ತಾಲ್ಲೂಕಿನಲ್ಲಿರುವ ದಾಂಡೇಲಿ ಸುತ್ತಮುತ್ತ ಬಹಳಷ್ಟು ರೆಸಾರ್ಟ್‌ಗಳಿವೆ. ಬಹಳಷ್ಟು ರಮಣಿಯ ಪ್ರದೇಶಗಳಿವೆ. ಆದರೆ ಈ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಬಹುದು. ಆದರೆ ಈ ಆಯವ್ಯಯದಲ್ಲಿ ಒಂದು ಪೈಸೆ ಕೂಡ ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲ. ಜಂಗಲ್ ಲಾಡ್ಜ್ ಇದೆ. ಆದರಿಂದ ಸರ್ಕಾರಕ್ಕೆ ಕೋಟಿಗಟ್ಟಲೆ ಹಣ ಬರುತ್ತದೆ. ಆ ಸ್ಥಳವನ್ನು ಪ್ರವಾಸೋದ್ಯಮ ಸ್ಥಳವನ್ನಾಗಿ ಮಾಡಬಹುದು, ಆದರೆ ಏನೂ ಮಾಡುತ್ತಿಲ್ಲ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಒಂದು ಪೈಸೆಯನ್ನು ಬಜೆಟ್‌ನಲ್ಲಿ ಕೊಟ್ಟಿಲ್ಲ. ಇಡೀ ನಮ್ಮ

ಕರ್ನಾಟಕದ ಕೇಂದ್ರಬಿಂದು ಎಂದು ಹೇಳಿದರೆ ನಮ್ಮ ಉತ್ತರ ಕನ್ನಡ ಜಿಲ್ಲೆ. ಅಲ್ಲಿರುವಂತಹ ದಟ್ಟ ಅರಣ್ಯ ಪ್ರದೇಶ ಇನ್ನೆಲ್ಲಿಯೂ ಇಲ್ಲ. ಮಾನ್ಯ ಸಭಾಪತಿಯವರೆ ತಮ್ಮ ಮುಖಾಂತರ ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಈ ಒಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವಂತಹ ಅರಣ್ಯಾಧಿಕಾರಿಗಳಾದ RFO ಆಗಲಿ ACF ಇರಲಿ ಮೂರು ವರ್ಷಗಳಿಗೆ ಒಂದು ಸಾರಿ ವರ್ಗಾವಣೆಯಾಗಬೇಕು. ಅಲ್ಲಿ ಬರುವಂತಹ ಅಧಿಕಾರಿಗಳು 10 ವರ್ಷಗಳು, 15 ವರ್ಷಗಳಾದರು ಅಲ್ಲಿಯೇ ವರ್ಗಾವಣೆಯಾಗದೇ ಉಳಿಯುತ್ತಾರೆ. ಅವರುಗಳೇ ಅರಣ್ಯವನ್ನು ಹಾಳು ಮಾಡುವುದು. ದಾಂಡೇಲಿ ಅರಣ್ಯವನ್ನು ಉಳಿಸಬೇಕಾದರೆ ನಾನು ಒಂದು ಮಾತನ್ನು ಹೇಳಿದೆ. ಅಲ್ಲಿ ಒಂದು ಟೀಕ್ ಮರ ಇತ್ತು. ಆ ಮರದ ಸುತ್ತಳತೆ ಆರು ಮೀಟರ್. 6.3 ಮೀಟರ್ ಸುತ್ತಳೆ ಇರುವಂತಹ ಸಾಗವಾನಿ ಗಿಡ ಈಗಲೂ ಇದೆ. ಅಷ್ಟೊಂದು ದೊಡ್ಡ ಅರಣ್ಯ ಪ್ರದೇಶ. ಅಲ್ಲಿ ಆನೆಗಳು, ಕಾಡು ಎಮ್ಮೆಗಳು ನೋಡುವುದಕ್ಕೆ ಸಿಗುತ್ತದೆ. ಅಲ್ಲಿ ಎಲ್ಲಾ ರೀತಿಯ ಪ್ರಾಣಿಗಳು ನೊಡುವುದಕ್ಕೆ ಸಿಗುತ್ತದೆ. ಇಷ್ಟು ಇದ್ದರೂ ಕೂಡ ಅದನ್ನು ನಮ್ಮ ಸರ್ಕಾರ ಪ್ರಾವಾಸೋದ್ಯಮ ಸ್ಥಳವನ್ನಾಗಿ ಅಭಿವೃದ್ಧಿಪಡಿಸುತ್ತಿಲ್ಲ. ಅಲ್ಲಿ ಬಹಳಷ್ಟು ಜನರು river rafting ಮಾಡುತ್ತಾರೆ. ಇಷ್ಟೊಂದು ನೈಸಗೀಕ ಸೌಂದರ್ಯವನ್ನು ಹೊಂದಿರುವಂತಹ ದಾಂಡೇಲಿ ಸೂಪ ತಾಲ್ಲೂಕ ಅನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡುವುದಿಲ್ಲ. ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಲಕಗಟ್ಟಲೆ ಹಣವನ್ನು ಕೊಡುವುದಿಲ್ಲ. ನಮ್ಮ ಉತ್ತರ ಕನ್ನಡ ಜಿಲ್ಲೆಯನ್ನು ಕಡೆಗಣಿಸಲಾಗಿದೆ ಮತ್ತು ಅಲ್ಲಿಂದ ಸಹಾಯವನ್ನು ತೆಗೆದುಕೊಳ್ಳಲಾಗುತ್ತದೆ. ಇಡೀ ನಮ್ಮ ಕರ್ನಾಟಕ್ಕೆ ರಾಜ್ಯಕ್ಕೆ ವಿದ್ಯುತ್‌ನ್ನು ನಮ್ಮ ಉತ್ತರ ಕನ್ನಡ ಜಿಲ್ಲೆ ಕೊಡುತ್ತದೆ.

**ಸಭಾಪತಿಯವರು:–** ನಿಮಗೆ 8 ನಿಮಿಷದಲ್ಲಿ ನಿಮ್ಮ ಭಾಷಣವನ್ನು ಮುಗಿಸಬೇಕೆಂದು ಹೇಳಿದ್ದೆ. ಆದರೆ ಈಗಾಗಲೇ 10 ನಿಮಿಷಗಳಾಗಿದೆ.

ಆಯವ್ಯಯದಲ್ಲಿ ಬಡವರಿಗೆ ಕೊಡುವಂತಹ ಆಶ್ರಯ ಮನೆಗಳಿರಬಹುದು, ರೈತರ ಬೆಳೆ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುವುದಿರಬಹುದು ಇವುಗಳ ಬಗ್ಗೆ ಸರ್ಕಾರ ದೊಡ್ಡ ದೊಡ್ಡ ಮಾತುಗಳನ್ನು ಹೇಳಿದೆ. ಆದರೆ ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳ ಮನೆಗಳಿಗೆ ಕಲ್ಪಿಸಲಾಗಿದ್ದಂತಹ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ವಿದ್ಯಾರ್ಥಿಗಳಿಗೆ ಇದು ಪರೀಕ್ಷೆಗಳ ಸಮಯ, ಅವರು ಹೇಗೆ ಓದಬೇಕು? ನಮ್ಮ ಜಿಲ್ಲೆಯಲ್ಲಿ ಎಲ್ಲಾ ಕಡೆಯೂ ಫ್ಯೂಸ್ ಕಿತ್ತುಕೊಂಡು ಹೋಗಿರುವುದರಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಆದ್ದರಿಂದ ಕೂಡಲೇ ಸರ್ಕಾರ ಆ ವಿಚಾರದಲ್ಲಿ ಒಂದು ಆದೇಶವನ್ನು ಹೊರಡಿಸಿ ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ವಿನಂತಿಸುತ್ತೇನೆ.

ನಮ್ಮ ಕಾರವಾರ ಜಿಲ್ಲೆಯಲ್ಲಿ ಕೈಗಾ ಅಣುವಿದ್ಯುತ್ ಸ್ಥಾವರ ಸ್ಥಾಪನೆಗೊಂಡಿದೆ. ಅಲ್ಲಿಂದ ಹೊರಹೊಮ್ಮುತ್ತಿರುವಂತಹ ಅಣುವಿಕಿರಣದಿಂದ ಬಹಳಷ್ಟು ಜನರಿಗೆ ಕ್ಯಾನ್ಸರ್ ರೋಗ ಕಾಣಿಸಿಕೊಂಡಿದೆ, ಬುದ್ಧಿಮಾಂಧ್ಯ ಮಕ್ಕಳು ಜನಿಸುತ್ತಿವೆ, ಗರ್ಭಿಣಿ ಸ್ತ್ರೀಯರಂತೂ ಅಲ್ಲಿ ಓಡಾಡುವುದಕ್ಕೆ ಹೆದರುತ್ತಾರೆ. ಅಲ್ಲಿನ ಜನರ ಪರಿಸ್ಥಿತಿ ಕಿಸೆಯಲ್ಲಿ ಬೆಂಕಿ ಹಾಕಿಕೊಂಡಂತಾಗಿದೆ. ಕೈಗಾ ಅಣುವಿದ್ಯುತ್ ಸ್ಥಾವರದಲ್ಲಿ ಕಾರ್ಯನಿರ್ವಹಿಸುವಂತಹ ಅಧಿಕಾರಿಗಳ ವಸತಿಗೃಹಗಳು ಸುಮಾರು 22 ಕಿಲೋ ಮೀಟರ್ ದೂರದಲ್ಲಿವೆ. ಆದರೆ ಅಲ್ಲಿರುವಂತಹ ಜನರಿಗೆ ಇದುವರೆಗೂ ವಸತಿ ವ್ಯವಸ್ಥೆಯನ್ನು ಮಾಡಿಕೊಟ್ಟಿಲ್ಲ. ಹೀಗಾಗಿ ಅವರು ಸುಮಾರು ಎಂಟು-ಹತ್ತು ಕಿಲೋ ಮೀಟರ್ ವ್ಯಾಪ್ತಿಯಲ್ಲಿಯೇ ವಾಸಿಸುತ್ತಿದ್ದಾರೆ. ಅಣುವಿಕಿರಣದ ಸಮಸ್ಯೆಗಳಿಂದಾಗಿ ಅಲ್ಲಿನ ಜನರು ಹೆದರಿಕೆಯಿಂದ ಜೀವನ ನಡೆಸುತ್ತಿರುವಂತಹ ಒಂದು ಪರಿಸ್ಥಿತಿ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸುವುದಿಷ್ಟೆ, ಉತ್ತರ ಕನ್ನಡ ಜಿಲ್ಲೆಗೆ ವಿಶೇಷ ಅನುದಾನವನ್ನು ಬಿಡುಗಡೆ ಮಾಡಬೇಕಾಗುತ್ತದೆ. ನಾವು ಜಿಲ್ಲಾ

ಪಂಚಾಯಿತಿಯಿಂದ ಖರ್ಚು ಮಾಡಿರುವಂತಹ ಆರೂವರೆ ಲಕ್ಷ ರೂಪಾಯಿಗಳು ಹೋಗಿವೆ. ಸರ್ಕಾರ 100 ಕೋಟಿ ರೂಪಾಯಿಗಳ ಪ್ಯಾಕೇಜ್‌ನ್ನೇನು ಏನು ಘೋಷಣೆ ಮಾಡಿದೆ, ಈ ಸರ್ಕಾರಕ್ಕೆ ಮಾನ ಮಾರ್ಯಾದೆ ಇದ್ದರೆ ಅದನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸರ್ಕಾರ ಇಷ್ಟು ದೊಡ್ಡ ಪ್ರಾಜೆಕ್ಟ್ ಮಾಡಿದೆ, ಅದರಲ್ಲಿ ಈಗಾಗಲೇ ಆರೂವರೆ ಲಕ್ಷ ರೂಪಾಯಿಗಳನ್ನು ನಾವು ಪಂಚಾಯತಿ ಮುಖಾಂತರವಾಗಿ ಖರ್ಚು ಮಾಡಿದ್ದೇವೆ.

**ಶ್ರೀ ಕೆ.ಬಿ. ಶಾಣಪ್ಪ:-** ಅಣುವಿಕಿರಣದಿಂದ ಆ ಭಾಗದ ಜನರ ಆರೋಗ್ಯದ ಮೇಲೆ ಪರಿಣಾಮವಾಗುತ್ತಿದೆಯೇ?

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಹೌದು, ಜನರ ಆರೋಗ್ಯದ ಮೇಲೆ ಬಹಳಷ್ಟು ದುಷ್ಪರಿಣಾಮಗಳಾಗುತ್ತಿದ್ದು, ಕ್ಯಾನ್ಸರ್ ರೋಗ ಕೂಡ ಕಾಣಿಸಿಕೊಳ್ಳುತ್ತಿದೆ. ಅದರ ಬಗ್ಗೆ ನಾವು ಸಾಕಷ್ಟು ಸಾಲ ಪ್ರಸ್ತಾಪ ಮಾಡಿದ್ದರೂ ಯಾರೂ ಅದರ ಬಗ್ಗೆ ಗಮನ ಕೊಡುತ್ತಿಲ್ಲ. ಮತ್ತೆ ಹೊಸದಾಗಿ ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಹೀಗಾಗಿ ಈ ಯೋಜನೆಗಳ ಸಲುವಾಗಿ ನಮ್ಮ ಪ್ರದೇಶದ ಸುಮಾರು ನಾಲ್ಕನೇ ಒಂದು ಭಾಗದಷ್ಟು ಅರಣ್ಯ ನಾಶವಾಗಿದೆ. ಜೊಯಿಡಾ ತಾಲ್ಲೂಕಿನಲ್ಲಿ ಸುಮಾರು ಶೇಕಡ 13.5ರಷ್ಟು ಕಂದಾಯ ಭೂಮಿಯಲ್ಲಿ ಜನವಸತಿ ಇದ್ದು ಇನ್ನುಳಿದಂತಹ ಶೇಕಡ 87.5 ರಷ್ಟು ಅರಣ್ಯವೆಲ್ಲಾ ಗುಡ್ಡಗಾಡಿನಿಂದ ಕೂಡಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಮಾನ್ಯ ಸದಸ್ಯರು ಮಾತನಾಡುವಾಗ ಪದೇಪದೇ ಈ ಸರ್ಕಾರಕ್ಕೆ **'ಮಾನ ಮರ್ಯಾದೆ'** ಇದೆಯೇ ಎಂದು ಕೇಳುವುದು ಎಷ್ಟರಮಟ್ಟಿಗೆ ಸರಿಯಾಗುತ್ತದೆ?

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಹೌದು, ಸರ್ಕಾರ ಹೇಳಿದಷ್ಟನ್ನು ಕೊಟ್ಟಿಲ್ಲ. ನನ್ನ ಹತ್ತಿರ ದಾಖಲೆ ಇದೆ. ಸರ್ಕಾರ ಸಾವಿರ ಲಕ್ಷ-ಲಕ್ಷ ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಪ್ರಾಜೆಕ್ಟ್‌ಗಳಿಗಾಗಿ ಖರ್ಚು ಮಾಡುತ್ತಿರುವಾಗ

ಒಂದು ನೂರು ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ನಮ್ಮ ಭಾಗಕ್ಕೆ ಬಿಡುಗಡೆ ಮಾಡುವುದಕ್ಕಾಗುವುದಿಲ್ಲವೆ? ನಮ್ಮ ಜಿಲ್ಲೆಗೆ ಅನ್ಯಾಯವಾಗಿರುವಾಗ ಅದರ ಬಗ್ಗೆ ನಾವು ಸದನದಲ್ಲಿ ಮಾತನಾಡಲೇಬೇಕಾಗುತ್ತದೆ. ಸರ್ಕಾರ ಪ್ಯಾಕೇಜ್ ಏತಕ್ಕೆ ಘೋಷಣೆ ಮಾಡಬೇಕಾಗಿತ್ತು, ನೀವು ಮಾಡಿ ಎಂದು ನಾವೇನಾದರೂ ಅವರಿಗೆ ಹೇಳಿದ್ದೇವೇನು? ಇಬ್ಬರು ಮುಖ್ಯ ಮಂತ್ರಿಗಳು ಬಂದು ಉತ್ತರ ಕನ್ನಡ ಭಾಗಕ್ಕೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡುವುದಾಗಿ ಹೇಳಿ ಹೋದರು. ಈ ವಿಚಾರ ತಮಗೆ ತಿಳಿದಿಲ್ಲವೇನು? 1 ಲಕ್ಷದ 17 ಸಾವಿರ ಕೋಟಿ ಬಜೆಟ್‌ನಲಿ ಈ ವಿಶೇಷ ಪ್ಯಾಕೇಜ್‌ಗಾಗಿ 100 ಕೋಟಿ ರೂಪಾಯಿಗಳನ್ನು ಸೇರಿಸಬೇಕೆಂಬ ವಿಚಾರ ಅವರಿಗೆ ತಿಳಿಯಲಿಲ್ಲವೆ? ಕೋಟಿ-ಕೋಟಿ ರೂಪಾಯಿಗಳ ಈ ಬಜೆಟ್ ಏನಿದೆ ಇದು ಕೇವಲ ತೋರಿಕೆಗಾಗಿ ಇರುವಂತಹ ಬಜೆಟ್? ಇದು ಮೋಸ ಮಾಡುವಂತಹ ಬಜೆಟ್. ಈ ಬಜೆಟ್‌ನಿಂದ ನಮ್ಮ ಜಿಲ್ಲೆಗೆ ಯಾವುದೇ ಉಪಯೋಗವಾಗಿಲ್ಲ. ಬೇಕಾದರೆ ತಾವು ದಾಖಲೆಗಳನ್ನು ತೆಗೆದುನೋಡಿ, ಕಳೆದ ನಾಲ್ಕೂವರೆ ವರ್ಷಗಳಲ್ಲಿ ಎಲ್ಲರಿಗಿಂತ ಕಡಿಮೆ ಬಜೆಟ್ ಕೊಟ್ಟಿರುವಂತಹ ಜಿಲ್ಲೆಯಾಗಿ ಉಳಿದಿದ್ದರೆ ಅದು ಉತ್ತರ ಕನ್ನಡ ಜಿಲ್ಲೆ ಮಾತ್ರ. ಈ ಸಾಲಿನಲ್ಲಿ ಕೂಡ ಇಂತಹ ಒಂದು ಬಜೆಟ್‌ನ್ನು ತಾವು ಮಂಡಿಸಿದ್ದೀರಿ. ಉತ್ತರ ಕನ್ನಡ ಜಿಲ್ಲೆಗೆ ವಿಶೇಷ ಪ್ಯಾಕೇಜ್ ರೂಪದಲ್ಲಿ ಒಂದು ನೂರು ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆ ರೀತಿ ಒಂದು ನೂರು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಸರ್ಕಾರದ ಪರವಾಗಿ ಯಾರಾದರೂ ಹೇಳಲಿ, ನೋಡೋಣ. ಸರ್ಕಾರ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತದೆ. ಆದರೆ ಉತ್ತರ ಕನ್ನಡದ ಜನರಾದ ನಾವು ಹುಂಬ ಜನರು, ನಮಗೆ ಅಷ್ಟು ತಿಳುವಳಿಕೆ ಇಲ್ಲ. ಬಜೆಟ್‌ನಲ್ಲಿ ಇಷ್ಟು ಹಣವನ್ನು ಕೊಡಲಾಗುತ್ತದೆ, ಆದರೆ ಆ ಹಣ ಎಲ್ಲಿ ಹೋಗುತ್ತದೆ ಎಂಬುದು ನಮಗಂತೂ ಗೊತ್ತಾಗುತ್ತಿಲ್ಲ.

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, . . .

(ಗೊಂದಲ)

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಅವರಿಗೆ ತಾಕತ್ತಿದ್ದರೆ ಒಂದು ನೂರು ರೂಪಾಯಿಗಳ ವಿಶೇಷ ಪ್ಯಾಕೇಜ್ ಕೊಡುತ್ತೇವೆ ಎಂದು ಯಾರಾದರೂ ಹೇಳಲಿ.

(ಗೊಂದಲ)

**ಉಪ ಸಭಾಪತಿಯವರು:–** ಈ ರೀತಿ ಎಲ್ಲರೂ ಎದ್ದುನಿಂತು ಒಟ್ಟೊಟ್ಟಿಗೆ ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಇಲ್ಲವಾದರೆ ಇವರು ನಾವು ಜಿಲ್ಲಾ ಪಂಚಾಯಿತಿ ಮುಖಾಂತರ ಖರ್ಚು ಮಾಡಿರುವಂತಹ ಆರೂವರೆ ಲಕ್ಷ ರೂಪಾಯಿಗಳನ್ನಾದರೂ ಕೊಡಲಿ.

(ಗೊಂದಲ)

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಈ ಸರ್ಕಾರಕ್ಕೆ ಯಾವುದೇ ಕಾಳಜಿ ಇಲ್ಲ.

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಆರ್.ವಿ. ವೆಂಕಟೇಶ್‌ರವರೇ ತಾವು ಹಿರಿಯ ಸದಸ್ಯರಾಗಿ ಈ ರೀತಿ ಒಟ್ಟೊಟ್ಟಿಗೆ ಎದ್ದುನಿಂತು ಮಾತನಾಡಿದರೆ ಹೇಗೆ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಈ ಸರ್ಕಾರದವರಿಗೆ ನಮ್ಮ ಭಾಗಕ್ಕೆ ಏನನ್ನೂ ಕೊಡುವುದಕ್ಕಾಗದಿದ್ದರೆ ಕೊನೆಯ

ಪಕ್ಷ ನಾವು ಜಿಲ್ಲಾ ಪಂಚಾಯತಿ ವತಿಯಿಂದ ಖರ್ಚು ಮಾಡಿರುವಂತಹ ಆರೂವರೆ ಲಕ್ಷ ರೂಪಾಯಿಗಳನ್ನಾದರೂ ವಾಪಸ್ ಕೊಡಲಿ. ನಿಮಗೆ ಹಣ ಕೊಡುವುದಕ್ಕಾಗದಿದ್ದರೆ ಎಂ.ಎಲ್.ಸಿ. ಫಂಡ್‌ನಿಂದ ನಾನು ಹಣವನ್ನು ಕೊಡುತ್ತೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇವೊತ್ತಿನ ಪಟ್ಟಿಯ ಪ್ರಕಾರ ಸದನದಲ್ಲಿ ಆಡಳಿತ ಪಕ್ಷದ 15 ಜನ ಸದಸ್ಯರಿರಬೇಕು. ಆದರೆ ಇವರು ಎಷ್ಟು ಜನರಿದ್ದಾರೆ, ಮೊನ್ನೆ ದಿವಸ ಕೂಡ ಇದೇ ವಿಚಾರವಾಗಿ ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡಿದ್ದೆವು.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸರ್ಕಾರದ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ **'ಮಾನ ಮರ್ಯಾದೆ ಇದೆಯೇ'** ಎನ್ನುವಂತಹ ಒಂದು ಶಬ್ದವನ್ನು ಬಳಸಿದ್ದಾರೆ. ಅದು ಅಸಂಸದೀಯ ಪದವಾದ್ದರಿಂದ ದಯಮಾಡಿ ಅದನ್ನು ಕಡತದಿಂದ ತೆಗೆಸಬೇಕಾಗುತ್ತದೆ.

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ನಾನು ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಮಾತನಾಡಿದ್ದೇನೆ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಎಲ್ಲರೂ ಮಾತನಾಡಿ, ಕೊನೆಗೆ ಅದನ್ನೇ ಎಲ್ಲರೂ ಮರೆತುಬಿಟ್ಟರು.

**ಉಪ ಸಭಾಪತಿಯವರು:–** ಮಾನ್ಯ ಆರ್.ವಿ. ವೆಂಕಟೇಶ್‌ರವರೇ, ನಿಗದಿಪಡಿಸಲಾಗಿರುವ ಸಮಯವನ್ನು ನಿಮ್ಮ ಸದಸ್ಯರು ಪಾಲನೆ ಮಾಡದಿದ್ದರೆ ಬೇರೆ 4 ಜನ ಸದಸ್ಯರಿಗೆ ನಿಗದಿಪಡಿಸಲಾಗಿರುವ ಸಮಯವನ್ನು ಸಹ ಕಟಾಯಿಸಲಾಗುತ್ತದೆ.

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ನಾನು ಆವೇಶದಿಂದ ಮಾತನಾಡಿರಬಹುದು. ಆದರೆ ನಮ್ಮ ಉತ್ತರ ಕರ್ನಾಟಕ ಜಿಲ್ಲೆಗೆ ಅನ್ಯಾಯವಾಗಿರುವುದಂತೂ ನಿಜ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಎಂಥೆಂಥ ನಾಯಕರುಗಳನ್ನು ಕೊಟ್ಟರೂ ಸಹ ನಮ್ಮ ಉತ್ತರ ಕನ್ನಡ ಜಿಲ್ಲೆ ಅಭಿವೃದ್ಧಿಯಾಗಲಿಲ್ಲ. ನಾಯಕರು ಅಭಿವೃದ್ಧಿಯಾದರು, ಆದರೆ ಉತ್ತರ ಕನ್ನಡ ಜಿಲ್ಲೆ ಮಾತ್ರ ಅಭಿವೃದ್ಧಿಯಾಗಲಿಲ್ಲ.

**ಉಪ ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಘೊಟ್ನೇಕರ್‌ರವರೇ ತಮಗೆ ಮಾತನಾಡಲು ನಿಗದಿಪಡಿಸಲಾಗಿದ್ದಂತಹ ಸಮಯ ಮುಕ್ತಾಯವಾಗಿದೆ. ತಾವಿನ್ನು ಕುಳಿತುಕೊಳ್ಳಿ. ಯಾವ ಸದಸ್ಯರಿಗೆ ಎಷ್ಟು ಸಮಯ ಎಂಬುದನ್ನು ಮಾನ್ಯ ಸಭಾಪತಿಯವರು ಈಗಾಲೇ ಹಂಚಿಕೆ ಮಾಡಿದ್ದಾರೆ. ಆ ಪ್ರಕಾರ ಎಲ್ಲರಿಗೂ ಮಾತನಾಡಲು ಅವಕಾಶ ಸಿಗಬೇಕಲ್ಲವೆ? ಆಯವ್ಯಯದ ಮೇಲೆ ಎಲ್ಲರೂ ಮಾತನಾಡಬೇಕಾಗುತ್ತದೆಯಲ್ಲವೆ?

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ನಮ್ಮ ಉತ್ತರ ಕನ್ನಡ ಜಿಲ್ಲೆ 100 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ತಾವು ಸರ್ಕಾರಕ್ಕೆ ನಿರ್ದೇಶನ ನೀಡಬೇಕಾಗುತ್ತದೆ. ಅವರು ಅದಕ್ಕೆ ಒಪ್ಪಿಗೆ ಕೊಟ್ಟರೆ ನಾನು ಮಾತನಾಡದೆ ಕುಳಿತುಬಿಡುತ್ತೇನೆ. ಉತ್ತರ ಕನ್ನಡ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಕೊಡುವುದಾಗಿ ಇಬ್ಬರು ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಆದರೆ ಆಯವ್ಯಯದಲ್ಲಿ ಅದಕ್ಕೆ ಹಣವನ್ನು ಮಾತ್ರ ತೆಗೆದಿರಿಸಿಲ್ಲ.

**ಉಪ ಸಭಾಪತಿಯವರು:–** ಶ್ರೀಮತಿ ಮೋಟಮ್ಮನವರೇ, ತಾವಿಗ ಮಾತನಾಡದಿದ್ದರೆ ನಿಮ್ಮ ಸಮಯವನ್ನು ಸಹ ನಾನು ಘೊಟ್ನೇಕರ್‌ರವರಿಗೆ ಕೊಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಘೊಟ್ನೇಕರ್ ಶ್ರೀಕಾಂತ ಲಕ್ಷ್ಮಣ ಅವರು ಅವರ ಜಿಲ್ಲೆಯ ಪರವಾಗಿ ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ ಅದನ್ನು ಕೇಳುವುದಕ್ಕೆ ಯಾವ ಸಚಿವರೂ ಇಲ್ಲ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಅವರು ಅನುದಾನವನ್ನು ಕೊಡುವುದಿರಲಿ, ಆ ಭಾಗದ ಮಾನ್ಯ ಸದಸ್ಯರ ಮಾತುಗಳನ್ನು ಕೇಳಿಸಿಕೊಳ್ಳುವುದಕ್ಕೆ ಸಹ ಯಾರೂ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರದ ಪರವಾಗಿ ಒಬ್ಬರು ಸಚಿವರು ಮಾತ್ರ ಸದನದಲ್ಲಿ ಉಪಸ್ಥಿತರಿದ್ದಾರೆ. ಸರ್ಕಾರದ ಇಷ್ಟು ದಿವ್ಯ ನಿರ್ಲಕ್ಷ್ಯ, ಇಷ್ಟು ಬೇಜವಾಬ್ದಾರಿ ಸದನವನ್ನು ಇಷ್ಟು ಹಗುರವಾಗಿ ಕಾಣುವ ಅವರ ಪ್ರವೃತ್ತಿ ಸರಿಯಲ್ಲ.

(ಗೊಂದಲ)

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ನಮ್ಮ ಭಾಗದಲ್ಲಿ ಮೊಸಳೆ ಪಾರ್ಕ್ ಮಾಡುವುದಾಗಿ ಸರ್ಕಾರ ಆಶ್ವಾಸನೆ ನೀಡಿತ್ತು.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಘೊಟ್ನೇಕರ್‌ರವರು ಈ ಸರ್ಕಾರದವರಿಗೆ ನಾಚಿಕೆಗೇಡಿಗಳು ಎಂದು ಹೇಳಿದ್ದು ಸರಿಯಿದೆ, ಅವರು ತಪ್ಪು ಹೇಳಿಲ್ಲ. ಇವೊತ್ತಿನ ಪಟ್ಟಿಯ ಪ್ರಕಾರ ಯಾವ ಯಾವ ಸಚಿವರುಗಳು ನಮ್ಮ ಸದನದಲ್ಲಿರಬೇಕಾಗಿದೆ ಎಂಬುದನ್ನು ದಯಮಾಡಿ ತಾವು ತಿಳಿಸಬೇಕಾಗುತ್ತದೆ. ಇದುವರೆಗೆ ಒಬ್ಬರು ಸಚಿವರು ಮಾತ್ರ ಇದ್ದರು, ಈಗ ಇನ್ನೊಬ್ಬರು ಬಂದುದರಿಂದ ಇಬ್ಬರಾದರು. ಸರ್ಕಾರದ ಇಷ್ಟು ಬೇಜವಾಬ್ದಾರಿತನ ಸರಿಯಲ್ಲ.

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಸರ್ಕಾರದ ಆಶ್ವಾಸನೆ ಪ್ರಕಾರ ಈ ಸಾಲಿನ ಬಜೆಟ್‌ನಲ್ಲಿ 100 ಕೋಟಿ ರೂಪಾಯಿಗಳನ್ನು ನಮ್ಮ ಉತ್ತರ ಕನ್ನಡ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಆಗಿ ಕೊಡಬೇಕಾಗಿತ್ತು.

(ಗೊಂದಲ)

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, . . .

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಶಾಣಪ್ಪನವರೇ, ನೀವು ಹೃದಯಪೂರ್ವಕವಾಗಿ, ಹೇಳಿ, ನಿಮಗೆ ಇದು ಸರಿ ಕಾಣುತ್ತದೆಯೇ? ನೀವು ಇದು ಸರಿ ಎನ್ನುವುದಾರೆ ನಾನು ಬೇರೆ ಮಾತನಾಡದೆ ಒಪ್ಪಿಕೊಳ್ಳುತ್ತೇನೆ.

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಜಿಲ್ಲಾ ಪಂಚಾಯಿತಿ ಮುಖಾಂತರ ಆರೂವರೆ ಲಕ್ಷ ರೂಪಾಯಿಗಳ ಖರ್ಚು ಹಾಕಿ ಎಂದು ಕ್ರಿಯಾ ಯೋಜನೆಯನ್ನು ಮಾಡಿದ್ದು ಕೂಡ ಸರ್ಕಾರವೇ. ಆದ್ದರಿಂದ ನಾನು ದಯಮಾಡಿ ಕೈಮುಗಿದು ಹೇಳುತ್ತೇನೆ, ನಮ್ಮದು ಬಡ ಜಿಲ್ಲೆಯಾದ್ದರಿಂದ ವಿಶೇಷ ಪ್ಯಾಕೇಜ್‌ಗಾಗಿ ಈ ಸಾಲಿನ ಆಯವ್ಯಯದಲ್ಲಿ ಹಣವನ್ನು ಮಂಜೂರು ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ಪಟ್ಟಿಯ ಪ್ರಕಾರ ಇವೊತ್ತು ಸದನದಲ್ಲಿರಬೇಕಾದಂತಹ ಮಂತ್ರಿಗಳೆಂದರೆ,

1. ಶ್ರೀ ಜಗದೀಶ್ ಶೆಟ್ಟರ್, ಸನ್ಮಾನ್ಯ ಮುಖ್ಯಮಂತ್ರಿಯವರು
2. ಶ್ರೀ ಕೆ.ಎಸ್. ಈಶ್ವರಪ್ಪ, ಸನ್ಮಾನ್ಯ ಉಪ ಮುಖ್ಯಮಂತ್ರಿಯವರು
3. ಶ್ರೀ ಎಸ್. ಸುರೇಶ್ ಕುಮಾರ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು
4. ಶ್ರೀ ಗೋವಿಂದ ಎಂ. ಕಾರಜೋಳ, ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು
5. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು
6. ಶ್ರೀ ಉಮೇಶ್ ವಿ.ಕತ್ತಿ, ಕೃಷಿ ಸಚಿವರು

7. ಶ್ರೀ ರೇವುನಾಯಕ್ ಬೆಳಮಗಿ, ಸಮೂಹ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯ ಸಣ್ಣ ಉಳಿತಾಯ ಮತ್ತು ಲಾಟರಿ, ಪಶುಸಂಗೋಪನೆ ಸಚಿವರು

8. ಶ್ರೀ ಮುರುಗೇಶ್ ಆರ್.ನಿರಾನಿ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

9. ಶ್ರೀ ಎಸ್.ಕೆ. ಬೆಳ್ಳುಬ್ಬಿ, ಹಜ್ ಮತ್ತು ವಕ್ಫ್, ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರು

10. ಶ್ರೀ ಅನಂದ ಸಿಂಗ್, ಪ್ರವಾಸೋದ್ಯಮ ಸಚಿವರು

11. ಶ್ರೀ ಅಪ್ಪಚ್ಚು ರಂಜನ್, ಯುವಜನ ಸೇವೆ ಮತ್ತು ಕ್ರೀಡೆ

12. ಶ್ರೀ ಸೊಗಡು ಶಿವಣ್ಣ, ಪರಿಸರ, ಯೋಜನೆ ಮತ್ತು ಸಾಂಖ್ಯಿಕ

13. ಶ್ರೀ ಆನಂದ ಅಸ್ನೋಟಿಕರ್, ಮೀನುಗಾರಿಕೆ ವಿಜ್ಞಾನ ಮತ್ತು ತಂತ್ರಜ್ಞಾನ

14. ಶ್ರೀ ಬಾಲಚಂದ್ರ ಜಾರಕಿಹೊಳಿ, ಪೌರಾಡಳಿತ ಸಚಿವರು

15. ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮುಜರಾಯಿ, ಬಂದರು ಮತ್ತು ಒಳನಾಡು ಸಾರಿಗೆ ಸಚಿವರು

ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಕೆ. ಬೆಳ್ಳುಬ್ಬಿಯವರು ಈಗಷ್ಟೇ ಸದನಕ್ಕೆ ಹಾಜರಾಗಿದ್ದಾರೆ, ಶ್ರೀ ಅಪ್ಪಚ್ಚು ರಂಜನ್‌ರವರು ಹಾಜರಿದ್ದಾರೆ, ಶ್ರೀ ಆನಂದ ಅಸ್ನೋಟಿಕರ್ ಅವರನ್ನಂತೂ ನಾವು ಈ ಅಧಿವೇಶನದಲ್ಲಿ ನೋಡಿಯೇ ಇಲ್ಲ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಈಗ ವಿರೋಧ ಪಕ್ಷದಲ್ಲಿರುವವರು ಆಡಳಿತ ಪಕ್ಷದಲ್ಲಿದ್ದಾಗಲೂ ನಾವು ನೋಡಿದ್ದೇವೆ. ಆದರೆ ಆ ಸಂದರ್ಭಗಳಲ್ಲಿ ನಾವು ಇಷ್ಟೊಂದು ಆಕ್ಷೇಪಣೆಗಳನ್ನು ಮಾಡಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿಮಗೆ ಇದು ಸರಿ ಕಾಣುತ್ತದೆಯೇ?

(ಗೊಂದಲ)

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಸಚಿವರು ಬರುತ್ತಾರೆ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯದ ಮೇಲಿನ ಚರ್ಚೆಗೆ ಉತ್ತರ ಕೊಡುತ್ತಿದ್ದಾರೆ. ಸಂಬಂಧಪಟ್ಟ ಎಲ್ಲ ಸಚಿವರು ಸಹ ಕೆಳಮನೆಯಲ್ಲಿದ್ದಾರೆ.

**ಶ್ರೀ ದಯಾನಂದ:-** ಮಾನ್ಯ ಸಭಾಪತಿಯವರೇ, ಮಾನ್ಯ ಘೊಟ್ನೇಕರ್‌ರವರು 100 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ, ಯಾರು ಕೊಡುತ್ತಾರೆ ಹೇಳಿ.

**ಉಪ ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ಮುಖ್ಯಮಂತ್ರಿಯವರು ಕೆಳಮನೆಯಲ್ಲಿ ಆಯವ್ಯಯದ ಮೇಲಿನ ಚರ್ಚೆಗೆ ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಪುಣ್ಯಕ್ಕೆ ನಮ್ಮ ಜಿಲ್ಲೆಯ ಸಚಿವರಿದ್ದಾರೆ.

(ಗೊಂದಲ)

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ನಾನು ಇಷ್ಟು ಆವೇಶದಿಂದ ಮಾತನಾಡುವುದಕ್ಕೆ ಕಾರಣವೆಂದರೆ, ನೀವು ಜೊಯಿಡಾ ತಾಲ್ಲೂಕಿಗೆ ಹೋದರೆ ಅಲ್ಲಿ ಡೆಲಿವರಿ ಪೇಷೆಂಟ್‌ಗಳನ್ನು ಇನ್ನೂ ಕೂಡ ಕಂಬಳಿಯಲ್ಲಿ ಸುತ್ತಿಕೊಂಡು ಬರುತ್ತಾರೆ. ನಮ್ಮ ವಿಧಾನ ಪರಿಷತ್ತಿನ

ಹಕ್ಕುಬಾಧ್ಯತೆಗಳ ಸಮಿತಿ ಜೊಯಿಡಾಕ್ಕೆ ಸ್ಥಳ ಪರಿಶೀಲನೆ ಮತ್ತು ಅಧ್ಯಯನಕ್ಕಾಗಿ ಭೇಟಿ ಕಾರ್ಯಕ್ರಮವನ್ನು ಕೈಗೊಂಡಿತ್ತು, ತಾವು ಬೇಕಾದರೆ ಅವರನ್ನು ಈ ವಿಚಾರದ ಬಗ್ಗೆ ಕೇಳಿನೋಡಿ. ನಮ್ಮಲ್ಲಿ ಬಹಳ ಕೆಟ್ಟ ಪರಿಸ್ಥಿತಿ ಇದೆ. ಅದಕ್ಕೆ ನಾನು ಹಣ ಕೇಳುತ್ತಿದ್ದೇನೆ. ನಮಗೆ ಬಜೆಟ್‌ನಲ್ಲಿ ಏನು ಹಣ ಕೊಟ್ಟಿಲ್ಲ, ನಮ್ಮ ಜಿಲ್ಲೆಯವರೇ ಆದಂತಹ ಇಬ್ಬರು ಸಚಿವರು ಸಹ ಅದರ ಬಗ್ಗೆ ಗಮನ ಸೆಳೆದಿಲ್ಲ. ನಮ್ಮ ಉತ್ತರ ಕರ್ನಾಟಕದಿಂದ ಹೆಚ್ಚಿನ ಸಂಪತ್ತು ಬರುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಬರುತ್ತದೆ. ವಿದ್ಯುತ್ ಅಭಾವ ಉಂಟಾದರೆ ಅಲ್ಲಿಂದ ಬರುತ್ತದೆ. ಅದು ಸ್ವಾಭಾವಿಕವಾಗಿ ತಯಾರಾಗುವಂತಹ ವಿದ್ಯುತ್. Teakwood ಸಿಗುತ್ತದೆ. Natural ಆಗಿ ಅಲ್ಲಿ river rafting ಇದೆ, ಅಲ್ಲಿ ಏನೂ ಮಾಡಿಲ್ಲ. ನಮ್ಮಿಂದ ಸರ್ಕಾರಕ್ಕೆ ದೊಡ್ಡ ಪ್ರಮಾಣದಲ್ಲಿ ಉತ್ಪನ್ನ ಬರುತ್ತದೆ. ಬಂದಂತಹ ಉತ್ಪನ್ನದ ಹಣದಲ್ಲಿ ಶೇಕಡ 5ರಷ್ಟಾದರು ನಮಗೆ ಕೊಡಬೇಕೆಂದು ಕೋರುತ್ತೇನೆ. ಕಟ್ಟಿಗೆಯಿಂದ, ವಿದ್ಯುಚ್ಛಕ್ತಿಯಿಂದ ಮತ್ತು ನೀರಿನಿಂದ ಬರುವಂತಹ ತೆರಿಗೆ ಹಣದಲ್ಲಿ ಶೇಕೆ 5ರಷ್ಟು ಹಣವನ್ನಾದರು ನಮ್ಮ ಜಿಲ್ಲೆಯ ಅಭಿವೃದ್ಧಿಗೆ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಟ್ಯಾಕ್ಸ್‌ನಿಂದ ಬರುವಂತಹ ಹಣದಲ್ಲಿ ಶೇಕಡ 5ರಷ್ಟು ಜಿಲ್ಲಾ ಅಭಿವೃದ್ಧಿಗೆ ಕೊಡಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಘೊಟ್ನೇಕರ್‌ರವರೆ ಬೇಗ ಮುಗಿಸಿ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯ ಅಭಿವೃದ್ಧಿಗೋಸ್ಕರ ನಮಗೆ ಮೂರು ವರ್ಷದಿಂದ ಒಂದು ನೂರು ಕೋಟಿ ರೂಪಾಯಿ ಕೊಡುತ್ತೇವೆಂದು ಇಬ್ಬರು ಮುಖ್ಯಮಂತ್ರಿಗಳು ಹೇಳಿದರು. ಈ ವಿಷಯ ಮಾನ್ಯ ಜಗದೀಶ್ ಶೆಟ್ಟರ್ ಸಾಹೇಬರಿಗೂ ಸಹ ತಿಳಿದಿದೆ. ಏಕೆಂದರೆ, ಅವರು K.D.P., Meeting ಮಾಡಿದ್ದರು. ಆ ದಿವಸ

ನಾನು ಅಲ್ಲಿಗೆ ಹೋಗಿದ್ದೆ. ಆಗ ಅವರು ಹೇಳಿದರು ನಿಮ್ಮ ಜಿಲ್ಲೆಯ ಅಭಿವೃದ್ಧಿಗೋಸ್ಕರ ನೂರು ಕೋಟಿ ರೂಪಾಯಿಗಳ package ಕೊಡುತ್ತೇವೆಂದು ಹೇಳಿದ್ದರು. ಈಗ ಈ ಸರ್ಕಾರದ ಅವಧಿಯೇ ಮುಗಿಯುತ್ತಾ ಬಂದಿದೆ ಇನ್ನೂ ಸಹ ನೂರು ಕೋಟಿ ರೂಪಾಯಿ ಬಂದಿಲ್ಲ. ನನಗೆ ಏಕೆ ನೋವಾಗುತ್ತಿದೆ ಎಂದರೆ ಕ್ರಿಯಾಯೋಜನೆಯನ್ನು ಸಿದ್ದಪಡಿಸುವುದಕ್ಕೆ ಆರೂವರೆ ಲಕ್ಷ ರೂಪಾಯಿ ನಮ್ಮ ಜಿಲ್ಲಾ ಕಛೇರಿಯಿಂದಲೇ ಖರ್ಚು ಮಾಡಿಸಿದರು. ಆ ಹಣ ಸಹ ವಾಪಸ್ಸು ಬಂದಿಲ್ಲ. ಈಗ ಪರಿಸ್ಥಿತಿ ಏನಾಗಿದೆ ಎಂದರೆ ತುಪ್ಪನೂ ಹೋಯಿತು, ಬಟ್ಟಲೂ ಹೋಯಿತು ಎನ್ನುವಂತೆ ಆಗಿದೆ. ಆದುದರಿಂದ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ನಮ್ಮ ಜಿಲ್ಲೆಯ ಅಭಿವೃದ್ಧಿಗಾಗಿ ಒಂದು ನೂರು ಕೋಟಿ ರೂಪಾಯಿ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಬೆಳ್ಳುಬ್ಬಿ ಸಾಹೇಬರು ಬಂದಿದ್ದಾರೆ ಅವರು announce ಮಾಡಿದರೆ ಬಹಳ ಒಳ್ಳೆಯದಾಗುತ್ತದೆ.

**ಉಪ ಸಭಾಪತಿಯವರು:–** ಅವರು ಹೇಗೆ ಮಾಡುತ್ತಾರೆ?

**ಶ್ರೀ ಎಸ್.ಕೆ. ಬೆಳ್ಳುಬ್ಬಿ (ಹಜ್ ಮತ್ತು ವಕ್ಫ್ ಕೃಷಿ ಉತ್ಪನ್ನ ಮಾರುಕಟ್ಟೆ):–** ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಬಹಳಷ್ಟು ಬೇಡಿಕೆಯನ್ನು ಇಡುತ್ತಿದ್ದಾರೆ. ಆ ಜಿಲ್ಲೆ ದಟ್ಟವಾದಂತಹ ಅರಣ್ಯ ಹೊಂದಿರುವಂತಹ ಹಾಗೂ ಪ್ರಾಕೃತಿಕ ಸೌಂದರ್ಯ ಹೊಂದಿರುವಂತಹ ಜಿಲ್ಲೆ. ಮಾನ್ಯ ಸದಸ್ಯರ ನೋವು ನೋಡಿದರೆ ಈ ಹಿಂದೆ ಇದ್ದಂಥವರು ಏನೂ ಮಾಡಿಲ್ಲವೆಂದು ಹೇಳುತ್ತಿದ್ದಾರೆ, ಅವರ ಕಳಕಳಿಯನ್ನು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ತಿಳಿಸುತ್ತೇನೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ನಾಳೆಯಿಂದ ನೀತಿಸಂಹಿತೆ ಜಾರಿಯಾಗುತ್ತಿದೆ. ಆದುದರಿಂದ ಇವತ್ತೇ ನಾವು ಕೇಳಿರುವಂತಹ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ

ಕೋರುತ್ತಾ, ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, 2013–14ನೇ ಸಾಲಿನ ಆಯವ್ಯಯ ಏನಿದೆ, ಈ ಆಯವ್ಯಯ ನಮ್ಮ ಸರ್ಕಾರದ ಕೊನೆಯ ಆಯವ್ಯಯ. ಚುನಾವಣೆಯ ನಂತರ ಯಾರು ಬರುತ್ತಾರೋ ಯಾರು ಬರುವುದಿಲ್ಲವೋ ಗೊತ್ತಿಲ್ಲ. ಆದರೆ ಹೋಗುವುದಕ್ಕಿಂತ ಮುಂಚಿತವಾಗಿ ನಮ್ಮ ಮುಖ್ಯಮಂತ್ರಿಗಳಾದ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಬಹಳ ಸುಂದರವಾದ ಬಜೆಟ್‌ನ್ನು, ಜನಪರವಾದ ಬಜೆಟ್‌ನ್ನು, ರೈತ ಮತ್ತು ಜನತೆಯ ಪರವಾಗಿ ಎಲ್ಲಾ ದೃಷ್ಟಿಕೋನವನ್ನು ತೆಗೆದುಕೊಂಡು ಒಂದು ಉತ್ತಮವಾದಂತಹ ಬಜೆಟ್ ಮಂಡಿಸಿದ್ದಾರೆ. ಆ ಸಂದರ್ಭದಲ್ಲಿ ನನಗೆ ಅನ್ನಿಸಿದ್ದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಮೇಲೆ ಕುಳಿತುಕೊಂಡು ನೋಡುತ್ತಿದ್ದೆ ಮುಖ್ಯಮಂತ್ರಿಗಳಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ಮೂರು ಗಂಟೆ ನಲವತ್ತೈದು ನಿಮಿಷ ಒಂದು ಗ್ಲಾಸ್ ನೀರನ್ನು ಸಹ ಕುಡಿಯದೆಯೇ ನಿರರ್ಗಳವಾಗಿ ಆನಂದದಿಂದ, ಶಾಂತಚಿತ್ತದಿಂದ ಒಂದು ಮುತ್ತಿನಂಥ ಬಜೆಟ್‌ನ್ನು ಓದಿದರು. ಆ ಸಮಯದಲ್ಲಿ Treasury Bench ನಲ್ಲಿ ಇದ್ದವರು, ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿದ್ದಂತಹ ಎಲ್ಲಾ ಪಕ್ಷದ ನಾಯಕರು ಹಾಗೂ ಎದುರು ಸಾಲಿನಲ್ಲಿ ಕುಳಿತಿರುವಂಥ ಸದಸ್ಯರಿಗೆ ಏನು ಹೇಳಬೇಕು ಎಂಬುದೇ ತಿಳಿಯಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಮುಖ್ಯಮಂತ್ರಿಗಳು ನೀರು ಕುಡಿಯದೆಯೇ 3 ಗಂಟೆ 45 ನಿಮಿಷಗಳ ಕಾಲ ಮಾತನಾಡಿದರು. ಅವರ್ಯಾಕೆ ನೀರು ಕುಡಿಯುತ್ತಾರೆ, ನಮಗೆಲ್ಲಾ ನೀರು ಕುಡಿಸಿದ್ದಾರೆಂದು ಹೇಳಿದರು.

**ಶ್ರೀ ಕೆ.ಬಿ. ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ ನಾನು ಅನೇಕ ಬಜಟ್‌ಗಳನ್ನು ನೋಡಿದ್ದೇನೆ. ಬಜೆಟ್ ಕೊಟ್ಟ ನಂತರ ಪ್ರತಿಯೊಬ್ಬರು gallery ಗೆ ಹೋಗುತ್ತಾರೆ. Lounge ನಲ್ಲಿ ಹೋಗಿ Press ನವರು ಸಹ ಕೇಳುತ್ತಾರೆ.

ಸನ್ಮಾನ್ಯ ಹೆಗಡೆಯವರು ಕೊಟ್ಟಂತಹ ಬಜೆಟ್‌ನಲ್ಲಿ ಸುಮಾರು 27,000 ಕೋಟಿ ರೂಪಾಯಿಗಳ ಬಜೆಟ್ ಇತ್ತು. ಈಗ 1,17,405 ಕೋಟಿ ರೂಪಾಯಿಗಳ ಬಜೆಟ್ ಇದೆ. ಸುಮಾರು ಇಪ್ಪತ್ತೊಂಭತ್ತು ವರ್ಷಗಳಲ್ಲಿ inflation ಜಾಸ್ತಿ ಆಗಿದೆ. ಕೆಲವರು ಮಾತನಾಡುವಂತಹ ಸಂದರ್ಭದಲ್ಲಿ ರೂಪಾಯಿ ಬಲೆ ಯಾವ ರೀತಿ ಇತ್ತು. Dollar ಬೆಲೆ ಹೇಗಿತ್ತು, ಒಂದು ರೂಪಾಯಿ ಕೊಟ್ಟರೆ ಐದು ಸೇರು ಜೋಳ ಬರುತ್ತಿತ್ತು. ಈಗ ಏನು ಬರುತ್ತದೆ ಎಂದು ಕೇಳಿದರು. ಅವರು ಹೇಳುವಂತಹ ಮಾತನ್ನು ಒಪ್ಪುತ್ತೇನೆ. ಈಗ ಬಜೆಟ್ ಗಾತ್ರ ಎರಡು ಲಕ್ಷಕ್ಕಿಂತ ಮೇಲೆಯೇ ಹೋಗಬೇಕಾಗುತ್ತದೆ ವಿನಃ ಅದಕ್ಕಿಂತ ಕೆಳಗಡೆ ಹೋಗುವುದಿಲ್ಲ. ಏಕೆಂದರೆ, ಬಜೆಟ್ ನೋಡಿದ ಮೇಲೆ ಬಾಂಬೆಯಲ್ಲಿ ನಡೆದ 50:50 ಕ್ರಿಕೇಟ್ ನೋಡಿಲ್ಲವೆಂದು ಕಾಣಿಸುತ್ತದೆ. ಪಂದ್ಯ ಗೆಲ್ಲಲ್ಲು ನಾಲ್ಕು ರನ್ ಬೇಕಾಗಿತ್ತು. ಇದ್ದಿದ್ದು ಎರಡು ಬಾಲು. ಬೇಕಾಗಿದ್ದು ನಾಲ್ಕು ರನ್. ಕುಳಿತವರಿಗೆಲ್ಲಾ ಏನಾಗುತ್ತದೆ ಎನ್ನುವ ಭಯ, ಆಗ ಒಂದು sixer ಹೊಡೆದ ಕೊಡಲೇ ಕುಳಿತುಕೊಂಡಿದ್ದವರೆಲ್ಲರೂ "ಓ" ಎಂದು ಕೂಗಿಕೊಂಡೆವು. ಆದರೆ ನಿಮ್ಮಂತೆ ಕುಳಿತಿದ್ದಂತಹ ಶ್ರೀಲಂಕಾದವರು ಎದ್ದೇಳಲೇ ಇಲ್ಲ. ಅಂಥ ಬಜೆಟ್ ಇದಾಗಿತ್ತು. ಅದಕ್ಕಾಗಿ ನಾವು ನಿಜವಾಗಿ ಹೇಳಬೇಕೆಂದರೆ, ಈ ಬಜೆಟ್ ತಯಾರು ಮಾಡುವಾಗ ಮಾನ್ಯ ಶೆಟ್ಟರ್‌ರವರ ಪರಿಸ್ಥಿತಿ ಯಾವ ರೀತಿ ಇತ್ತು ಎಂದರೆ, ನಮ್ಮಲ್ಲಿ ಇದ್ದಂತಹ ತಕರಾರು, ನಮ್ಮಲ್ಲಿದ್ದಂತಹ ಶಾಸಕರು ನಮ್ಮನ್ನು ಬಿಟ್ಟು ಹೋದರು, mental tension. ಇಡೀ ರಾಜ್ಯವನ್ನು ಅವರು ನಡೆಸಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ಐದು ತಿಂಗಳ period ಏನಿತ್ತು, it was a question as to how to survive, how to bring back his party to the power, what are the strategies he has to use and what best Budget he has to present to the people of the State. So, he started consulting every Economist. ನಮ್ಮ mercury ಇಳಿದು ಹೋಗಿತ್ತು. ಎಲ್ಲರೂ ನಮ್ಮ ವಿರುದ್ಧವೇ ಇದ್ದರು. ನಮ್ಮವರೇ ನಮ್ಮ ವಿರುದ್ಧವಿದ್ದರು. ಆ ಮಧ್ಯದಲ್ಲಿ ಬೆಳಗಾವಿ ಅಧಿವೇಶನದಲ್ಲಿಯೂ ಸಹ ಕಾವೇರಿ ವಿಷಯವೇ ಬಂತು. ಅದೇ ಸಮಯದಲ್ಲಿ ಹಾವೇರಿಯ ವಿಷಯವೂ ಬಂತು.

ಈಗ ಇಲ್ಲಿ ನೋಡಿದರೆ ಇಲ್ಲಿಯೂ ಸಹ ಕಾವೇರಿಯ ವಿಷಯವೇ ಬಂದಿದೆ. ಅದೇ ಸಮಯದಲ್ಲಿ Ajmal Kasab ಬೆಳಗಾವಿಯಲ್ಲಿದ್ದಾಗ ಇಲ್ಲಿ Afzal Guru, ಈ ದೇಶ ವಿರೋಧಿ ಶಕ್ತಿಗಳನ್ನು ಒಂದು ಕಡೆ ನೋಡುವಾಗ ಕಾವೇರಿ ನೋಡಬೇಕೆ, ಹಾವೇರಿ ನೋಡಬೇಕೆ, ಇಂತಹ ಪರಿಸ್ಥಿತಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ತಯಾರು ಮಾಡುವುಕ್ಕೆ ಪ್ರಾರಂಭಿಸಿದರು.

( 5 ಘಂಟೆ)

ನಮ್ಮವರೆ, ನಮಗೆ ಬಹಳ ತೊಂದರೆಯನ್ನು ಕೊಟ್ಟರು. ಅಂತಹ ಸಂದರ್ಭದಲ್ಲಿ ನಾನು ಜನತಾದಳ ಮತ್ತು ಕಾಂಗ್ರೆಸ್ ಪಕ್ಷದವರು ನೀಡಿದ ಸಹಕಾರಕ್ಕೆ ಅಭಿನಂದಿಸುತ್ತೇನೆ. Really they were very cooperative. The reason is that everybody wanted this government to survive. ಉಳಿದಿದ್ದೆ 5–6 ತಿಂಗಳು, ಅಷ್ಟರಲ್ಲಿ ಇವರ ಅವಧಿಯೇ ಮುಗಿಯುತ್ತದೆ, ನವು ಏಕೆ ಗೋಲಿ ಹೊಡೆದು ಬೀಳಿಸಬೇಕೆನ್ನುವ ಭಾವನೆ ಅವರಿಗೆ.

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ನಮಗೆ ಇದ್ದ ಭಯ ಏನೆಂದರೆ ಇದು ಈ ಸರ್ಕಾರದ ಕಡೆಯ ಆಯವ್ಯಯ, ಈ ಸರ್ಕಾರ ಬಿದ್ದಲ್ಲಿ ನಮಗೆ ಈ ಆಯವ್ಯಯದ ಮೇಲೆ ಮಾತನಾಡತಕ್ಕ ಅವಕಾಶ ಎಲ್ಲಿ ತಪ್ಪಿ ಹೋಗುವುದೋ ಎಂದು ನಮಗೆ ಭಯ ಆಗಿತ್ತು. ಹಾಗಾಗಿ ನಾವು ಈ ಸರ್ಕಾರ ಹೇಗಾದರೂ ಮಾಡಿ ಆಯವ್ಯಯವನ್ನು ಮಂಡಿಸಲು ಎಂದು ಪ್ರಾರ್ಥಿಸಿಕೊಳ್ಳುತ್ತಿದ್ದೆವು.

**ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶಿತರು):–** ಈ ಆಯವ್ಯಯದ ಮಂಡನೆಯಿಂದ ನಮ್ಮ ಪಕ್ಷ ಮತ್ತು ನಮ್ಮ ಸರ್ಕಾರ ಮಾಡಿದಂತಹ ಅನೇಕ ಸಾಧನೆಗಳನ್ನು ಜನರ ಮುಂದಿಡಲು ಒಂದು chance ನಮಗೆ ಸಿಕ್ಕಿತು. 'Italian Job' ಎನ್ನುವ ಒಂದು ಚಲನಚಿತ್ರವಿದೆ. ಒಂದು ಬಸ್ಸಿನಲ್ಲಿ ಕಳವು ಮಾಡಿದ ಚಿನ್ನವನ್ನು ಇಟ್ಟಿರುತ್ತಾರೆ. ಆ ಬಸ್ಸಿನಲ್ಲಿ ಹೋಗುವಾಗ ಅದು ಒಂದು ಗುಡ್ಡದ ಮೇಲೆ ಹೋಗಿ ಇನ್ನೇನು ಕೆಳಕ್ಕೆ ಬೀಳಬೇಕು ಎನ್ನುವಾಗ ಒಂದು ಕಲ್ಲಿಗೆ ತಾಗಿ ಅಲ್ಲಿಯೇ ನಿಲ್ಲುತ್ತದೆ. ಅದು ಏನಾಗುತ್ತದೆ ಎಂದರೆ ಬಸ್‌ನಲ್ಲಿ

ಭಾರ ಎಲ್ಲಿ ಹೆಚ್ಚಾಗುತ್ತದೆ ಆ ಕಡೆಗೆ ಬಸ್ ಬಾಗುತ್ತದೆ. ಅದರಲ್ಲಿ ಚಿನ್ನ ಒಂದು ಕಡೆಗೆ ಹೋದರೆ ಆ ಕಳ್ಳರು ಅದನ್ನು ಓಡಿ ಹೋಗಿ ಎತ್ತಿಕೊಳ್ಳುತ್ತಿರುತ್ತಾರೆ. ಇದೇ ಪ್ರಕಾರ ಸನ್ನಿವೇಶ ನಮ್ಮ ಸರ್ಕಾರಕ್ಕೂ ಬಂದಿತ್ತು. ನಮ್ಮ ಪಕ್ಷದ ಸಂಖ್ಯಾಬಲ 106 ಕ್ಕೆ ಬಂದು ನಿಂತಿತ್ತು. ಇನ್ನಿಬ್ಬರೂ ರಾಜಿನಾಮೆಯನ್ನು ಕೊಟ್ಟಿದ್ದಲ್ಲಿ ಗೌರವಾನ್ವಿತ ರಾಜ್ಯಪಾಲರು ಯಾವ ಕ್ರಮವನ್ನು ಕೈಗೊಳ್ಳುತ್ತಿದ್ದರೋ ನನಗೆ ಗೊತ್ತಿಲ್ಲ. ಇವತ್ತು ನಾವು ಆಯವ್ಯಯವನ್ನು ಮಂಡಿಸಿದರೆಂದು everybody is speaking on the streets. ಪ್ರಾಮಾಣಿಕವಾಗಿ ಇದು ನಿಜ ಎಮದು ನೀವು ಹೇಳಬೇಕು. You tell from the bottom of the heart. ನಿನ್ನೆಯ ದಿವಸ ಬೆಳಿಗ್ಗೆ ಬಹಳ ಸುಂದರವಾದ ಆಯವ್ಯಯವನ್ನು ಸರ್ಕಾರ ಮಂಡಿಸಿದೆ ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಈ ಆಯವ್ಯಯದ ಸುಂದರತೆ ಏನೆಂದರೆ ಯಾವ ಯಾವ ವರ್ಗಗಳಿಗೆ ಯಾವ ಯಾವ ಜನರಿಗೆ ಏನೇನು ನೀಡಿದೆ ಎನ್ನುವುದೆ ಇದರ ಸುಂದರತೆ, ಬಡವರಿಗಾಗಿ, ಅಂಗನವಾಡಿ, ಮೈನಾರಿಟಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ, ಹಾಸ್ಟೆಲ್‌ಗಳಿಗೆ, ಸಾಕಷ್ಟು ಅನುದಾನ ನೀಡಿದೆ. ಇನ್ನೂ ರೈತರ ಪರವಾಗಿ ಸಾಕಷ್ಟು ಎಂದೆಂಥ ಸುಂದರ ಹೆಸರಿನ ಯೋಜನೆಗಳನ್ನು ಜಾರಿಗೆ ತಂದಿದೆ, ಅದಕ್ಕಾದರೂ ನಮ್ಮನ್ನು ಅಭಿನಂದಿಸಬೇಕು.,

**ಶ್ರೀಮತಿ ಮೋಟಮ್ಮ:-** ರೈತರು ಅದೆಲ್ಲಾ ಇದ್ದದ್ದೇ, ಆದರೆ ಒಂದು ವರ್ಗದ ಹಣವನ್ನು ಇತರೆ ವರ್ಗಗಳಿಗೆ ಹಣ ಹಂಚಿದರೆ ಅದು Partition Deed ಮಾಡಿ ಹಂಚಿಕೊಂಡ ಹಾಗೆ.

**ಶ್ರೀ ಕೆ.ಬಿ. ಶಾಣಪ್ಪ:-** ರೈತರ ಪರವಾಗಿ ಇರತಕ್ಕ ಯೋಜನೆ 'ಭೂಚೇತನ'ಎಂತಹ ಸುಂದರವಾದ ಹೆಸರು, ಆ ಹೆಸರು ಕೂಡ ಬೇರೆಯವರ ತಲೆಗೆ ಬಂದಿರಲಿಲ್ಲ. 55 ವರ್ಷ ರಾಜಕೀಯದಲ್ಲಿದ್ದುಕೊಂಡು ಆಡಳಿತ ನಡೆಸಿದ್ದರೂ ಸಹ 'ಭೂ ಚೇತನ' ಅಂದರೆ ಏನು ಎನ್ನುವುದು ನಿಮ್ಮ ತಲೆಯಲ್ಲಿ ಬಂದಿದೆಯೇ?

**Sri. S.R. PATIL:-** 'A good man in a wrong party' ಎನ್ನುವ ಹಾಗೆ ನಿಮ್ಮಲ್ಲಿ ಮಾನಸಿಕವಾಗಿ ಹೊಂದಾಣಿಕೆ ಇಲ್ಲ. ನಾವಿಬ್ಬರೇ ಹೊರಗಿದ್ದಾಗ ನಿಮಗೆ ಹೇಳುವೆ.

**ಶ್ರೀ ಕೆ.ಬಿ. ಶಾಣಪ್ಪ:-** ಬಿತ್ತನೆ ಬೀಜ, ಸುವರ್ಣಭೂಮಿ, ಹೀಗೆ ನೂರಾರು ಯೋಜನೆಗಳನ್ನು ಈ ಆಯವ್ಯಯದಲ್ಲಿ ತರಲಾಗಿದೆ. ಅದಲ್ಲದೇ ಅಂಗನವಾಡಿಗಳಿಗೆ 7 ಸಾವಿರ ರೂಪಾಯಿಗಳನ್ನು ನೀಡಿದ್ದೇವೆ. ಹಾಸ್ಟೆಲ್‌ಗಳಿಗೆ 700 ರೂಪಾಯಿಗಳನ್ನು ನೀಡಲಾಗುತ್ತಿತ್ತು ಅದನ್ನು ಒಂದು ಸಾವಿರ ರೂಪಾಯಿಗೆ ಹೆಚ್ಚಿಸಲಾಗಿದೆ. ಯಾವ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಿತ್ತು ಎನ್ನುವುದನ್ನು ದಯಮಾಡಿ ಹೇಳಿ, ಕೇಂದ್ರದವರು ಮಾಡಿದ್ದನ್ನೇ ನೀವು ಹೇಳಬೇಡಿ.

(ಗೊಂದಲ)

**ಶ್ರೀ ವಿ. ಸೋಮಣ್ಣ (ಸಭಾನಾಯಕರು):-** ಅವರಿಗೆ ಮಾತನಾಡಲು ಅವಕಾಶ ಕೊಡಿ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನಾವು ಯಾರು ತೊಂದರೆ ಮಾಡಲಿಲ್ಲ. ಈಗ ಅವರಿಗೆ ಮಾತನಾಡಲು ಬಿಡಿ.

**ಶ್ರೀ ಕೆ.ಬಿ. ಶಾಣಪ್ಪ:-** ರೈತರ ಸಾಲವನ್ನು ಮಾಫ್ ಮಾಡಬೇಕೆಂದು ಹೇಳಿದಾಗ ನಮಗೆ budget provision ಇರಲಿಲ್ಲ. 3600 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುವ risk ಅನ್ನು ನಮ್ಮ ಸರ್ಕಾರ ತೆಗೆದುಕೊಂಡಿತು.

(ಗೊಂದಲ)

**ಉಪಸಭಾಪತಿಯವರು:-** ಮರಿತಿಬ್ಬೇಗೌಡರೆ, ನೀವು ಅವರಿಗೆ ಉತ್ತರ ಕೊಡುವಿರಾ? ನೀವು ಮಾತನಾಡುವಾಗ ಮಾತನಾಡಿ, ದಯವಿಟ್ಟು ಸುಮ್ಮನಿರಿ.

**Sri. K.B. SHANAPPA:-** Please listen to me. I don't want to get into controversy. ದಯಮಾಡಿ ನನ್ನ ಮಾತುಗಳನ್ನು ಕೇಳಿ, ನಿಮಗೇನಾದರೂ ಅನಿಸಿದರೆ ನೀವು ಉತ್ತರ ನೀಡುವಾಗ ಹೇಳಿ.

ಯಾವಾಗಲೂ opposition government ಯಾರು rule ಮಾಡಿದ್ದಾರೆ ಅವರೆ ಈ ಸಾಲವನ್ನು ಮಾಫ್ ಮಾಡಿದ್ದಾರೆ. ಅದು ಹೆಗಡೆ, ರಾಮಕೃಷ್ಣ ಮತ್ತು ಪಟೇಲ್ ಸರ್ಕಾರವಿರಲಿ ಯಾವುದೇ ಸರ್ಕಾರ ರೈತರ ಸಾಲವನ್ನು ಮಾಫ್ ಮಾಡಿಲ್ಲ. ಇನ್ನೂ 23 ಸಾವಿರ temporary labourers ನ್ನು ಎಂದೂ ಖಾಯಂಗೊಳಿಸಿರಲಿಲ್ಲ. ಅವಶ್ಯವಿದ್ದಾಗಲೆಲ್ಲಾ ತಾತ್ಕಾಲಿಕ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತೀರಿ? ಅವರನ್ನು ಖಾಯಂ ಮಾಡಿದ್ದು, ನಾವು ಮತ್ತು ಜನತದಳದವರು, ಕಾಂಗ್ರೆಸ್‌ನವರು ಎಂದೂ ಸಹ ಖಾಯಂಗೊಳಿಸಿಲ್ಲ. That is the thing which we have done. 1984ರಲ್ಲಿ ತೋಟಗಾರಿಕೆ ಇಲಾಖೆಯಲ್ಲಿ 24,000 people were given permanent job. ಇದರಿಂದ financial burden ನಮಗೆ ಬರುತ್ತದೆ. ಈಗ ವಿದ್ಯುತ್ ಉತ್ಪಾದನೆಯನ್ನು ಛತ್ತೀಸ್‌ಗಡಕ್ಕೆ ನೀಡಲಾಗಿದೆ. ಈಗ ನಾವು ಹೋದ ಮೇಲೆ ಬಂದವರು ಅದನ್ನು ಉದ್ಘಾಟನೆ ಮಾಡುತ್ತಾರೆ. ಈ ರೀತಿಯ ಯೋಜನೆಗಳಿಗೆ ಹಣವನ್ನು ಹಾಕಿದ ಮೇಲೆ ಅದು ಕಾರ್ಯಗತಗೊಳ್ಳಲು 5–10 ವರ್ಷಗಳಾಗುತ್ತವೆ. ನೀರಾವರಿಯಲ್ಲಿ ಲಕ್ಷಾಂತರ ಏಕರೆ ಪ್ರದೇಶಕ್ಕೆ ನೀರನ್ನು ನೀಡಿದ್ದೇವೆ. ಇಂತಹ ಅನೇಕ ಉತ್ತಮ ಕೆಲಸಗಳನ್ನು ನಾವು ಮಾಡಿದ್ದೇವೆ. ಆದರೆ ಯಾರು ಇದರ ಬಗ್ಗೆ ಮಾತನಾಡಲಿಲ್ಲ. ಇಷ್ಟು ಹಣವನ್ನು ನಾವೇ ತಿಂದಿದ್ದೇವೆಯೇ? 2006ರಲ್ಲಿ 44,000, 2007ನಲ್ಲಿ 47000, 2008ರಲ್ಲಿ 52000, 2010ರಲ್ಲಿ 62,000, 2011 ರಲ್ಲಿ 70,000 2012ರಲ್ಲಿ 83,000 2013ರಲ್ಲಿ 1,17,000 ಮತ್ತು ಈಗ 1,32,000 ಕೋಟಿ ರೂಪಾಯಿಗಳನ್ನು ನಾವೇ ತಿಂದಿದ್ದೇವೆಯೇ? ಜನರಿಗೆ ಏನೂ ಕೆಲಸವನ್ನೇ ಮಾಡಿಲ್ಲವೇ ಹೈದರಾಬಾದ್–ಕರ್ನಾಟಕ ಅಭಿವೃದ್ಧಿಗಾಗಿ ನಾವೇನು ಕೆಲಸವನ್ನೇ ಮಾಡಿಲ್ಲವೇ? ಪಾರ್ಲಿಮೆಂಟ್‌ನಲ್ಲಿ ಖರ್ಗೆ ಮತ್ತು ಧರ್ಮಸಿಂಗ್ ಇಬ್ಬರೇ ಇದಕ್ಕಾಗಿ ಹೋರಾಟ ಮಾಡಿದರಾ? ನಾವು ನೀವೆಲ್ಲರೂ ಸೇರಿಯೇ ಇದಕ್ಕಾಗಿ ಹೋರಾಟವನ್ನು ಮಾಡಿದ್ದೇವೆ. ಎಸ್.ಎಂ. ಕೃಷ್ಣಾರವರ ಕಾಲದಿಂದಲ್ಲೂ ನಮ್ಮ ನಿಮ್ಮೆಲ್ಲರ ಕನಸಿನ ಕೂಸು ಅದು. Don’t say that it is only one person or one party which has done it. ಅದಕ್ಕಾಗಿ ನಾವು ಮಾಡಿರತಕ್ಕ ಉತ್ತಮ ಕೆಲಸಗಳನ್ನು ನೀವು

ಹೊಗಳಬೇಕು. ಈಗ ಬೆಳಗಾವಿಗೆ ಸತೀಶ್ ಎನ್ನುವ ಒಬ್ಬ S.P. ಬಂದಿದ್ದಾರೆ, ಅಲ್ಲಿ ಮೂರು ವರ್ಷಗಳಿಂದಲೂ 10–20 ಕೋಟಿ ರೂಪಾಯಿಗಳಷ್ಟು ಬ್ಯಾಂಕುದರೋಡೆ, ಸಾಕಷ್ಟು ಕಳ್ಳತನ ನಡೆಯುತ್ತಿದ್ದರೂ ಯಾರನ್ನು ಹಿಡಿದಿರಲಿಲ್ಲ. ಈ S.P. ನಾಲ್ಕು ತಿಂಗಳಿನಲ್ಲಿ ಇದನ್ನೆಲ್ಲ ಹಿಡಿಯುತ್ತೇನೆ ಎಂದು ವಾದ ಮಾಡಿದರು. He has already recovered 5.5 crore rupees and that has become a history there. ಕೆಲಸ ಮಾಡುವ ಮನಸ್ಸು ಇತ್ತು ಎಂದರೆ ಯಾರಾದರೂ ಕೆಲಸವನ್ನು ಮಾಡುತ್ತಾರೆ. ಆ ಅಧಿಕಾರಿ ನನಗೆ ಫೋನ್ ಮಾಡಿ ಹೇಳಿದರು, ಈಗ ಇಷ್ಟು ರಿಕವರಿ ಮಾಡಿದ್ದೇನೆ, ಇನ್ನೂ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದರು. ಇಂತಹ ಕೆಲಸಗಳನ್ನು ನಮ್ಮ ಸರ್ಕಾರ ಮಾಡುತ್ತಿದೆ. The law and order is perfectly well. ಅಲ್ಲಿ ಇಲ್ಲಿ ಒಂದೊಂದು ಇರಬಹುದು, We are human beings. ಅದು ಪ್ರಯೋಜನವಿಲ್ಲದ್ದು. ಸಮಾಜದಲ್ಲಿ ಎಲ್ಲಾ ರೀತಿಯ ಜನರು ಸಹ ಇರುತ್ತಾರೆ. ನಾನು ಒಮ್ಮೆ ಡಾಕ್ಟರೊಬ್ಬರನ್ನು rape cases ಹೆಚ್ಚಾಗಿರುವ ಬಗ್ಗೆ ಏನು ಮಾಡಬೇಕೆಂದು ಕೇಳಿದಾಗ ಅವರು ನನಗೆ ಒಂದು ಸಲಹೆಯನ್ನು ನೀಡಿದರು. Medico Research Centre ಗೆ ಕಳುಹಿಸಿ, ಅಲ್ಲಿ gender convert ಮಾಡುತ್ತಾರೆ. Male ನಿಂದ ಅವರನ್ನು female ಮಾಡುತ್ತೇವೆ. Let them move as ladies. That technology is there. Why not to do that? ಅವರಿಗೆ ಅದರ ಅರಿವು ಆಗಬೇಕು.

**ಶ್ರೀ ದಯಾನಂದ:–** ಅವರನ್ನು ಎಲ್ಲಿಯೂ ಬಿಡಬೇಡಿ. Bangkok ನಲ್ಲಿ ಬಿಡಿ.

**ಶ್ರೀ ಕೆ.ಬಿ. ಶಾಣಪ್ಪ:–** ಇದನ್ನು ಕೇಳಿದಾಗ ಎಷ್ಟು ನೀಚತನ ಅನಿಸುತ್ತದೆ. ಭಾರತದ ದೇಶದಲ್ಲಿ ಇಂತಹ mentality ಇರುವ ಹುಡುಗರು ಇದ್ದಾರಲ್ಲ, ತಂದೆ ಮಕ್ಕಳನ್ನೆ ಹಾಳು ಮಾಡುವ ವಿಚಾರವನ್ನು ಪತ್ರಿಕೆಗಳಲ್ಲಿ ಓದುವಾಗ ನಮಗೆ ಬಹಳ ನೋವಾಗುತ್ತದೆ. We are fed up, I tell you. ನಮ್ಮ ಸರ್ಕಾರ ಎಲ್ಲಾ ವಿಚಾರದಲ್ಲೂ ಉತ್ತಮ ಕೆಲಸ ಮಾಡಿ ರಾಷ್ಟ್ರದಲ್ಲಿಯೇ

ಉತ್ತಮ ಸರ್ಕಾರ ಎಂದು ಹೆಸರನ್ನು ಪಡೆದಿದೆ. ರಾಜ್ಯದ economy ಯಲ್ಲೂ ಸಹ ಒಳ್ಳೆಯ ಹೆಸರನ್ನು ಮಾಡಿದೆ. ಅದಕ್ಕಾಗಿಯೇ ನೀವು ನಮ್ಮ ಸರ್ಕಾರವನ್ನು ಅಭಿನಂದಿಸಬೇಕು, ಇಲ್ಲಿಂದ ನಾವು ಹೊರಕ್ಕೆ ಹೋದ ಮೇಲೆ ಎರಡು ತಿಂಗಳಿಗೆ ಚುನಾವಣೆಗಳು ಬರುತ್ತವೆ, ಜನರೇ ನಮ್ಮನ್ನೇ ಆರಿಸುತ್ತಾರೆ, ಪುನಃ ನಾವೇ ಇಲ್ಲಿ ಬಂದು ಕೂರುತ್ತೇವೆ.

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಗಳೆ,** ಕರ್ನಾಟಕ ಸರ್ಕಾರ ಮುಂದೆ ಬರುವ ಹೊಸ ಸರ್ಕಾರದ ಆಯವ್ಯಯವನ್ನು ಈಗಲೇ ಓದಿದೆ.

ಈ ವರ್ಷದ ಬಜೆಟ್‌ನಲ್ಲಿ ಕೃಷಿಗೆ 22,000 ಕೋಟಿ ರೂಗಳನ್ನು ಕೊಟ್ಟಿದ್ದಾರೆ. ಸಾಮಾನ್ಯ ಮುಂಗಡಪತ್ರದಲ್ಲಿ 1,17,005 ಕೋಟಿ ರೂಗಳನ್ನು ನೀಡಿದ್ದಾರೆ. ಕೃಷಿ ಬಜೆಟ್‌ನಲ್ಲಿ ಕೆಲವು ವಿಚಾರಗಳು ಪ್ರಸ್ತಾಪವಾಗಿದ್ದರು ಕೂಡ, ರೈತರು ಬರಗಾಲಕ್ಕೆ ಸಿಕ್ಕಿ, ಮುಂದೆ ಬರುವ ಮಳೆಗಾಲದಲ್ಲಿ ಗೊಬ್ಬರವಾಗಲಿ, ಔಷಧಿಯಾಗಲಿ ಕೊಳ್ಳುವಂತಹ ಸ್ಥಿತಿಯಲ್ಲಿ ಇಲ್ಲ. ಇದಕ್ಕೆ ಯಾವುದೇ ರಿಯಾಯಿತಿಯನ್ನು ಕೊಟ್ಟಿರುವುದಿಲ್ಲ. ಈಗಲೂ ಅವಕಾಶವಿದ್ದರೆ ಬಜೆಟ್‌ನಲ್ಲಿ ಸೇರಿಸಿ ಎನ್ನುವಂತಹ ಮನವಿಯನ್ನು ಮಾಡುತ್ತೇನೆ. ಇದನ್ನು ಸರ್ಕಾರ ಒಪ್ಪುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಕೃಷಿಗೆ ಸಂಬಂಧಪಟ್ಟಂತೆ ಸುಮಾರು 2004ನೇ ಇಸವಿಯಿಂದ ಅನೇಕ ಜಿಲ್ಲೆಗಳಲ್ಲಿ ಬೆಳೆಯುವಂತಹ, ಅದರಲ್ಲಿಯು ನಮ್ಮಲ್ಲಿಯು ಮುಖ್ಯವಾಗಿ ಬೆಳೆಯುವಂತಹ ಆಲೂಗಡ್ಡೆಗೆ ಅಂಗಮಾರಿ ರೋಗವು ತಗಲಿ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಅದಕ್ಕೆ ಏನಾದರೂ ಪರಿಹಾರವನ್ನು ಕೊಡಬೇಕು ಎನ್ನುವ ಮನವಿಯನ್ನು ಮಾಡಿದ್ದರು ಕೂಡ ಈ ಮುಂಗಡಪತ್ರದಲ್ಲಿ ಂಯಾವುದನ್ನು ಪ್ರಸ್ತಾಪ ಮಾಡಿರುವುದಿಲ್ಲ. ಅದರ ಜೊತೆಗೆ ಅನೇಕ ವಿಚಾರಗಳಲ್ಲಿ ನಮ್ಮ ಜಿಲ್ಲೆಯನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಆಲೂಗಡ್ಡೆಗೆ ಸಂಶೋಧನಾ ಕೇಂದ್ರವನ್ನು ಮಾಡುವುದಕ್ಕೆ ಮತ್ತು ಬಿತ್ತನೆ ಬೀಜವನ್ನು ಬೆಳೆಯವುದಕ್ಕೆ ಭೂಮಿಯನ್ನು ಗುರುತಿಸಿದ್ದರು ಕೂಡ ಅದನ್ನು ಮಾಡಿರುವುದಿಲ್ಲ. ಈ ವಿಚಾರವಾಗಿ ಕೆಳಮನೆ ಮತ್ತು ಮೇಲ್ಮನೆಯಲ್ಲಿ

ಪ್ರಸ್ತಾಪವಾಗಿದೆ. ನಮ್ಮ ಜಿಲ್ಲೆ, ಕೋಲಾರ ಜಿಲ್ಲೆ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪೂರ, ಬೆಳಗಾವಿ ಮತ್ತು ಹುಬ್ಬಳ್ಳಿಗಳಲ್ಲಿ ಆಲೂಗಡ್ಡೆಯನ್ನು ಬೆಳೆಯಲಾಗುತ್ತದೆ. ಇದಕ್ಕೆ ಏನಾದರೂ ಕಷ್ಟಬಂದಾಗ ಸಹಾಯ ಮಾಡಲು ಆವರ್ತ ನಿಧಿಯನ್ನು ಇಡಿ ಎಂದು ಹೇಳಿದರೂ ಅದನ್ನು ಈ ಮುಂಗಡಪತ್ರದಲ್ಲಿ ಪ್ರಸ್ತಾಪ ಮಾಡಿರುವುದಿಲ್ಲ. ಈಗಲೂ ಅವಕಾಶವಿದ್ದರೆ ಅದಕ್ಕೆ ಒಂದು ಆವರ್ತ ನಿಧಿಯನ್ನು ಸ್ಥಾಪನೆ ಮಾಡಿ ಎಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಈ ಸಂಶೋಧನೆ ಕೇಂದ್ರವನ್ನು ಏಕೆ ಮಾಡಬೇಕು ಎಂದರೆ, ಬಿತ್ತನೆ ಬೆಳೆಯಲು 300 ಎಕರೆ ಜಮೀನನ್ನು ಗುರುತಿಸಿದ್ದಾರೆ. ಪಂಜಾಬ್‌ನಲ್ಲಿ ತಿನ್ನಲು ಬೆಳೆಯುವಂತಹ ಆಲೂಗಡ್ಡೆ ತಂದು ಇಲ್ಲಿ ಕೊಡುತ್ತಿದ್ದಾರೆ. ಅದು ಅಂಗಮಾರಿ ರೋಗಕ್ಕೆ ತುತ್ತಾಗಿದೆ. ಇದರ ಜೊತೆಗೆ ವಿಮೆಯನ್ನು ಕೊಡಬೇಕು ಎನ್ನುವ ಪ್ರಸ್ತಾಪವನ್ನು ಅನೇಕ ಸಾರಿ ಮಾಡಿದರು ಕೂಡ, ವಿಮೆಯನ್ನು ಕಟ್ಟಿಸಿಕೊಳ್ಳುತ್ತಾರೆ, ಪ್ರೀಮಿಯಮ್‌ನ್ನು ಸರಿಯಾಗಿ ಕೊಡುವಂತಹ ಕೆಲಸವು ಆಗುತ್ತಿಲ್ಲ. ಇಲ್ಲಿ ಸದನದಲ್ಲಿ ಈಗ ಮಾನ್ಯ ಬೆಳ್ಳುಬ್ಬಿಯವರು ಒಬ್ಬರೆ ಕುಳಿತ್ತಿದ್ದಾರೆ ನಾನು ಹೇಳುವುದನ್ನು ಯಾರು ಕೇಳಿಸಿಕೊಳ್ಳುತ್ತಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

**ಉಪಸಭಾಪತಿಯವರು:–** ತಾವು ಮಾತನಾಡಿ, ಸಭಾನಾಯಕರು ಬರುತ್ತಾರೆ.

**ಶ್ರೀ ಪಟೇಲ್ ಶಿವರಾಂ:– ಮಾನ್ಯ ಸಭಾಪತಿಗಳೆ,** ಇಷ್ಟು ಜನ ಮಂತ್ರಿಗಳಿದ್ದಾರೆ, ಇದರಲ್ಲಿ ಅರ್ಧ ಜನ ಮಂತ್ರಿಗಳಾದರು ಇರಬೇಕಲ್ಲವೇ? ಯಾರಿಗೆ ಹೇಳಬೇಕು ನಾವು. ಕೃಷಿ ಕ್ಷೇತ್ರದಲ್ಲಿ ಹೂಡಿಕೆ ಮಾಡಲು 64 ಒಡಂಬಡಿಕೆಗಳನ್ನು ಮಾಡಿಕೊಳ್ಳಲು ಸಹಿ ಹಾಕಿದ್ದೇವೆ. ಕೃಷಿ ಕ್ಷೇತ್ರವನ್ನು ಕೈಗಾರಿಕಾ ಕ್ಷೇತ್ರವನ್ನಾಗಿ ಪ್ರಾರಂಭಿಸಲು ಹೋಬಳಿ ಮಟ್ಟದಲ್ಲಿ ಈ ಕೆಲಸವನ್ನು ಮಾಡುತ್ತೇವೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿತ್ತು ಆದರೆ ಯಾವುದು ಕೂಡ ಪ್ರಸ್ತಾಪವಾಗಿರುವುದಿಲ್ಲ. ಹಾಸನದಲ್ಲಿ ಪಶುವೈದ್ಯಕೀಯ ಕಾಲೇಜನ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಕಟ್ಟಡ ಇಲ್ಲ, ಸಿಬ್ಬಂದಿ ಸರಿಯಾಗಿ

ಇಲ್ಲ, ಯಾವುದೇ ವ್ಯವಸ್ಥೆ ಇಲ್ಲದೆ ಇವತ್ತು ಆ ಕಾಲೇಜು ಹೀನಸ್ಥಿತಿಗೆ ತಲುಪಿದೆ. ಅದರ ಕಡೆಗೆ ಗಮನ ಹರಿಸಬೇಕು. ಅದಕ್ಕೆ ನಾನು ಆಗಲೆ ಬೆಳ್ಳುಬ್ಬಿಯವರು ಒಬ್ಬರೆ ಎಲ್ಲವನ್ನು ಕೇಳಿಸಿಕೊಳ್ಳುತ್ತಾರೆಯೇ ಎಂದು ಕೇಳಿದ್ದು. ಈಗ ಬೆಳಮಗಿಯವರು ಇದ್ದರು ಅವರು ಎಲ್ಲೊ ಹೋಗಿದ್ದಾರೆ. 150 ತಾಲ್ಲೂಕುಗಳಲ್ಲಿ ಇವತ್ತು ಬರಗಾಲವನ್ನು ಕಾಣುತ್ತಿದ್ದೇವೆ. ಹಾಸನ ಜಿಲ್ಲೆ ಸಂಪೂರ್ಣವಾಗಿ ಬರಗಾಲಕ್ಕೆ ತುತ್ತಾಗಿರುವಂತಹ ಜಿಲ್ಲೆ. ಕುಡಿಯುವ ನೀರಿಗೆ ಹಾಹಾಕಾರವಾಗಿದೆ. ನಮ್ಮಲ್ಲಿ ಎಗಚಿ, ಹೇಮಾವತಿ ಮತ್ತು ಹಾರಂಗಿ ಜಲಾಶಯಗಳ ಹತ್ತಿರದಲ್ಲಿ ಬರುವಂತಹ ಪ್ರದೇಶಗಳಿಗೆ, ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಅವಕಾಶವಿದೆ. ಅದು ಕೂಡ ಬಜೆಟ್‌ನಲ್ಲಿ ಪ್ರಸ್ತಾಪವಾಗಿರುವುದಿಲ್ಲ. ಎತ್ತಿನ ಹೊಳೆ ಯೋಜನೆಯನ್ನು ಈ ಕಡೆಗೆ ತರುತ್ತೇವೆ ಎಂದು ಹೇಳಿದ್ದಾರೆ. ಅದು ನಮ್ಮ ಜಿಲ್ಲೆಯ ಮೇಲೆ ಬರುತ್ತದೆ. ಅಲ್ಲಿ ಇರುವಂತಹ ಅಕ್ಕ-ಪಕ್ಕದ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಯೋಜನೆಯನ್ನು ತೆಗೆದುಕೊಂಡು ಬನ್ನಿ ನಮ್ಮದೇನು ತಕರಾರು ಇಲ್ಲ. ನಮಗೆ ಕುಡಿಯುವ ನೀರನ್ನು ಕೊಡಿ ಅಷ್ಟೆ. ನಮ್ಮ ಶಾಣಪ್ಪನವರು ನಮ್ಮ ಸರ್ಕಾರವನ್ನು ಹೊಗಳಬೇಕು ಎಂದು ಹೇಳಿದರು. ಇಂತಹ ಭೀಕರ ಬರಗಾಲದಲ್ಲಿ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವಂತಹ ಮುಂಗಡಪತ್ರ ಇದು ಆಗಬೇಕಾಗಿತ್ತು. ಆಗ ನಾವು ಹೊಗಳಬಹುದಾಗಿತ್ತು. ಇಂತಹ ಬರಗಾಲದಲ್ಲಿಯು ಸುಮಾರು 100-130 ಮಠ-ಮಾನ್ಯಗಳಿಗೆ ಅನುದಾನವನ್ನು ಕೊಟ್ಟಿರುವುದನ್ನು ಕೇಳಿ ಬಹಳ ನೋವಾಗುತ್ತದೆ. ಕೊಡಬಾರದು ಎಂದು ನಾನು ಹೇಳುತ್ತಿಲ್ಲ. ರಾಜ್ಯ ಇಂತಹ ಬರಗಾಲದ ಪರಿಸ್ಥಿತಿಯಲ್ಲಿರುವಾಗ ಅದರ ಕಡೆಗೆ ಗಮನವನ್ನು ಹರಿಸಿದರೆ ಚೆನ್ನಾಗಿತ್ತು ಎನ್ನುವುದು ನನ್ನ ಮನವಿ. ಆಯವ್ಯಯವನ್ನು ಮಂಡನೆ ಮಾಡುವಾಗ ಯೋಜನೆ ಮತ್ತು ಯೋಜನೇತರ ವೆಚ್ಚ ಎಂದು ಎರಡು ಇದೆ. ಅದು ಯಾವ ಅಭಿವೃದ್ಧಿಗೂ ಬರುವಂತಹ ಹಣ ಅಲ್ಲ. ಯೋಜನೇತರ ವೆಚ್ಚ ಸುಮಾರು 45,000 ಕೋಟಿ ರೂಗಳಾಗಿದೆ. ಈ ಹಣದಿಂದಲೂ ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಾಧ್ಯವಾಗುವುದಿಲ್ಲ ಎನ್ನುವ ವಿಚಾರವನ್ನು ಹೇಳಬಯಸುತ್ತೇನೆ.

ನಾಲಾ ಪ್ರದೇಶದಲ್ಲಿ ಬೆಳೆ ಹಾನಿಯಾಗಿರುವುದಕ್ಕೆ ಪರಿಹಾರವನ್ನು ನೀಡುತ್ತೇನೆ ಎಂದು ಮೊನ್ನೆ ನಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ನಮ್ಮ ಹೇಮಾವತಿ ಮೇಲ್ದಂಡೆ ಯೋಜನೆ ಯಾವುದೇ ರೀತಿಯ ನಾಲಾ ಪ್ರದೇಶದಲ್ಲಿ ಬರುವುದಿಲ್ಲ. ಅದು ಅಪ್ಪರ್ ಚಾನಲ್‌ನಲ್ಲಿ ಹೋಗುವಂತಹ ನೀರು. ಅಲ್ಲಿ ಅಕ್ಟೋಬರ್ ಕೊನೆಯಲ್ಲಿ ನೀರು ನಿಂತು ಹೋಗಿ ಎಲ್ಲಾ ಬೆಳೆಗಳು ನಾಶವಾಗಿವೆ. ಆ ಬೆಳಗಳಿಗೆ ಪರಿಹಾರವನ್ನು ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಏಕೆಂದರೆ ಬೆಳೆ ಹಾನಿಗೆ ಪರಿಹಾರವನ್ನು ಸರ್ಕಾರ ಘೋಷಣೆ ಮಾಡಿದೆ. ಈ ಬೆಳೆಗೂ ಪರಿಹಾರವನ್ನು ಕೊಡಬೇಕು ಎಂದು ಸರ್ಕಾರಕ್ಕೆ ಹೇಳಬಯಸುತ್ತೇನೆ. ಕೊನೆಯಲ್ಲಿ, ಅರಕಲಗೂಡು, ಸಂಕಲೇಶಪುರ, ಆಲೂರು ತಾಲ್ಲೂಕಿನಲ್ಲಿ ಆನೆ ಹಾವಳಿ ಹೆಚ್ಚಾಗಿ ಬೆಳೆ ಹಾನಿಯಾಗಿದೆ. ಮನುಷ್ಯರ ಸಾವು ಆಗಿದೆ. ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಅನೇಕ ಸಾರಿ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಶ್ರೀಮತಿ ಮೋಟಮ್ಮನವರು ಕೂಡ ಆ ವಿಚಾರವನ್ನು ಪ್ರಸ್ತಾಪ ಮಾಡಿದರು. ಆದರೆ ಈ ಯಾವುದೇ ವಿಚಾರವನ್ನು ತಾವು ಮುಂಡಗಪತ್ರದಲ್ಲಿ ಪ್ರಸ್ತಾಪ ಮಾಡಿರುವುದಿಲ್ಲ. ಈಗ ಇಲ್ಲಿ ಅರಣ್ಯ ಸಚಿವರಿದ್ದರು ಅವರು ಎಲ್ಲಿ ಹೋದರೊ ಗೊತ್ತಾಗಲಿಲ್ಲ. ಏಕೆಂದರೆ ಅವರು ಪರಿಹಾರ ಕಂಡುಹಿಡಿಯುತ್ತೇವೆ ಎಂದು ಬಹಳ ಸಾರಿ ಒಪ್ಪಿಕೊಂಡಿದ್ದಾರೆ. 2 ತಿಂಗಳ ಹಿಂದೆ ಜಿಲ್ಲಾಧಿಕಾರಿಗಳ ಒಂದು ಸಭೆಯನ್ನು ಮಾಡಿ, ಎಲ್ಲಾ ಪಕ್ಷದ ಮುಖಂಡರುಗಳನ್ನು ಕರೆದು, ಆನೆ ಕಾರಿಡಾರ್ ಮಾಡುವಂತಹ ಕೆಲಸವನ್ನು ಮಾಡಬೇಕು, ಅಲ್ಲಿ ಪಶ್ಚಿಮ್ ದಿಕ್ಕಿನಲ್ಲಿ ಅನೇಕ ಪ್ರದೇಶಗಳು ಬರುತ್ತವೆ. ಅಲ್ಲಿ ಕಾಡು ಇದೆ. 2012 ಎಕರೆ ಮಾತ್ರ ರೈತರ ಭೂಮಿ ಇದೆ. 20,000 ಎಕರೆಯಷ್ಟು ಸರ್ಕಾರಿ ಭೂಮಿ ಸಿಗುತ್ತದೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದರು. ಆದರೆ ಅದು ಸರ್ಕಾರದ ಗಮನಕ್ಕೆ ಬಂತೊ ಇಲ್ಲವೊ ಗೊತ್ತಾಗಲಿಲ್ಲ. ಇವತ್ತಿಗೂ ಕೂಡ ಆನೆಗಳ ಹಾವಳಿಯನ್ನು ತಪ್ಪಿಸಲು ಸಾಧ್ಯವಾಗಿರುವುದಿಲ್ಲ. 1996–97ನೇ ಸಾಲಿನಲ್ಲಿ ಬೆಂಗಳೂರಿನಿಂದ ಹಾಸನಕ್ಕೆ ರೈಲು ಸಂಚಾರವನ್ನು ಆರಂಭಿಸಲು ರೈಲು ಹಳಿ ಹಾಕಲು ಪ್ರಸ್ತಾಪವನ್ನು ಮಾಡಲಾಗಿತ್ತು. ಆದರೆ ಸರ್ಕಾರದ ಮುತುವರ್ಜಿ ಇಲ್ಲದೆ ಇದ್ದ

ಕಾರಣ ಆ ಕೆಲಸ ಆಗಿರುವುದಿಲ್ಲ. ಮಂಗಳೂರಿನಿಂದ ಹಾಸನವರೆಗೆ ರೈಲು ಮಾರ್ಗಯಾಗಿದೆ. ಹಾಸನದಿಂದ ಶ್ರವಣಬೆಳಗೊಳಕ್ಕೆ ಆಗಿದೆ. ಅಲ್ಲಿಂದ ಮುಂದಕ್ಕೆ 100–110 ಕಿ.ಮೀ ರೈಲು ಮಾರ್ಗವಾದರೆ ಅನುಕೂಲವಾಗುತ್ತದೆ. ರಾತ್ರಿ ಹೊತ್ತು ಓಡಾಡುವ ಬಸ್ಸುಗಳ ಪರಿಸ್ಥಿತಿಯನ್ನು ತಾವು ನೋಡಿದರೆ, ಆಗುವಂತಹ ಅಪಘಾತವನ್ನು ನೋಡಿದರೆ ಬೆಂಗಳೂರಿನಿಂದ ಮಂಗಳೂರಿಗೆ ರೈಲಿನ ಅವಶ್ಯಕತೆ ಎಷ್ಟು ಇದೆ ಎನ್ನುವುದು ಗೊತ್ತಾಗುತ್ತದೆ. ಇದು ಕೇಂದ್ರ ಸರ್ಕಾರದ ವಿಚಾರವಿರಬಹುದು, ಆದರೆ ರಾಜ್ಯ ಸರ್ಕಾರ ಆಸಕ್ತಿಯನ್ನು ವಹಿಸುವಂತಹ ಕೆಲಸವನ್ನು ಮಾಡುವುದು ಬಹಳ ಮುಖ್ಯ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಅನೇಕ ಹೊಸ ತಾಲ್ಲೂಕುಗಳನ್ನು ಪ್ರಕಟಣೆ ಮಾಡಿದ್ದು, ಅದರಲ್ಲಿ ಪ್ರಾದೇಶಿಕ ಅಸಮತೋಲವನ್ನು ನೋಡುತ್ತಿದ್ದೇವೆ. ಚಾಮರಾಜನಗರ, ಮಂಗಳೂರು ಮತ್ತು ಉಡುಪಿಯನ್ನು ಬಿಟ್ಟರೆ ಒಂದು ಭಾಗಕ್ಕೆ ಮಾತ್ರ ಹೊಸ ತಾಲ್ಲೂಕುಗಳಾಗಿರುವುದನ್ನು ನೋಡುತ್ತಿದ್ದೇವೆ. ಉದಾಹರಣೆಗೆ ಹಾಸನ ಜಿಲ್ಲಾ ಕೇಂದ್ರವಾಗಿದೆ. ಶಾಸಕರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮೂರು ಹೋಬಳಿಗಳನ್ನು ಬಿಟ್ಟು ಹೊರಗಡೆ ಇವೆ. ದುದ್ದ ಹೋಬಳಿಯ ಒಂದು ಕೇಂದ್ರ ಸ್ಥಾನವನ್ನು ಮಾಡಿ, ಹೊರಗೆ ಹೋಗಿರುವ ಶಾಂತಿಗ್ರಾಮ ಮತ್ತು ಗಂಡಸಿಯನ್ನು ದುದ್ದ ಹೋಬಳಿಗೆ ಸೇರಿಸಿ, ಅದು ಸಾಲದಿದ್ದರೆ ಚನ್ನರಾಯಪಟ್ಟಣ ತಾಲ್ಲೂಕಿನಿಂದ ಹೊರಗಿರುವ ದಂಡೇನಳ್ಳಿ ಹೋಬಳಿಯನ್ನು ಸೇರಿಸಬೇಕು.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ಸಮಯ ಮುಗಿಯುತ್ತಿದೆ.

**ಶ್ರೀ ಪಟೇಲ್ ಶಿವರಾಂ:–** ನಾವು ಹೊಸದಾಗಿ ಮಾತನಾಡುವಾಗ ತಾವು ಅಡ್ಡ ಹಾಕುತ್ತಿದ್ದೀರಿ.

**ಉಪ ಸಬಾಪತಿಯವರು:–** ಅಡ್ಡ ಹಾಕುತ್ತಿಲ್ಲ. ಎಲ್ಲಾ ಮಾನ್ಯ ಸದಸ್ಯರಿಗೂ ಅವಕಾಶ ಕೊಡಬೇಕಲ್ಲವೇ?

**ಶ್ರೀ ಪಟೇಲ್ ಶಿವರಾಂ:-** ಅವರು ಮಾತನಾಡಲಿ, ಬೇಡ ಎನ್ನುವುದಿಲ್ಲ. ಒಂದು ವಿಮಾನ ನಿಲ್ದಾಣಕ್ಕೆ ಗುದ್ದಲಿ ಪೂಜೆ ಆಗಿ ಎಷ್ಟು ವರ್ಷಗಳು ಕಳೆದಿವೆ. ಅದಕ್ಕೆ ಸರ್ಕಾರವು ಯಾವುದೇ ಮುತುರ್ವಜಿ ವಹಿಸಲ್ಲ. ರೈತರಿಗೆ 5–10 ಸಾವಿರ ರೂಪಾಯಿಗಳನ್ನು ಕೊಟ್ಟು ಜಮೀನು ತೆಗೆದುಕೊಂಡು, ಅಲ್ಲಿ ಏನೂ ಕಾರ್ಯಕ್ರಮ ಆಗದಿದ್ದರೆ ರೈತರಿಗಾದರೂ ಜಮೀನನ್ನು ವಾಪಸ್ಸು ಕೊಡಲಿ. ನಾನು ಮಾತನಾಡುವ ವಿಚಾರಗಳು ಅನೇಕ ಇದ್ದರೂ ಮಾನ್ಯ ಉಪ ಸಭಾಪತಿಯವರು ತಡ ಹಾಕುತ್ತಿದ್ದಾರೆ. ನಾನು ಎಲ್ಲರ ಪರವಾಗಿ ಮಾತನಾಡುತ್ತಿದ್ದೇನೆ.

**ಶ್ರೀ ಮುರುಗೇಶ್ ನಿರಾಣಿ:-** ಹಾಸನ ಭೂಮಿ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದು, ಅದರ ಬಗ್ಗೆ ಕ್ಲಾರಿಫೈ ಮಾಡಲು ಒಂದೆರಡು ನಿಮಿಷಗಳ ಅವಕಾಶ ಕೊಟ್ಟರೆ ಮಾತನಾಡುತ್ತೇನೆ. ವಿಮಾನ ನಿಲ್ದಾಣ ಮತ್ತು ಐಟಿಐ ಗೆ ರೈತರ ಭೂಮಿ ವಶಪಡಿಸಿಕೊಂಡ ಬಗ್ಗೆ ಕ್ಲಾರಿಫೈ ಮಾಡುತ್ತೇನೆ.

**ಉಪ ಸಭಾಪತಿಯವರು:-** ಉತ್ತರ ಕೊಡುವಾಗ ಹೇಳಿ.

**ಶ್ರೀ ಪಟೇಲ್ ಶಿವರಾಂ:-** ಒಂದು ಮನವಿ ಏನೆಂದರೆ ಹಾಸನ ನಗರವು ಈಗಾಗಲೇ ಜನಸಂಖ್ಯೆಯಲ್ಲಿ ನಗರ ಸಭೆ ವ್ಯಾಪ್ತಿಯಲ್ಲಿ ಮೀರಿದ್ದು, ಅದನ್ನು ನಗರ ಪಾಲಿಕೆ ಮಾಡಿಕೊಡಬೇಕೆಂಬ ಮನವಿ ಇದ್ದು, ಅದನ್ನು ಮಾಡಿಕೊಡುತ್ತಾರೆ ಎಂದು ಸರ್ಕಾರದ ಗಮನಕ್ಕೆ ತರುತ್ತೇನೆ. ಆದರೆ ಇಲ್ಲಿ ಸರ್ಕಾರವೇ ಇಲ್ಲ, ಯಾರ ಗಮನಕ್ಕೆ ತರಬೇಕೋ ಗೊತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಎಷ್ಟು ಸಚಿವರು ಇರಬೇಕು, ಅದರಲ್ಲಿ ಅರ್ಧವಾದರೂ ಸದನದಲ್ಲಿ ಇರಬೇಡವೇ? ಮಾನ್ಯ ಸಭಾಪತಿಯವರೇ, ಇಲ್ಲಿ ಯಾರು ಕೇಳುವವರು? ಹಾಸನದಿಂದ ಬೇಲೂರು ರಸ್ತೆಗೆ ಡೈರಿ ಸರ್ಕಲ್‌ನಿಂದ ವರ್ತುಲ ರಸ್ತೆ ಮಾಡಬೇಕೆಂದು ಬಹಳ ಸಲ ಪ್ರಸ್ತಾಪವಾಗಿದೆ. ಅದಕ್ಕೆ ಕಾರಣವೇನೆಂದರೆ ಹಾಸನ ನಗರದಲ್ಲಿ ಹೋಗುವ ವಾಹನಗಳ ದಟ್ಟಣೆ ಮತ್ತು ಚಿಕ್ಕಮಗಳೂರು, ಶೃಂಗೇರಿ ಹಾಗೂ ಹೊರನಾಡು ಪ್ರವಾಸಿ ತಾಣಗಳಿಗೆ ಹೋಗುವ ಪ್ರವಾಸಿಗರಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ ಈ

ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಅದರ ಜೊತೆಗೆ ಹಳೆಬೀಡು ಮತ್ತು ಬೇಲೂರಿಗೂ ಹೋಗುವ ಪ್ರವಾಸಿಗರಿಗೂ ಅನುಕೂಲವಾಗುತ್ತದೆ. ಇನ್ನು ನಾಲ್ಕು ಕಿಲೋಮೀಟರ್‌ಗಳ ರಸ್ತೆಯನ್ನು ಪೂರ್ಣ ಮಾಡದೇ 10 ವರ್ಷಗಳಿಂದಲೂ ಹಾಗೆ ಬಿಟ್ಟಿದ್ದಾರೆ ಎನ್ನುವ ವಿಚಾರ ಗೊತ್ತಿಲ್ಲ. ಈ ವಿಚಾರವನ್ನು ಸದನದಲ್ಲಿ ಹೇಳಿದ್ದೇನೆ. ನಮ್ಮ ಜಿಲ್ಲೆಯನ್ನು ಮುಂಗಡ ಪತ್ರದಲ್ಲಿ ತಾತ್ಸಾರ ಮಾಡಿದ್ದಾರೆ.

**ಉಪ ಸಭಾಪತಿಯವರು:–** ತಾವು ಮುಕ್ತಾಯ ಮಾಡಿ. ಎಲ್ಲರೂ ಮಾತನಾಡಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಸದನವನ್ನು ಎಲ್ಲರೂ ಮಾತನಾಡುವವರೆಗೂ ನಡೆಸೋಣ, ನಾವು ಎಲ್ಲಿ ಹೋಗಬೇಕಾಗಿದೆ? ಎಲ್ಲರೂ ಮಾತನಾಡಲಿ, ಅಲ್ಲಿಯವರೆಗೂ ಕುಳಿತುಕೊಳ್ಳುತ್ತೇವೆ.

**ಉಪ ಸಭಾಪತಿಯವರು:–** ರಾತ್ರಿ 12 ಗಂಟೆಯವರೆಗೂ ನಡೆಸೋಣವೇ?

**ಶ್ರೀ ದಯಾನಂದ:–** ಮಾತನಾಡಿರುವರಿಗೆ ಸ್ವಲ್ಪವಾದರೂ ತೃಪ್ತಿಯಾಗಲಿ.

**ಶ್ರೀ ಪಟೇಲ್ ಶಿವರಾಂ:–** ಒಂದು ವಿಚಾರ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಬರಗಾಲದ ಪರಿಸ್ಥಿತಿಯಲ್ಲಿ ಹಸುಗಳನ್ನು ಸಾಕಿರುವ ರೈತರಿಗೆ ಬಹಳ ತೊಂದರೆಯಾಗಿದೆ. ಪಶು ಆಹಾರವನ್ನು ಕೊಳ್ಳುವ ರೈತರಿಗೂ ಬಹಳ ಕಷ್ಟವಾಗಿದ್ದು, ಇಲಾಖೆಯು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಟ್ಟಿದ್ದು, ಪಶು ಆಹಾರಕ್ಕೆ 4 ರೂಪಾಯಿಗಳ ಸಬ್ಸಿಡಿ ಕೊಡಬೇಕೆಂದು ಹೇಳಿದೆ. ರೈತರ ಪರ ವಾದ ಇದನ್ನು ಪರಿಗಣಿಸಿ ಮಾಡಿಕೊಡಬೇಕು. ಇದು ಪಕ್ಷದ ಪರವಾಗಿಲ್ಲ. ಇದನ್ನು ಮಾಡುತ್ತಾರೆ ಎಂದು ನಂಬಿದ್ದೇನೆ. ನಾನು ಹೇಳಿದ ವಿಚಾರಗಳನ್ನು ಗಮನಿಸಿದ್ದಾರೆ ಎಂದು ಭಾವಿಸಿದ್ದೇನೆ. ಬರಗಾಲದಲ್ಲಿ ಕುಡಿಯುವ ನೀರಿಗೆ ಹೆಚ್ಚು ಆದ್ಯತೆಯನ್ನು

ಕೊಡಬೇಕೆಂದು ಮನವಿ ಮಾಡಿ, ಸಮಯ ಇಲ್ಲವೆಂದು ಹೇಳಿರುವುದರಿಂದ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ, ನನನ್ನು 10 ನಿಮಿಷಗಳಿಗೆ ಮುಕ್ತಾಯ ಮಾಡಿ ಎಂದು ಹೇಳಬಾರದೆಂದು ವಿನಂತಿಸುತ್ತೇನೆ. ತಾವು ನಗುನಗುತ್ತಾ ಇದ್ದೀರಿ. ಹಾಗೆ ನನಗೆ ಮಾತನಾಡಲು ಅವಕಾಶ ಕೊಡಿ. ನಮ್ಮ ಪಕ್ಷಕ್ಕೆ ಅಲಾಟ್ ಮಾಡಿರುವಂತೆ ಹತ್ತದಿನೈದು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾನು ಎಲ್ಲಾ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಬೆಂಗಳೂರು ನಗರ ಜಿಲ್ಲೆಗೆ ಶೇಕಡ 25ರಿಂದ ಶೇಕಡ 30ರಷ್ಟು ಮನೆ ಬಾಡಿಗೆಯನ್ನು ಜಾಸ್ತಿ ಮಾಡಿದ್ದು, ಇದನ್ನು ಯಾರಿಗೆ ಕೊಟ್ಟಿದ್ದಾರೆ ಎಂದು ನನಗೆ ಅರ್ಥವಾಗಿಲ್ಲ. 1980–99ರಲ್ಲಿ ಬೆಂಗಳೂರು ನಗರಪಾಲಿಕೆ ವ್ಯಾಪ್ತಿಯು 225 ಚದುರ ಕಿಲೋಮೀಟರ್ ಇದ್ದು, ಬೆಂಗಳೂರು ನಗರ ಸಮುಚ್ಛಯ ವ್ಯಾಪ್ತಿ ಅಂದರೆ ನಗರ ಜಿಲ್ಲೆಯ ವ್ಯಾಪ್ತಿ ಒಟ್ಟು 1089 ಕಿಲೋಮೀಟರ್‌ಗಳ ವ್ಯಾಪ್ತಿಗೆ ನಗರ ಪ್ರದೇಶ ಎಂದು ಫಿಕ್ಸ್ ಮಾಡಿದ್ದರು. ನಂತರ ಬಿಬಿಎಂಪಿ ಆಗಿ 2009ರಲ್ಲಿ ಗುರುತಿಸಿದ್ದ 1089 ಕಿಲೋಮೀಟರ್‌ಗಳನ್ನು 700 ಚದುರ ಕಿಲೋಮೀಟರ್‌ಗಳಿಗೆ ಇಳಿಸಿದರು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಡಿ 700 ಚದುರ ಕಿಲೋಮೀಟರ್‌ಗಳಿಗೆ ಸೀಮಿತ ಮಾಡಿದರು. ಇದರಿಂದ 389 ಚದುರ ಕಿಲೋಮೀಟರ್ ವ್ಯಾಪ್ತಿ ಬಿಟ್ಟಿದ್ದು, ಆ ಸ್ಥಳಗಳಿಗೆ ಸಂಬಂಧಪಟ್ಟಂತೆ ಬೆಂಗಳೂರು ಉತ್ತರ ಜಿಲ್ಲೆಗೆ 135 ಶಾಲೆಗಳು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗೆ 191 ಶಾಲೆಗಳು ಒಳಗೊಳ್ಳುತ್ತವೆ. ಇವೆಲ್ಲವೂ ಬಿಬಿಎಂಪಿ ವ್ಯಾಪ್ತಿಯಿಂದ ಹೊರಗಡೆ ಉಳಿದುಕೊಂಡಿವೆ. ಅವರ್ಯಾರಿಗೂ ಹೆಚ್‌ಆರ್‌ಎ ಬರುತ್ತಿಲ್ಲ. ಇವರು ಮೊದಲು 30 ವರ್ಷಗಳಿಂದ ತೆಗೆದುಕೊಂಡಿದ್ದಾರೆ. ಇದು ಆರ್ಥಿಕ ಇಲಾಖೆಯವರಿಗೆ ತಿಳಿಯಬೇಡವೇ? ನಂತರ ಅವರೆಲ್ಲರೂ ಕೋರ್ಟ್‌ಗೆ ಹೋದಾಗ ಕೆಎಟಿನಲ್ಲಿ ಮೊದಲು ಇವರು

ಹೆಚ್‌ಆರ್‌ಎ ಪಡೆಯುತ್ತಿದ್ದುದರಿಂದ ಕೊಡಬೇಕೆಂದು ಆದೇಶ ಆಯಿತು. ನಂತರ ಹೈಕೋರ್ಟ್‌ಗೆ ಹೋಗಿ ಅಲ್ಲಿಯೂ ಆದೇಶ ಆಯಿತು. ಇವೆಲ್ಲವನ್ನು ಧಿಕ್ಕರಿಸಿ ಈ ಆದೇಶ ಮಾಡಿದ್ದಾರೆ. ಅಧಿಕಾರಿಗಳು ಮಂತ್ರಿಗಳಿಗೆ ಬೆಲೆ ಕೊಡುತ್ತಾರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರು 3 ಸಾರಿ ಎಲ್ಲರಿಗೂ ಹೆಚ್‌ಆರ್‌ಎ ಮುಂದುವರೆಸಿ ಎಂದು ಪತ್ರ ಬರೆದರೂ ಮಾಡಿಲ್ಲ. ಮುಖ್ಯ ಕಾರ್ಯದರ್ಶಿಯವರು ದಿನಾಂಕ 27/11/2011ರಲ್ಲಿ ಕೆಎಟಿ ಹಾಗೂ ಉಚ್ಚ ನ್ಯಾಯಾಲಯಗಳು ಆದೇಶ ಮಾಡಿರುವುದನ್ನು ಉಲ್ಲೇಖಿಸಿ, ಅದರ ಪ್ರಕಾರ ಅವರಿಗೆ ಸರಿಯಾದ ನ್ಯಾಯವನ್ನು ಒದಗಿಸಿ ಎಂದು ಪತ್ರ ಬರೆದಿದ್ದಾರೆ. ಹಿಂದೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವಂತೆ ಹೆಚ್‌ಆರ್‌ಎ, ಸಿಸಿಎ ಗಳನ್ನು ಮುಂದುವರೆಸಬೇಕು, ಈ ಕೆಲಸವನ್ನು ಮಾಡಿ ಎಂದು ಮುಖ್ಯ ಕಾರ್ಯದರ್ಶಿಯವರು ಪತ್ರವನ್ನು ಬರೆದಿದ್ದಾರೆ.

( 5–30 ಘಂಟೆ)

ಸನ್ಮಾನ್ಯ ಸಭಾಪತಿಯವರೇ, ಇದಾದ ನಂತರ ಮಾನ್ಯ ಸಚಿವರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಒಂದು ಮೀಟಿಂಗ್ ಮಾಡಿ ಪತ್ರ ಬರೆಯುತ್ತಾರೆ. ಇದಾದ ನಂತರ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮತ್ತು ಅರವಿಂದ ಲಿಂಬಾವಳಿಯವರು ಆರ್ಥಿಕ ಇಲಾಖೆಯವರ ಜೊತೆಗೆ ಸಭೆ ನಡೆಸಿದಾಗಲೂ ಸಹ ಆರ್ಥಿಕ ಇಲಾಖೆಯವರು ಹೆಚ್.ಆರ್.ಎ. ಕೊಡುವುದಕ್ಕೆ ಒಪ್ಪಿಕೊಳ್ಳುತ್ತಾರೆ. ಆದರೆ, ಅದು ಅನುಷ್ಠಾನಗೊಳ್ಳುವುದಿಲ್ಲ. ಕೆಲವರಿಗೆ ಆರು ತಿಂಗಳಿಗೆ ಹೆಚ್.ಆರ್.ಎ. ಕೊಡುವುದನ್ನು ನಿಲ್ಲಿಸಿದರು. ಕೆಲವರಿಗೆ ಎಂಟು ತಿಂಗಳಿಗೆ ನಿಲ್ಲಿಸಿದರು. ಈಗ ಪೂರ್ತಿಯಾಗಿ ಹೆಚ್.ಆರ್.ಎ. ಕೊಡುವುದನ್ನೇ ನಿಲ್ಲಿಸಬೇಕೆನ್ನುವ ತೀರ್ಮಾನವನ್ನು ಆರ್ಥಿಕ ಇಲಾಖೆಯವರು ತೆಗೆದುಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯದ ಭಾಷಣದಲ್ಲಿ, ‘ಬೆಂಗಳೂರು ನಗರದಲ್ಲಿ

ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರ ಮನೆ ಬಾಡಿಗೆ ಭತ್ಯೆಯನ್ನು ಶೇಕಡಾ 25 ರಿಂದ 30ಕ್ಕೆ ಹೆಚ್ಚಿಸಲಾಗಿದೆ' ಎಂದು ಹೇಳಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮೇಲೆ ನಾನು ಹೇಳಿದ ವಿವರಗಳನ್ನು ನೋಡಿದರೆ, ಈ ಸರ್ಕಾರ ಯಾರಿಗೆ ಮನೆ ಬಾಡಿಗೆ ಭತ್ಯೆಯನ್ನು ಹೆಚ್ಚಿಸಿದೆ ಯಾರಿಗೆ ಹೆಚ್ಚಿದಿಲ್ಲ, ಯಾರಿಗೆ ಕೊಡುತ್ತಿದೆ, ಯಾರಿಗೆ ಕೊಡುತ್ತಿಲ್ಲ ಎನ್ನುವುದು ತಮಗೇ ತಿಳಿಯುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರು ನಗರ ವ್ಯಾಪ್ತಿಗೆ ಬರುವುದಿಲ್ಲ ಗ್ರಾಮಪಂಚಾಯತಿ ವ್ಯಾಪ್ತಿಗೆ ಬರುತ್ತದೆ ಎಂದು ಆರ್ಥಿಕ ಇಲಾಖೆಯವರು ಹೇಳುತ್ತಿದ್ದಾರೆ. ಇವರಿಗೆ ಏನು ಹೇಳಬೇಕು ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರು ನಗರದ ವ್ಯಾಪ್ತಿಗೆ ಬರುತ್ತದೆಯೇ ಇಲ್ಲವೇ ಎನ್ನುವುದನ್ನು ತಾವೇ ಹೇಳಬೇಕಾಗಿದೆ. ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ದಿನಾಂಕ:20.08.2012ರಲ್ಲಿ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಏನು ನಡೆದಿದೆ ಎನ್ನುವುದರ ಬಗ್ಗೆ ಒಂದು ಲೇಖನ ಪ್ರಕಟವಾಗಿದೆ.

**ಶ್ರೀ ದಯಾನಂದ:–** ಸನ್ಮಾನ್ಯ ಸಭಾಪತಿಯವರೇ, ಪ್ರಸ್ತುತ ಎಲೆಕ್ಟ್ರಾನಿಕ್ ಸಿಟಿ ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ಬರುತ್ತದೆ. ಅದನ್ನು ಬಿ.ಬಿ.ಎಂ.ಪಿ. ವ್ಯಾಪ್ತಿಗೆ ತೆಗೆದುಕೊಂಡು ಬರುವುದಕ್ಕೂ ಮೊದಲೇ 300 ಕೋಟಿ . . . .

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ಅದು ಬೇರೆ ಸಮಾಚಾರ. ನಾನು ಅದೇ ವಿಚಾರವನ್ನು ಹೇಳುವುದಕ್ಕೆ ಹೊರಟಿದ್ದೇನೆ. ಎಲೆಕ್ಟ್ರಾನಿಕ್ ಸಿಟಿ ವಿಧಾನಸೌಧದಿಂದ ಕೇವಲ 25 ಕಿಲೋ ಮೀಟರ್ ದೂರದಲ್ಲಿದೆ ಮತ್ತು ರಾಷ್ಟ್ರೀಯ ಹೆದ್ದಾರಿ 7ಕ್ಕೆ ಹೊಂದಿಕೊಂಡಿದೆ. ಎಲೆಕ್ಟ್ರಾನಿಕ್ ಸಿಟಿಯು ಪ್ರಸ್ತುತ 5.2 ಕಿಲೋ ಮೀಟರ್ ವಿಸ್ತೀರ್ಣದಲ್ಲಿ ಬೃಹತ್ ಕೈಗಾರಿಕಾ ವಲಯವಾಗಿ ಬೆಳೆದು ನಿಂತಿದೆ. ಸುಮಾರು 180 ಬೃಹತ್ ಉದ್ಯಮಗಳನ್ನು ಹೊಂದಿರುವ ಎಲೆಕ್ಟ್ರಾನಿಕ್ ಸಿಟಿ 25ಕ್ಕೂ ಹೆಚ್ಚು ವಸತಿ ಸಂಕೀರ್ಣವನ್ನು ಮತ್ತು 26 ಅಂತರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ಹಾಗೂ ಮೂರು ತಾರಾ ಹೋಟೆಲ್‌ಗಳನ್ನು ಹೊಂದಿದೆ. ಇಲ್ಲಿ ಸರ್ಕಾರ ತೆರಿಗೆ ಸಂಗ್ರಹ ಮಾಡಿದರೆ

ಸುಮಾರು 500 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಬಹುದಾಗಿದೆ. ಇಷ್ಟು ಆದಾಯ ಬರುವ ಈ ಕ್ಷೇತ್ರವನ್ನು ಏತಕ್ಕಾಗಿ ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸೇರಿಸುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಪರಸ್ಪರ ಹೊಂದಾಣಿಕೆಯೇ ಇದಕ್ಕೆಲ್ಲ ಕಾರಣವಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇದ್ದರೆ ಕೇವಲ ಒಂದು ರೂಪಾಯಿ ತೆರಿಗೆ ಕಟ್ಟಬೇಕಾಗುತ್ತದೆ. ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಬಂದರೆ ನೂರು ರೂಪಾಯಿಗಳ ತೆರಿಗೆಯನ್ನು ಕಟ್ಟಬೇಕಾಗುತ್ತದೆ. ಆ ಪ್ರದೇಶ ಚೆನ್ನಾಗಿ ಬೆಳೆದಿದೆ, ರೆವಿನ್ಯೂ ಪ್ರದೇಶವಾಗಿದೆ ಇದನ್ನು ತಮ್ಮ ವ್ಯಾಪ್ತಿಗೆ ತೆಗೆದುಕೊಳ್ಳಬೇಕೆನ್ನುವ ತೀರ್ಮಾನವನ್ನು ಬಿ.ಬಿ.ಎಂ.ಪಿ.ಯವರು ಎರಡು ಬಾರಿ ಮಾಡಿದ್ದರು. ಆದರೆ, ಬಹು ದೊಡ್ಡ ಲಾಬಿ ನಡೆಸಿ, 'ಅದು ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಬರುವುದಿಲ್ಲ. ಗ್ರಾಮಪಂಚಾಯಿತಿಗೆ ಬರುತ್ತದೆ' ಎಂದು ಅದನ್ನು ರದ್ದುಪಡಿಸಿದರು.

**ಶ್ರೀ ದಯಾನಂದ:–** ಸನ್ಮಾನ್ಯ ಸಭಾಪತಿಯವರೇ, ನಾವೂ ಸಹ ಬೇಡವೆಂದು ಹೇಳಿದ್ದೆವು.

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ವೈಯಕ್ತಿಕವಾಗಿ ನಾನು ಮಾತನಾಡುತ್ತಿಲ್ಲ. ಬೆಂಗಳೂರು ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರಿನಲ್ಲಿಯೇ ಇಲ್ಲವೆಂದು ಹೇಳಿದರೆ ಇದರ ಅರ್ಥವೇನು ಎನ್ನುವುದನ್ನು ನೀವೇ ಯೋಚಿಸಬೇಕಾಗಿದೆ. ಎಲೆಕ್ಟ್ರಾನಿಕ್ ಸಿಟಿಯಲ್ಲಿ ಡಬಲ್ ಬೆಡ್‌ರೂಂ ಇರುವ ಮನೆಗೆ ಸುಮಾರು 25 ಸಾವಿರ ರೂಪಾಯಿ ಬಾಡಿಗೆ ಕೊಡಬೇಕಾಗುತ್ತದೆ. ವೈಟ್‌ಫೀಲ್ಡ್ ಸಹ ಬೆಂಗಳೂರಿಗೆ ಸೇರುವುದಿಲ್ಲವೆಂದು ಹೇಳುತ್ತಿದ್ದಾರೆ. ಯಾವ ಯಾವ ಪ್ರದೇಶಗಳು ಚೆನ್ನಾಗಿ ಬೆಳೆದಿವೆ ಅವೆಲ್ಲವನ್ನೂ ಬಿಟ್ಟುಬಿಟ್ಟಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ತಮಗೆ ಒಂದು ಭೂಪಟವನ್ನು ತೋರಿಸುತ್ತೇನೆ, ತಾವು ದಯವಿಟ್ಟು ಅದನ್ನು ಗಮನಿಸಬೇಕು.

**(ಈ ಹಂತದಲ್ಲಿ ಎಲೆಕ್ಟ್ರಾನಿಕ್ ಸಿಟಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದ ಭೂಪಟವನ್ನು ಪ್ರದರ್ಶಿಸಲಾಯಿತು.)**

ಸನ್ಮಾನ್ಯ ಸಭಾಪತಿಯವರೇ, ಎರಡು ಕಡೆಗಳಲ್ಲಿ ಮಾತ್ರ ಈ ಪ್ರದೇಶ ಬೆಳೆದಿದೆ. ಆ ಕಡೆಗೆ ಇರುವಂತಹ ಹಳ್ಳಿಗಳು ಬಿಟ್ಟು ಹೋಗಿವೆ. ಎಲೆಕ್ಟ್ರಾನಿಕ್ ಸಿಟಿ ಮಾತ್ರ ಸೇರಿಕೊಂಡಿದೆ. ಸುಮಾರು 50 ವರ್ಷಗಳಿಂದ ಹೆಚ್.ಆರ್.ಎ. ತೆಗೆದುಕೊಳ್ಳದೇ ಇರುವವರಿಗೆ ಹೆಚ್.ಆರ್.ಎ. ಕೊಡಬೇಕಾಗುತ್ತದೆ. ಹೆಚ್.ಆರ್.ಎ. ಕೊಡುವುದಕ್ಕೆ ಆರ್ಥಿಕ ಇಲಾಖೆಯವರ ಹತ್ತಿರ ಅವರು ಭಿಕ್ಷೆ ಬೇಡಬೇಕೆ? ದೇವನಹಳ್ಳಿಯನ್ನು ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿಸಲಾಗುತ್ತದೆ. ಆದರೂ ಸಹ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಲಸ ಮಾಡುವಂತಹ ಪೊಲೀಸಿನವರು ಹೆಚ್.ಆರ್.ಎ. ತೆಗೆದುಕೊಳ್ಳುತ್ತಿದ್ದಾರೆ. ಇದು ಯಾವ ನ್ಯಾಯ? ನಾನು ಈ ವಿಚಾರವನ್ನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಹಿಂದೆ ಯಾವ ರೀತಿಯಲ್ಲಿ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸರ್ಕಾರಿ ನೌಕರರಿಗೆ ಹೆಚ್.ಆರ್.ಎ. ಮತ್ತು ಸಿ.ಸಿ.ಎ.ಯನ್ನು ಕೊಡಲಾಗುತ್ತಿತ್ತೋ ಅದೇ ಕ್ರಮವನ್ನು ಈಗಲೂ ಮುಂದುವರಿಸಬೇಕೆಂದು ಒತ್ತಾಯಿಸುತ್ತಿದ್ದೇನೆ ಮತ್ತು ಯಾವುದೇ ಕಾರಣಕ್ಕೂ ಪುನಃ ಅದನ್ನು ನಿಲ್ಲಿಸಬಾರದು ಎನ್ನುವುದು ನನ್ನ ಮನವಿಯಾಗಿದೆ. ಬೆಂಗಳೂರು ನಗರದಲ್ಲಿ ಇರುವವರೆಲ್ಲರಿಗೂ ಹೆಚ್.ಆರ್.ಎ. ಮತ್ತು ಸಿ.ಸಿ.ಎ.ಯನ್ನು ಕೊಡಬೇಕಾಗುತ್ತದೆ. ಆದರೆ, ಕೆಲವು ಪ್ರದೇಶಗಳು ಬೆಂಗಳೂರು ನಗರ ವ್ಯಾಪ್ತಿಗೆ ಬರುವುದಿಲ್ಲವೆಂದು ಅಲ್ಲಿ ಕೆಲಸ ಮಾಡುವ ಸರ್ಕಾರಿ ನೌಕರರಿಗೆ ಹೆಚ್.ಆರ್.ಎ. ಕೊಡುವುದಿಲ್ಲ ಎಂದರೆ, ಅವರು ಬೆಂಗಳೂರು ನಗರದಲ್ಲಿ ಇಲ್ಲವೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ವರ್ತೂರು, ಹುಣ್ಣಸೇಮಾರನಹಳ್ಳಿ, ಚಿಕ್ಕ ಅಲಸೂರು, ಚಿಕ್ಕ ಬಿದರಕಲ್ಲು ಇವೆಲ್ಲವೂ ಬೆಂಗಳೂರು ನಗರಕ್ಕೆ ಸೇರಿಕೊಂಡಿವೆ. ಆದರೆ, ಅಧಿಕಾರಿಗಳು ಅವರಿಗೆ ಇಷ್ಟ ಬಂದ ಕಡೆಗೆ ಕೊಡುತ್ತಿದ್ದಾರೆ. ಇಲ್ಲದ ಕಡೆ ಇಲ್ಲ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಈ ಕೂಡಲೇ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರಿಗೆ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ 8 ಕಿಲೋಮೀಟರ್ ವ್ಯಾಪ್ತಿಯಲ್ಲಿ

ಕಾರ್ಯನಿರ್ವಹಿಸುತ್ತಿರುವವರಿಗೆ ಹೆಚ್.ಆರ್.ಎ. ಸಿ.ಸಿ.ಎ.ಯನ್ನು ನಿಲ್ಲಿಸಬಾರದು ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, 2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಅಂದಿನ ಮುಖ್ಯಮಂತ್ರಿಗಳು,

> "ದಿನಾಂಕ:01–06–1987 ರಿಂದ 01–07–1992ರ ನಡುವೆ ಪ್ರಾರಂಭವಾಗಿರುವ ಪರಿಶಿಷ್ಟ ವರ್ಗದ ಆಡಳಿತ ಮಂಡಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರದ ಅನುದಾನಕ್ಕೆ ಒಳಪಡಿಸಲಾಗಿದೆ. ಶಿಕ್ಷಣ ಇಲಾಖೆಯು ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಲು ಸಾಮಾನ್ಯ ವರ್ಗದ ಆಡಳಿತ ಮಂಡಳಿಯ 1992–93 ಮತ್ತು ಅದಕ್ಕೂ ಹಿಂದೆ ಆರಂಭವಾಗಿರುವ ಪ್ರೌಢಶಾಲೆಗಳಿಗೂ ಸಹ ವಿಸ್ತರಿಸಲಾಗುವುದು. ವಿದ್ಯಾರ್ಥಿಗಳ ಪ್ರಗತಿಯನ್ನು ಆಧರಿಸಿ ನೂತನ ನೀತಿಯನ್ನು ಸರ್ಕಾರವು ಅನುಮೋದಿಸಿದ್ದು, ಈ ನೀತಿಯು 1993–94ರ ಶೈಕ್ಷಣಿಕ ವರ್ಷದಿಂದೀಚೆಗೆ ಪ್ರಾರಂಭವಾಗಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಅನ್ವಯವಾಗುತ್ತದೆ" ಎಂದು ಹೇಳಿದ್ದರು.

ಸನ್ಮಾನ್ಯ ಸಭಾಪತಿಯವರೇ, ಇದರಲ್ಲಿ ಒಂದೂ ಜಾರಿಗೆ ಬಂದಿಲ್ಲ. ಆ ಸರ್ಕಾರ ಈ ಸರ್ಕಾರ ಎಂದು ಕೆಸರು ಎರಚುವುದು ಬೇಡ. ಸರ್ಕಾರ ತನ್ನ ಆಯವ್ಯಯದ ಭಾಷಣದಲ್ಲಿ ಹೇಳಿರುವುದನ್ನು ಅಧಿಕಾರಿಗಳು ಅನುಷ್ಠಾನಕ್ಕೆ ತಂದಿದ್ದಾರೆಯೇ ಎಂದು ನಾನು ಕೇಳುತ್ತಿದ್ದೇನೆ. ಅಧಿಕಾರಿಗಳು ಅದನ್ನು ಕಾರ್ಯರೂಪಕ್ಕೆ ತರಲು ಕಡತವನ್ನು ಸಿದ್ಧಗೊಳಿಸಿದ್ದರೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಸಹಿ ಮಾಡುವುದಿಲ್ಲ ಎಂದು ಹೇಳುತ್ತಿರಲಿಲ್ಲ. ಒಂದು ತಿಂಗಳು ಅಥವಾ ಆರು ತಿಂಗಳು ಇಟ್ಟುಕೊಂಡು ಸಹಿ ಹಾಕುತ್ತಿದ್ದರು. ನಾವುಗಳು ಒತ್ತಾಯ ಮಾಡಿದ್ದರೆ

ಒಂದು ವಾರದೊಳಗೆ ಸಹಿ ಮಾಡಿ ಕೊಡುತ್ತಿದ್ದರು. ಆದರೆ ಮೇಲೆ ಹೇಳಿದಂತಹ ಒಂದಂಶವೂ ಜಾರಿಗೆ ಬರಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, 2008-09ನೇ ಸಾಲಿನ ಆಯವ್ಯಯದ ಭಾಷಣದಲ್ಲಿ,

> "ಇಲ್ಲಿಯವರೆಗೆ 1992ಕ್ಕೂ ಮುನ್ನ ಆರಂಭಿದ ಖಾಸಗಿ ಶಾಲೆಗಳಿಗೆ ಈ ಸಾಲಿನಲ್ಲಿ 1993-94ರಲ್ಲಿ ತೆರೆಯಾದ ಖಾಸಗಿ ಪ್ರೌಢ ಶಾಲೆಗಳಿಗೆ ಅರ್ಹತೆಯ ಆಧಾರದ ಮೇಲೆ ಸಹಾಯ ಅನುದಾನಕ್ಕೆ ಒಳಪಡಿಸಲಾಗುವುದು" ಎಂದು ಹೇಳಿದ್ದಾರೆ.

ಇಲ್ಲಿಯವರೆಗೆ ಎಷ್ಟು ಶಾಲೆಗಳಿಗೆ ಸಹಾಯ ಅನುದಾನವನ್ನು ನೀಡಲಾಗಿದೆ ಎನ್ನುವುದನ್ನು ಅವರು ಸ್ಪಷ್ಟಪಡಿಸಬೇಕಾಗಿದೆ.

> 'ಖಾಸಗಿ ಆಡಳಿತ ಮಂಡಳಿಗಳ ಬಹು ದಿನಗಳ ಬೇಡಿಕೆಯನ್ನು ಈಡೇರಿಸಲು ಸರ್ಕಾರವು ನಿರ್ಧರಿಸಿದೆ. 1994-95ರವರೆಗೆ ಪ್ರಾರಂಭವಾಗಿರುವ ಮತ್ತು ಮಾನದಂಡಗಳನ್ನು ಪೂರೈಸಿರುವ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಸಹಾಯ ಅನುದಾನ ನೀಡಲಾಗುವುದು' ಎಂದು ಹೇಳಿದ್ದಾರೆ.

ಪ್ರತಿ ಆಯವ್ಯಯದಲ್ಲಿಯೂ ಹೇಳಿರುವುದನ್ನೇ ಹೇಳಿದ್ದಾರೆ. ಕೊನೆಯಲ್ಲಿ ಸಾಧನೆಗಳು ಎನ್ನುವ ಶೀರ್ಷಿಕೆಯಲ್ಲಿ,

> 'ಖಾಸಗಿ ಶಾಲೆಗಳಿಗೆ ವೇತನಾನುದಾನ ನೀಡಲು ನಿಗಡಿಪಡಿಸಿದ 01.06.1987ರ ಅರ್ಹತಾ ದಿನಾಂಕವನ್ನು 1994-95ರ ಶೈಕ್ಷಣಿಕ ವರ್ಷಕ್ಕೆ ವಿಸ್ತರಣೆ ವೆಚ್ಚ' ಎಂದು ಹೇಳಿದ್ದಾರೆ.

ಈಗಾಗಲೇ ಈ ಮಾತನ್ನು ಎರಡು ಮೂರು ಆಯವ್ಯಯದಲ್ಲಿ ಹೇಳಿದ್ದಾರೆ. ಈಗ ಮತ್ತೇ 'ವಿಸ್ತರಣೆ ವೆಚ್ಚ' ಎಂದು ಹೇಳುತ್ತಿದ್ದಾರೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ವೇತನಾನುದಾನಕ್ಕೆ ಒಳಪಡಿಸಲು ಬಾಕಿ ಇರುವ ಶಾಲೆಗಳ ಬಗ್ಗೆ ಹೇಳುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ಕಡತಕ್ಕೆ ತಪ್ಪಾದ ಮಾಹಿತಿ ಹೋಗುವುದು ಬೇಡ. ಎಷ್ಟು ಸಾರಿ ಹೇಳುವುದನ್ನೇ ಹೇಳುತ್ತಾರೆ. ಎಷ್ಟು ಸಾರಿ ಸುಳ್ಳು ಹೇಳುತ್ತಾರೆ. "ಸುಮಾರು 416 ಪ್ರಾಥಮಿಕ ಮತ್ತು 787 ಪ್ರೌಢ ಶಾಲೆಗಳ ಶಿಕ್ಷಕರನ್ನು ಮತ್ತು 246 ಪದವಿ ಪೂರ್ವ ಕಾಲೇಜುಗಳಲ್ಲಿ 11,176 ಶಿಕ್ಷಕರ ವೇತನಾನುದಾನಕ್ಕೆ ಒಳಪಡಿಸಲು 215 ಕೋಟಿ ರೂಪಾಯಿಗಳ ಹೆಚ್ಚುವರಿ ವೆಚ್ಚ" ಎಂದು ಹೇಳುತ್ತಾರೆ. ಇದು ಹೆಚ್ಚುವರಿ ವೆಚ್ಚ ಅಲ್ಲ. ನಾಲ್ಕು ಬಾರಿ ಆಯವ್ಯಯದಲ್ಲಿ ಇದನ್ನೇ ಹೇಳುತ್ತಿದ್ದಾರೆ. ಇವರು ಖರ್ಚು ಮಾಡಿರುವುದೇ ಇಷ್ಟು. ಇದು ಹೆಚ್ಚುವರಿ ವೆಚ್ಚ ಅಲ್ಲ. ವೇತನ ಅನುದಾನಕ್ಕಾಗಿ ಕೋರಿಕೆ ಸಲ್ಲಿಸಿರುವ ಅರ್ಜಿಗಳು ಇನ್ನೂ ರಾಶಿಗಟ್ಟಲೇ ಬಿದ್ದಿವೆ. ಆರ್ಥಿಕ ಇಲಾಖೆಯವರೇ ಆಯವ್ಯಯವನ್ನು ತಯಾರು ಮಾಡುವುದರಿಂದ ಅದಕ್ಕೆ ಅನುದಾನ ಕೊಡಿ, ಇದಕ್ಕೆ ಅನುದಾನ ಕೊಡಿ ಎಂದು ಭಿಕ್ಷೆ ಬೇಡುವ ಹಾಗೆ ಬೇಡಬೇಕು. ಅಧಿಕಾರಿಗಳಿಗೆ ಮಾನ–ಮಾರ್ಯಾದೆ ಇಲ್ಲವೆ. ಆಗುವುದಾದರೆ ಹಾಕಿಸಿ, ಆಗುವುದಿಲ್ಲವೆಂದರೆ ಬೇಡ. ಇದರಲ್ಲಿ ಹೇಳಿದ ಮೇಲೆ ನಾಲ್ಕೈದು ವರ್ಷಗಳಾದರೂ ಏಕೆ ಇದನ್ನು ಇಂಪ್ಲಿಮೆಂಟ್ ಮಾಡುವುದಿಲ್ಲ? ಇಷ್ಟೆಲ್ಲಾ ಆದ ಮೇಲೆ ಹೆಚ್ಚು–ಕಡಿಮೆ 217 ಸಂಸ್ಥೆಗಳದ್ದು ಜನವರಿ 15ನೇ ತಾರೀಖಿನೊಳಗೆ ಬಂದಿರುವ ಫೈಲ್‌ಗಳನ್ನು ಕಳುಹಿಸಿದ್ದಾರೆ. ಆರ್ಥಿಕ ಇಲಾಖೆಯವರು ಯಾವ ರೀತಿಯಾಗಿ ಎಗರುತ್ತಾರೆ ಎಂದು ನೀವು ನೋಡಬೇಕು. ಇವರ ಮನೆಯಿಂದ ಕೊಡುತ್ತಾರೇನೋ ಎನ್ನುವ ಹಾಗೆ ಆಡುತ್ತಾರೆ. ಇವರಿಗೆ ಮಾತ್ರ 31ನೇ ತಾರೀಖಿ ಅಥವಾ 1ನೇ ತಾರೀಖಿಗೆ ಸಂಬಳ ಬರಬೇಕು. ಅವರು ಅವರ ಹೆಂಡತಿಗೆ ಲೆಕ್ಕವನ್ನು ಕೊಡಬೇಕು.

ಶಿಕ್ಷಕರು ಲೆಕ್ಕವನ್ನು ಕೊಡುವ ಹಾಗಿಲ್ಲ, ಏಕೆಂದರೆ ಅವರನ್ನು ಯಾರೂ ಹೇಳುವವರು, ಕೇಳುವವರು ಇಲ್ಲವಲ್ಲ.

**(ಈ ಹಂತದಲ್ಲಿ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

217 ಶಾಲೆಗಳ ಬಗ್ಗೆ ಕಳುಹಿಸಿ ಸುಮಾರು 2 ತಿಂಗಳುಗಳಾಗಿದೆ. ಆದರೆ ಅದರ ಬಗ್ಗೆ ಇನ್ನು ತೀರ್ಮಾನವನ್ನು ತೆಗೆದುಕೊಂಡಿಲ್ಲ. ಈ ಬಗ್ಗೆ ನಾಲ್ಕು ಬಜೆಟ್‌ಗಳಲ್ಲಿ ಬಂದಿದೆ. ಈ 217 ಫೈಲ್‌ಗಳನ್ನು ವಿಲೇ ಇಡಲಿಕ್ಕೆ ಕಾರಣವೇನೆಂದರೆ, 2 ವರ್ಷಗಳ ಹಿಂದೆ ಇವರು ಈಗ ಏನು ಪಟ್ಟಿಯನ್ನು ಕಳುಹಿಸಲಾಗಿದೆ, ಈ ಪಟ್ಟಿ ಆಗುವವರೆವಿಗೂ ಇನ್ಯಾವುದನ್ನು ಕಳುಹಿಸಬೇಡಿ ಎಂದು ಹೇಳಿದರು. ಹೆದರಿಕೊಂಡು ಶಿಕ್ಷಣ ಇಲಾಖೆಯವರು ಯಾವುದೇ ಫೈಲ್‌ನ್ನು ಕಳುಹಿಸುವುದೇ ಇಲ್ಲ. ನಾವು ಎಷ್ಟು ಎಂದು ಒತ್ತಾಯವನ್ನು ಮಾಡುವುದು. ಈ ತರಹದ್ದು ಆಗುತ್ತಿದೆ. ದಯಮಾಡಿ ಈ ಕೂಡಲೇ ಸರ್ಕಾರ ಏನು ನಾಲ್ಕು ಬಜೆಟ್‌ನಲ್ಲಿ ಒಪ್ಪಿಕೊಂಡಿದೆ, ಅವರು ಒಪ್ಪಿಕೊಂಡ ರೀತಿಯಲ್ಲಿ ಇಲಾಖಾಧಿಕಾರಿಗಳಿಗೆ ನೀವು ಏನು ಮಾಡುತ್ತೀರೋ ಗೊತ್ತಿಲ್ಲ. ಅದನ್ನು ಇಂಪ್ಲಿಮೆಂಟ್ ಮಾಡಿಸಿ. ಜೊತೆಗೆ ಇದನ್ನು 2000ನೇ ಇಸವಿಯವರೆವಿಗೂ ಕನ್ನಡ ಮಾಧ್ಯಮ ಶಾಲೆಗಳು, ಪಿಯು ಕಾಲೇಜಿಗಳು ಪ್ರಾರಂಭವಾಗಿವೆ ಅವರೆಲ್ಲರಿಗೂ ಸಹ ವೇತನಾನುದಾನವನ್ನು ವಿಸ್ತರಣೆ ಮಾಡಿಸಿ. ಎಸ್‌ಸಿ–ಎಸ್‌ಟಿ ಮ್ಯಾನೇಜ್ಮೆಂಟ್‌ಗಳಿಗೆ, ಪದವಿ ಕಾಲೇಜುಗಳಿಗೆ ವೇತನಾನುದಾನವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ, ಅದನ್ನು ವರ್ಷಕ್ಕೆ 4, 2 ಈ ರೀತಿ ಕೊಡುತ್ತೀರಿ. ಸಾಮಾನ್ಯ ವರ್ಗದವರಿಗೂ ಸಹ 92ನ್ನು ವಿಸ್ತರಣೆ ಮಾಡಿ. ಇವರು ಇವರ ಸಾಧನೆಯನ್ನು ಸುಮ್ಮನೆ ಹೇಳಿಕೊಂಡು ತಪ್ಪು ಮಾಹಿತಿಯನ್ನು ಏಕೆ ಕೊಡಬೇಕು? ದಯಮಾಡಿ ನಾನೇನು ಹೇಳಿದ್ದೇನೆ, ಇದರ ಬಗ್ಗೆ ಸಂಪೂರ್ಣವಾದಂಥ ರೀತಿಯಲ್ಲಿ ಈ ಹಿಂದೆ 4 ಬಜೆಟ್‌ಗಳಲ್ಲಿ ಏನು ಹೇಳಲಾಗಿದೆ ಅದನ್ನು ಸಾಮಾನ್ಯವಾಗಿ ಈ ಸಾರಿಯಾದರೂ ಕೂಡ ಇಂಪ್ಲಿಮೆಂಟ್ ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳಿ ಮತ್ತು ಹೆಚ್‌ಆರ್‌ಎ, ಸಿಸಿಎ ಸೌಲಭ್ಯವೇನಿದೆ, ಮಾನ್ಯ ಸಭಾನಾಯಕರು ಬಂದಿದ್ದಾರೆ. ದಯಮಾಡಿ

ನಾನು ಹೇಳುವುದೇನೆಂದರೆ, ಬಿಎಂಪಿ ಇದ್ದಂಥ ಸಂದರ್ಭದಲ್ಲಿ ಏನು ಹೆಚ್ಆರ್ಎ ಮತ್ತು ಸಿಸಿಎ ಅನ್ನು ಕೊಡಲಾಗುತ್ತಿತ್ತು, ಅವೆಲ್ಲವನ್ನು ಮುಂದುವರೆಸಬೇಕು. ಆರ್ಥಿಕ ಇಲಾಖೆಯವರು 108 ಹಳ್ಳಿಗಳಿಗೆ ಈ ಸೌಲಭ್ಯವನ್ನು ನಿಲ್ಲಿಸಿದ್ದಾರೆ.

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೆ, ತಮ್ಮ ಸಮಯ ಆಗಿದೆ. ದಯಮಾಡಿ ಸಹಕರಿಸಿ. ತಾವು ಈಗಾಗಲೇ 21 ನಿಮಿಷಗಳ ಕಾಲ ಮಾತನಾಡಿದ್ದೀರಿ. ಉಪ ಸಭಾಪತಿಯವರು ಅದನ್ನು ಇಲ್ಲಿ ಬರೆದಿಟ್ಟಿದ್ದಾರೆ. ದಯಮಾಡಿ ತಮ್ಮ ಮಾತುಗಳನ್ನು ಮುಗಿಸಿ. ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶವೇ ಬೇಡವೇ?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತಿದ್ದೇನೆ. ಬೆಂಗಳೂರು ನಗರ ಜಿಲ್ಲೆಗೆ ಪೂರ್ತಿಯಾಗಿ ಹೆಚ್ಆರ್ಎ ಮತ್ತು ಸಿಸಿಎ ಅನ್ನು ವಿಸ್ತರಣೆ ಮಾಡಿ. ಎಲೆಕ್ಟ್ರಾನಿಕ್ ಸಿಟಿಯನ್ನು ಬೆಂಗಳೂರಿನ ಹೊರಗಡೆಗೆ ಇಟ್ಟಿದ್ದಾರೆ. ಅದು ಬಿಬಿಎಂಪಿ ಗೆ ಸೇರಿದ್ದರೆ ಅದರಿಂದ ಸುಮಾರು 500 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಇವರುಗಳು ಅದನ್ನೆಲ್ಲಾ ಸೇರಿಸಿಲ್ಲ. ನಗರಾಭಿವೃದ್ಧಿ ಇಲಾಖೆಯಲ್ಲಿ ಮತ್ತು ಆರ್ಥಿಕ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳು ಶಾಮೀಲಾಗಿ ಇದು ಬೆಂಗಳೂರಿನ ವ್ಯಾಪ್ತಿಗೆ ಸೇರದೇ ಇರುವ ಹಾಗೆ ನೋಡಿಕೊಳ್ಳುತ್ತಾರೆ. ದಯವಿಟ್ಟು ಈ ಕೆಲಸಗಳನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ. ಸಕಾರ ಇದನ್ನೇನಾದರೂ ಮಾಡಲಿಲ್ಲವೆಂದರೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ಗೆ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ನಾನು ಧರಣಿಯನ್ನು ಮಾಡುತ್ತೇನೆ.

**ಸಭಾಪತಿಯವರು:–** ಒಬ್ಬರು ವಿರೋಧ ಪಕ್ಷದ ಕಡೆಯಿಂದ, ಒಬ್ಬರು ಆಡಳಿತ ಪಕ್ಷದ ಕಡೆಯಿಂದ ಈ ರೀತಿ ನಾನು ಮಾತನಾಡಲು ಅವಕಾಶವನ್ನು ಕೊಡುತ್ತಿದ್ದೇನೆ. ನಾನು ಮಾತನಾಡಲು ಅವಕಾಶವನ್ನು ಕೊಡುವುದಿಲ್ಲವೆಂದು ಯಾರಿಗೆ ಹೇಳುತ್ತಿದ್ದೇನೆ ನೀವುಗಳು ಮಧ್ಯದಲ್ಲಿ ಬಾಯಿಯನ್ನು ಹಾಕಬೇಡಿ.

ದಯವಿಟ್ಟು ಕೇಳಿ. ನಾನು ಯಾರಿಗಾದರೂ ಅವಕಾಶವನ್ನು ಕೊಡುವುದಿಲ್ಲವೆಂದರೆ ನೀವು ಮಧ್ಯದಲ್ಲಿ ಬಾಯಿ ಹಾಕಬೇಕು. ಯಾವ ರೀತಿ ಎಂದು ನಾನು ಹೇಳುತ್ತೇನೆ. ದಯಮಾಡಿ ಇನ್ನೊಮ್ಮೆ ಅರ್ಥ ಮಾಡಿಕೊಳ್ಳಿ. ಒಬ್ಬರು ವಿರೋಧ ಪಕ್ಷದಿಂದ, ಒಬ್ಬರು ಆಡಳಿತ ಪಕ್ಷದಿಂದ ಈ ರೀತಿಯೇ ಬರಬೇಕು. ಆದರೆ ಇಬ್ಬರು ವಿರೋಧ ಪಕ್ಷದಿಂದ ನಿರಂತರವಾಗಿ ಮಾತನಾಡಿದ್ದಾರೆ. ಹಾಗಾಗಿ ಈಗ ಬಿಜೆಪಿ ಯವರ ಸರದಿಯಲ್ಲಿ ಇಬ್ಬರು ಇದ್ದಾರೆ. ನಂತರ ಕಾಂಗ್ರೆಸ್ ಪಕ್ಷದವರಿಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಬೆಂಗಳೂರು ವ್ಯಾಪ್ತಿಯ ಬಗ್ಗೆ ಹೇಳಿದರು. ಅದರಲ್ಲಿ ಹಿಂದೆ ಆಗಿರತಕ್ಕಂಥ ಅವ್ಯವಸ್ಥೆ ಬಗ್ಗೆ ನಾವು ಕೂಡ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ಆದುದರಿಂದ ಅದನ್ನು ಒಂದು ಮುಕ್ತಾಯದ ಹಂತಕ್ಕೆ ತರುತ್ತಿದ್ದೇವೆ. ಇದನ್ನು ಯಾವ ಸರ್ಕಾರ ಮಾಡಿತು, ಏನಾಯಿತು ಎನ್ನುವುದನ್ನು ನಾನು ಚರ್ಚೆ ಮಾಡುವುದಕ್ಕೆ ತಯಾರಿಲ್ಲ. ತಾವು ಹೇಳಿರತಕ್ಕಂಥ ಸೂಕ್ಷ್ಮತೆಯ ಅರಿವು ಇದೆ. ಆದರೆ ಇದು ಅವಶ್ಯಕತೆಯೂ ಸಹ ಇದೆ. ಆದ್ದರಿಂದ ಒಂದು ಕಡೆ ಅವರಿಗೆ ಏನು ಲೋಪವಾಗಿದೆ. ಇದನ್ನು ಸರಿಪಡಿಸತಕ್ಕಂಥಾದ್ದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಸಹ ತರುತ್ತೇನೆ.

**ಸಭಾಪತಿಯವರು:–** ಸಮಯ ಎಲ್ಲರಿಗೂ ಗೊತ್ತಿದೆ ಅಂದುಕೊಳ್ಳುತ್ತೇನೆ. ದಯಮಾಡಿ ನನ್ನ ಬಾಯಲ್ಲಿ ಹೇಳಿಸಬೇಡಿ. ನಾನು ನೋಡಿದ ಹಾಗೆ ಯಾರೂ ಸಹ 8 ನಿಮಿಷಗಳಿಗೆ ತಮ್ಮ ಮಾತನ್ನು ಮುಗಿಸಿಲ್ಲ. ಕೆಲವರು 20 ನಿಮಿಷಗಳು, 16 ನಿಮಿಷಗಳು, 22 ನಿಮಿಷಗಳ ಈ ರೀತಿ ಮಾತನಾಡಿದ್ದಾರೆ. ನನಗೆ ಕಷ್ಟವಾಗುತ್ತದೆ. ಬಹಳಷ್ಟು ಜನರಿಗೆ ಮಾತನಾಡಲು ಅವಕಾಶ ಸಿಗಲಿಕ್ಕಿಲ್ಲ. ಆಮೇಲೆ ನೋಡೋಣ.

**ಶ್ರೀ ಲೆಹರ್ ಸಿಂಗ್ ಸಿರೋಯಾ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, 2013–14ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ತಾವು ನನಗೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ಈಗ ಬಂದಿದ್ದೀರಿ. ಅದೇ ರೀತಿ ಸನ್ಮಾನ್ಯ ಬಸವರಾಜ ಹೊರಟ್ಟಿಯವರು ಸಹ ಬಂದಿದ್ದಾರೆ. ನಾನು ಈ ಬಜೆಟ್ ಪರವಾಗಿ ಮಾತನಾಡಲಿಕ್ಕೆ ನಿಂತಿದ್ದೇನೆ. Not because, I am a member of the ruling party and it is my bounden duty to support the budget. But there are certain things in the budget which I have to appreciate it from the bottom of mt heart. Sir, I whould like to draw your attention that when our BJP Government started its first innings in South India, there was a very challenging task before us. As you all know; When our Government took charge. There was a shortage of fertilizer, It is just because of the minmangement of the previous Governments and the Central Government. There was a serial bomb blast and we faced an unprecendented flood. In last 40-50 years there was a very challenging task before this Government. But, even then some progress happened, and I would like to point put certain things. LastBudget of previous Government, was presented by Sri Siddaramaiahji in the year 2005-06. He complimented himself for the total outlay of ` 34,000 crore. And now our outlay is almost ` 1,17,000 crore. After our Government took charge, there was a global recession, economy of India was down and the whole world was in jeopardy and also there was a problem in IT sector. Do you know what was the volume of that global recession? Inspite of that our Government progressed. By leaps and biunds. Why I am telling here is because many decisions of our Government were of far reaching

consequences for the development of our State. I won't mention about popular schemes about which Sri Horattiji objected. But, I will mention about the mineral policy. Sir, you kaniw that how our wealth was looted earlier not only from our state but also from neighboring states. But our Government was enough efficient to foresee all these problems and they brought a mineral policy where we could save our mineral wealth as well as our natural wealth. Sir, I would like to give one example. In Ramana Durga there is a deposit by which at today's rate you can wipe out our entire debt of ` 1,34,000 crore. That much is the wealth and it was saved. All people were coming to take up that area and export that material. There ia a Textile policy and SEZ policy. And much more is about partnership of railway i.e., KRIDE (Karnataka Railway Infrastructure Development Enterprise). No State Government has thought of this. But it was our BJP Government which thought of this and proposed to the Railway Ministry that we will invest half the money if you complete our project. Sir, I won't touch all the subjects. Because, for agriculture there is separate budget. But every second person is a 'son of the soil' whom you call 'ಮಣ್ಣಿನ ಮಗ' That is their right to talk on that. I will not encroach that area. I won't talk about industries and other things. But I will touch the core subject of our State and of our Nation which affects farmers, labourers and every common man. Regarding education field, I have to complement my Government for fund allocation of the education sector. I will give one example. Again I will quote the budget of the year of 2005-2006, the last budget of our previous Government. The non-BJP Finance Minister, Sir Siddaramaiahji

complemented himself and Horattiji for increasing the fund allocation from ` 4,300 crore to the growth of 4,811 crore rupees. He complemented himself and all of you were boasted of that. But in this year the budget allocation of fund for education sector is four and half times more than that in seven years. Last time it was ` 15,000 crore and now it is ` 18,000 crore. Our growth is 16 per cent. After so much of volume it was 15,000 crores. I will come to that subject. I thought that Horattiji or somebody from opposition would talk about this. But, I am very sorry nobody is talking about this. So, I have to take the role of the opposition also. I will quote some figures. Now it is challenging for not only this Government, but also it is challenging the opposition, the people sitting in the gallery also. Infrastructure wise and academic wise what is the strength of the Government schools in our State? I will quote certain things and the results which are with me.

**ಶ್ರೀ ಪುಟ್ಟಣ್ಣ:–** ನಿಮ್ಮ ಕಾಲದಲ್ಲಿ ಎಷ್ಟು ಕಾಲೇಜುಗಳನ್ನು ತೆರೆದಿದ್ದೀರಿ ಎನ್ನುವುದನ್ನು ಹೇಳಿಬಿಡಿ.

**Sri LEHAR SINGH SIROYA:-** Hon'ble Puttanaji, I have great respect for you.

Sir, one more thing I would like to tell you is that, as I was an outsider and I am thankful to 6 crore people of Karnataka who adopted me, who gave love and affection to me. Likewise all the opposition people from all the benches, they were very nice to me and they were affectionate to words me. I thank everybody. Let Hon'ble Puttanaji listen to me. I am not talking to score the point. I am talking

about the real issue which you also can contribute through your debate. Sir, as I said that our…

**Sri BASAVARAJA HORATTI:-** Hon'ble Yeddyurappa…

**Sri LEHAR SINGH SIROYA:-** Mr. Chairman Sir, Hon'ble Sri Yeddyurappa is a leader of you, is a leader of me and leader of everybody. He is a farmer leader and he is a Leader of our country. In 2003 the budget may be around ` 2,000 crores. There is a very important issue. ` 2,000 crores might have been big enough at that i.e., In 2003. I don't have the exact figures now. A far as the Government Schools admission from 1 to 7th standard was concerned it was 58,74,000 in the year 2003. I have the figures of the year 2010 also. In this year the strength of students in our Government schools has been reduced to 46,49,000. It has come down from 58 lakhs to 46 lakhs and in so far as teachers strength is concerned, Sri Maritible Gowda and all other members are from Teachers Constituency are present in the House now and Sri Narayana Swamy and others are always fighting for the teacher's causes I amy tell you here Teachers strength has gone up from 1,85,200 to 2,04,800 and the students' strength has come down. And some more alarming figures I would like to quote is that, in Private Schools the students strength has gone up from 10 lakh to 20 lakh.

Hon'ble Chairman Sir, you also worked as Higher Education Minister. And I think the Education Minister is not here now. But it is an alarming situation that private school admission is doubled and the government school admissions have dwindled and teacher's strength

has increased. And also the allocation of funds has been increased. I am coming to that. I am talking about certain very serious issues. Student's strength has decreased and teacher's strength has gone up, allocation of fund has gone up like anything; it is 10 times more. But the 1st standard enrolment has been reduced. It is a question to you all Sir, I am a son of a Government Servant. My father was UDC (Upper Division Clerk). I don't know what you call here for UDC. I have studied in the Government School all along my life and we are proud that what type of study was there. We were sitting with the commoners. We never thought about any caste or creed. And we had highest respect for teachers. I will take I more minute and what I would like to tell you, when I was in college our professor was Dr. Natarajan and V.V. John was our principal. Shri V.V. John was a great academician and also he was our Vice Chancellor after that. So such an academician was there at that time. But now what is happening here? What is the quality of teachers, what is the quality of education? Sir, the If you all permit me I am ready to take up responsibility of developing all schools in Bangalore city with 5 star facileties with the help of my friends Suresh and Dayananda Reddy.

**ಶ್ರೀ ದಯಾನಂದ:-** ಮಾನ್ಯ ಸಭಾಪತಿಯವರೇ, ನಾವು ತಯಾರಿದ್ದೇವೆ, ನಮ್ಮದೇನು ಅಭ್ಯಂತರವಿಲ್ಲ. 5 ಸ್ಟಾರ್ ಮಾದರಿಯಲ್ಲಿ ಶಾಲೆಗಳನ್ನು ಅಭಿವೃದ್ಧಿ ಮಾಡುತ್ತಾರಂತೆ. ಅದಕ್ಕಾಗಿ ಅವರಿಗೆ ನಮ್ಮ ಕಾಂಗ್ರೆಸ್ ಪಕ್ಷದ ಪರವಾಗಿ ಸಂಪೂರ್ಣ ಸಹಮತ ವ್ಯಕ್ತಪಡಿಸುತ್ತೇವೆ.

**Sri LEHAR SINGH SIROYA:-** Mr. Chairman Sir, but what about the academics? Sri Dayanand Reddy will support me. Dayanand

Reddyji, I have no objection that you are building bathrooms for ` 25 lakhs or ` 50 lakhs. But what about the schools in the areas which we have studied. Most of the IAS officers might have studied in those schools and most of you have studied in those schools.

**ಶ್ರೀ ದಯಾನಂದ:–** ಕೊನೆಯ ಬಜೆಟ್ ಮಂಡಿಸುವ ಸಂದರ್ಭದಲ್ಲಾದರೂ ನಿಮ್ಮನ್ನು ವಿದ್ಯಾ ಮಂತ್ರಿಗಳನ್ನಾಗಿ ಏಕೆ ಮಾಡಲಿಲ್ಲ ಎಂದು ನನಗೆ ಬೇಜಾರಾಗುತ್ತಿದೆ.

**ಶ್ರೀ ಲೆಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಪಕ್ಷಾತೀತವಾಗಿ ಎಂದು ಹೇಳಿದರು. ನಾನೂ ಸಹ ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. It is a challenge for everybody.

(ಗೊಂದಲ)

**ಶ್ರೀ ಇ. ಕೃಷ್ಣಪ್ಪ:–** ಬೆಂಗಳೂರಿನಂತಹ ಹೈಟೆಕ್ ಸಿಟಿಯನ್ನು ಮತ್ತು ದೆಹಲಿಯನ್ನು ಹೋಲಿಸಿ ಮಾತನಾಡಬೇಡಿ. ಅತಿ ಸಾಮಾನ್ಯ ರೈತರು, ಅತಿ ಸಾಮಾನ್ಯ ಗ್ರಾಮಗಳನ್ನು ನೋಡಿ. ಅದರ ಬಗ್ಗೆ ಮಾತನಾಡಿ. ನೀವು ಹೈಟೆಕ್ ಬಗ್ಗೆ ಮಾತನಾಡಿದರೆ ಎನು ಪ್ರಯೋಜನ. ನಗರದಲ್ಲಿರುವ ಸರ್ಕಾರಿ ಶಾಲೆಗಳ ಬಗ್ಗೆ ಹೇಳುತ್ತಿದ್ದಾರೆ. ಹಳ್ಳಿಗಳಿಗೆ ಬಂದು ನೋಡಿ.

(ಗೊಂದಲ)

**ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ. ನೀವು ಏಕೆ ಮಧ್ಯದಲ್ಲಿ ಬಾಯಿ ಹಾಕುತ್ತಿದ್ದೀರಿ. ಅವರು ಮಾತನಾಡಬಾರದೇ? ನೀವು ಏನು ಬೇಕಾದರೂ ಮಾತನಾಡಬಹುದು. ಅವರು ಮಾತನಾಡಬಾರದೇ? ದಯವಿಟ್ಟು ಕುಳಿತುಕೊಳ್ಳಿ. ಈ ರೀತಿ ಮಾಡುವುದು ಸರಿಹೋಗುವುದಿಲ್ಲ. ಅವರು ಏನು ಬೇಕಾದರೂ ಮಾತನಾಡುತ್ತಾರೆ. ನಾನು ಹೇಳಿದ್ದೇನೆ, anything under the sun he can talk.' ಅದು ಮಾತನಾಡಬಾರದು, ಇದು

ಮಾತನಾಡಬಾರದು ಎಂದು ಹೇಳುವ ಅಧಿಕಾರ ಯಾರಿಗೂ ಇಲ್ಲ. ಇನ್ನೊಂದು ನಿಮಿಷದಲ್ಲಿ ಅವರು ಮಾತನಾಡಿ ಮುಗಿಸುತ್ತಾರೆ.

**Sri LEHAR SINGH SIROYA:-** Sir what I am trying to say is that, it is all our responsibility to see to it that all those schools are improved. We can improve those Government Schools but what about the academic atmosphere? I am not here to blance any Government or any political parties. I am talking **"ಪಕ್ಷಾತೀತ್"**. But, the system existing for the last sixty years is responsible for this and it has not come in five years. We are all responsible for this. An auto driver's son, does he not have any rights to study in a good school? Why should we not improve those schools? If we do so, then affluent persons' children will also come and study in those Government Schools. It's all our responsibility to bring back those education systems which was there about fifty years back. At that time the R.V. College, M.E.S. College, Bangalore High School were giving quality education and as well as they were maintaining the standard of education. That's the reason; my pointis not to criticize you, it's the system which we have developed like that. So, it is our responsibility to improve the standard of those Government Schools. ಮಾನ್ಯ ಸಭಾಪತಿಯವರೇ, I don't take much time, I will finish in two minutes.

I agree with Sri Basavaraj HorattiJi that it is a populist scheme. There is a mis-rule by various Political Parties in the last 60 years, resulting which still we find people who need help. We should empower them so that they can earn and get good education and buy their needs.

Regarding Higher Education, you have allocated funds for the Department. As we all know, these colleges are in the clutches of rich people and religious people. As Sri Basavaraj Horatti and Prof.Krishna Bhat said, we all know the way the Vice Chancellors are appointed for the Universities. It is a matter of concern for every one.

I would like to quote one sentence of **Mr. Abraham Lincoln** and conclude my speech. Abraham Lincoln wrote a letter to the Head Master of the School where his son was studying;

> **"It will take time, I know, but teach him if you can, that 10 cents earned is of far more value than a dollar found. It is far more honourable to fail than to cheat. Teach him to be gentle with gentle people and tough with tough people."**

It is our bounden duty to improve the academics and infrastructural facilities in the educational system. We need not worry about the scam of the Private Universities. ಹಗರಣದ ಬಗ್ಗೆ ನನ್ನ ಹತ್ತಿರ ಬೇಕಾದಷ್ಟು ಮಾಹಿತಿ ಇತ್ತು. Recently, the Officers of seven Universities appeared before us in the Papers Laid Committee. Sri Vijay Sankeshwar Ji is also a member of that Committee. There is no accountability for these Universities. One particular University has not submitted its accounts for the last 13 years. Similar is the case with other Universities. ಅಲ್ಲಿನ ರಿಜಿಸ್ಟ್ರಾರ್ ಮತ್ತು ಇತರ ಅಧಿಕಾರಿಗಳು ನಾನು ಹದಿನೈದು ದಿವಸ ಮುಂಚೆ ಬಂದಿದ್ದೇನೆ, ಆರು ತಿಂಗಳು ಮುಂಚೆ ಬಂದಿದ್ದೇನೆಂದು ಸಮಜಾಯಿಷಿ ನೀಡುತ್ತಿದ್ದರು. ಈ ರೀತಿ ನಮ್ಮ ಖಾಸಗಿ ವಿಶ್ವವಿದ್ಯಾನಿಲಯಗಳು ಕೆಲಸ ಮಾಡುತ್ತಿವೆ. Mr. Chairman Sir, I thank you

for the opportunety given and I thank every one here for having listened to me and conclude my speech.

**ಸಭಾಪತಿಯವರು:–** ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಮೂರು ವಿಷಯಗಳಿಗೆ ಉತ್ತರವನ್ನು ಸರ್ಕಾರದ ಪರವಾಗಿ ಸಭಾನಾಯಕರು ಸದನದಲ್ಲಿ ಮಂಡಿಸುತ್ತೇನೆಂದು ಹೇಳಿದ್ದಾರೆ. ಶ್ರೀ ಆರ್.ವಿ. ವೆಂಕಟೇಶ್‌ರವರು ಪ್ರಸ್ತಾಪಿಸಿದ ವಿಷಯದ ಬಗ್ಗೆ ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸುತ್ತಾರೆ.

**ಸಭಾಪತಿಯವರ ಅಪ್ಪಣೆ ಮೇರೆಗೆ ಪಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಚಿವರ ಹೇಳಿಕೆ**

**ವಿಷಯ: ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ವೈದ್ಯರುಗಳ ನಿರ್ಲಕ್ಷತೆಯಿಂದ ರೋಗಿಗಳು ಸಾವನ್ನಪ್ಪುತ್ತಿರುವ ಬಗ್ಗೆ.**

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ,

ದಿನಾಂಕ:6–2–2013 ರಂದು ಬೆಂಗಳೂರಿನ ಹೆಚ್.ಎಸ್.ಆರ್. ಬಡಾವಣೆಯ ಖಾಸಗಿ ದಂತ ಚಿಕಿತ್ಸಾಲಯದ ದಂತ ವೈದ್ಯರು ಹಾಗೂ ಅರವಳಿಕೆ ತಜ್ಞರ ಪ್ರಮಾದದಿಂದಾಗಿ ಸಮಾರು 3 ವರ್ಷದ ಶಿರೀಶ್ ಎಂಬ ಮಗು ಸಾವನ್ನಪ್ಪಿದ ಬಗ್ಗೆ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗಿರುವುದನ್ನು ಗಮನಿಸಲಾಗಿದೆ. ಇದುವರೆವಿಗೂ ಯಾವುದೇ ವ್ಯಕ್ತಿಗಳಿಂದ ಅಧಿಕೃತ ದೂರು ಬಂದಿರುವುದಿಲ್ಲ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ಮತ್ತು ನಿಯಮಗಳು 2009 ನ್ನು ಜಾರಿಗೆ ತಂದಿರುತ್ತದೆ. ಸದರಿ ಅಧಿನಿಯಮ/ನಿಯಮಗಳಲ್ಲಿ ಸೂಚಿಸಿರುವ ಮಾನದಂಡಗಳನ್ನು ಹಾಗೂ ಷರತ್ತುಗಳನ್ನು ಖಾಸಗಿ ನರ್ಸಿಂಗ್ ಹೋಂಗಳು/ಆಸ್ಪತ್ರೆಗಳು/ ಸಂಸ್ಥೆಗಳು/ಕ್ಲಿನಿಕ್‌ಗಳು ನಿಯಮಗಳನ್ನು ಉಲ್ಲಂಘಿಸಿದಲ್ಲಿ ಹಾಗೂ ನೋಂದಣಿ ಮಾಡಿಸದೇ ಇಂತಹ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ನಡೆಸುತ್ತಿದ್ದಲ್ಲಿ ಕಟ್ಟುನಿಟ್ಟಾದ ಕಾನೂನು ಕ್ರಮ ಕೈಗೊಳ್ಳಲು ಅವಕಾಶವಿರುತ್ತದೆ. ಅದರಂತೆ

ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಇಂತಹ ಖಾಸಗಿ ವೈದ್ಯರುಗಳು/ದಂತ ವೈದ್ಯರುಗಳು ಚಿಕಿತ್ಸೆ ನೀಡುವಲ್ಲಿ ಲೋಪವೆಸಗಿದಲ್ಲಿ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಮೇಲೆ ಹೇಳಿದ ಅಧಿನಿಯಮದಲ್ಲಿ ಅವಕಾಶವಿರುವುದಿಲ್ಲ. ಈ ಪ್ರಕರಣದ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಕ್ರಮ ಕೈಗೊಳ್ಳಲಾಗುತ್ತಿದೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಈಗ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಪ್ರಕಟವಾಗಿದೆ ಎಂದು ಹೇಳಿದ್ದಾರೆ. ಎಷ್ಟೋ ತಂದೆ–ತಾಯಿಗಳು ಪೊಲೀಸ್ ಸ್ಟೇಷ್‌ಗೆ ಹೋಗಿ ಕಂಪ್ಲೇಟ್ ಕೊಡದೇ ಇರಬಹುದು. ಈ ರೀತಿ ಆಗದ ಹಾಗೆ ಖಾಸಗಿ ಆಸ್ಪತ್ರೆಗಳಿಗೆ ಮುಟ್ಟುಗೋಲು ಹಾಕುವುದು, ವೈದ್ಯರ ಮಾನ್ಯತೆಯನ್ನು ರದ್ದು ಮಾಡುವುದು, ಈ ರೀತಿ ಏನಾದರೂ ಸರ್ಕಾರದಿಂದ ಆಗಬೇಕಲ್ಲವೇ? ಇಷ್ಟೊಂದು ವ್ಯಾಪಕವಾಗಿರುವುದು ಎಲ್ಲರಿಗೂ ಗೊತ್ತಿದೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ನಾನು ಸಂಬಂಧಪಟ್ಟ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಮಾನ್ಯ ಅರವಿಂದ ಲಿಂಬಾವಳಿಯವರ ಜೊತೆಯಲ್ಲಿ ಮಾತನಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

**ಸಭಾಪತಿಯವರು:–** ಶ್ರೀ ಬಸವರಾಜ ಹೊರಟ್ಟಿಯವರು ಮತ್ತು ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣರವರು ಪ್ರಸ್ತಾಪಿಸಿದ ವಿಷಯಕ್ಕೆ ಸಚಿವರ ಹೇಳಿಕೆ.

**(ಆ) ವಿಷಯ:– ದಾಂಡೇಲಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ.**

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ,

ಉತ್ತರ ಕನ್ನಡ ಜಿಲ್ಲೆ ಹಳಿಯಾಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ದಾಂಡೇಲಿ ನಗರವು ನಗರ ಸಭೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಸುಮಾರು 60 ಸಾವಿರಕ್ಕು ಹೆಚ್ಚಿನ ಜಮಸಂಖ್ಯೆ ಇರುತ್ತದೆ. ತಾಲ್ಲೂಕು ಮಟ್ಟದಲ್ಲಿ

ಇರಬಹುದಾದಂತಹ ಎಲ್ಲಾ ಸೌಲಭ್ಯಗಳನ್ನು ಹೊಂದಿದ್ದರೂ ಸಹ ದಾಂಡೇಲಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳದೆ ಇರುವುದು ವಿಷಾದನೀಯ ಹಾಗೂ ನಾನು ಮತ್ತು ಇಲ್ಲಿಯ ಸಾರ್ವಜನಿಕರು ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದ್ದರೂ ಇದುವರೆವಿಗೂ ತಾಲ್ಲೂಕು ಕೇಂದ್ರವನ್ನಾಗಿ ಪರಿವರ್ತಿಸಲು ಸರ್ಕಾರವು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಆದ್ದರಿಂದ, ದಾಂಡೇಲಿಯ ಸಾರ್ವಜನಿಕರು ಹಾಗೂ ಗಣ್ಯರು ದಿನಾಂಕ:11–2–2013 ರಂದು ದಾಂಡೇಲಿ ನಗರದವರು ಮತ್ತು ಅಕ್ಕಪಕ್ಕದ ಹಳ್ಳಿಯವರು ಪ್ರತಿಭಟನಾ ರ್‍ಯಾಲಿ ಹಾಗೂ ಬಂದ್ ಸಹ ಹಮ್ಮಿಕೊಂಡಿರುತ್ತಾರೆ. ಈ ಎಲ್ಲಾ ವಿಷಯಗಳನ್ನು ಸರ್ಕಾರವು ತೀವ್ರಗತಿಯಲ್ಲಿ ಪರಿಗಣಿಸಿ ದಾಂಡೇಲಿ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಶ್ರೀಕಾಂತ ಲಕ್ಷ್ಮಣ ಘೋಟ್ನೇಕರ್ ರವರ ಸೂಚನೆ**

2013–14ನೇ ಸಾಲಿನ ಮುಂಗಡ ಪತ್ರದಲ್ಲಿ 43 ತಾಲ್ಲೂಕುಗಳ ರಚನೆಗೆ ಘೋಷಣೆಯಾಗಿದೆ. ಆದರೆ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯನ್ನು ತಾಲ್ಲೂಕನ್ನಾಗಿಸುವ ಬಗ್ಗೆ ಈ ಹಿಂದಿನಿಂದಲೂ ಸಾಕಷ್ಟು ಬೇಡಿಕೆಗಳು ಮತ್ತು ಹೋರಾಟಗಳು ನಡೆದಿದ್ದವು. ಆದರೆ ಇದನ್ನು ಪರಿಗಣಿಸದೆ ಇರುವುದು ಅತ್ಯಂತ ವಿಷಾದಕರ ಸಂಗತಿಯಾಗಿದೆ ಮತ್ತು ಈ ಭಾಗದ ಜನತೆಗೆ ತೀರಾ ನಿರಾಶೆಯನ್ನುಂಟು ಮಾಡಿದೆ.

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ದಾಂಡೇಲಿ ಒಂದು ಔದ್ಯಮಿಕ ನಗರವಾಗಿದೆ. ಪ್ರವಾಸೋದ್ಯಮ ಕ್ಷೇತ್ರವಾಗಿದ್ದು ಇದನ್ನು ತಾಲ್ಲೂಕನ್ನಾಗಿಸುವ ಬಗ್ಗೆ ಈ ಹಿಂದೆ ಸಾರ್ವಜನಿಕರಿಂದ ಅನೇಕ ಹೋರಾಟಗಳು ನಡೆದಿದ್ದವು.

ದಾಂಡೇಲಿಯ ಜನರಿಗೆ ತಾಲ್ಲೂಕು ಕ್ಷೇತ್ರ ಹಳಿಯಾಳವಾಗಿದ್ದು ಯಾವುದೇ ಸರ್ಕಾರಿ ಕೆಲಸಗಳಿಗೆ ಹಳಿಯಾಳಕ್ಕೆ ಬರಬೇಕಾಗಿದೆ. ಹಳಿಯಾಳ ದಾಂಡೇಲಿಯಿಂದ 22-25 ಕಿ.ಮೀ. ದೂರವಿದ್ದು ಅಲ್ಲಿಗೆ ಹೋಗುವುದು ತೀರಾ ಕಷ್ಟಕರವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವಾರು ಯೋಜನೆಗಳ ಲಾಭ ಈ ಭಾಗದ ಜನರು ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ದಾಂಡೇಲಿ ಜನರ ಪರವಾಗಿ ದಾಂಡೇಲಿಯನ್ನು ತಾಲ್ಲೂಕು ಕೇಂದ್ರವನ್ನಾಗಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ದಾಂಡೇಲಿಯು ಕರ್ನಾಟಕ ರಾಜ್ಯದ ಮಹತ್ವದ ಪಟ್ಟಣವಾಗಿದ್ದು, ಈ ಪಟ್ಟಣ ಅಭಿವೃದ್ಧಿ ಹೊಂದಬೇಕಾದರೆ ಇದನ್ನು ತಾಲ್ಲೂಕನ್ನಾಗಿಸುವುದು ತೀರಾ ಅನಿವಾರ್ಯವಾಗಿದೆ. ದಾಂಡೇಲಿಯನ್ನು ತಾಲ್ಲೂಕನ್ನಾಗಿಸುವುದರಿಂದ ಈ ಭಾಗದ ಬಡ ಮಧ್ಯಮ ವರ್ಗದ ಜನರಿಗೆ, ಕಾರ್ಮಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಕಾರಣ ವಿಷಯವನ್ನು ಆದ್ಯತೆಯ ಮೇರೆಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಲು ವಿನಂತಿಸುತ್ತೇನೆ.

**ಹೇಳಿಕೆ**

ಸರ್ಕಾರವು 1973 ರಲ್ಲಿ ಶ್ರೀ ವಾಸುದೇವರಾವ್ ಆಯೋಗವನ್ನು, 1984 ರಲ್ಲಿ ಶ್ರೀ ಟಿ.ಎಂ. ಹುಂಡೇಕರ್ ಸಮಿತಿಯನ್ನು, 1986 ರಲ್ಲಿ ಶ್ರೀ ಪಿ.ಸಿ. ಗದ್ದೀಗೌಡರ್ ಸಮಿತಿಯನ್ನು ಹಾಗೂ 2007 ರಲ್ಲಿ ಶ್ರೀ ಎಂ.ಬಿ. ಪ್ರಕಾಶ್ ಸಮಿತಿಯನ್ನು ತಾಲ್ಲೂಕು ವಿಂಗಡನೆಗಾಗಿ ನೇಮಿಸಲಾಗಿತ್ತು. ಈ ನಾಲ್ಕು ಸಮಿತಿಗಳು ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದವು.

ರಾಜ್ಯದ 2013-14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಯವರು 43 ಹೊಸ ತಾಲ್ಲೂಕುಗಳನ್ನು ರಚಿಸಲು ಘೋಷಿಸಿರುತ್ತಾರೆ.

ಈ ಮೇಲ್ಕಂಡ ನಾಲ್ಕು ಸಮಿತಿಗಳು ದಾಂಡೇಲಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸಿರುವ ಬಗ್ಗೆ ಶಿಫಾರಸ್ಸು ಮಾಡಿರುವುದಿಲ್ಲ ಹಾಗೂ ದಿನಾಂಕ:08–02–2013 ರಂದು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ ಆಯವ್ಯಯ ಭಾಷಣದಲ್ಲೂ ಸಹ ದಾಂಡೇಲಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ ಪ್ರಸ್ತಾಪ ಇರುವುದಿಲ್ಲ. ಆದ್ದರಿಂದ ದಾಂಡೇಲಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ನಾಳೆ ಈ ಸದನಕ್ಕೆ ಬರುತ್ತಿದ್ದಾರೆ. ಅವರ ಹತ್ತಿರ ನಾನೂ ಕೂಡ ನಿಮ್ಮ ಪರವಾಗಿ ವಿನಂತಿ ಮಾಡುತ್ತೇನೆ. ಮುಖ್ಯಮಂತ್ರಿಯವರು ಏನು ತೀರ್ಮಾನ ಮಾಡುತ್ತಾರೆಂದು ನಾಳೆ ಕೇಳೋಣ.

**ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ:–** ಬಿಜೆಪಿ ಯವರಿಂದ ಹೇಳಿಸಬೇಕು.

**ಶ್ರೀ ವಿ. ಸೋಮಣ್ಣ:–** ಬಿಜೆಪಿ ಯವರು ಎಂದಲ್ಲ. ನನಗೆ ದೇಶಪಾಂಡೆ ಸಾಹೇಬರೂ ಕೂಡ ಹೇಳಿದ್ದಾರೆ. ಅದನ್ನು ಕೂಡಾ ನಾನು ಅವರ ಗಮನಕ್ಕೆ ತರುತ್ತೇನೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಅದಕ್ಕೆ ಉತ್ತರ ತಯಾರಿದ್ದರೆ ಉತ್ತರ ಕೊಡಿ.

**(ಇ) ವಿಷಯ:– ಮೈಸೂರು ಜಿಲ್ಲೆಯ 23 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಬೋಕ/ಬೋಧಕೇತರ ಸಿಬ್ಬಂದಿಯ ವೇತನದ ಚೆಕ್ ಬೌನ್ಸ್ ಆಗಿ ಸಂಬಳವಿಲ್ಲದೇ ಪರದಾಡುತ್ತಿರುವ ಬಗ್ಗೆ.**

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ,

ಮೈಸೂರು ಜಿಲ್ಲೆಯಲ್ಲಿರುವ 23 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಬೋಧಕ/ಬೋಧಕೇತರ ಸಿಬ್ಬಂದಿಯನ್ನು ಹೊರಗುತ್ತಿಗೆ ಎಜೆನ್ಸಿಯಿಂದ ನೇಮಿಸಲಾಗಿದೆ. ಹೊರಗುತ್ತಿಗೆ ಎಜೆನ್ಸಿಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟೆಂಡರ್ ಕರೆದು ಎಜೆನ್ಸಿಯನ್ನು ನಿಗಧಿಪಡಿಸಲಾಗುತ್ತದೆ. 2011–12ನೇ ಸಾಲಿಗೆ ಈ ರೀತಿ ಟೆಂಡರ್ ಕರೆದಾಗ ಕೆ.ಎಸ್.ಎಫ್–9ರವರನ್ನು ಹೊರಗುತ್ತಿಗೆ ಎಜೆನ್ಸಿಯಾಗಿ ಆಯ್ಕೆ ಮಾಡಲಾಗಿದೆ. ಇವರನ್ನು ಸಮಯದ ಅಭಾವದಿಂದಾಗಿ ಸೆಪ್ಟೆಂಬರ್ 2012ರವರಿಗೆ ಮುಂದುವರೆಸಿ, ಅವರಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆ.

ಕೆ.ಎಸ್.ಎಫ್–9ರವರು ಹೊರಗುತ್ತಿಗೆ ನೌಕರರಿಗೆ ಚೆಕ್ ನೀಡಿ, ಬೌನ್ಸ್ ಆಗಿರುವ ಮಾಹಿತಿ ದೊರೆತ ಕೂಡಲೇ ಕೆಲವರಿಗೆ ಇನ್ನೊಂದು ಚೆಕ್ ಕೊಡಿಸಿ, ವೇತನ ಪಾವತಿಸಲು ಕ್ರಮವಹಿಸಲಾಗಿದೆ. ಆದರೆ ಇನ್ನೂ ಕೆಲವರಿಗೆ ವೇತನ ಪಾವತಿ ಮಾಡಬೇಕಾಗಿದ್ದು. ಈ ಬಗ್ಗೆ ಕೂಡಾ ಹೊರಗುತ್ತಿಗೆ ಎಜೆನ್ಸಿಯ ಮೂಲಕ ಇನ್ನೊಂದು ಚೆಕ್ ಕೊಡಿಸಲು ಕ್ರಮವಹಿಸಲಾಗಿದೆ.

ಕೆ.ಎಸ್.ಎಫ್–9ರ ಎಜೆನ್ಸಿಯ ಅವಧಿಯು ಮುಗಿದ್ದು, ಆ ಸ್ಥಳದಲ್ಲಿ ಸದ್ಯ ಸುರಕ್ಷಾ ಎಜೆನ್ಸಿ ನೇಮಕವಾಗಿದ್ದು, ಸದರಿ ಸಂಸ್ಥೆಯು ಸಮರ್ಪಕವಾಗಿ ವೇತನ ಪಾವತಿಸುತ್ತಿದ್ದಾರೆ.

ಹೊರಗುತ್ತಿಗೆ ಎಜೆನ್ಸಿಯವರು ಹಣವಿಲ್ಲದೆ ಚೆಕ್ ನೀಡುವುದು ತಡವಾಗಿ ಬಿಲ್ಲುಗಳನ್ನು ಸಲ್ಲಿಸುವುದು ಮತ್ತು ಸರಿಯಾದ ಸಮಯದಲ್ಲಿ ಹಣ ಪಾವತಿಸದೇ ಇರುವ ಹೊರಗುತ್ತಿಗೆ ಎಜೆನ್ಸಿಗಳ ಮೇಲೆ ಕ್ರಮವಹಿಸಿ, ಅಂತಹ ಎಜೆನ್ಸಿಯನ್ನು ಕಪ್ಪು ಪಟ್ಟಿಗೆ ಸೇರಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಪತ್ರದಲ್ಲಿ ತಿಳಿಸಲಾಗಿದೆ.

## 14B 2013–14ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ

**ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಪ್ರಾರಂಭ ಮಾಡುವುದಕ್ಕೆ ಮೊದಲು ತಮ್ಮ ಅವಗಾಹನೆಗೆ ಒಂದು ವಿಚಾರವನ್ನು ತರುತ್ತೇನೆ. ನನಗೆ ಕನಿಷ್ಟಪಕ್ಷ 45 ನಿಮಿಷಗಳು ಬೇಕಾಗಿರುವುದರಿಂದ ನಾನು ನಮ್ಮ ನಾಲ್ಕೈದು ಜನ ಸದಸ್ಯರ ಬಳಿ ಸಮಯವನ್ನು ಕ್ರೆಡಿಟ್ ತೆಗೆದುಕೊಂಡಿದ್ದೇನೆ. ಮಾನ್ಯ ಅಲ್ಲಮಪಭು್ರ ಪಾಟೀಲ್, ಮಾನ್ಯ ಗಾಯಿತ್ರಿ ಶಾಂತೇಗೌಡ ಮುಂತಾದವರು ತಾವು ಮಾತನಾಡುವುದಿಲ್ಲವೆಂದು ನನಗೆ ಮಾತನಾಡಲು ತಿಳಿಸಿದ್ದಾರೆ. ನನಗೆ ಮಾತನಾಡಲು 45 ನಿಮಿಷಗಳು ಬೇಕಾಗಿದೆ.

**ಸಭಾಪತಿಯವರು:–** ನನ್ನ ಬಳಿ ಅಷ್ಟು ಸಮಯವಿಲ್ಲವಲ್ಲ.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರು ಎಷ್ಟು ಜನ ಮಾತನಾಡಿದ್ದಾರೆ ನೋಡಿ.

**ಸಭಾಪತಿಯವರು:–** ಹಾಗಾದರೆ ಇನ್ಯಾರು ಮಾತನಾಡುವುದಿಲ್ಲವೇ?

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇನ್ನೊಂದು ಇಬ್ಬರು ಮಾತನಾಡಬಹುದು.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೇ, ನಮ್ಮವರು ಯಾರು ಮಾತನಾಡಿಯೇ ಇಲ್ಲ.

**ಸಭಾಪತಿಯವರು:–** ನಿಮ್ಮವರೆ ಮೂರುವರೆ ಗಂಟೆಗಳ ಕಾಲ ಮಾತನಾಡಿದ್ದು.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮಾತನಾಡಿದ್ದನ್ನು ಬಿಡುತ್ತೇವೆಂದು ಹೇಳಿದ್ದೀರಿ. ನಾನು ವಿರೋಧ

ಪಕ್ಷದ ಉಪ ನಾಯಕನಾಗಿ ಬಜೆಟ್ ಮೇಲೆ ಇದು ನನ್ನ ಮೊದಲನೆಯ ಭಾಷಣ ಹಾಗೂ ಕಡೆಯ ಭಾಷಣವು ಸಹ ಆಗಿದೆ.

**ಸಭಾಪತಿಯವರು:–** ಕಾಂಗ್ರೆಸ್‌ನಿಂದ ಇನ್ನೊಬ್ಬರಿಗೆ ನಾನು ಮಾತನಾಡಲು ಅವಕಾಶವನ್ನು ಕೊಡುತ್ತೇನೆ.

**ಶ್ರೀ ದಯಾನಂದ:–** ನಂತರ ನಾವು ವಿರೋಧ ಪಕ್ಷದಲ್ಲಿ ಎಲ್ಲಿರುತ್ತೇನೆ. ಈ ಬಜೆಟ್ ಬಗ್ಗೆ ಉಪ ನಾಯಕನಾಗಿ ಇದು ನನ್ನ ಮೊದಲನೆಯ ಹಾಗೂ ಕಡೆಯ ಭಾಷಣ. ಮಾನ್ಯ ಸುರೇಶ್‌ರವರು ಸಹ ಮಾತನಾಡುವುದಿಲ್ಲವೆಂದು ಅವರ ಸಮಯವನ್ನು ನನಗೆ ಕ್ರೆಡಿಟ್ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಹಾಗಾದರೆ ನೀವು ಮಾತನಾಡಬಹುದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣನವರು ಹೇಳುತ್ತಿರುವುದೇನೆಂದರೆ, ದಯಾನಂದರವರು ಎಲ್ಲರ ಸಮಯವನ್ನು ಕ್ರೆಡಿಟ್ ತೆಗೆದುಕೊಂಡು ಸುಮಾರು ಸಮಯವನ್ನು ಮಾತನಾಡುತ್ತಾರೆ. ಅವರಿಗೆ ಸ್ವಲ್ಪ ಸಮಯದ ನಂತರ ಅವಕಾಶವನ್ನು ಕೊಡಿ. ನಮಗೆ ಬೇಗ ಅವಕಾಶವನ್ನು ಕೊಡಿ ಎಂದು ಕೇಳುತ್ತಿದ್ದಾರೆ.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೇ, ನಾನು ನನ್ನ ಸರದಿಗಾಗಿ ಮೂರು ದಿವಸಗಳಿಂದ ಕಾಯುತ್ತಿದ್ದೇನೆ. ಇವತ್ತು ನನ್ನ ಸರದಿ ಬಂದಿದೆ.

**ಸಭಾಪತಿಯವರು:–** ಆದಷ್ಟು ಬೇಗ ಮುಗಿಸಿ. ದಯಮಾಡಿ ನಿಮ್ಮ ಮಾತುಗಳನ್ನು ಸುಮಾರು 35 ನಿಮಿಷಗಳಲ್ಲಿ ಮುಗಿಸಿ.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ನನಗೆ ನೀಡಿರುವ ಸಮಯದಲ್ಲಿಯೇ ಮುಗಿಸುತ್ತೇನೆ. ನಾನು ಎಲ್ಲರ ಸಮಯವನ್ನು ಸಾಲ ತೆಗೆದುಕೊಂಡು ಮಾತನಾಡುತ್ತಿದ್ದೇನೆ. ಇವತ್ತು ನಾನು ಏಕೆ ಹೆಚ್ಚು ಸಮಯ ಮಾತನಾಡಲು ತಮ್ಮಲ್ಲಿ ಮನವಿಯನ್ನು ಮಾಡಿದೆ ಎಂದರೆ ಮೊದಲನೆಯದಾಗಿ ನಾನು ಈಗಾಗಲೇ ಹೇಳಿದ ಹಾಗೆ

ನಾನು ವಿರೋಧ ಪಕ್ಷದ ಉಪ ನಾಯಕನಾಗಿ ಬಜೆಟ್ ಮೇಲೆ ಮಾತನಾಡಲು ಇದು ಮೊದಲನೆಯ ಹಾಗೂ ಕಡೆಯ ಅವಕಾಶವಾಗಿದೆ ಎಂದು ಭಾವಿಸಿದ್ದೇನೆ. ಮೊನ್ನೆಯ ದಿವಸ ಮಾನ್ಯ ಈಶ್ವರಪ್ಪನವರು 'ನಮಗೆ ವಿರೋಧ ಪಕ್ಷದಲ್ಲಿ ಕೆಲಸವನ್ನು ಮಾಡಲಿಕ್ಕೆ ಬರುವುದಿಲ್ಲವೆಂದು' ಹೇಳಿದ್ದಾರೆ. ಹಾಗಾಗಿ ನಾನು ಅವರಿಗೆ ನಮಸ್ಕಾರವನ್ನು ಮಾಡಿ ಹೇಳಿದ್ದೇನೆ. 'ಕ್ಷಮಿಸಿಬಿಡಿ ನಮ್ಮನ್ನು, ನಾವು ಅಪ್ಪಿತಪ್ಪಿ ಬಂದು ಇಲ್ಲಿ ಕುಳಿತಿದ್ದೇವೆ, ನಿಮ್ಮ ಛೇರ್‌ನ್ನು ನಿಮಗೆ ಬಿಟ್ಟುಕೊಡುತ್ತೇವೆ, ನಮ್ಮ ಛೇರ್‌ನ್ನು ನಮಗೆ ಬಿಟ್ಟುಕೊಡಿ' ಎಂದು ಈಗಾಗಲೇ ಹೇಳಿದ್ದೇವೆ. ಅದು ಈಗಾಗಲೇ ಕಡತದಲ್ಲಿದೆ. ಜನಗಳು ಈಗಾಗಲೇ ತೀರ್ಮಾನ ಮಾಡಿದ್ದಾರೆಂದು ನಮಗೆ ಮಾಹಿತಿ ಇದೆ. ಗೃಹ ಸಚಿವರೆ ಹೇಳಿದ್ದಾರೆ.

**ಶ್ರೀ ಆರ್.ವಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ತಮ್ಮ ಮನೆಯ ಬಗ್ಗೆ ಚಿಂತೆ ಮಾಡಲಿ. ಪಕ್ಕದ ಮನೆಯವರ ಬಗ್ಗೆ ಏಕೆ ಚಿಂತೆ ಮಾಡುತ್ತಾರೆ?

**ಶ್ರೀ ದಯಾನಂದ:-** ಮಾನ್ಯ ಸಭಾಪತಿಯವರೇ, ಜೊತೆಗೆ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ನಾವು ಬಯಸುತ್ತೇನೆ. ಸ್ಥಳೀಯ ಸಂಸ್ಥೆಗಳನ್ನು ಪ್ರತಿನಿಧಿಸುವಂಥ ಸುಮಾರು 25 ಜನ ಶಾಸಕರು ಈ ಸದನದಲ್ಲಿದ್ದರು ಸಹ ಇಲ್ಲಿಯ ತನಕ ಈ ಬಜೆಟ್ ಭಾಷಣದ ಮೇಲೆ, ಸ್ಥಳೀಯ ಸಂಸ್ಥೆಗಳ ಮೇಲೆ ಮಾತನಾಡುವಂಥ ಅವಕಾಶ ಯಾವ ಸದಸ್ಯರಿಗೂ ಸಹ ಆಗಲಿಲ್ಲ. ಆದ್ದರಿಂದ ಆ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿಯೂ ಸಹ ಇವತ್ತು ಬೆಳಕು ಚೆಲ್ಲಬೇಕಾಗಿರುವುದು ಬಹಳ ಅವಶ್ಯಕವಾಗಿದೆ. ಏಕೆಂದರೆ ಇವತ್ತು 30 ಜಿಲ್ಲಾ ಪಂಚಾಯ್ತಿಗಳು, 177 ತಾಲ್ಲೂಕು ಪಂಚಾಯ್ತಿಗಳು, ಸುಮಾರು 5,627 ಗ್ರಾಮ ಪಂಚಾಯ್ತಿಗಳು, 93 ಪುರಸಭೆಗಳು, 65 ಪಟ್ಟಣ ಪಂಚಾಯ್ತಿಗಳು, 8 ಸಿಎಂಸಿ, 3 ಮಹಾನಗರ ಪಾಲಿಕೆಗಳು ಇವೆಲ್ಲವನ್ನು ಕೂಡ ಇವತ್ತು ಒಂದು ಲಕ್ಷಕ್ಕೂ ಹೆಚ್ಚು ಚುನಾಯಿತ ಪ್ರತಿನಿಧಿಗಳು ಈ ಸ್ಥಳೀಯ ಸಂಸ್ಥೆಗಳನ್ನು ಪ್ರತಿನಿಧಿಸುತ್ತಿದ್ದು, ಇವತ್ತು

ಸಾವಿರಾರು ಅಲ್ಲ ಲಕ್ಷಾಂತರ ಸಮಸ್ಯೆಗಳು ಈ ಸ್ಥಳೀಯ ಸಂಸ್ಥೆಗಳನ್ನು ಇವತ್ತು ಕಾಡುತ್ತಿವೆ. ಹಾಗಾಗಿ ಈ ವಿಚಾರಗಳನ್ನು ಇವತ್ತು ಪ್ರಸ್ತಾಪ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಹಾಗೆಯೆ ಇವತ್ತು ಕೈಗಾಗಿಕೆ ಸಂಘದ ಅಧ್ಯಕ್ಷನಾಗಿ ಸುಮಾರು 3,000 ಹೆಚ್ಚು ಕೈಗಾರಿಕೆಗಳನ್ನು ಪ್ರತಿನಿಧಿಸುತ್ತಿರುವಂಥ ಸಂದರ್ಭದಲ್ಲಿ ಕೈಗಾರಿಕೆಗಳ ವಿಚಾರದಲ್ಲಿಯೂ ಸಹ ಈ ಬಜೆಟ್ ಮೇಲೆ ಯಾವುದೇ ಒಂದು ಚರ್ಚೆಯನ್ನು ಮಾಡಲಿಕ್ಕೆ ಅವಕಾಶವಾಗಿರುವುದಿಲ್ಲ. ಹಾಗಾಗಿ ಆ ಒಂದು ವಿಚಾರವನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ನಾನು ಬಯಸುತ್ತೇನೆ. ಇನ್ನು ಹೆಚ್ಚಿನದಾಗಿ ಇವತ್ತು ನಾನು ಕೂಡ ಒಬ್ಬ ಉದ್ದಿಮೆದಾರನಾಗಿ ಈ ಒಂದು ಆರ್ಥಿಕ ವರ್ಷದಲ್ಲಿ 550 ಕೋಟಿಗೂ ಹೆಚ್ಚು ವಹಿವಾಟನ್ನು ಮಾಡಿ ಇವತ್ತು ಬಹು ದೊಡ್ಡ ತೆರಿಗೆಯನ್ನು ಈ ಸರ್ಕಾರಕ್ಕೆ ನನ್ನ ಸಂಸ್ಥೆ ಕೂಡ ಕೊಟ್ಟಿರುವುದರಿಂದ, ಆ ತೆರಿಗೆ ಹಣವನ್ನು ಸರ್ಕಾರ ಯಾವ ರೀತಿಯಾಗಿ ಸದ್ಬಳಕೆ ಮಾಡುತ್ತಿದೆ ಎನ್ನುವಂಥಾದ್ದನ್ನು ಪ್ರಸ್ತಾಪ ಮಾಡಬೇಕಾಗಿದೆ. ಈ ಸರ್ಕಾರ ಮೂರು ವರ್ಷಗಳಿಂದ ಅಂದರೆ 2011–12ರಲ್ಲಿ ಸುಮಾರು 17,000 ಕೋಟಿ ರೂಪಾಯಿ, 2012–13ರಲ್ಲಿ ಸುಮಾರು 19,000 ಕೋಟಿ ರೂಪಾಯಿ ಮತ್ತು 2013–14ರಲ್ಲಿ ಇವತ್ತು 22,000 ಕೋಟಿ ರೂಪಾಯಿಯ ಕೃಷಿ ಬಜೆಟ್‌ನ್ನು ಇವತ್ತು ಮಂಡನೆ ಮಾಡಿದೆ. ಇಂತಹ ಸಂದರ್ಭದಲ್ಲಿ ಇವತ್ತು ಬರಗಾಲದಿಂದ ಸುಮಾರು 38 ಲಕ್ಷ ಎಕರೆಗಳಲ್ಲಿ ಬೆಳೆ ನಾಶವಾಗಿ ಬೆಳೆ ಹಾನಿ 5,273 ಕೋಟಿ ರೂಪಾಯಿಗಳ ಬೆಳೆ ನಷ್ಟವಾಗಿದ್ದರೂ ಸಹ ಸರ್ಕಾರ ಬೆಳೆ ವಿಮೆ ಕೊಟ್ಟಿರತಕ್ಕಂಥಾದ್ದು ಕೇವಲ 406 ಕೋಟಿ ರೂಪಾಯಿಗಳು. ಉಳಿದಂತೆ ರೈತರು ಸುಮಾರು 5,000 ಕೋಟಿ ರೂಪಾಯಿಯಷ್ಟು ನಷ್ಟವನ್ನು ಅನುಭವಿಸಿದ್ದಾರೆ. ಹೀಗಿರತಕ್ಕಂಥ ಸಂದರ್ಭದಲ್ಲಿ ಇವತ್ತು ನಾವು ಒಂದು ವಿಚಾರವನ್ನು ಗಮನಿಸಬೇಕಾಗುತ್ತದೆ. ಒಟ್ಟಾರೆ ಇವತ್ತು ಎಷ್ಟೇ ಇಲಾಖೆಗಳಿದ್ದರೂ ರೈತರು, ರೈತ ಕಾರ್ಮಿಕರು, ವಾಣಿಜ್ಯೋದ್ಯಮ ಮತ್ತು ಅದರಲ್ಲಿರತಕ್ಕಂಥ ಕಾರ್ಮಿಕ ವರ್ಗ ಮತ್ತು service industries, trade and

industries, service industries ಈ ಒಂದು ಭಾಗದಲ್ಲಿ ಇವೆರಡು ಪ್ರಮುಖವಾದ ಅಂಗಗಳು. ರೈತ ಒಂದು ಕಡೆ ದೇಶಕ್ಕೆ ಅನ್ನವನ್ನು ಕೊಡಲಿಕ್ಕೆ ತನ್ನ ಎಲ್ಲಾ ಸ್ವಾರ್ಥವನ್ನು ಮರೆತು ರಾತ್ರಿ–ಹಗಲು ದುಡಿಯುತ್ತಾನೆ. ಇವತ್ತು ಅವನಿಗೆ ಸರ್ಕಾರಗಳು ಸರಿಯಾದ ಸವಲತ್ತುನ್ನು ಕೊಡದೇ ಇದ್ದರೂ ಕೂಡ ಆತ ತನ್ನ ಹೊಲದಲ್ಲಿ ಹಗಲು–ರಾತ್ರಿ ಕೆಲಸ ಮಾಡಿ ಈ ದೇಶಕ್ಕೆ ಅನ್ನ ಕೊಡುತ್ತಿರತಕ್ಕಂಥ ಸಂದರ್ಭದಲ್ಲಿ ಆ ರೈತನಿಗೆ ಸರಿಯಾದ ಸವಲತ್ತುಗಳನ್ನು ಕೊಡುವುದರಲ್ಲಿ ನಾವು ವಿಫಲರಾಗಿದ್ದೇವೆ. ಹಾಗಾಗಿ ರೈತನಿಗೆ ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಯಿಂದ ಬರಗಾಲದ ಸಂದರ್ಭದಲ್ಲಿ ಇವತ್ತು ಕೊಡುವುದರಲ್ಲಿ ನಾವು ವಿಫಲರಾಗಿದ್ದೇವೆ. ಹಾಗಾಗಿ ರೈತನಿಗೆ ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಯಿಂದ ಬರಗಾಲದ ಸಂದರ್ಭದಲ್ಲಿ ಇವತ್ತು ಬಜೆಟ್‌ನಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. 6,000 ಕೋಟಿ ರೂಪಾಯಿಗೂ ಹೆಚ್ಚಿನ ಹಣವನ್ನು ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಉಪಯೋಗಿಸಿಕೊಂಡು ಇವತ್ತು ರೈತರು ತಮ್ಮ ಬದುಕನ್ನು ನಡೆಸಲಿಕ್ಕೆ ಸಹಕಾರಿಯಾಗುವಂಥ ಒಂದು ಕೆಲಸವನ್ನು ಮಾಡಿರುವುದರಿಂದ ಅಂತಹ ಒಂದು ಉದ್ಯೋಗ ಖಾತ್ರಿಯನ್ನು ಕೊಟ್ಟಂತಹ ಕೇಂದ್ರ ಸರ್ಕಾರವನ್ನು ನಾವು ಇವತ್ತು ಪ್ರಶಂಸೆ ಮಾಡಬೇಕಾಗುತ್ತದೆ. ಬರಗಾಲದಿಂದ ಜನರು ತತ್ತರಿಸಿ ಹೋಗಿರುವಂಥ ಸಂದರ್ಭದಲ್ಲಿ, ಬೆಳೆ ನಷ್ಟ ಆಗಿರತಕ್ಕಂಥ ಸಂದರ್ಭದಲ್ಲಿ ಬಜೆಟ್‌ನಲ್ಲಿ 2 ರೂ ಗೆ ಅಕ್ಕಿಯನ್ನು ಕೊಡುತ್ತೇವೆ ಎಂದು ಇವತ್ತು ಏನು ಒಂದು ಆಶ್ವಾಸನೆಯನ್ನು ಮುಂದಿನ ಇವರ ಸರ್ಕಾರ ಬಂದಂಥ ಸಂದರ್ಭದಲ್ಲಿ ಮಾಡುತ್ತೇವೆ ಎನ್ನುವುದನ್ನು ಹೇಳಿದ್ದಾರೆ. ಇವತ್ತು ನಾವು ಒಂದು ಮಾತನ್ನು ಹೇಳುತ್ತೇವೆ. ಇವತ್ತು ನಾವು ರೈತರಿಗಾಗಲಿ, ಈ ನಾಡಿನ ಜನರಿಗಾಗಲಿ ತಿನ್ನಲಿಕ್ಕೆ ಮೀನನ್ನು ಕೊಡುವುದಕ್ಕಿಂತ ಹೆಚ್ಚಿಗೆ ಮೀನನ್ನು ಹಿಡಿಯುವುದು ಹೇಗೆ ಎನ್ನುವಂಥಾದ್ದನ್ನು ಕಲಿಸಬೇಕು ಎನ್ನುವಂಥ ಉದ್ದೇಶದಿಂದ ಜನರಿಗೆ ಉದ್ಯೋಗವನ್ನು ಕೊಡುವುದು ಹೆಚ್ಚು ಮಹತ್ವವೇ ವಿನಃ ಅವನಿಗೆ ಒಂದು ಸಮಯದ ಊಟವನ್ನು ಕೊಡುವುದು ಹೆಚ್ಚು ಮಹತ್ವವಲ್ಲ. ಹಾಗಾಗಿ ಉದ್ಯೋಗ ಖಾತ್ರಿ ಯೋಜನೆಯ ಮೂಲಕ

ಸಾವಿರಾರು ಕೋಟಿ ರೂಪಾಯಿಗಳನ್ನು ಇವತ್ತು ಯುಪಿಎ ಸರ್ಕಾರ ಈ ರಾಜ್ಯಕ್ಕೆ ಕೊಟ್ಟಿದೆ. ಆ ಮೂಲಕ ಬರಗಾಲದ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಉಪಯೋಗಿಸಿದಂಥ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಸುಮಾರು 6,000 ಕೋಟಿಗೂ ಮಿಗಿಲಾದ ಹಣ ಇವತ್ತು ರೈತನ ಸಹಕಾರಕ್ಕೆ ಬಂದಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ ಅದಕ್ಕಾಗಿ ಇವತ್ತು ನಾನು ಕೇಂದ್ರ ಸರ್ಕಾರವನ್ನು ಪ್ರಶಂಸೆ ಮಾಡುತ್ತೇನೆ. ನಾವೇಕೆ ಆತುರ ಪಡೆಬೇಕು. ಸರ್ಕಾರದವರು ತಮ್ಮ ಉತ್ತರದಲ್ಲಿ ಹೇಳುತ್ತಾರೆ. ಮಾನ್ಯ ಸೋಮಣ್ಣನವರು ಬಹಳ generous. ಅವರ ಸಮಯ ಹೆಚ್ಚು-ಕಡಿಮೆಯಾಗಬಾರದೆಂದು ಅವರು ಮಾತನಾಡುತ್ತಿಲ್ಲ ಅಷ್ಟೆ. ಹಾಗಾಗಿ ಇವತ್ತು ಇಂತಹ ಒಂದು ವಿಚಾರವನ್ನು ನಾನು ಬಹಳ ಸಂತೋಷದಿಂದ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಇವತ್ತು ರೈತ ಮತ್ತು ವಾಣಿಜ್ಯೋದ್ಯಮ ಬಹಳ ಮುಖ್ಯವಾದ ಅಂಗ ಎಂದರೆ ರೈತ ಯಾವ ರೀತಿ ಈ ದೇಶದ ಜನರಿಗೆ ಅನ್ನವನ್ನು ಕೊಡುತ್ತಾನೆ, ಅದೇ ರೀತಿ ಈ ದೇಶದ ಆರ್ಥಿಕ ವ್ಯವಸ್ಥೆ ಏನಾದರೂ ನಡೆಯಬೇಕೆಂದರೆ, ಈ ದೇಶದ ಸಂಪೂರ್ಣ ಆರ್ಥಿಕ ವ್ಯವಸ್ಥೆ ವಾಣಿಜ್ಯೋದ್ಯಮದ ಮೇಲೆ ನಿಂತಿದೆ. ಅಂತಹ ಒಂದು ವಾಣಿಜ್ಯೋದ್ಯಮದಿಂದ ಇವತ್ತು ಏನು ರಾಜ್ಯದಲ್ಲಿ ಶೇಕಡ 61 ರಷ್ಟು VAT (Value Added Tax) ಮೂಲಕ ಇವತ್ತು ತೆರಿಗೆ ವಸೂಲಾಗುತ್ತಿದೆ. ಬಜೆಟ್‌ನ್ನು ಪ್ರತಿವರ್ಷ ಎಷ್ಟೇ ಹೆಚ್ಚು ಮಾಡುತ್ತಾ ಹೋದರೂ ಕೂಡ ಶೇಕಡ 61ರಷ್ಟು ಏನಿದೆ, ಅದು standard ಆಗುತ್ತದೆ. ನಿಮ್ಮ ಬಡ್ಜೆಟ್‌ಗೆ proportionate ಆಗಿ ಈ ಒಂದು ತೆರಿಗೆಯ ಪ್ರಮಾಣವನ್ನು ಸರ್ಕಾರ ಹೆಚ್ಚಿಸುತ್ತಾ ಹೋಗುತ್ತಿದ್ದರೂ ಕೂಡ ವಾಣಿಜ್ಯೋದ್ಯಮ ಈ ಎಲ್ಲಾ ತೆರಿಗೆಗಳನ್ನು ಭರಿಸಿಕೊಂಡು ಸರ್ಕಾರಕ್ಕೆ ಸಕಾಲದಲ್ಲಿ ಈ ತೆರಿಗೆಗಳನ್ನು ತುಂಬುತ್ತಾ ಇರುವುದರಿಂದ ಸರ್ಕಾರ ಉತ್ತಮ ರೀತಿಯಲ್ಲಿ ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವಾಗಿದೆ. ಸರ್ಕಾರದ ಒಂದು ಗಾಲಿ ಮುಂದೆ ಹೋಗುವುದಕ್ಕೆ ಸಾಧ್ಯವಾಗಿದೆ. ಹಾಗಾಗಿ ನಾವು ವಾಣಿಜ್ಯೋದ್ಯಮದ ಎಲ್ಲಾ ರಂಗವನ್ನು ಅಭಿನಂದಿಸಬೇಕಾಗುತ್ತದೆ. ಅಂತಹ ಒಂದು ವಾಣಿಜ್ಯೋದ್ಯಮ ಕೈಗಾರಿಕೆ ಮತ್ತು ಖನಿಜಗಳ ಬಗ್ಗೆ

ಆಯವ್ಯಯವನ್ನು ತೆಗೆದು ನೋಡಿ. ಇವತ್ತು ವಾಣಿಜ್ಯೋದ್ಯಮಕ್ಕೆ ಮೀಸಲಾಗಿರುವುದು ಕೇವಲ 2 ಪರ್ಸೆಂಟ್ ಮಾತ್ರ. 61 ಪರ್ಸೆಂಟ್ ಕಾಣಿಕೆಯನ್ನು ಸರ್ಕಾರಕ್ಕೆ ಕೊಡುತ್ತಿರುವಂತಹ ಈ ವಾಣಿಜ್ಯೋದ್ಯಮಕ್ಕೆ ನಾವು ಕೇವಲ 2 ಪರ್ಸೆಂಟ್ ಅನ್ನು ಮೀಸಲಿಟ್ಟಿದ್ದೇವೆ. ಬರೀ ಈ ವರ್ಷದ ಆಯವ್ಯಯದ ಬಗ್ಗೆ ಮಾತ್ರ ನಾನು ಹೇಳುತ್ತಿಲ್ಲ. ಕಳೆದ 2–3 ವರ್ಷಗಳಿಂದ ಸತತವಾಗಿ 2 ಪರ್ಸೆಂಟ್ ಅನ್ನು ಮೀಸಲಿಡುತ್ತಿದ್ದೇನೆ. 2 ರಿಂದ 6 ಪರ್ಸೆಂಟಿಗೆ ಏರಿಲ್ಲ 3 ಪರ್ಸೆಂಟಿಗೆ ಇಳಿದಿಲ್ಲ (ಆರಕ್ಕೇರಲಿಲ್ಲ ಮೂರಕ್ಕೆ ಇಳಿಯಲಿಲ್ಲ) ಎಂದು ಗ್ರಾಮೀಣ ಭಾಷೆಯಲ್ಲಿ ಏನು ಹೇಳುತ್ತೇವೆ ಆ ರೀತಿ ಇಲ್ಲೂ ಕೂಡ ಆಗಿದೆ. ಕಳೆದ ಮೂರು ವರ್ಷದಿಂದ ಅದು 2 ಪರ್ಸೆಂಟಿಗಿಂತ ಮೇಲೆ ಹೋಗಲೇ ಇಲ್ಲ. ಮೂರು ವರ್ಷದಿಂದ ಇಂತಹ ಒಂದು ದೊಡ್ಡ ತೆರಿಗೆಯನ್ನು ಕೊಡತಕ್ಕಂಥಹ ಈ ವಾಣಿಜ್ಯ ರಂಗಕ್ಕೆ ಕೇವಲ 2 ಪರ್ಸೆಂಟ್ ಮೀಸಲಿಟ್ಟಿರುವುದು ಸರಿಯಲ್ಲ. ಮಾನ್ಯ ಸಭಾ ನಾಯಕರೆ ಒಬ್ಬ ಕೈಗಾರಿಕೋದ್ಯಮಿಯಾಗಿ ನಾನು ಈ ವಿಚಾರವನ್ನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ತಮ್ಮ ಆಡಳಿತಾವಧಿಯಲ್ಲಿ ಈ 2 ಪರ್ಸೆಂಟ್ ಅನ್ನು ಕನಿಷ್ಠ ಪಕ್ಷ 10 ಪರ್ಸೆಂಟಿಗೆ ಏರಿಸಬೇಕೆಂದು ನಾನು ತಮಲ್ಲಿ ಮನವಿ ಮಾಡುತ್ತಿದ್ದೇನೆ. ಇವತ್ತು ವಾಣಿಜ್ಯೋದ್ಯಮ 61 ಪರ್ಸೆಂಟ್ VAT ಅನ್ನು ತುಂಬುತ್ತಿದೆ. ಯಾವುದೇ ರಂಗದಲ್ಲೂ ಕೂಡ ನಿಮ್ಮ R.T.O., ಮೂಲಕ ಅಂದರೆ ಈ ಮೋಟಾರು ವಾಹನಗಳ Road Tax ಏನು ಇದೆ ಅದರಲ್ಲೂ ಕಡೆ 7 ಪರ್ಸೆಂಟ್ ಆದಾಯ ನಿಮ್ಮ ಸರ್ಕಾರಕ್ಕೆ ಜಮೆಯಾಗಿದೆ. ಇನ್ನು ಈ Stamps and Registration ನಲ್ಲಿ ಪ್ರತಿ ವರ್ಷ ನಿಮಗೆ 10 ಪರ್ಸೆಂಟ್ ಬಂದಿದೆ. ನೀವು ಪ್ರತಿ ವರ್ಷವೂ ಆಯವ್ಯಯದಲ್ಲಿ ಹೆಚ್ಚು ಮಾಡುತ್ತಿದ್ದರೂ ಕೂಡ ಅದಕ್ಕೆ ಹೊಂದಾಣಿಕೆಯನ್ನು ಮಾಡಿಕೊಂಡು ಆ ತೆರಿಗೆ ಹಣವನ್ನು ಸರ್ಕಾರಕ್ಕೆ ತುಂಬಿಸುವ ಕೆಲಸವನ್ನು ಈ ನಾಡಿನ ಜನ ಮಾಡುತ್ತಿದ್ದಾರೆ. ಮಾನ್ಯ ಸಭಾ ನಾಯಕರೆ, ಜೊತೆಗೆ ಮತ್ತೊಂದು ಮಹತ್ವದ ವಿಚಾರವನ್ನು ತಮಗೆ ಹೇಳಬಯಸುತ್ತೇನೆ. ಈ ಮಹತ್ವದ ವಿಚಾರವನ್ನು ತಾವೂ ಕೂಡ ಒಪ್ಪುತ್ತೀರಿ ಎಂದು ಭಾವಿಸುತ್ತೇನೆ. ಇದು ಬಹಳ ಮಹತ್ವವಾದ ವಿಚಾರ.

ಮಾನ್ಯ ಸಭಾ ನಾಯಕರೆ, ತಾವೂ ಕೂಡ ಇದಕ್ಕೆ ಸಮ್ಮತಿಯನ್ನು ಕೊಡುತ್ತೀರಿ ಎಂದು ಹೇಳಬಯಸುತ್ತೇನೆ. ತಾವು ಪ್ರತಿ ಬಾರಿ ಆಯವ್ಯಯದ ಮೊತ್ತವನ್ನು ಹೆಚ್ಚು ಮಾಡುತ್ತಾ ಹೋಗುತ್ತೀರಿ. ಕಳೆದ ಬಾರಿ 1 ಲಕ್ಷ ಕೋಟಿ ಆಯವ್ಯಯವನ್ನು ಮಂಡನೆ ಮಾಡಿದ್ದಿರಿ. ಈ ಬಾರಿ 1,17,005 ಕೋಟಿಯ ಆಯವ್ಯಯವನ್ನು ಮಂಡನೆ ಮಾಡಿದ್ದೀರಿ. ನೀವು ಬಡ್ಜೆಟ್ ಅನ್ನು ಹೆಚಚು ಮಾಡಿದಂತೆಲ್ಲಾ ಅದಕ್ಕೆ proportionate ಆಗಿ ಜನರ ಮೇಲೆ ತೆರಿಗೆಯನ್ನು ಹಾಕುತ್ತೀರಿ. ನಾವು ಅದನ್ನು ಕಟ್ಟುತ್ತಿದ್ದೇವೆ. ಆ ಆಯವ್ಯಯದಲ್ಲಿ ನಿಮ್ಮ ತೆರಿಗೆ ವಸೂಲಿ ಶೇಕಡ 20 ರಿಂದ 21 ಪರ್ಸೆಂಟ್ ಈ excise ಲಾಬಿಯಿಂದ ಬರುತ್ತಿದೆ. ಅಂದರೆ ಪ್ರತಿ ವರ್ಷ ಕುಡಿಯುವ ಪ್ರಮಾಣ ಕೂಡ 20 ಪರ್ಸೆಂಟ್ ಹೆಚ್ಚಬೇಕಾ ಎನ್ನುವುದು ಇಲ್ಲಿ ಯೋಚನೆ ಮಾಡಬೇಕಾದ ಸಂಗತಿಯಾಗಿದೆ. ಇಒದು ಒಂದು ರೀತಿಯಲ್ಲಿ ಯಕ್ಷ ಪ್ರಶ್ನೆಯಾಗಿ ಉಳಿದಿದೆ. ಇದು ಯಾವ ನ್ಯಾಯ. ಬೇರೆ ರೀತಿಯಲ್ಲಿ ತೆರಿಗೆಯನ್ನು ಹಾಕಿ. ಪ್ರತಿ ವರ್ಷ ಕುಡಿಯುವವರ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಏನು ಒಂದು ಟಾರ್ಗೆಟ್ ಅನ್ನು ಇಟ್ಟಿದ್ದೀರಲ್ಲಾ ಇದು ಯಾವ ನ್ಯಾಯ ಎಂದು ನನಗೆ ಅರ್ಥವಾಗುತ್ತಿಲ್ಲ. ಕಳೆದ ಮೂರು ವರ್ಷದ ಆಯವ್ಯಯವನ್ನು ನೋಡಿದ್ದೇನೆ. ನಿಮ್ಮ ಆಯವ್ಯಯದ ಶೇಕಡ 20 ಪರ್ಸೆಂಟ್ ಈ ಕುಡುಕರಿಂದ ಬರಬೇಕು. ಅಂದರೆ ಈ Excise Duty ಯಿಂದ ಬರುತ್ತದೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ದಯಾನಂದ ಅವರು ಒಳ್ಳೆಯ ಕೈಗಾರಿಕೋದ್ಯಮಿ. ನನಗೂ ಸುಮಾರು 25–30 ವರ್ಷಗಳಿಂದ ಗೊತ್ತಿರುವವರು. ಬೆಂಗಳೂರು ನಗರದಲ್ಲಿರುವ ನಾನು ಅವರ ಒಡನಾಟವನ್ನು ಉಳ್ಳವನು. ಈ ರಾಜ್ಯದ ವ್ಯವಸ್ಥೆಯ ಬಗ್ಗೆ ಇಲ್ಲಿ ಹೇಳಬೇಕಾಗುತ್ತದೆ. ನಾನು ಕುಡಿಯುವವನೂ ಅಲ್ಲ. ನನಗೆ ಈ ವೈನು, ಬೀರು ಏನೂ ಗೊತ್ತಿಲ್ಲ. ಪ್ರಾಮಾಣಿಕವಾಗಿ ಹೇಳುವುದಾದರೆ ನನಗೆ ಅದರ ಗಂಧ ಕೂಡ ಗೊತ್ತಿಲ್ಲ. 1994 ರಿಂದ ನಾನು ಕೆಳಮನೆಯ ಸದಸ್ಯನಾಗಿ ಮತ್ತು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ತಮ್ಮ ಮೂಲಕ ನಮ್ಮ ಮಿತ್ರರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಏನೆಲ್ಲಾ ಮಾಡಿ ಇವತ್ತಿನ ಸಂದರ್ಭದಲ್ಲಿ

ನಾವು ಹೆಚ್ಚಿಗೆ ಮಾಡುತ್ತೇವೆ. ಒಂದು ದೂರದೃಷ್ಟಿಯಿಂದ ಇವೆಲ್ಲವೂ ಆಗಬೇಕಾಗಿದೆ. ಯಾವುದಕ್ಕೆ ಎಲ್ಲೆಲ್ಲಿ ಆದ್ಯತೆಯನ್ನು ಕೊಡಬೇಕು ಎನ್ನುವುದನ್ನು ಕೊಡಬೇಕಾಗುತ್ತದೆ. ಕೆಲವು ಜನರ ಜೀವನದ ಮಟ್ಟದಲ್ಲಿ ಒಂದು ರೀತಿಯ hobby ಯಾಗಿ ಸಂಜೆ ಆಗುತ್ತಿದ್ದ ಹಾಗೆ ಇದನ್ನು ತೆಗೆದುಕೊಳ್ಳುವ ಅಭ್ಯಾಸವನ್ನು ರೂಢಿ ಮಾಡಿಕೊಂಡಿರುತ್ತಾರೆ. ಕಳೆದ 7–8 ವರ್ಷಗಳಿಂದೀಚೆಗೆ ಜೇಬಿನಲ್ಲಿ ಹಣ ಇಲ್ಲದಿದ್ದರೂ ಕೂಡ ಕೆಲವು ಚಟಗಳು ಈಡೇರಲೇಬೇಕು ಎಂಬ ವ್ಯವಸ್ಥೆಯನ್ನು ಅಳವಡಿಸಿಕೊಂಡಿರತಕ್ಕಂಥಾದ್ದೂ ಕೂಡ ಇದೆ. ಕೇವಲ ಸರ್ಕಾರ ಆ ಲಾಬಿಯಿಂದ ಹಣವನ್ನು ಮಾಡಬೇಕೆಂದು ಅಲ್ಲ. ಮತ್ತೊಂದು ಮಗದೊಂದು ಮಾಡಬೇಕೆಂದು ಅಲ್ಲ. ಸರ್ಕಾರ ಇದನ್ನು ಸ್ವಲ್ಪವಾದರೂ ಸಡಿಲಿಸಿದರೆ ಇನ್ನೊಂದು ರೂಪದಲ್ಲಿ ಇದನ್ನು ಬಳಸುತ್ತಾರೆ. ಇದೆಲ್ಲವನ್ನೂ ನಾವು ಗಮನದಲ್ಲಿ ಇಟ್ಟುಕೊಂಡೇ MSIL ಇದರ ವಹಿವಾಟನ್ನು ನೋಡಿಕೊಳ್ಳುವ ಮೂಲಕ ತೆರಿಗೆ ಸೋರಿ ಹೋಗುವುದನ್ನು ತಡೆಗಟ್ಟಲಾಗಿದೆ. ಇದು ತಮ್ಮೆಲ್ಲರಿಗೂ ಗೊತ್ತಿದೆ. ಈಗ 20 ಪರ್ಸೆಂಟ್ ಏನು ಮಾಡಿದ್ದೇವೆ, ನಾಳೆ ನೀವು ಬಂದರೂ ಅದನ್ನೇ ಮಾಡುತ್ತೀರಿ. ಅದಕ್ಕಿಂತ ಹೆಚ್ಚಾಗಿ ಅನಾವಶ್ಯಕವಾಗಿ ಪೋಲು ಆಗತಕ್ಕಂಥಾದ್ದನ್ನು ತಡೆಗಟ್ಟಬೇಕೆಂಬ ದೃಷ್ಟಿಯಿಂದ ಸರ್ಕಾರ ಮತ್ತೊಂದು ರೂಪದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಮತ್ತು ಎಲ್ಲೆಲ್ಲಿ ಸೋರಿಕೆ ಇದೆ ಅದನ್ನು ತಡೆಗಟ್ಟಿದರೆ ಹಣ ಬರುತ್ತದೆಯೋ ಮತ್ತು ಆ ಹಣವನ್ನು ಬೇರೆ ಒಂದು ರೂಪದಲ್ಲಿ ರಾಜ್ಯಕ್ಕೆ ಸಮರ್ಪಣೆ ಮಾಡತಕ್ಕಂಥ ಕೆಲಸವನ್ನು ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ ಅದು ನಿರಂತರವಾಗಿ ನಡೆದುಕೊಂಡು ಬಂದಿರತಕ್ಕಂತಹ ಒಂದು ಪ್ರಕ್ರಿಯೆಯಾಗಿದೆ.

**ಶ್ರೀ ಅಶ್ವಥ್‌ನಾರಾಯಣ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಮುಂಚೆ bill ಇಲ್ಲದೆಯೇ Distillery ಯಿಂದ ಹೊರಗೆ ಬರುತ್ತಿತ್ತು. ಈಗ ಒಂದೊಂದು Distillery ಗೆ ಒಬ್ಬೊಬ್ಬ D.C., ಇದ್ದಾರೆ.

**ಶ್ರೀ ದಯಾನಂದ:–** ತಾವು ಮಾನ್ಯ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಈ 'seconds' ಮತ್ತು 'thirds'

ಅನ್ನು ತಡೆಯಬೇಕೆಂದು ಈ ಪಾನ ನಿಗಮವನ್ನು ರಚನೆ ಮಾಡಿರಕ್ಕಂಥಾದ್ದು ತಮಗೂ ಗೊತ್ತಿದೆ. ನಾನು ಅದರ ಬಗ್ಗೆ ಆರೋಪ ಮಾಡಿಲ್ಲ. ನಿಮ್ಮ ಪಕ್ಷ ತಪ್ಪು ಮಾಡಿದೆ ಎಂದು ಅಲ್ಲ. ನನ್ನ ಒಂದು ಚಿಂತನೆ ಏನೆಂದರೆ, ಇದರ ಬಗ್ಗೆ ಪಕ್ಷ ಭೇದ ಮರೆತು ವಿಚಾರ ಮಾಡಬೇಕಾಗುತ್ತದೆ. ಇದನ್ನು ನೀವೆಲ್ಲರೂ ಒಪ್ಪುತ್ತೀರೆಂದು ಭಾವಿಸುತ್ತೇನೆ. ನಿಮ್ಮ ಪಕ್ಷ ಮಾತ್ರ ತಪ್ಪು ಮಾಡಿದ್ದೆಂದು ಅಲ್ಲ. ಯಾವುದೇ ಪಕ್ಷ ಆಗಿರಲಿ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗಿದೆ. ನಮ್ಮ ಬಡ್ಜೆಟ್ ಪ್ರಮಾಣಕ್ಕೆ ಅನುಗುಣವಾಗಿ ಜನರು ಕುಡಿಯಬೇಕೆಂದು ಹೇಳಿದರೆ ಅದು ಸರಿಯಿಲ್ಲ. ಪಾನ ನಿಗಮ ಬರುವುದಕ್ಕೆ ಮೊದಲು MSIL ಮೂಲಕ ಈ ಮದ್ಯ ಸರಬರಾಜು ಆಗವುದಕ್ಕೆ ಮೊದಲು, 'seconds' ಮತ್ತು 'thirds' ನಲ್ಲಿ leakage ಇತ್ತು. ತೆರಿಗೆ ವಂಚನೆಯಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಈ ಪ್ರಮಾಣವನ್ನು ಹೆಚ್ಚು ಮಾಡಿಕೊಂಡು ಬಂದದ್ದು ಸರಿ. ಆದರೆ ಮಾನ್ಯ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿ ಈ ಪಾನ ನಿಗಮವನ್ನು ಮಾಡುವ ಮೂಲಕ ಎಲ್ಲವೂ clear ಆಗಿದೆ. 'seconds' ಇಲ್ಲ 'thirds' ಇಲ್ಲ. ಈ ಎಲ್ಲಾ ಸೋರಿಕೆಯನ್ನು ತಡೆದಿದ್ದೇವೆ. ಸೋರಿಕೆಗೆ ಎಲ್ಲೂ ಕೂಡ ಆಸ್ಪದ ಇಲ್ಲ. ಎಲ್ಲೂ ಕೂಡ ಹಣ ಪೋಲಾಗುತ್ತಿಲ್ಲ. ಮಾರ್ಚ್ 31 ಆದ ಮೇಲೆ ಏಪ್ರಿಲ್ 1 ನೇ ತಾರೀಖಿಗೆ ನೀವು ಅಂದರೆ, ನಿಮ್ಮ ಅಧಿಕಾರಿಗಳು ಆ ವೈನ್ ಸ್ಟೋರ್‌ನವರಿಗೆ ಶೇಕಡ 20 ಪರ್ಸೆಂಟ್ sale ಜಾಸ್ತಿಯಾಗಬೇಕು ಎಂದು ಹೇಳುತ್ತಾರೆ. ಒಂದು ದಿವಸದಲ್ಲಿ ಅಂದರೆ ಮಾರ್ಚ್ 31 ರಿಂದ ಏಪ್ರಿಲ್ 1 ಕ್ಕೆ ಒಂದು ದಿವಸದಲ್ಲಿ ಶೇಕಡ 20 ಪರ್ಸೆಂಟ್ ಮಾರಾಟ ಎಲ್ಲಿ ಜಾಸ್ತಿಯಾಗುತ್ತದೆ. ಅವರು indent ಹಾಕುವಾಗ ಅವರನ್ನು ನೀವು ಅಂದರೆ ನಿಮ್ಮ ಅಧಿಕಾರಿಗಳು ಇಷ್ಟು indent ಹಾಕಬೇಕು. ಇಷ್ಟು ಮಾರಾಟ ಜಾಸ್ತಿಯಾಗಬೇಕು. ಇಷ್ಟು ತೆರಿಗೆ ವಸೂಲಾಗಬೇಕು ನಮಗೆ ಇಷ್ಟು ತೆರಿಗೆ ಬರಬೇಕು ಇಷ್ಟು ಟಾರ್ಗೆಟ್ ನಮಗೆ ಇದೆ ಎಂದು ಹೇಳುತ್ತಾರೆ. ಶೇಕಡ 20 ಪರ್ಸೆಂಟ್ ಇರುವುದನ್ನು 15 ಪರ್ಸೆಂಟ್ ಎಂದು ಮಾಡಿ ಇಲ್ಲವೇ ಕಡೇ ಪಕ್ಷ 1 ಪರ್ಸೆಂಟ್‌ನಷ್ಟು ಕಡಿಮೆ ಮಾಡಿ. ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಮುಂದೆ ಬರುವಂತಹ ಸರ್ಕಾರಕ್ಕೆ ನಾವು ಸಲಹೆ ಮಾಡುತ್ತೇವೆ.

ವರ್ಷೇ ವರ್ಷೇ ಮುಂದೆ ಬರತಕ್ಕಂತಹ ಎಲ್ಲಾ ಸರ್ಕಾರಗಳಿಗೆ ನಾವು ಈ ಕುರಿತು ಸಲಹೆಯನ್ನು ನೀಡುತ್ತೇವೆ. ನಾವು ನೀವು ಎಲ್ಲರೂ ಸೇರಿ ಈ ಸಮಾಜದ ಮೇಲೆ ಆಗತಕ್ಕಂತಹ ದುಷ್ಪರಿಣಾಮಗಳನ್ನು ಆದಷ್ಟೂ ಕಡಿಮೆ ಮಾಡೋಣ. ಮಾನ್ಯ ರಾಜಶೇಖರನ್ ಅವರು ಮಾತನಾಡುವ ಸಂದರ್ಭದಲ್ಲಿ ಬಹಳ ನೋವಿನಿಂದ ಮಾತನಾಡಿದರು. ಇಂತಹ ಅಬಕಾರಿ ಹಣವನ್ನು ರಾಜ್ಯದ ಅಭಿವೃದ್ಧಿಗೆ ಶಿಕ್ಷಣಕ್ಕೆ ಉಪಯೋಗಿಸುತ್ತಿದ್ದೇವೆ ಇದು ಬಹಳ ನೋವು ಕೊಡುತ್ತಿದೆ ಎಂದು ಹೇಳಿದರು. ಇದನ್ನು ಯಾವ ಸರ್ಕಾರ ಮಾಡಿದೆ, ಇಲ್ಲವೇ ಯಾವ ಸರ್ಕಾರ ಮಾಡಿಲ್ಲ ಎಂದು ನಾನು ಹೇಳುತ್ತಿಲ್ಲ. ಮತ್ತು ನಿಮ್ಮ ಸರ್ಕಾರದ ಮೇಲೆ ನಾನು ಆರೋಪ ಮಾಡುತ್ತಿಲ್ಲ. ನಾವು ನೀವು ಒಟ್ಟಿಗೆ ಕೊಡಿ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕಾಗಿದೆ. 1,17,000 ಕೋಟಿ ರೂಪಾಯಿಯ ಆಯವ್ಯಯವನ್ನು ಮಂಡನೆ ಮಾಡಬೇಕೆಂದೇನೂ ಇಲ್ಲ. 1,10,000 ಕೋಟಿ ಆಗಲಿ. ಇನ್ನು 7 ಸಾವಿರ ಕೋಟಿಯನ್ನು ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿಕೊಳ್ಳಿ. ಬರಗಾಲ ಬಂದಂತಹ ಸಂದರ್ಭದಲ್ಲಿ ಕೈಗಾರಿಕೋದ್ಯಮಿಗಳಿಗೆ ಪಾಯಿಂಟ್ 5 ಪರ್ಸೆಂಟ್ ತೆರಿಗೆಯನ್ನು ಹೆಚ್ಚು ಮಾಡಿದ್ದರು. ಮೊದಲು 14 ಪರ್ಸೆಂಟ್ ತೆರಿಗೆಯನ್ನು ನಾವು ನೀಡುತ್ತಿದ್ದೆವು. ಈ ಬರಗಾಲದ ಕೊರತೆಯನ್ನು ಸರಿದೂಗಿಸುವುಕ್ಕೆ ಹಾಗೂ ರೈತರ ಸಾಲ ಮನ್ನಾ ಮಾಡುವುದಕ್ಕಾಗಿ ಪಾಯಿಂಟ್ 5 ಪರ್ಸೆಂಟ್ ಹೆಚ್ಚು ತೆರಿಗೆಯನ್ನು ನೀವು ಕೊಡಬೇಕೆಂದು ಕೈಗಾರಿಕೋದ್ಯಮಿಗಳ ಸಭೆಯನ್ನು ಕರೆದು ಕೇಳಿದಾಗ, ನಾವು ಅದಕ್ಕೆ ಧಾರಾಳವಾಗಿ 14.05 ತೆರಿಗೆಯನ್ನು ನೀಡಲು ಒಪ್ಪಿಗೆಯನ್ನು ಕೊಟ್ಟೆವು. ಈಗ ಬರಗಾಲ ಬಂದಿದೆ. ಏಪ್ರಿಲ್ ತಿಂಗಳಿನಿಂದ ಮತ್ತೆ ನಾವು ಅದನ್ನು 14 ಪರ್ಸೆಂಟಿಗೆ ಮಾಡುತ್ತೇವೆ ಎಂದು ಆವತ್ತು ಹೇಳಿದ್ದಿರಿ. ಆದರೆ ಈ VAT ಬಗ್ಗೆ ಚರ್ಚೆ ಮಾಡುವುದಕ್ಕೆ ಮೊದಲು ಈ Advisory Committee ಇದೆ ಇದರ ಸಭೆಯನ್ನು ಈ ಆಯವ್ಯಯವನ್ನು ಮಂಡನೆ ಮಾಡುವುದಕ್ಕೆ ಮುಂಚೆ ಈ ಸಭೆಯನ್ನು ಒಂದು ದಿವಸವಾದರೂ ಕರೆದಿದ್ದೀರಾ?

(6.30 ಘಂಟೆ)

ಈ ಬಜೆಟ್ ಆಗುವುದಕ್ಕೆ ಮೊದಲು ಒಂದು ದಿವಸವಾದರೂ ಕರೆದಿದ್ದೀರಾ ಎನ್ನುವುದನ್ನು ನೀವು ಕಡತವನ್ನು ತೆಗೆದು ನೋಡಿ ಅಥವಾ ಅಧಿಕಾರಿಗಳನ್ನು ಕೇಳಿ. ಏಕೆ ಈ ರೀತಿಯಾಗಿ ಮಾಡುತ್ತಿಲ್ಲ. ಇವತ್ತು 61% ತೆರಿಗೆಯನ್ನು ಆ ಒಂದು ಕ್ಷೇತ್ರದಿಂದ ವಸೂಲು ಮಾಡುತ್ತಿರುವಂತಹ ಸಂದರ್ಭದಲ್ಲಿ ಕನಿಷ್ಟ ಸೌಜನ್ಯಕ್ಕಾದರೂ ವಾಣಿಜ್ಯೋದ್ಯಮಿಗಳನ್ನು ಕರೆದು ನಿಮ್ಮ ಕಷ್ಟ ಏನಿದೆ, ನಿಮ್ಮ ಸುಖ ಏನಿದೆ, ನಿಮಗೆ ಏನಾಗಬೇಕಾಗಿದೆ ಎಂದು ಕೇಳಬೇಕಾಗಿತ್ತು. ನಾವು ಹೆಚ್ಚಿಗೆ ಏನು ಕೇಳುತ್ತಿರಲಿಲ್ಲ. ಇವತ್ತು ನಮ್ಮ ಬೇಡಿಗೆ ಬಹಳ ಸರಳವಾಗಿದೆ. ನಾವು ಸರ್ಕಾರಕ್ಕೆ 61% ತೆರಿಗೆಯನ್ನು ಕೊಡುತ್ತಿರುವಂತಹ ಸಂದರ್ಭದಲ್ಲಿ ಇವತ್ತು ನೀವು ಬಜೆಟ್‌ನಲ್ಲಿ ಕೇವಲ 2% ಹಣವನ್ನು ಮಾತ್ರ ಮೀಸಲು ಇಟ್ಟರೆ ನಾವು ಏನು ಮಾಡಬೇಕು?

ಇವತ್ತು ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಹೇಳುವುದೇನೆಂದರೆ, ಇವತ್ತು ಏನು ಒಬ್ಬ ಸಣ್ಣ ಉದ್ಯಮದಾರ ಒಂದು ಈಗಾಗಲೇ ನಮ್ಮ ಸಹ ಶಾಸಕರು ಮಾತನಾಡಿದಂತಹ ಸಂದರ್ಭದಲ್ಲಿ ಹೇಳುತ್ತಿದ್ದರು. ಮೂರು ದಿವಸ ಏನಾದರು tax returns ಕೊಡುವುದು ಲೇಟ್ ಅದರೆ ಫೈನ್ ಹಾಕುತ್ತಾರೆ. ಸಣ್ಣ ವ್ಯಾಪಾರಿದು ಕೇವಲ 5,000 ರೂಪಾಯಿಗಳು ಅಥವಾ 10,000 ರೂಪಾಯಿಗಳು ಮಾತ್ರ ಇರುತ್ತದೆ. ಅವನು ಕೊಡದೇ ಎಲ್ಲಿಗೂ ಅಂಗಡಿಯನ್ನು ಮುಚ್ಚಿಕೊಂಡು ಹೋಗಿ ಬಿಡುವುದಿಲ್ಲ. Proprietary concern ನಲ್ಲಿ ಅವನೇ ಮಾಲೀಕನಾಗಿ ಅಂಗಡಿ ಕೆಲಸವನ್ನು ಮಾಡಬೇಕು, Auditor ಕೆಲಸವನ್ನೂ ಕೂಡ ಅವನೇ ಮಾಡಬೇಕು. Returns ಕೊಡುವುದಕ್ಕೆ 7 ರಿಂದ 10 ದಿವಸಗಳಾಗುತ್ತದೆ. ಆದರೆ ಇವತ್ತು e-sugam ಇಲ್ಲ ಎಂದರೆ, good movement vehicle movement ಆಗುವುದಿಲ್ಲ, vehicle movement ಆಗುವುದಿಲ್ಲ. ಸಡನ್ ಅಗಿ e-sugam ಅನ್ನು ನಿಮ್ಮ ಅಧಿಕಾರಿಗಳು generate ಮಾಡುವುದಕ್ಕೆ ಆಗದೇ ಇರತಕ್ಕಂತಹ ಕೆಲಸವನ್ನು ಮಾಡುತ್ತಾರೆ. Block ಮಾಡುತ್ತಾರೆ. ಆದರೆ ಇವತ್ತು ಸಭಾ ನಾಯಕರೆ ನಾನು ಒಂದು ಮಾಹಿತಿಯನ್ನು ಕೊಡಬೇಕಾಗುತ್ತದೆ. ನೀವು ಏನು Mid-term Fiscal Plan ಕೊಡಲಾಗಿದೆ. ಅದನ್ನು ನೋಡಿ ಪುಟ ಸಂಖ್ಯೆ 82 ರಲ್ಲಿ ಇವತ್ತು ಟಯೋಟಾ

ಮೋಟಾರ್ಸ್ ಪ್ರವೇಟ್ ಲಿಮಿಟೆಡ್‌ಗೆ 412.14 ಕೋಟಿ ರೂಪಾಯಿಗಳ VAT ವಿನಾಯಿತಿಯನ್ನು ಕೊಡಲಾಗಿದೆ. ಜಪಾನ್‌ನಿಂದ ಆಡಳಿತವನ್ನು ನಿಯಂತ್ರಿಸುವಂತಹ ಒಂದು ಟಯೋಟಾ 412 ಕೋಟಿ ರೂಪಾಯಿಗಳ VAT ವಿನಾಯಿತಿಯನ್ನು ಕೊಡಲಾಗಿದೆ. ಮತ್ತು CST ಮುಂದೂಡಿಕೆ 14,197 ಕೋಟಿ ರೂಪಾಯಿಗಳು ಮತ್ತು VAT ಮುಂದೂಡಿಕೆ 10,936.74 ಕೋಟಿ ರೂಪಾಯಿಗಳು. ಒಂದು ಕಂಪನಿಯ ಉದಾಹರಣೆಯನ್ನು ಮಾತ್ರ ಹೇಳುತ್ತಿದ್ದೇನೆ. ಮತ್ತೆ ಟಿ.ವಿ.ಎಸ್. ಮೋಟಾರ್ಸ್ 1,903 ಕೋಟಿ ರೂಪಾಯಿಗಳು. ಅಂದರೆ ಇವತ್ತು ನಾವು ಏನು ಮಾಡುತ್ತಿದ್ದೇವೆ. ಇವತ್ತು ಯಾವ ರೀತಿಯಾಗಿ ಈ ದೇಶ ಸಣ್ಣ ರೈತರಿಂದ ಅವಲಂಬಿಸಿದೆ ಆದೇ ರೀತಿಯಾಗಿ ಈ ಒಂದು ರಾಜ್ಯ ಮತ್ತು ದೇಶ ಸಣ್ಣ ಕೈಗಾರಿಕೆ ಉದ್ಯೋಮಗಳನ್ನು ಅವಲಂಬಿಸಿದೆ. ಯಾವುದೇ ಒಂದು ಬೃಹದಾಕಾರದ ಕೈಗಾರಿಕೆಗಳು ನಡೆಯಬೇಕಾದರೆ ancillary units ಇಲ್ಲದೇ ಇವತ್ತು ಯಾವುದೇ ಬೃಹದಾಕಾರದ ಕೈಗಾರಿಕೆಗಳು ಕೂಡ ಕಾರು ಆಗಲಿ, Aero plane ಆಗಲಿ ಇದರ ಯಾವುದೇ ಯಂತ್ರಗಳನ್ನು ತಯಾರು ಮಾಡಬೇಕಾದರೆ ಅದಕ್ಕೆ ಹಾಕುವಂತಹ nut bolts, washers ನಂತಹ small accessories ಏನಿವೆ ಅವೆಲ್ಲಾ ಸಣ್ಣ ಕೈಗಾರಿಕೆಗಳಿಂದ ಬರಬೇಕಾಗಿದೆ.

**ಶ್ರೀ ವಿ. ಸೋಮಣ್ಣ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ಬಹಳ interisting ಆಗಿದೆ. ಶ್ರೀ ದಯಾನಂದರವರು ಮಾತನ್ನು ಮುಂದುವರೆಸಲಿ.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೆ, ಮಧ್ಯೆದಲ್ಲಿ ಯಾವುದೇ ತೊಂದರೆಯಾಗದೇ ಇರಲಿ ಎಂದು ಮೊದಲೇ ನಾನು ಪೀಠಿಕೆಯನ್ನು ಹಾಕಿಬಿಟ್ಟಿದ್ದೇನೆ. ಅದಕ್ಕೆ time credit ಕೂಡ ತೆಗೆದುಕೊಂಡಿದ್ದೆ. ಮತ್ತೊಂದು ಇವತ್ತು ನಮ್ಮ ರಾಜ್ಯದ ಪಕ್ಕದಲ್ಲಿರುವಂತಹ ತಮಿಳುನಾಡಿಗೆ ಹೋಗಿ ನೋಡಿ ಅಲ್ಲಿ ಡೀಸೆಲ್ ಮೇಲೆ ಪ್ರವೇಶ ತೆರಿಗೆ ಇಲ್ಲ. ಆದರೆ ನಮ್ಮ ರಾಜ್ಯದಲ್ಲಿ ಡೀಸೆಲ್ ಮೇಲೆ 5% ಪ್ರವೇಶ ತೆರಿಗೆಯನ್ನು ಹಾಕಲಾಗುತ್ತಿದೆ. ನಾನು ಕೈಗಾರಿಕೆಗಳ

ವಿಚಾರದಲ್ಲಿ ಸರ್ಕಾರಕ್ಕೆ ಮೂರು ಬೇಡಿಕೆಗಳನ್ನು ಮಾತ್ರ ಕೇಳುತ್ತೇನೆ. ಅದಕ್ಕಿಂತಲೂ ಹೆಚ್ಚು ಕೇಳುವುದೇ ಇಲ್ಲ. ಈ ವರ್ಷ ಸರ್ಕಾರ ಕೈಗಾರಿಕೆಗಳಿಂದ 37,000 ಕೋಟಿ ರೂಪಾಯಿಗಳ ಸಂಗ್ರಹದ ಗುರಿಯನ್ನು ಇಟ್ಟುಕೊಂಡಿದೆ. ಅದನ್ನು ಕೈಗಾರಿಕೋದ್ಯಮಿಗಳಾದ ನಾವುಗಳು ಕೊಡುವುದಕ್ಕೆ ಸಿದ್ದರಿದ್ದೇವೆ. ನಾವು ಒಂದು ರೂಪಾಯಿಗಳ ರಿಯಾಯಿತಿಯನ್ನು ಕೇಳುವುದಿಲ್ಲ. ಆದರೆ ನಾವು ಕೇಳುವಂಥದ್ದು, ಏನು ಬರಗಾಲ ಇರುವ ಕಾರಣಕ್ಕಾಗಿ ಡೀಸೆಲ್ ಮೇಲೆ ಪ್ರವೇಶ ತೆರಿಗೆ ಇದೆ. ಸಣ್ಣ ಕೈಗಾರಿಕೆಗಳು ಡೀಸೆಲ್ ಖರೀದಿ ಮಾಡುವಂತಹ ಸಂದರ್ಭದಲ್ಲಿ 16.75% ಕರ್ನಾಟಕ ವಾಣಿಜ್ಯ ತೆರಿಗೆ ಇದೆ. ಡೀಸೆಲ್ ಮಾರಾಟವನ್ನು ಕೂಡ ಏಕೆ VAT ಅಡಿಯಲ್ಲಿ ತೆಗೆದುಕೊಂಡು ಬರಬಾರದು. ಏಕೆ K.S.T., ಯಲ್ಲಿ ಇಟ್ಟಿದ್ದೀರಿ? ದಯವಿಟ್ಟು ಡೀಸೆಲ್ ಮಾರಾಟವನ್ನು ಕೂಡ VAT ಕಾಯ್ದೆಯಡಿಯಲ್ಲಿ ತೆಗೆದುಕೊಂಡು ಬನ್ನಿ. ಜೊತೆಗೆ ಈ ಒಂದು ಪ್ರವೇಶ ತೆರಿಗೆ ಇದೆ. ಇವತ್ತು ನಮ್ಮ ರಾಜ್ಯದಲ್ಲಿ ಬಹಳಷ್ಟು ಗುಡಿ ಕೈಗಾರಿಕೆಗಳು ಇದೆ. ಈಗ ಕೈಗಾರಿಕೆಯ ಸಚಿವರು ಸದನದಲ್ಲಿ ಇಲ್ಲ. ಅವರಿಗೆ ಕೈಗಾರಿಕೆಗಳ ಕಷ್ಟ ಏನಿದೆ ಎನ್ನುವುದು ಗೊತ್ತಿದೆ. ಏಕೆಂದರೆ ಅವರ ಹತ್ತಿರ ಬಹಳಷ್ಟು ಸಾರಿ ಪ್ರಸ್ತಾಪ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆ ಇರುವುದರಿಂದ ಬಹಳ ಸಣ್ಣ ಸಣ್ಣ ಕೈಗಾರಿಕೆಗಳು Diesel Generators ಗಳನ್ನು ಉಪಯೋಗ ಮಾಡುತ್ತಿದ್ದಾರೆ. ಏಕೆಂದರೆ ಇವತ್ತು ಕೈಗಾರಿಕೆಯವರು ಉತ್ಪಾದಿಸುವ ವಸ್ತುವಿನ ಆರ್ಡರ್ ಬಂದಿದ್ದರೆ ಅದನ್ನು execute ಮಾಡಲೇಬೇಕಾದರೆ ಕೈಗಾರಿಕೋದ್ಯಮಿಗೆ ಉಳಿದಿರುವ ಬದಲಿ ವ್ಯವಸ್ಥೆ ಎಂದರೆ ಬರೀ Diesel Generators. ಆ Diesel Generators run ಆಗುವುದಕ್ಕೆ ಅವುಗಳಿಗೆ ಡೀಸೆಲ್ ತುಂಬಿಸಬೇಕಾದರೆ ಈ ಒಂದು 16.75 ಕರ್ನಾಟಕ ರಾಜ್ಯದ ವಾಣಿಜ್ಯ ತೆರಿಗೆ ಮತ್ತು 5% ಪ್ರವೇಶ ಶುಲ್ಕ ಒಟ್ಟು 21.75% ತೆರಿಗೆಯನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಈ ಒಂದು Generators ಗಳನ್ನು ಬಳಸುವಂತಹ ಕೈಗಾರಿಕೆಗಳಿಗೆ ಇದರಲ್ಲಿ ರಿಯಾಯಿತಿಗೂ ಕೂಡ ಒಂದು provision ಮಾಡಲಾಗಿದೆ. ಆದರೆ ಈ ರಿಯಾಯಿತಿ ಬೃಹತ್ ಕೈಗಾರಿಕೆಗಳಿಗೆ ಮಾತ್ರ ಸಿಗುತ್ತಿದೆ. ಏಕೆ ಬೃಹತ್ ಕೈಗಾರಿಕೆಗಳಿಗೆ ಮಾತ್ರ ಸಿಗುತ್ತಿದೆ ಎಂದರೆ, 4%

ರಿಯಾಯಿತಿ ದರದಲ್ಲಿ ಡೀಸೆಲ್‌ನ್ನು ತರಬೇಕಾದರೆ ಕನಿಷ್ಟ 4,000 ಲೀಟರ್ ಡಿಸೇಲ್‌ನ್ನು ಖರೀದಿ ಮಾಡಬೇಕಾಗುತ್ತದೆ. ಆದರೆ ಒಬ್ಬ ಸಣ್ಣ ಕೈಗಾರಿಕೆಯನ್ನು ನಡೆಸುವವನು 4,000 ಲೀಟರ್ ಡೀಸೆಲ್‌ನ್ನು ತರಬೇಕಾದರೆ ಬಹಳಷ್ಟು ಹಣವಾಗುತ್ತದೆ. 4,000 ಲೀಟರ್ ಡೀಸೆಲ್‌ನ್ನು ತೆಗೆದುಕೊಂಡು ಬಂದು ಏನು ಮಾಡುತ್ತಾನೆ? ಹಾಗಾಗಿ ತಮ್ಮ ಮುಖಾಂತರ ಸರ್ಕಾರಕ್ಕೆ ಸಲಹೆ ಏನೆಂದರೆ, ಇವತ್ತು ಈ ಕೈಗಾರಿಕೆಗಳಿಂದ ಇಷ್ಟೊಂದು ತೆರಿಗೆಯನ್ನು ಸಂಗ್ರಹ ಮಾಡುತ್ತಿರುವಂತಹ ಸಂದರ್ಭದಲ್ಲಿ ಪ್ರತಿ ಕೈಗಾರಿಕಾ ಪ್ರದೇಶದಲ್ಲಿ ಕನಿಷ್ಟ ಪಕ್ಷ ಒಂದು ಡೀಸೆಲ್ ಬಂಕ್‌ನ್ನು ಕೈಗಾರಿಕೆಗಳಿಗೆ ಮಾತ್ರ ಎಂದು ಮೀಸಲಾಗಿಟ್ಟು ಅಲ್ಲಿ ಡೀಸೆಲ್ supply ಮಾಡಿದರೆ ಅವನಿಗೆ ಎಷ್ಟು ಬೇಕೋ ಅಷ್ಟು ಡೀಸೆಲ್ ಖರೀದಿ ಮಾಡಿಕೊಂಡು ಹೋಗಲಿ. ಕೈಗಾರಿಕೆಗಳವರು ಖರೀದಿಸುವ ಡೀಸೆಲ್ ಮೇಲೆ ಸರ್ಕಾರ ಒಟ್ಟು 21.75% ತೆರಿಗೆಯನ್ನು ಹಾಕಿದರೆ ಕಷ್ಟವಾಗುತ್ತದೆ. ಮತ್ತು ಇವತ್ತು ಏನು ಬರಗಾಲಕ್ಕಾಗಿ ಏನು 14.5% ತೆರಿಗೆಯನ್ನು ಹಾಕಲಾಗಿತ್ತು ಏಪ್ರಿಲ್ ತಿಂಗಳಿನಿಂದ ಅದನ್ನು ಕಡಿಮೆ ಮಾಡಲಾಗುವುದೆಂದು ಸರ್ಕಾರದವರು ಹೇಳಿದ್ದರು. ಆದರೆ ಈಗ ಆಗಸ್ಟ್ ತಿಂಗಳಿನಿಂದ ಕಡಿಮೆ ಮಾಡಲಾಗುವುದೆಂದು ಹೇಳುತ್ತಿದ್ದಾರೆ. ಆಗಸ್ಟ್ ತಿಂಗಳಿನಿಂದ ಈ ಸರ್ಕಾರಕ್ಕೆ ಕಡಿಮೆ ಮಾಡುವುದಕ್ಕೆ ಅವಕಾಶ ಇದೆಯೋ ಇಲ್ಲ ನಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದು ಮಾಡಬೇಕಾಗುತ್ತದೆಯೋ ಅದನ್ನು ಮುಂದೆ ವಿಚಾರ ಮಾಡೋಣ. ಆದ್ದರಿಂದ ನನ್ನ ಒಂದು ಮನವಿ ಏನೆಂದರೆ ಏನು ಅಧಿಕವಾಗಿ ಡೀಸೆಲ್ ಮೇಲೆ ಹಾಕಿದಂತಹ ತೆರಿಗೆಯನ್ನು ತೆಗೆದು ಹಾಕಿದರೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ ಇವತ್ತು ಎಲ್ಲಾ ಒಂದು ಕೈಗಾರಿಕೆಗಳು, ನಮ್ಮ ರಾಜ್ಯದ ಪಕ್ಕದಲ್ಲಿಯೇ ತಮಿಳುನಾಡು ಇದೆ. ಮತ್ತೊಂದು ಕಡೆಯಲ್ಲಿ ಆಂಧ್ರಪ್ರದೇಶ ಇದೆ. ಇವತ್ತು ನಮ್ಮ ರಾಜ್ಯದಲ್ಲಿರುವಂತಹ major industries, ಅದರಲ್ಲಿಯೂ ವಿಶೇಷವಾಗಿ ಸ್ಟೀಲ್ ಕೈಗಾರಿಕೆಗಳವರು ಅಲ್ಲಿಗೆ ಹೋಗಿ ಡೀಸೆಲ್‌ನ್ನು ತೆಗೆದುಕೊಂಡು ಬರುತ್ತಿದ್ದಾರೆ. ಈಗ ಸದನಕ್ಕೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು ಬರುತ್ತಿದ್ದಾರೆ. ಒಳ್ಳೆಯ ಸಮಯದಲ್ಲಿ ಬರುತ್ತಿದ್ದಾರೆ. ಅವರನ್ನು ಕೇಳಿದರೆ ಗೊತ್ತಾಗುತ್ತದೆ. ಇವತ್ತು ಬೃಹತ್

ಕೈಗಾರಿಕೆಗಳು, ಏನು steel processing units ಗಳಿವೆ ಅವರು ಕರ್ನಾಟಕದ ಗಡಿಯಲ್ಲಿರುವ ಹಿಂದೂಪುರ ಮತ್ತು ಮತ್ತೊಂದು ಗಡಿ ಭಾಗದಲ್ಲಿರುವ ಹೊಸೂರುನಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಿದ್ದರೆ. ಅಲ್ಲಿಗೆ ಹೆಚ್ಚು ಬೃಹತ್ ಕೈಗಾರಿಕೆಗಳು ಹೋದರೆ ಯಾರಿಗೆ ಉದ್ಯೋಗ ಸಿಗುತ್ತದೆ? ನಮ್ಮ ಜನರಿಗೆ ಯುವಕರಿಗೆ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಕೊಡಬೇಕೆಂದು ಮಾಡುತ್ತೇವೆ. ಆದರೆ ನಮ್ಮ ಪಕ್ಕದ ರಾಜ್ಯದ ಗಡಿ ಭಾಗದಲ್ಲಿ ಒಂದು ಕಿಲೋ ಮೀಟರ್ ಅರ್ಧ ಕಿಲೋ ಮೀಟರ್‌ನಲ್ಲಿ ಹೋಗಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಏಕೆ ಹೋಗುತ್ತಾನೆಂದರೆ, ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆ, ಎರಡನೆದಾಗಿ ನಮ್ಮಲ್ಲಿ ತೆರಿಗೆ ದರ ಹೆಚ್ಚಿದೆ. ಹಾಗಾಗಿ ಅಲ್ಲಿಗೆ ಹೋಗುತ್ತಿದ್ದಾರೆ. ಇದಲ್ಲದೇ ಡೀಸೆಲ್ ತುಂಬಿಸುವುದಕ್ಕೆ ನಮ್ಮ ಬೊಮ್ಮಸಂದ್ರದಲ್ಲಿರುವಂತಹ ಕೈಗಾರಿಕೆಗಳವರು ಎಲ್ಲಿಗೆ ಹೋಗುತ್ತಾರೆಂದರೆ, ಹೊಸೂರುಗೆ ಹೋಗುತ್ತಾರೆ. ಅಲ್ಲಿಂದ 10 ಕಿಲೋ ಮೀಟರ್ ಇದೆ. ಅಲ್ಲಿ ಹೋದರೆ ಡೀಸೆಲ್ ಬೆಲೆ ಕಡಿಮೆ ಇದೆ ಎಂದು ತುಂಬಿಸಿಕೊಂಡು ಬರುತ್ತಾರೆ. ಈ ರೀತಿಯ ಕೈಗಾರಿಕಾ ಬೆಳವಣಿಗೆ ಅಡಚಣೆಯಾಗುತ್ತಿದೆ. ಇದು ಕೈಗಾರಿಕಾ ಬೆಳವಣಿಗೆಗೆ ಇವತ್ತು ಮಾರಕವಾಗುತ್ತಿದೆ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ದಯಾನಂದರವರೆ ಸ್ವಲ್ಪ ಗಡಿಯಾರದ ಕಡೆ ಗಮನವಿರಲಿ.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೆ, ಇನ್ನು ಎಷ್ಟು ಸಮಯ ಇದೆ ಎಂದು ಹೇಳಿಬಿಟ್ಟರೆ ನಾನು conclude ಮಾಡಿಬಿಡುತ್ತೇನೆ.

**ಸಭಾಪತಿಯವರು:–** ನನಗನ್ನಿಸಿದ ಪ್ರಕಾರ ಇನ್ನು 8 ನಿಮಿಷದಲ್ಲಿ ತಮ್ಮ ಚರ್ಚೆಯನ್ನು ಮುಗಿಸಬೇಕು.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೆ, ಇನ್ನು 10–15 ನಿಮಿಷಗಳಲ್ಲಿ ಮುಗಿಸುತ್ತೇನೆ.

**ಸಭಾಪತಿಯವರು:–** 15 ನಿಮಿಷ ಇಲ್ಲ. 10 ನಿಮಿಷಕ್ಕೆ ಮುಗಿಸಬೇಕು.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೆ, ಇವತ್ತು ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಏನೂ ಅನುದಾನ ನೀಡಿಲ್ಲ ಎನ್ನುವಂತಹ ಮಾತನ್ನು ಹಲವಾರು ಬಾರಿ ನಮ್ಮ ಸಚಿವರುಗಳು ಪ್ರಸ್ತಾಪ ಮಾಡಿದ್ದರು. ಆದರೆ 2013–14ನೇ ಬಜೆಟ್ ಪುಸ್ತಕದಲ್ಲಿ ಪ್ರಸ್ತಾಪ ಮಾಡಲಾಗಿದೆ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಹೆಚ್ಚಿನ ಅನುದಾನ ಬಿಡುಗಡೆಯಾಗಿಲ್ಲ ಎಂದು ಆಡಳಿತ ಪಕ್ಷದವರು ಪದೇ ಪದೇ ಹೇಳುತ್ತಾರೆ. ಆದರೆ ಈ ಸಾಲಿನ ಬಜೆಟ್ ಪುಸ್ತಕದಲ್ಲಿ ಏನು ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಅದರಲ್ಲಿ ಕೇಂದ್ರ ಸರ್ಕಾರದ ಅನುದಾನದಿಂದ ಶೇಕಡ 13ರಷ್ಟು ಮತ್ತು ಕೇಂದ್ರದ ತೆರಿಗೆ ಪಾಲಿನಿಂದ ಶೇಕಡ 12ರಷ್ಟು ಹೀಗೆ ಒಟ್ಟು ಶೇಕಡ 25ರಷ್ಟು ಹಣ ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಬರುತ್ತಿದೆ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕೇಂದ್ರದಿಂದ ಕೊಡತಕ್ಕಂತಹ ಹಣ ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ, ಈ federal structure ನಲ್ಲಿ ಎಲ್ಲ ರಾಜ್ಯಗಳಿಗೂ ಕೂಡ ಕೇಂದ್ರ ಸರ್ಕಾರ ಅನುದಾನವನ್ನು ನೀಡುವಂತಹ ವ್ಯವಸ್ಥೆ ನಿರಂತರವಾಗಿ ನಡೆಯುತ್ತದೆ. ಆದರೆ ನಾವು ಹೇಳಬಯಸುವುದೇನೆಂದರೆ, ಇಂತಹ ಭೀಕರ ಬರಗಾಲ ಪರಿಸ್ಥಿತಿ ಎದುರಾಯಿತು, ಏನೆಲ್ಲಾ ತೊಂದರೆಗಳಾದವು. ನಾವು ಏನೆಲ್ಲಾ ಮನವಿಗಳನ್ನು ಮಾಡಿದೆವು, ಆದರೂ ಸಹ ಅಂತಹ ಒಂದು ಸಂದರ್ಭದಲ್ಲಿ ಇವೊತ್ತಿನವರೆಗೂ ಯಾವುದೇ ರೀತಿಯ ಉದಾರತೆಯನ್ನು ಕೇಂದ್ರ ಸರ್ಕಾರ ತೋರಿಸಲಿಲ್ಲ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಅನುದಾನವನ್ನು ಕೊಡತಕ್ಕಂಥದ್ದು ಅದರ ಕರ್ತವ್ಯವಾಗಿರುತ್ತದೆ. ಅದರಲ್ಲಿ ಯಾವುದೇ ಒಂದು ವಿಶೇಷತೆಯಾಗಲಿ, ಒಡಂಬಡಿಕೆಯಾಗಲಿ ಇಲ್ಲ. ಆದರೆ ಒಂದಂತೂ ಸತ್ಯ, ಯಾವ ಯಾವ ಸರ್ಕಾರಗಳು ಬಂದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಯಾವ ರೀತಿ ಅನುದಾನವನ್ನು ಕೊಟ್ಟಿದೆ ಎಂಬುದನ್ನು ದಯಮಾಡಿ ಎಲ್ಲರೂ ಗಮನಿಸಬೇಕಾಗುತ್ತದೆ. ನಮ್ಮ ರಾಜ್ಯ ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು

ಆದಾಯ ತೆರಿಗೆ ರೂಪದಲ್ಲಿ ಪಾವತಿಸುತ್ತಿದೆ ಎಂದರೆ, ಅದಷ್ಟೂ ನಮ್ಮ ರಾಜ್ಯದಲ್ಲೇ ಉಳಿದರೆ ಅಷ್ಟು ಹಣ ನಮಗೆ ಸಾಕಾಗುವುದಿಲ್ಲವೆ? ಅದಕ್ಕಾಗಿ ನಾವು ಏನೂ ಮಾಡಬೇಕಾಗಿಲ್ಲ, ಈ fedral structure ಅನ್ನು ತೆಗೆದು ನಮ್ಮ ರಾಜ್ಯದ ತೆರಿಗೆ ರೂಪದ ಹಣ ಏನು ಕೇಂದ್ರ ಸರ್ಕಾರಕ್ಕೆ ಹೋಗುತ್ತಿದೆ ಅದನ್ನು ನಿಲ್ಲಿಸಿದರೆ, ಇವೊತ್ತೇನು ಒಂದು ಲಕ್ಷ ಕೋಟಿ ಎಂದು ಹೇಳುತ್ತೇವೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಾಗಾದರೆ ಇವರು ನಮ್ಮ ಕರ್ನಾಟಕ ರಾಜ್ಯವನ್ನೇ ಒಂದು ದೇಶವನ್ನಾಗಿ ಮಾಡಿಕೊಂಡುಬಿಡಲಿ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸೋಮಣ್ಣನವರು ಆ ರೀತಿ ಮಾತನಾಡಬಹುದೇ? ರಾಜ್ಯ ಸರ್ಕಾರದ ಪಾಲಿನ ಬಗ್ಗೆ ಮಾತನಾಡುವಾಗ ಅವರು ಅದಕ್ಕೆ ಸೀಮಿತವಾಗಿ ಮಾತನಾಡಬೇಕಾಗುತ್ತದೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ನಾನು ಈ ಸಂದರ್ಭದಲ್ಲಿ ಹೇಳುವುದಿಷ್ಟೆ. ಮಾನ್ಯ ದಯಾನಂದ್‌ರವರು ಬೆಳಕನ್ನು ಚೆಲ್ಲುತ್ತಿರುವಂತಹ ವಿಚಾರಗಳು ನಿಜಕ್ಕೂ ಪ್ರಸ್ತುತವಾಗಿವೆ. ಎಲ್ಲೆಲ್ಲಿ ಯಾವ ಯಾವ ರೀತಿಯಾಗುತ್ತದೆ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಒಡಂಬಡಿಕೆ ಮತ್ತು ಅವರು ನಡೆದುಕೊಳ್ಳುವಂತಹ ರೀತಿ ಇವೆಲ್ಲವೂ ಸಹ ಈ ದೇಶದ ಅವಿಭಾಜ್ಯ ಅಂಗದಲ್ಲಿ ನಾವೆಲ್ಲರೂ ಸಹ ಅದಕ್ಕನುಗುಣವಾಗಿ ನಡೆದುಕೊಂಡು ಬಂದಿರುವಂತಹ ಒಂದು ವಾಡಿಕೆ ಇದೆ, ಆ ರೀತಿಯ ಒಂದು ವ್ಯವಸ್ಥೆಯಲ್ಲಿ ನಾವಿದ್ದೇವೆ. ಆ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದೇ ನಾಣ್ಯದ ಎರಡು ಮುಖಗಳು. ಆದ್ದರಿಂದ ಕೇಂದ್ರದಿಂದ ಬರತಕ್ಕಂತಹ ಹಣ, ರಾಜ್ಯದಿಂದ ಬರತಕ್ಕಂತಹ ಹಣ ಎನ್ನುವುದಕ್ಕಿಂತ ಇನ್ನಷ್ಟು ಹಣವನ್ನು

ಕೊಡುವುದಕ್ಕೆ ಅವರು ಕೇಂದ್ರದ ಮೇಲೆ ಒತ್ತಾಯ ಮಾಡಿದರೆ ನಿಜವಾಗಿಯೂ ಕೂಡ ಅವರು ಇಲ್ಲಿಯವರೆಗೆ ಮಾತನಾಡಿದ್ದಕ್ಕೂ ಸ್ವಲ್ಪ ಶಕ್ತಿ ಬರುತ್ತದೆ.

**ಶ್ರೀ ದಯಾನಂದ:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಡುವಂತಹ ಅನುದಾನ ಏನಿದೆ ಅದನ್ನು ಮುಲಾಜಿಗೆ ಕೊಡುತ್ತದೆ, ಪುಕ್ಕಟೆಯಾಗಿ ಕೊಡುತ್ತದೆ ಎಂದು ನಾನೇನೂ ಹೇಳಲಿಲ್ಲ. ಆದರೆ ಹಲವಾರು ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಯಾವುದೇ ಅನುದಾನ ಬಂದೇ ಇಲ್ಲ, ಕೇಂದ್ರ ಸರ್ಕಾರದಿಂದ ನಮಗೆ ಯಾವುದೇ ಅನುಕೂಲವಾಗಿಲ್ಲ ಎಂದು ಹೇಳಿದ್ದರಿಂದ ನಾನು ಈ ಮಾತನ್ನು ಪ್ರಸ್ತಾಪ ಮಾಡಿದ್ದೇನೆ. ರಾಜ್ಯದ ಈ ಬಜೆಟ್ ಗ್ರಾತಕ್ಕೆ ಸರಿಹೊಂದುವಂತೆ, ಇವೊತ್ತು ಕೇಂದ್ರ ಸರ್ಕಾರದಿಂದ ಕೂಡ ಶೇಕಡ 25ರಷ್ಟು ಹಣ ಬರುತ್ತಿದೆ ಎನ್ನುವಂತಹ ಮಾತನ್ನು ನಾನು ಪ್ರಸ್ತಾಪ ಮಾಡಿದ್ದೇನೆಯೇ ವಿನಃ ಬೇರೇನೂ ಇಲ್ಲ.

ಮಾನ್ಯ ಸಭಾನಾಯಕರು ಆದಾಯ ತೆರಿಗೆ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇವೊತ್ತು ನಮ್ಮ ದೇಶದ ಬಜೆಟ್ 11 ಲಕ್ಷ ಕೋಟಿಗಳಷ್ಟೇನಿದೆ ಅದರಲ್ಲಿ ಐದೂವರೆ ಲಕ್ಷ ಕೋಟಿಗಳಷ್ಟು ಅಂದರೆ ಶೇಕಡ 50ರಷ್ಟು ಹಣ ಆದಾಯ ತೆರಿಗೆ ಮೂಲಗಳಿಂದ ಬರುತ್ತದೆ. ಆದರೆ ತೆರಿಗೆ ಪಾವತಿಸುವವರ ಶೇಕಡಾವಾರು ಪ್ರಮಾಣ ಕೇವಲ ಶೇಕಡ 1.5ರಷ್ಟು ಮಾತ್ರ. ಅದರಲ್ಲಿ ನಾವು ಕೂಡ ಸೇರಿದ್ದೇವೆ ಎಂದು ಹೇಳುವುದಕ್ಕೆ ನಿಜಕ್ಕೂ ಹೆಮ್ಮೆಯಾಗುತ್ತಿದೆ. ಆದ್ದರಿಂದ ಇವೊತ್ತು ಆದಾಯ ತೆರಿಗೆಯಲ್ಲಿ ರಾಜ್ಯದ ಕೊಡುಗೆಯ ಪ್ರಮಾಣ ಎಷ್ಟಿದೆ ಎಂಬುದನ್ನು ನೋಡಿದಾಗ ದೇಶದ ಒಟ್ಟು ಆದಾಯ ತೆರಿಗೆಯ ಸುಮಾರು ಶೇಕಡ 13ರಷ್ಟನ್ನು ಈ ರಾಜ್ಯ contribute ಮಾಡುತ್ತದೆ ಎಂದು ಹೇಳುವುದಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಹಾಗಾಗಿ ಇವೊತ್ತು ನಮ್ಮ ರಾಜ್ಯದ ವಾಣಿಜ್ಯೋದ್ಯಮಿಗಳೇನಿದ್ದಾರೆ ಅವರೇ ಹೆಚ್ಚಾಗಿ ಆದಾಯ ತೆರಿಗೆಯನ್ನು ಪಾವತಿಸುತ್ತಿದ್ದಾರೆ.

ಮಾನ್ಯ ಸಭಾಪತಿಯವರೇ, ತೆರಿಗೆ ಪಾವತಿಸುವವರು ಯಾರು, ಬಿ.ಪಿ.ಎಲ್.ಕಾರ್ಡ್‌ನವರು ಪಾವತಿಸುತ್ತಾರೆಯೇ? ಈ ಸಂದರ್ಭದಲ್ಲಿ ಮಾನ್ಯ ಕೈಗಾರಿಕಾ ಸಚಿವರು ಸದನದಲ್ಲಿ ಉಪಸ್ಥಿತರಿರುವುದು ಬಹಳ ಸೂಕ್ತವಾಗಿದೆ. ನಾನು ಈ ವಿಚಾರವನ್ನೇಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ವಾಣಿಜ್ಯೋದ್ಯಮಿಗಳನ್ನು ಈ ಸರ್ಕಾರ ವಿಶ್ವಾಸಕ್ಕೆ ತೆಗೆದುಕೊಂಡು ಅವರಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಬೇಕಾಗುತ್ತದೆ. ಅವರ ಮೇಲೆ ನಾವು Inspector Raj ಮಾಡುವುದಲ್ಲ, ಇವೊತ್ತು ಇಷ್ಟೆಲ್ಲಾ ವಾಣಿಜ್ಯ ತೆರಿಗೆ ಕೊಡುವಂತಹ ನಮ್ಮ ವಾಣಿಜ್ಯೋದ್ಯಮಿಗಳಿಗೆ ಅಧಿಕಾರಿಗಳು ಎಷ್ಟು ತೊಂದರೆಯನ್ನು ಕೊಡುತ್ತಾರೆ ಎಂಬುದನ್ನು ಕೂಡ ಸರ್ಕಾರ ಗಮನಿಸಬೇಕಾಗುತ್ತದೆ. ಅದು ಯಾವುದೇ ಸರ್ಕಾರ ಇರಲಿ. ಹೆಚ್ಚಿನ ಪ್ರಮಾಣದ ತೆರಿಗೆಯನ್ನು ವಸೂಲು ಮಾಡುವಂತಹ ಸಂದರ್ಭದಲ್ಲಿ ಅಧಿಕಾರಿಗಳಿಗೆ ತಾವು ಒಂದು ಮಾತನ್ನು ಹೇಳಬೇಕಾಗುತ್ತದೆ. ಒಬ್ಬ ವಾಣಿಜ್ಯೋದ್ಯಮಿಯಾಗಿ ನನ್ನ ನೋವೇನೆಂದರೆ, ನಾವು ಯಾವುದೇ ಒಂದು ಕಛೇರಿಗೆ ಹೋದಂತಹ ಸಂದರ್ಭದಲ್ಲಿ ಆ ಅಧಿಕಾರಿಗೆ ಈ ವಾಣಿಜ್ಯೋದ್ಯಮಿ ಇವೊತ್ತು ಈ ದೇಶವನ್ನು ನಡೆಸುತ್ತಿದ್ದಾನೆ, ತೆರಿಗೆಯನ್ನು ತುಂಬುತ್ತಿದ್ದಾನೆ, ಅವನು ತುಂಬುವಂತಹ ತೆರಿಗೆಯಿಂದ ಇವೊತ್ತು ಈ ಸರ್ಕಾರ ನಡೆಯುತ್ತಿದೆ, ಈ ಸರ್ಕಾರ ನಡೆಸುವುದರಿಂದ ನಮ್ಮ ಕುಟುಂಬಗಳು ಕೂಡ ನಡೆಯುತ್ತಿವೆ ಎನ್ನುವಂತಹ ಒಂದು ವಿವೇಚನೆ ಇರಬೇಕಾಗುತ್ತದೆ. ಎಲ್ಲ ಅಧಿಕಾರಿಗಳು ಕೆಟ್ಟವರು ಎಂದು ನಾನು ಹೇಳುವುದಿಲ್ಲ. ಶೇಕಡ 70ರಷ್ಟು ಉತ್ತಮ ಅಧಿಕಾರಿಗಳನ್ನು ನಾನು ಇವೊತ್ತಿಗೆ ಸಹ ನೋಡಿದ್ದೇನೆ. ಇನ್ನುಳಿದ ಶೇಕಡ 30ರಷ್ಟು ಅಧಿಕಾರಿಗಳೇನು ನಮ್ಮ ವಾಣಿಜ್ಯೋದ್ಯಮ ರಂಗಕ್ಕೆ ಕಿರುಕುಳವನ್ನು ನೀಡುತ್ತಾರೆ, ಆ ರೀತಿ ಕಿರುಕುಳವನ್ನು ನೀಡುವಂತಹ ಸಂದರ್ಭದಲ್ಲಿ ಈ ರಾಜ್ಯ ನಮ್ಮ ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗಿಲ್ಲ, ವಾಣಿಜ್ಯೋದ್ಯಮಕ್ಕೆ ಪೂರಕವಾಗಿಲ್ಲ ಎನ್ನುವಂತಹ ಕಾರಣಕ್ಕಾಗಿ ಹಲವಾರು ಕೈಗಾರಿಕೆಗಳು ಈ ರಾಜ್ಯವನ್ನು ಬಿಟ್ಟು ಹೊರಗಡೆ ಹೋದಲ್ಲಿ ಅಂತಹ ಭ್ರಷ್ಟ, ಕೆಟ್ಟ ಅಧಿಕಾರಿಗಳಿಂದ ಈ ರಾಜ್ಯಕ್ಕೆ ನಷ್ಟವಾಗುತ್ತದೆ ಎನ್ನುವಂತಹ ಮಾತನ್ನು ಈ

ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಾ, ಅಂಥದ್ದನ್ನು ತಾವು ಸರಿಪಡಿಸಬೇಕಾಗುತ್ತದೆ ಎಂದು ವಿನಂತಿಸುತ್ತೇನೆ.

ಪಾರದರ್ಶಕ ಆಡಳಿತ ವ್ಯವಸ್ಥೆಯಲ್ಲಿ, VAT system ನಲ್ಲಿ 'e-sugam' ಇಲ್ಲದೆ ಇವೊತ್ತು ಯಾವುದೇ goods movement ಆಗುವುದಿಲ್ಲ. But which is

the first point of movement? What is the first leg of the goods? The first leg of the goods movement is industry. ಅಲ್ಲಿ ನೀವು ಸರಿಪಡಿಸದೆ, ಅವಿನ್ಯೂ ರಸ್ತೆ, ಬಿ.ವಿ.ಕೆ. ಅಯ್ಯಂಗಾರ್ ರಸ್ತೆಯಲ್ಲಿ ಹೋಗಿ ಆ ಜನರಿಗೆ ಏಕೆ ತೊಂದರೆ ಕೊಡುತ್ತೀರಿ? ಯಾವ ಪ್ರಾಂತ್ಯದಿಂದ ಆ goods movement ಆಗಿದೆ ಆ ಪ್ರಾಂತ್ಯ ಯಾವ ಸರ್ಕಲ್‌ಗೆ ಬರುತ್ತದೆ, ಅಲ್ಲಿನ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿ ಯಾರಿರುತ್ತಾರೆಯೋ ಅವರನ್ನು ನೀವು ಶಿಕ್ಷೆಗೆ ಗುರಿಪಡಿಸಬೇಕಾಗುತ್ತದೆ. ಅದನ್ನು ಬಿಟ್ಟು ಇಡೀ ರಾಜ್ಯದ ವಾಣಿಜ್ಯೋದ್ಯಮ ರಂಗವನ್ನು ಕಳ್ಳರ ದೃಷ್ಟಿಯಿಂದ ನೋಡುವಂತಹ ಪ್ರವೃತ್ತಿಯನ್ನು ಅಧಿಕಾರಿಗಳು ಬಿಡುವಂತಹ ರೀತಿಯಲ್ಲಿ ಇವೊತ್ತು ಸರ್ಕಾರ ಒಂದು ಆದೇಶವನ್ನು ಮಾಡಬೇಕಾಗುತ್ತದೆ. ಈ ವಾಣಿಜ್ಯೋದ್ಯಮ ರಂಗವೇನಿದೆ ಇದು ಒಂದು ಪ್ರಬುದ್ಧವಾದಂತಹ ರಂಗವೆಂದು ಹೇಳಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಲಹರ್ ಸಿಂಗ್ ಸಿರೋಯಾ ಅವರು ಶಿಕ್ಷಣದ ಬಗ್ಗೆ ಬಹಳ ಕಳಕಳಿಯಿಂದ ಮಾತನಾಡಿದ್ದಾರೆ. ಇವೊತ್ತು ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ 18 ವಿಶ್ವವಿದ್ಯಾಲಯಗಳು ಪ್ರಾರಂಭವಾಗಿವೆ. ನೆನ್ನೆಯ ದಿವಸ ಮೂರು ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸುವ ಬಗ್ಗೆ ವಿಧೇಯಕವನ್ನೇನು ತರಲಾಗಿತ್ತು ಆ ವಿಚಾರದಲ್ಲಿ ನಾನು ಸಹ ಸ್ವಾಗತವನ್ನು ಬಯಸಿದ್ದೇನೆ. ಈ ದೇಶದ, ಈ ರಾಜ್ಯದ ಪ್ರತಿಯೊಂದು ಮಗುವಿಗೂ ಸಹ ಉನ್ನತ ಶಿಕ್ಷಣ ಲಭ್ಯವಾಗುವಂತಾಗಲು ಅಗತ್ಯವಿರುವಂತಹ ಮೂಲ ಸೌಕರ್ಯಗಳನ್ನು ರೂಪಿಸಬೇಕಾದುದು ಬಹಳ ಅವಶ್ಯಕವಾಗಿದೆ. ಏಕೆಂದರೆ ಇವೊತ್ತು ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡುವಂತಹ ಸಂದರ್ಭದಲ್ಲಿ ಸರ್ಕಾರ ವಿಧೇಯಕಗಳನ್ನು ಪಾಸ್

ಮಾಡಿಕೊಡುವುದೊಂದನ್ನು ಬಿಟ್ಟರೆ ಬೇರೆ ಯಾವುದೇ ಒಂದು ಹಣಕಾಸಿನ ಹೊರೆ ಸರ್ಕಾರದ ಮೇಲಿರುವುದಿಲ್ಲ. ಅಂದರೆ ಆ ವಿಶ್ವವಿದ್ಯಾಲಯಗಳು ಎಲ್ಲ ಸಂಪನ್ಮೂಲಗಳನ್ನೂ ಕ್ರೋಢೀಕರಿಸಿಕೊಂಡು ಮುನ್ನಡೆಯುತ್ತವೆ. ಉತ್ತಮ ಗುಣಮಟ್ಟದ ವಿಶ್ವವಿದ್ಯಾಲಯಗಳು ನಮ್ಮ ರಾಜ್ಯಕ್ಕೆ ಅಗತ್ಯವಾಗಿವೆ. ಆದ್ದರಿಂದ ಈ 18 ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸರ್ಕಾರ ಏನು ಅನುಮತಿ ಕೊಟ್ಟಿದೆ ವಿಚಾರದಲ್ಲಿ ನನ್ನ ಆಕ್ಷೇಪಣೆ ಏನಿಲ್ಲ. ಆದರೆ ಉನ್ನತ ಶಿಕ್ಷಣಕ್ಕೆ ಎಲ್ಲಿಂದ ಒತ್ತು ಕೊಡಬೇಕೆಂದರೆ ಮೊದಲನೆಯ ಹೆಜ್ಜೆಯಾಗಿ ಅದು ಅಂಗನವಾಡಿಯಿಂದ ಪ್ರಾರಂಭವಾಗಬೇಕು.

ಈ ರಾಜ್ಯದಲ್ಲಿ ಅಂಗನವಾಡಿಗಳ ಪರಿಸ್ಥಿತಿ ಯಾವ ರೀತಿಯಲ್ಲಿದೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಪಡಿಸುವುದು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡುವುದು, ಉನ್ನತ ಶಿಕ್ಷಣ ಕೊಡುವುದು ಇದೆಲ್ಲಾ ಇರಲಿ, ಈ ರಾಜ್ಯದಲ್ಲಿನ ಒಟ್ಟು 64518 ಅಂಗನವಾಡಿ ಕೇಂದ್ರಗಳಲ್ಲಿ ಕೇವಲ 37204 ಕೇಂದ್ರಗಳು ಮಾತ್ರ ಸ್ವಂತ ಕಟ್ಟಡಗಳನ್ನು ಹೊಂದಿದ್ದು, 9,500 ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇನ್ನುಳಿದ 17,809 ಅಂಗನವಾಡಿ ಕೇಂದ್ರಗಳು ಬೀದಿ ಪಕ್ಕದಲ್ಲಿ, ದೇವಸ್ಥಾನಗಳಲ್ಲಿ, ಪಂಚಾಯಿತಿ ಕಟ್ಟಡಗಳಲ್ಲಿ ನಡೆಯುತ್ತಿವೆ. 2011–12ನೇ ಸಾಲಿನಲ್ಲಿ ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕಾಗಿ ಕೇವಲ 60 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿತ್ತು, ಆದರೆ ಅದರಲ್ಲಿ ಖರ್ಚಾಗಿರುವುದು ಕೇವಲ ` 43.38 ಕೋಟಿ ಮಾತ್ರ. ಒಂದು ವಿಪರ್ಯಾಸದ ಸಂಗತಿ ಎಂದರೆ, ಬೆಂಗಳೂರು ಕೇಂದ್ರ ಅಂದರೆ ನಮ್ಮ ವಿಧಾನಸೌಧದ ಆಜುಬಾಜಿನಲ್ಲಿರುವ ಚಿಕ್ಕಪೇಟೆ, ಶಿವಾಜಿನಗರ, ಬಸವನಗುಡಿ, ಜಯನಗರ, ವಿಜಯನಗರ, ಗಾಂಧಿನಗರ, ಚಾಮರಾಜಪೇಟೆ ಇಲ್ಲೆಲ್ಲಾ ಕೂಡ ಇವೊತ್ತು ಬಹಳ ಪ್ರತಿಷ್ಠಿತ ಪ್ರತಿನಿಧಿಗಳು ಪ್ರತಿನಿಧಿಸುತ್ತಿದ್ದಾರೆ, ಆದರೆ ಆ ಕ್ಷೇತ್ರಗಳಲ್ಲಿ ಇವೊತ್ತು ಎಷ್ಟು ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿವೆ ಎಂದರೆ ಉತ್ತರ ಮಾತ್ರ ಶೂನ್ಯ. ಅಂದರೆ ಒಂದು ಅಂಗನವಾಡಿ ಕೇಂದ್ರ ಕೂಡ ಸ್ವಂತ ಕಟ್ಟಡದಲ್ಲಿ ನಡೆಯುತ್ತಿಲ್ಲ

ಎಂದು ಹೇಳಬೇಕಾಗುತ್ತದೆ. ಹಾಗಾಗಿ ಈ ವಿಷಯದ ಬಗ್ಗೆ ಇನ್ನು ಹೆಚ್ಚಿಗೆ ಹೇಳಬೇಕೆಂದರೆ, ನನ್ನ ಸ್ವಂತ ಕ್ಷೇತ್ರ ಆನೇಕಲ್ ಕ್ಷೇತ್ರ. ಹಾಗೂ ಸಮಾಜ ಕಲ್ಯಾಣ ಸಚಿವರು ಪ್ರತಿನಿಧಿಸುವಂತಹ ಆನೆಕಲ್ ಕ್ಷೇತ್ರದಲ್ಲಿ ಸುಮಾರು 125 ಅಂಗನವಾಡಿ ಕೇಂದ್ರಗಳಿಗೆ ಜಾಗವಿಲ್ಲ. ಸುಮಾರು 65 ಅಂಗನವಾಡಿ ಕೇಂದ್ರಗಳು ರಸ್ತೆ ಬದಿಯಲ್ಲಿ ನಡೆಯುತ್ತಿವೆ. ಈ ರೀತಿ ಇರುವಾಗ ನಾವು ಗುಣಮಟ್ಟದ ಶಿಕ್ಷಣದ ಬಗ್ಗೆ ಮಾತನಾಡುತ್ತೇವೆ. ಸನ್ಮಾನ್ಯ ಸದಸ್ಯರಾದಂತಹ ಲೆಹರ್ ಸಿಂಗ್ ಸಿರೋಯಾ ರವರು Five Star Educational Institution ಮಾಡುತ್ತೇವೆಂದು ಮಾತನಾಡುತ್ತಾರೆ. ಆದರೆ ಮೊದಲು ಇಂತಹ ವಿಷಯಗಳಿಗೆ ಪೂರಕವಾಗಿ ಬಜೆಟ್‌ನಲ್ಲಿ ಪ್ರಾವಿಶನ್ ಮಾಡಬೇಕಾಗುತ್ತದೆ. ಆದರೆ ಮೊದಲು ಇಂತಹ ವಿಷಯಗಳಿಗೆ ಪೂರಕವಾಗಿ ಬಜೆಟ್‌ನಲ್ಲಿ ಪ್ರಾವಿಶನ್ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಗ್ರಾಮೀಣ ಪ್ರದೇಶದಲ್ಲಿ ಶೇಕಡ 70ರಷ್ಟು ಜನ ರೈತಾಪಿ ವರ್ಗದವರು ಇದ್ದಾರೆ. ಅಂಗನವಾಡಿ ಕೇಂದ್ರಗಳಿಗೆ ಹೋಗುವಂತಹ ಮಕ್ಕಳು ರೈತರ ಮಕ್ಕಳು. ಈ ದೇಶಕ್ಕೆ ಅನ್ನ ಕೊಡುವಂತಹ ಜನರ ಮಕ್ಕಳು ಬೀದಿ ಬದಿಯಲಿ ತಮ್ಮ ಜೀವನದ ಮೊದಲ ಪಾಠವನ್ನು ಕಲಿಯುತ್ತಿದ್ದಾರೆ. ಹಾಗಾಗಿ ಇದಕ್ಕೆ ನಾವು ನೀವು ಸೇರಿ ಒಂದು ಪೂರ್ಣವಿರಾಮ ಹಾಕದೆ ಹೋದರೆ ಈ ಸದನದಲ್ಲಿ ಪ್ರತಿನಿಧಿಸುತ್ತಿರುವುದರಲ್ಲಿ ಸಾರ್ಥಕವಿದೆಯೇ ಎಂಬ ಪ್ರಶ್ನೆಯನ್ನು ನಾವೆಲ್ಲರೂ ಹಾಕಿಕೊಳ್ಳಬೇಕಾಗುತ್ತದೆ. ಅಲ್ಲದೆ ನಮ್ಮ ರಾಜ್ಯವನ್ನು ಗುಡಿಸಲುಮುಕ್ತ ರಾಜ್ಯವನ್ನಾಗಿ ಮಾಡುತ್ತೇವೆ, ಸಿಂಗಾಪುರ ಮಾಡುತ್ತೇವೆ ಎಂದು ಎಲ್ಲಾ ಸರ್ಕಾರಗಳು ಹೇಳಿಕೆ ಕೊಟ್ಟಿವೆ. ಆದರೆ ಮಕ್ಕಳಿಗೆ ಮೊದಲ ಶಿಕ್ಷಣ ಅಂಗನವಾಡಿಯಿಂದ ಪ್ರಾರಂಭವಾಗುತ್ತದೆ. ಆದುದರಿಂದ ಅಂಗನವಾಡಿಗಳಿಗೆ ಕಟ್ಟಡಗಳನ್ನು ಕೊಡುವಂತಹ ಒಂದು ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಮಾನ್ಯ ಸಭಾನಾಕತರೆ, ತಾವು ಸಹ ಮಾನ್ಯ ಎಸ್.ಎಂ.ಕೃಷ್ಣಾರವರ ಸರ್ಕಾರದಲ್ಲಿದ್ದವರು. ಆಗ ನಮ್ಮ ರಾಜ್ಯ ನಂಬರ್ ಒನ್ ಸ್ಥಾನದಲ್ಲಿತ್ತು. ಆದರೆ ಇವತ್ತು ನಮ್ಮ ರಾಜ್ಯ ಹನ್ನೆರಡನೇ ಸ್ಥಾನಕ್ಕೆ ಬಂದಿದೆ. ಇನ್ನು ಬಿಹಾರದ ಬಗ್ಗೆ ಹೇಳಬೇಕೆಂದರೆ, ಮೊದಲು ಬಿಹಾರ್ ಎಂದರೆ ಜನರು ಹೆದರಿಕೊಳ್ಳುತ್ತಿದ್ದರು. ಆದರೆ ಇವತ್ತು ಆ ರಾಜ್ಯ

ಮೊದಲನೇ ಸ್ಥಾನದಲ್ಲಿದೆ. ಗುಜರಾತ್ ಇವತ್ತು ಎರಡನೇ ಸ್ಥಾನದಲ್ಲಿದೆ. ನಮ್ಮ ರಾಜ್ಯವನ್ನು ಗುಜರಾತ್ ಮಾದರಿ ರಾಜ್ಯವನ್ನಾಗಿ ಮಾಡುತ್ತೇವೆಂದು ಹೇಳಿದ್ದೀರಿ. ನಾನು ಯಾರ ಬಗ್ಗೆಯೂ ಆರೋಪ ಮಾಡುತ್ತಿಲ್ಲ. ನಾನು ಈ ರಾಜ್ಯದ ಜನರ ಹಿತದೃಷ್ಟಿಯಿಂದ, ರೈತರ ಹಿತದೃಷ್ಟಿಯಿಂದ, ವಾಣಿಜ್ಯೋದ್ಯಮಿಗಳ ಹಿತದೃಷ್ಟಿಯಿಂದ ಈ ವಿಷಯವನ್ನು ಮಾತನಾಡುತ್ತಿದ್ದೇನೆ.

ಇನ್ನು ಗ್ರಾಮೀಣಾಭಿವೃದ್ಧಿಯ ಬಗ್ಗೆ ಹೇಳಬೇಕೆಂದರೆ, ಇಲ್ಲಿ ಹಲವಾರು ಸಮಸ್ಯೆಗಳು ಇವೆ. ರಾಜ್ಯ ಸರ್ಕಾರ ಸುಮಾರು ಒಂಭತ್ತು ಸಾವಿರ ಗ್ರಾಮಗಳಲ್ಲಿ ಲಭ್ಯವಿರುವಂತಹ ನೀರಿನಲ್ಲಿ ಫ್ಲೋರೈಡ್ ಅಂಶವಿದೆ. ಈ ನೀರು ಕುಡಿಯುವುದಕ್ಕೆ ಯೋಗ್ಯವಲ್ಲ ಎಂಬುದನ್ನು ಗುರುತಿಸಿದೆ. ಕನಿಷ್ಠಪಕ್ಷ ಆ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು, ನೈರ್ಮಲ್ಯವನ್ನು ಕಾಪಾಡುವಂತಹ ನಿಟ್ಟಿನಲ್ಲಿ ಗ್ರಾಮಪಂಚಾಯಿತಿಗಳಿಗೆ ಹೆಚ್ಚಿನ ಒಂದು ಅನುದಾನವನ್ನು ಕೊಡಬೇಕಾಗುತ್ತದೆ. ಇವತ್ತಿನ ದಿವಸ ಗ್ರಾಮಪಂಚಾಯಿತಿಗಳಿಗೆ ಪಿಡಿಓ ಅಧಿಕಾರಿಗಳನ್ನು ನೇಮಕ ಮಾಡಿದರೂ ಸಹ ಗ್ರಾಮಪಂಚಾಯಿತಿಯಲ್ಲಿ ಹಣ ಸೋರಿಕೆ ಆಗುತ್ತಿದೆ. ಏಕೆಂದರೆ ಅಲ್ಲಿ ಯಾವುದೇ ರೀತಿಯಾದಂತಹ ಕಟ್ಟುಪಾಡುಗಳಾಗಲಿ, ನಿಯಮಗಳಾಗಲಿ ಇಲ್ಲ. ಕಾರಣವೇನೆಂದರೆ ಇವತ್ತು ಪಂಚಾಯಿತಿ ಸದಸ್ಯರುಗಳ ವ್ಯಾಪಾರ ನಡೆಯುತ್ತಿದೆ. ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, ತಮ್ಮ ನಾಯಕತ್ವದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಚುನಾವಣೆ ಏನಿದೆ, ಅದನ್ನು ನೇರ ಚುನಾವಣೆಯ ಮೂಲಕ ಮಾಡಬೇಕು. ಈಗಿರುವಂತಹ ಮೀಸಲಾತಿಗಳು ಏನಿವೆ, ಅವೆಲ್ಲಾ ಹಾಗೆಯೇ ಇರಲಿ. ಅದಕ್ಕೆ ನಮ್ಮ ಅಭ್ಯಂತರವೇನು ಇಲ್ಲ. ಆದರೆ ಗ್ರಾಮಪಂಚಾಯಿತಿಯ ಅಧ್ಯಕ್ಷನಾಗಬೇಕಾದರೆ ಡೈರೆಕ್ಟ್ ಆಗಿ ಎಲೆಕ್ಟ್ ಆಗಬೇಕು. ಅಂದರೆ ಗ್ರಾಮಪಂಚಾಯಿತಿ ಮತದಾರರ ಸಹಮತವನ್ನು ಪಡೆದುಕೊಂಡು ಅಧ್ಯಕ್ಷರಾಗಿ ಆಯ್ಕೆಯಾಗುವಂತಹ ಒಂದು ಕೆಲಸವನ್ನು ಮಾಡಿದರೆ ಗ್ರಾಮಪಂಚಾಯಿತಿಗಳಲ್ಲಿ ಈಗೇನು ಕುದುರೆ ವ್ಯಾಪಾರ ನಡೆಯುತ್ತಿದೆ ಅದಕ್ಕೆ ಕಡಿವಾಣ ಹಾಕಿದಂತೆ ಆಗುತ್ತದೆ. ಇನ್ನು

ಗ್ರಾಮಪಂಚಾಯಿತಿಗಳಲ್ಲಿ ಗ್ರಾಮ ನೈರ್ಮಲ್ಯ, ಶುದ್ಧವಾದ ಕುಡಿಯುವ ನೀರು, ಮಕ್ಕಳಿಗೆ ಪೌಷ್ಠಿಕ ಆಹಾರದ ಬಗ್ಗೆ ಸರ್ಕಾರ ಹೆಚ್ಚು ಒತ್ತನ್ನು ಕೊಡಬೇಕು. ಇವತ್ತಿನ ದಿವಸ ಅಂಗನವಾಡಿಯಲ್ಲಿ ಖರೀದಿ ಮಾಡುತ್ತಿರುವಂತಹ ಪೌಷ್ಠಿಕ ಆಹಾರಕ್ಕೂ ಕೂಡ ಸರ್ಕಾರ ಏನು ತೆರಿಗೆಯನ್ನು ವಿಧಿಸಿದೆ ಆ ತೆರಿಗೆಯನ್ನು ತೆಗೆಯಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತಾ, ಮಾನ್ಯ ಸಭಾಪತಿಯವರು ನನಗೆ ಇಷ್ಟು ಸುದೀರ್ಘವಾದ ಸಮಯವನ್ನು ಯಾವುದೇ ರೀತಿ ಸಿಟ್ಟು ಮಾಡಿಕೊಳ್ಳದೆ ನಗುನಗುತಾ ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

## 15. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ:–** ಸನ್ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಶ್ರೀ ಮಲೈಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 2013ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾ ನಾಯಕರೇ, ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರ ಪರವಾಗಿ ಶ್ರೀ ಮಲೈಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 2013ನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

## 16. ಶಾಸನ ರಚನೆ

**ಶ್ರೀ ವಿ. ಸೋಮಣ್ಣ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಶ್ರೀ ಮಲೈಮಹದೇಶ್ವರ ಸ್ವಾಮಿ ದೇವಸ್ಥಾನ ಈ ರಾಜ್ಯದ ಸಾಮಾನ್ಯ ಜನರಿಗೆ ಒಂದು ಪ್ರತಿಷ್ಠಿತ ದೇವಸ್ಥಾನ. ಸುಮಾರು ವರ್ಷಗಳ ಇತಿಹಾಸವಿರುವಂತಹ ಒಂದು ದೇವಸ್ಥಾನ. ಈ ದೇವಸ್ಥಾನದ ಕಾರ್ಯಚಟುವಟಿಕೆಗಳು ಮತ್ತು ಬರುವಂತಹ ಭಕ್ತಾದಿಗಳ ಸಂಖ್ಯೆ ದಿನೇ ದಿನೇ ಇಮ್ಮಡಿಯಾಗಿ ಇವತ್ತು ಲಕ್ಷಾಂತರ ಭಕ್ತಾಧಿಗಳು ಅಲ್ಲಿ ಮೂಲಭೂತ

ಸೌಕರ್ಯಗಳು ಇಲ್ಲದೆ ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿರುವುದನ್ನು ಸರ್ಕಾರ ಮನಗಂಡು, ಇವತ್ತು ಕೂಡಲಸಂಗಮವನ್ನು ಯಾವ ರೀತಿ ಪ್ರಾಧಿಕಾರ ಮಾಡಿ ಅಭಿವೃದ್ಧಿ ಮಾಡಿದ್ದೇವೆ ಅದೇ ರೀತಿಯಾಗಿ ಶ್ರೀ ಮಲೈಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಕೇವಲ ಕರ್ನಾಟಕದ ಭಕ್ತರು ಮಾತ್ರ ಬರುವುದಿಲ್ಲ. ಇಲ್ಲಿಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಿಂದಲೂ ಸಹ ಭಕ್ತರು ಬರುತ್ತಾರೆ. ಆದರೆ ಈ ದೇವಾಲಯದ ಅಭಿವೃದ್ಧಿ ಮಾಡುವುದಕ್ಕೆ ಪ್ರಾಧಿಕಾರವನ್ನು ರಚನೆ ಮಾಡುತ್ತಿದ್ದೇವೆ. ಈ ಪ್ರಾಧಿಕಾರದ ಅಧ್ಯಕ್ಷರಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಿರುತ್ತಾರೆ, ಆ ಜಿಲ್ಲೆಯ ಉಸ್ತುವಾರಿ ಸಚಿವರು ಯಾರು ಇರುತ್ತಾರೆ ಅವರು ಉಪಾಧ್ಯಕ್ಷರಾಗಿರುತ್ತಾರೆ. ಜಿಲ್ಲಾಧಿಕಾರಿಗಳು ಮತ್ತು ಶಾಸಕರು ಒಳಗೊಂಡಂತಹ ಒಂದು ಸಮಿತಿಯನ್ನು ರಚನೆ ಮಾಡಲಾಗುವುದು. ಆ ಸಮಿತಿಯಲ್ಲಿ ಒಬ್ಬ ನಿವೃತ್ತ ತಾಂತ್ರಿಕ ಮುಖ್ಯ ಅಭಿಯಂತರರನ್ನು ಸದಸ್ಯರನ್ನಾಗಿ ಮಾಡುವಂಥದ್ದು, ಅಲ್ಲದೆ ಐದು ಜನ ಸದಸ್ಯರನ್ನು ನಾಮನಿರ್ದೇಶನ ಮಾಡುವಂಥವರನ್ನೂ ಸಹ ಆಯಾಯ ವರ್ಗಕ್ಕೆ ಸೀಮಿತ ಮಾಡುವಂತಹ ರೋಸ್ಟರ್ ಮಾಡಲಾಗುವುದು. ಇದೊಂದು ವಿಶೇಷವಾದ ಸಂದರ್ಭ ಎನ್ನುವುದಕ್ಕಿಂತ ಹೆಚ್ಚಾಗಿ ಚಾಮರಾಜನಗರ ಜಿಲ್ಲೆ ಇ ರಾಜ್ಯದ ಅತೀ ಹಿಂದುಳಿದಂತಹ ಜಿಲ್ಲೆ. ಪುರಾತನ ಕಾಲದಿಂದಲೂ ಇರುವಂಥ ಶ್ರೀ ಮಲೈಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಇನ್ನದೇ ಆದಂತಹ ಒಂದು ಇತಿಹಾಸವೇ ಇದೆ. ಇದು ನನ್ನ ಮನೆ ದೇವರು ಸಹ ಆಗಿದೆ. ಆ ದೇವಸ್ಥಾನಕ್ಕೆ ಎಷ್ಟರ ಮಟ್ಟಿಗೆ ಒಂದು ಇತಿಹಾಸವಿದೆ ಎಂದರೆ ಇವತ್ತಿಗೂ ಸಹ ಅಲ್ಲಿಗೆ ಹೋಗುವಂತಹ ಭಕ್ತರು ದೇವಸ್ಥಾನಕ್ಕೆ ಹೋದಾಗ, ಕೆಲವು ಹಿಂದಿನಿಂದ ಬಂದಿರುವಂತಹ ಸಂಪ್ರದಾಯಗಳು ಏನಿವೆ, ಆ ಸಂಪ್ರದಾಯಗಳನ್ನು ಇಂದಿಗೂ ಸಹ ಮುರಿದಿಲ್ಲ. ವಿಶೇಷವಾಗಿ ಈ ದೇವಾಲಯಕ್ಕೆ ಹೋಗುವಂತಹ ಕಡುಬಡವರು ತಮ್ಮ ಅನೇಕ ನೋವುಗಳನ್ನು ಅವರ ಭಾವನೆಗಳನ್ನು ದೇವರ ಬಳಿ ನಿವೇದಿಸಿಕೊಳ್ಳುತ್ತಾರೆ. ಹಿಂದಿನ ಕಾಲದಲ್ಲಿ ಶ್ರೀ ಮಲೈಮಹದೇಶ್ವರ ಸ್ವಾಮಿ ಬೆಟ್ಟಕ್ಕೆ ಹೋಗುತ್ತಾರೆ ಎಂದರೆ ಅವರು ವಾಪಸ್ಸು ಬರುತ್ತಾರೆ ಎನ್ನುವ ಪದ್ಧತಿ ಇದ್ದು, ಅವರನ್ನು ಒಂದು

ರೀತಿಯಲ್ಲಿ ನೆಂಟರೋಪಾದಿಯಲ್ಲಿ ಊರಿನಿಂದ ಹೊರಗಡೆ ಕರೆದುಕೊಂಡು ಹೋಗುವುದು, ಪುನಃ ಬಂದಾಗ ಅವರು ವಾಪಸ್ಸು ಬರುವಂಥದ್ದಕ್ಕೆ ವ್ಯವಸ್ಥೆ ಇವತ್ತು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆ, ರಾಮನಗರ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆ, ಮೈಸೂರು ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆ ಈ ಜಿಲ್ಲೆಗಳ ಜೊತೆಯಲ್ಲಿ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳದ ಲಕ್ಷಾಂತರ ಜನರು ಅಲ್ಲಿಗೆ ಬರುತ್ತಿದ್ದರು. ಈ ಹಿಂದೆ ಸನ್ಮಾನ್ಯ ಎಸ್.ಎಂ.ಕೃಷ್ಣಾರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅಲ್ಲಿ ಕುಡಿಯುವ ನೀರಿಗೆ ತುಂಬಾ ಆಹಾಕಾರವಿತ್ತು. ಆಗ ಇಲ್ಲಿ ಕುಡಿಯುವ ನೀರಿಗೆ ಒಂದು ಕ್ರಿಯಾಯೋಜನೆಯನ್ನು ಮಾಡಿ ಅದಕ್ಕೆ ಎಂಟು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. ಆದರೆ ಅದು ಮಾಡುವುದಕ್ಕೆ ಆಗದೆ ಇದ್ದಂತಹ ಸಂದರ್ಭದಲ್ಲಿ ದೇವರ ಆಶೀರ್ವಾದದಿಂದ 2009ರಲ್ಲಿ ನಾನೇ ಮುಜರಾಯಿ ಇಲಾಖೆಯ ಸಚಿವನಾದಾಗ ಮುವತ್ತೇಳು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಮೆಟ್ಟೂರು ಡ್ಯಾಂನಲ್ಲಿ ಕಾವೇರಿಯ ಹಿನ್ನೀರು ಏನಿದೆ, ಅಲ್ಲಿಂದ ಎರಡು ಸಾವಿರದ ಎಂಟುನೂರು ಅಡಿ ಮೇಲಕ್ಕೆ ನೀರನ್ನು ತರುವಂತಹ ಒಂದು ಯೋಚನೆಯನ್ನು ಮಾಡಿ ಅದಕ್ಕೆ ನಮ್ಮ ಸರ್ಕಾರ 33 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಈ ತಿಂಗಳ 6ನೇ ತಾರೀಖಿನಂದು ತಮ್ಮ ಅನುಮತಿಯನ್ನು ಪಡೆದುಕೊಂಡು ನಾವು ಮತ್ತು ಸ್ಥಳೀಯ ಶಾಸಕರುಗಳು ಹೋಗಿ ಅದರ ಉದ್ಘಾಟನೆಯನ್ನು ಮಾಡಿ ಬಂದೆವು.

(7 ಘಂಟೆ)

ಅಲ್ಲಿ ಬರುತ್ತಿದ್ದ ಹಣ ಸಾಕಷ್ಟು ಕಡಿಮೆ ಇತ್ತು, ಇವತ್ತು ಹಂತ ಹಂತವಾಗಿ ಜನರ ಜಾಗೃತಿಯ ಜೊತೆಗೆ ಅಲ್ಲಿನ ಆಡಳಿತ ಮಂಡಳಿ ಜಾಗೂರಕತೆಯಿಂದ ಉತ್ತಮಗೊಂಡಿದೆ. ಸ್ವಚ್ಛತೆ, ಕುಡಿಯುವ ನೀರು, ನೈರ್ಮಲ್ಯತೆ, ಅಲ್ಲಿಗೆ ಬರುವ ಭಕ್ತರಿಗೆ ಉಳಿದುಕೊಳ್ಳಲು ಕಾಟೇಜುಗಳು ಮತ್ತು ರೂಮುಗಳನ್ನು ಕಟ್ಟುವುದು ಇಂತಹ ಅಭಿವೃದ್ಧಿ ಕೆಲಸಗಳು ಕಳೆದ 30 ವರ್ಷಗಳಿಂದ ಆಗದಿದ್ದ ಕೆಲಸ ಕಳೆದ 7–8 ವರ್ಷಗಳಿಂದ ನಡೆಯುತ್ತಾ

ಬಂದಿದೆ. ಇದೊಂದು ಐತಿಹಾಸಿಕ ಹಿನ್ನೆಲೆ ಇರತಕ್ಕ ದೇವಸ್ಥಾ. ಕೊಪ್ಪಳದಲ್ಲಿ ಗವಿ ಸಿದ್ದೇಶ್ವರ ದೇವಾಲಯವಿದೆ, ಈ ರೀತಿ ಬೇರೆ ಬೇರೆ ದೇವಾಲಯಗಳಿವೆ, ಈ ಭಾಗದಲ್ಲಿ ಮಲೈ ಮಹಾದೇಶ್ವರರು ಕೊಲ್ಲುರು ಮಠದಿಂದ ಅಲ್ಲಿಗೆ ಹೋಗಿ ಏಳು ಬೆಟ್ಟಗಳ ಮಧ್ಯೆದಲ್ಲಿ ಐಕ್ಯವಾದ ಸ್ಥಳವದು. ಅಲ್ಲಿ ಹುಲಿ, ಅನೆ ಹೀಗೆ ಯಾವುದೇ ಪ್ರಾಣಿಗಳು ಇರಬಹುದು, ಇದುವರೆವಿಗೂ ಯಾವುದೇ ಒಬ್ಬ ವ್ಯಕ್ತಿಗೆ ತೊಂದರೆ ಆದ ಉದಾಹರಣೆಗಳಿಲ್ಲ. ನನ್ನದೇ ಒಂದು ಸ್ವಂತ ಅನುಭವವನ್ನು ನಾನು ಹೇಳಲಿಚ್ಚಿಸುತ್ತೇನೆ. ನಾನು ಮೂರನೇ ತರಗತಿಯಲ್ಲಿ ಓದುತ್ತಿದ್ದ ಸಂದರ್ಭದಲ್ಲಿ ಕೌದಳ್ಳಿಯಿಂದ ಮಲೈ ಮಹಾದೇಶ್ವರ ಬೆಟ್ಟಕ್ಕೆ ಹೊರಟಿದ್ದೇವು ಎತ್ತಿನಗಾಡಿಯಲ್ಲಿ ಹೋಗುವ ಸಂದರ್ಭದಲ್ಲಿ ರಸ್ತೆಯ ಡೌನ್ ಇಳಿಯುವಂತಹ ಸಂದರ್ಭದಲ್ಲಿ ಎತ್ತಿಗೆ ಕುತ್ತಿಗೆಗೆ ಕಟ್ಟಿದ್ದ ಜತ್ತಿಗೆ ಕಳೆದುಕೊಂಡು ಆ ಎತ್ತು ಒಂದು ಕಡೆಗೆ ಹೋಯಿತು. ಆಹ ಗಾಡಿ ಕೆಳಕ್ಕೆ ಹೋಗಿದ್ದರೆ ಯಾರು ಎಲ್ಲೆಲ್ಲಿ ಹೋಗುತ್ತಿದ್ದವೋ ನನಗೆ ಗೊತ್ತಿಲ್ಲ. ಆದರೆ ಗಾಡಿಯ ಮತ್ತೊಂದು ಎತ್ತು ಗಾಡಿಯನ್ನು ಗೊಡೆಗೆ ತಾಕಿಸಿದ್ದರಿಂದ ನಾವೆಲ್ಲರೂ ಬದುಕಿ ಉಳಿದೆವು. ಈ ವಿಚಾರವನ್ನು ನನ್ನ ತಾಯಿ ಇರುವ ತನಕ ನೆನಪಿಸಿಕೊಳ್ಳುತ್ತಿದ್ದರು. ಹಾಗೂ ಅವರು ವರ್ಷಕ್ಕೆ ಎರಡು ಬಾರಿ ಈ ದೇವಸ್ಥಾನಕ್ಕೆ ಹೋಗಿ ಬರುತ್ತಿದ್ದರು. ಇವತ್ತಿಗೂ ಸಹ ಹೊರಗಡೆಯಿಂದ ಬರತಕ್ಕ ಜನರು ಯಾರೇ ಆಗಿರಲಿ ಅಂಟುಮುಂಟು ಮಾಡತಕ್ಕ ವಾಡಿಕೆಯಿಲ್ಲ. ಗಂಡ ಹೆಂಡತಿ ಒಂದು ಕಡೆ ಮಲಗುವ ವಾಡಿಕೆಯಿಲ್ಲ. ಅಲ್ಲಿ ಯಾವುದೇ ಜಾತಿ ಮತದ ಬೇಧಭಾವ ಇಲ್ಲ. ಇಲ್ಲಿ ನಮ್ಮ ಹಳೆಯ ಕಾಲದ ಪದ್ಧತಿಗಳು ಇನ್ನೂ ಸಹ ನಡೆದುಕೊಂಡು ಬರುತ್ತಿದೆ, ಆ ಭಗವಂತನನ್ನು ಸಾಕ್ಷಾತ್ಕಾರವಾಗಿ ನೋಡದಿದ್ದರೂ ಸಹ ಆತ ಕೊಟ್ಟಿರತಕ್ಕ ಕೆಲವು ಸಂದೇಶಗಳನ್ನು ದಿನನಿತ್ಯ ಸಾಮಾನ್ಯ ಜನರು ಕೂಡ ಆಚರಣೆಯನ್ನು ಮಾಡುತ್ತಾರೆ. ವಿಶೇಷವಾಗಿ ಶಿವರಾತ್ರಿ, ಯುಗಾದಿ, ಸಂಕ್ರಾತಿ, ದೀಪಾವಳಿ ಹೀಗೆ ಹಬ್ಬಗಳ ಸಂದರ್ಭದಲ್ಲಿ ಲಕ್ಷಾಂತರ ಜನ ಭಕ್ತರು ಅಲ್ಲಿಗೆ ಬರುತ್ತಾರೆ. ಇಲ್ಲಿ ಮೂಲಭುತ ಸೌಕರ್ಯಗಳಿಲ್ಲದೇ ಜನರು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಾರೆ. ಇದನ್ನೆಲ್ಲ ಮನಗಂಡು ಸರ್ಕಾರ ಏಕೆ ಇದಕ್ಕೆಲ್ಲ ಸ್ಪಂದಿಸಬಾರದೆನ್ನುವ

ದೃಷ್ಟಿಯಿಂದ ಈ ವಿಧೇಯಕವನ್ನು ನಾವು ತಂದಿದ್ದೇವೆ. ಈ ದೇವಾಲಯ ಮುಜರಾಯಿ ಇಲಾಖೆಯಡಿಯಲ್ಲಿ ಬರುತ್ತದೆ. ಮುಜರಾಯಿ ಇಲಾಖೆಯಿಂದ ಒಬ್ಬ ಕಾರ್ಯಕಾರಿ ಅಧಿಕಾರಿಗಳು ಇರುತ್ತಾರೆ, ಅಲ್ಲದೇ 20–50 ಜನರು ಅಲ್ಲಿ ಕೆಲಸವನ್ನು ಮಾಡುತ್ತಾರೆ. ಇದು ಮೊದಲಿಗೆ ಒಂದು ಸಣ್ಣ ದೇವಸ್ಥಾನವಾಗಿದ್ದರೂ ಸಹ ಇಂದು ಬೃಹದಾಕಾರವಾಗಿ ಕರ್ನಾಟಕದಲ್ಲಿ ಧರ್ಮಸ್ಥಳವನ್ನು ಹೊರತು ಪಡಿಸಿದರೆ ಮತ್ತೊಂದು ದೊಡ್ಡ ದೇವಸ್ಥಾನ ಈ ಮಲೈ ಮಹಾದೇಶ್ವರ ದೇವಸ್ಥಾನದ ಪುಣ್ಯ ಕ್ಷೇತ್ರ. ಈ ಕ್ಷೇತ್ರದ ಒಂದು ಸರ್ವಾಂಗೀಣ ಅಭಿವೃದ್ಧಿಗೆ ಇವತ್ತು ಸರ್ಕಾರ ದಾಪಾಗಾಲನ್ನು ಹಾಕುವ ತೀರ್ಮಾನವನ್ನು ಮಾಡಿದೆ. ಆದ್ದರಿಂದ ನಾನು ತಮ್ಮ ಮೂಲಕ ಸದನದ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಐತಿಹಾಸಿಕ ಹಿನ್ನೆಲೆಯುಳ್ಳ ದೇವಾಲಯಗಳನ್ನು ಗುಡಿ ಗೋಪುರಗಳನ್ನು ಸಂರಕ್ಷಣೆ ಮಾಡುವ ಜೊತೆಯಲ್ಲಿ ಇಂತಹದ್ದಕ್ಕೆ ಒಂದು ಪ್ರಾಧಿಕಾರವನ್ನು ಮಾಡಿದಾಗ ಸರ್ಕಾರವೂ ಕೂಡ ಅಲ್ಲಿ ಮೂಲಭೂತ ಸೌಕರ್ಯಗಳನ್ನು ನೀಡುವುದಕ್ಕೆ ಕೈ ಜೋಡಿಸುತ್ತದೆ. ಅಲ್ಲಿ 500 ಕೊಠಡಿ ಇರತಕ್ಕ ಕಟ್ಟಡವನ್ನು ಕಟ್ಟಲಿಕ್ಕೆ ಸರ್ಕಾರ 19 ಕೋಟಿ ರೂಪಾಯಿಗಳನ್ನು ಕ್ಯಾಬಿನೆಟ್‌ನಲ್ಲಿ ಮಂಜೂರು ಮಾಡಿದೆ. ಆದಷ್ಟು ಜಾಗ್ರತೆ ನಾವು ಕೆಲಸವನ್ನು ಪ್ರಾರಂಭ ಮಾಡುತ್ತಿದ್ದೇವೆ. ಆದ್ದರಿಂದ ಈ ದೇವಸ್ಥಾನದ ಒಂದು ಇತಿಹಾಸವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದಕ್ಕೆ ಈ ಪ್ರಾಧಿಕಾರದ ಅವಶ್ಯಕತೆ ಇದೆ. ದಯಮಾಡಿ ಇದಕ್ಕೆ ಅಂಗೀಕಾರವನ್ನು ನೀಡಬೇಕೆಂದು ನಾನು ತಮ್ಮ ಮೂಲಕ ಈ ಸದನಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಭಾನುಪ್ರಕಾಶ (ವಿಧಾನಸಭಾ ಕ್ಷೇತ್ರ):–** ಈ ಮಸೂದೆಯಲ್ಲಿ 'ಇಬ್ಬರನ್ನೂ ಮೀರದ ಸದಸ್ಯರು' ಎಂದಿದೆ. ಆದರೆ ಮಾನ್ಯ ಸಚಿವರು ಮಾತನಾಡತಕ್ಕ ಸಂದರ್ಭದಲ್ಲಿ 5 ಸದಸ್ಯರು ಎಂದು ಹೇಳಿದರೆಂದು ನಾನು ಭಾವಿಸಿದ್ದೇನೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಗಳೇ, ಅಲ್ಲಿ ಇಬ್ಬರನ್ನೂ ನಾಮ ನಿರ್ದೇಶನ ಮಾಡಲಾಗುವುದು. ನಿವೃತ್ತ ಅಧಿಕಾರಿಗಳನ್ನು ಸಹ ಸೇರಿಸುವುದಕ್ಕೆ provision ಮಾಡಿದ್ದೇವೆ. ಅದರಲ್ಲಿ ಶಾಸಕರು ಸಹ ಇರುತ್ತಾರೆ, ಜಿಲ್ಲಾ ಉಸ್ತುವಾರಿ ಸಚಿವರು ಸಹ ಇರುತ್ತಾರೆ, ಅದರ ಜೊತೆಗೆ ಇಬ್ಬರನ್ನೂ ನಾಮ ನಿರ್ದೇಶನ ಮಾಡಬಹುದು. ಬೇಕಾದಲ್ಲಿ ಇನ್ನು ಒಬ್ಬರನ್ನು ಸೇರಿಸಬಹುದು.

**ಶ್ರೀ ಭಾನುಪ್ರಕಾಶ:–** ಈ ಮಸೂದೆಯ ಪುಟ ಸಂಖ್ಯೆ 2 ಪ್ಯಾರ (ಎಫ್) ನಲ್ಲಿ "ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದ ಅತಿಗಣ್ಯ ವ್ಯಕ್ತಿಗಳ ಪೈಕಿ ಇಬ್ಬರನ್ನು ಮೀರದ ಸದಸ್ಯರು" ಎಂದಿದೆ.

**ಶ್ರೀ ವಿ. ಸೋಮಣ್ಣ:–** ಇದರಲ್ಲಿ ಹೊರಗಡೆಯಿಂದ ಇಬ್ಬರು ಸದಸ್ಯರು ಇರುತ್ತಾರೆ, ಶಾಸಕರು ಇರುತ್ತಾರೆ, ಜಿಲ್ಲಾ ಉಸ್ತುವಾರಿ ಸಚಿವರು ಇರುತ್ತಾರೆ ಅದರ ಜೊತೆಗೆ ಇಬ್ಬರನ್ನು ನಾಮನಿರ್ದೇಶನ ಮಾಡಲಾಗುವುದು, ಅಲ್ಲಿ ಸುತ್ತೂರು ಮಠವಿದೆ. ಮಲೈ ಮಹಾದೇಶ್ವರರು ಭಿಕ್ಷೆಯನ್ನು ಬೇಡಿ ಜೋಳಿಗೆಯನ್ನು ಅಲ್ಲಿಟ್ಟು, ಭಿಕ್ಷೆಯ ಮುಖೇನ ಎಲ್ಲಾ ಭಕ್ತರಿಗೆ ಅನ್ನ ಸಮರ್ಪಣೆ ಮಾಡುವುದು ಸುತ್ತೂರು ಮಠದ ಇತಿಹಾಸ. ಆ ಮಠದ ಸ್ವಾಮೀಜಿಗಳು ಸಹ ಈ ಪ್ರಾಧಿಕಾರದಲ್ಲಿ ಇರುತ್ತಾರೆ. ಇದರ ಜೊತೆಗೆ ತಾಂತ್ರಿಕವಾಗಿ ಒಬ್ಬರು ಅಧಿಕಾರಿಯನ್ನು ಸಹ ನೇಮಿಸಲಾಗುವುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, 18ನೇ ಪ್ಯಾರಾದ 2ನೇ ಅನುಬಂಧದಲ್ಲಿ "ಕರ್ನಾಟ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯ, 1997(2001ರ ಕರ್ನಾಟಕ ಅಧಿನಿಯಮ 33) ಮತ್ತು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು, 2002ರ ಉಪನಿಬಂಧಗಳಿಂದ ನಿಯಂತ್ರಣವನ್ನು ಮುಂದುವರಿಸಬೇಕಾದ ಶ್ರೀ ಮಲೈ ಮಹದೇಶ್ವರ ದೇವಸ್ಥಾನ ಮತ್ತು ಅಧೀನ ದೇವಸ್ಥಾನಗಳ ಆಡಳಿತದಲ್ಲಿ ಪ್ರಾಧಿಕಾರವು ಹಸ್ತಕ್ಷೇಪ ಮಾಡತಕ್ಕದಲ್ಲ"

21ನೇ ಪ್ಯಾರಾದಲ್ಲಿ "ರಾಜ್ಯ ಸರ್ಕಾರವು, ಪ್ರಾಧಿಕಾರದ ಶಿಫಾರಸ್ಸಿನ ಮೇಲೆ ಅಥವಾ ಅನ್ಯಥಾ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ನಿರ್ವಹಣೆಗಾಗಿ ನಿಯಮಗಳ ಮೂಲಕ ಉಪಬಂಧಗಳನ್ನು ರಚಿಸತಕ್ಕದ್ದು" ಒಂದರಲ್ಲಿ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು ಎಂದಿದ್ದರೆ ಮತ್ತೊಂದು ಪ್ಯಾರಾದಲ್ಲಿ ಹಸ್ತಕ್ಷೇಪ ಮಾಡಬಹುದು ಎಂದಿದೆ, ಇದರಲ್ಲಿ ಸ್ವಲ್ಪ contradictions ಇದೆ. ಇದರಿಂದ ಮುಂದೆ ಗೊಂದಲಗಳು ಬರಬಹುದು ಇದನ್ನು clarify ಮಾಡಬೇಕೆಂದು ವಿನಂತಿಯನ್ನು ಮಾಡುತ್ತೇನೆ. ದೇವಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಈ ಎರಡು ಪ್ಯಾರಾಗಳಲ್ಲಿ ಗೊಂದಲವಿದೆ.

**ಡಾ|| ಎ.ಎಚ್. ಶಿವಯೋಗಿಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಗಳೇ, ಈ ಮಸೂದೆಯನ್ನು ಕಾರ್ಣಿಕ್‌ರವರು ಗಮನಿಸಿದರೆ ಗೊತ್ತಾಗುತ್ತದೆ, 18ನೇ ಪ್ಯಾರಾದ 2ನೇ ಕಾಲಂನಲ್ಲಿ ಮಲೈ ಮಹಾದೇಶ್ವರ ದೇವಸ್ಥಾನ ಮತ್ತು ಅದರ ಅಧೀನ ದೇವಸ್ಥಾನಗಳು, ದೇವಸ್ಥಾನದ ಆಡಳಿತ ಬೇರೆ, ಅದರ ಆಡಳಿತವನ್ನು ಅಲ್ಲಿನ ಸ್ವಾಮೀಜಿಗಳು ಮಾಡಿಕೊಳ್ಳುತ್ತಾರೆ. ಈ ಪ್ಯಾರಾದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಪಟ್ಟಿದ್ದು.

**ಶ್ರೀ ಡಿ.ಎಸ್. ವೀರಯ್ಯ:–** ಈ ಪ್ರಾಧಿಕಾರದಲ್ಲಿ ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳವರಿಗೆ ಆದ್ಯತೆಯನ್ನು ನೀಡಬೇಕು.

**ಸಭಾಪತಿಯವರು:–** ಆ ದೇವಸ್ಥಾನದಲ್ಲಿ ಮಹಿಳೆಯರಿಗೆ ಆದ್ಯತೆ ನೀಡುವುದಿಲ್ಲ.

**ಶ್ರೀ ಡಿ.ಎಸ್. ವೀರಯ್ಯ:–** ಆ ದೇವರೆ, ಪರಿಶಿಷ್ಟ ಜಾತಿಗೆ ಸೇರಿದ ದೇವರು, ಅಲ್ಲಿ ಪರಿಶಿಷ್ಟ ಜಾತಿಯವರಿಗೆ ನೀಡಲಿಲ್ಲವೆಂದರೆ ಹೇಗೆ?

**ಸಭಾಪತಿಯವರು:–** ನೀವು ಅದನ್ನು ಕೇಳಿ. ಆದರೆ ಮಹಿಳೆಯರಿಗೆ ಆದ್ಯತೆ ಕೊಡುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ನಾನು ಈ ಮಸೂದೆಯ clause wise ಚರ್ಚೆಗೆ

ಹೋಗುವುದಿಲ್ಲ. ಮಾನ್ಯ ಸಭಾನಾಯಕರು, ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದ ರೀತಿಯಲ್ಲಿ ಎಂದಾಗ ನಾನು ಅವರಿಗೆ ಈ ದೇವಸ್ಥಾನದ ಚಾರಿತ್ರಿಕ ಹಿನ್ನೆಲೆ ಏನು ಎಂದು ಪ್ರಶ್ನೆಯನ್ನು ಮಾಡಿದೆನು. ಲಕ್ಷಾಂತರ ಜನ ಭಕ್ತರು ಆ ದೇವಸ್ಥಾನಕ್ಕೆ ನಡೆದುಕೊಳ್ಳುತ್ತಾರೆ. ಧಾರ್ಮಿಕ ಪ್ರವೃತ್ತಿಗೆ ಬಡತನ ಸಿರಿತನ ಎನ್ನುವುದಿಲ್ಲ. ಬಡವರು ಇರುತ್ತಾರೆ, ಶ್ರೀಮಂತರು ಇರುತ್ತಾರೆ. ಕೂಡಲ ಸಂಗಮದಲ್ಲಿ 12ನೇ ಶತಮಾನದಲ್ಲಿ ಬಸವಣ್ಣನವರು ಜಾತಿರಹಿತವಾದ, ವರ್ಗರಹಿತವಾದ ಜ್ಯಾತ್ಯಾತೀತ ನಿಲುವಿನ ಸಮುದಾಯದ ಒಂದು ಸಮಾಜ ನಿರ್ಮಾಣ ಮಾಡಲಿಕ್ಕೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ನಮ್ಮಲ್ಲಿನ ಜಾತಿ ವ್ಯವಸ್ಥೆ ನಮ್ಮ ದೇಶದ ಪ್ರಗತಿಗೆ ಮಾರಕವಾಗಿದೆ. ಇಂತಹ ಕಡೆಯಲ್ಲಿ ಒಂದು ಪ್ರಾಧಿಕಾರದ ಮುಖಾಂತರ ಕಾಯಕವೇ ಕೈಲಾಸ ಎನ್ನುವ ದಿವ್ಯ ಮಂತ್ರವನ್ನು ಮನುಕುಲಕ್ಕೆ ನೀಡಿದ್ದಾರೆ. ಅಂತಹ ಪ್ರಾಧಿಕಾರವನ್ನು ರಚನೆ ಮಾಡಿ, ಅಲ್ಲಿ ಪ್ರಸಾರವಾದ ವಿಚಾರಗಳನ್ನು ಅಭಿವೃದ್ಧಿ ಪಡಿಸಿ ಕಾಯಕವೇ ಕೈಲಾಸ ಎಂದರೆ ದುಡಿದು ತಿನ್ನಿರಿ ಎಂದು, ದುಡಿಮೆ ಮಾಡದೇ ಊಟ ಮಾಡಬಾರದು ಎಂದು.,

**ಸಭಾಪತಿಯವರು:–** ಇಲ್ಲೂ ಅದನ್ನೇ ತರಬೇಕೆಂದು ಹೇಳುವಿರಾ?

**ಶ್ರೀ ಎಸ್.ಆರ್. ಪಾಟೀಲ್:–** ಇಲ್ಲ, ಇಲ್ಲಿಯೂ ಅದೇ ವ್ಯವಸ್ಥೆ ಇದೆಯೇ ಎಂದು ಕೇಳುತಿದ್ದೇನೆ. ಅಲ್ಲಿ ಜ್ಯಾತ್ಯಾತೀತ ವ್ಯವಸ್ಥೆ 700–800 ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಇದರ ಚಾರಿತ್ರಿಕ ಹಿನ್ನೆಲೆಯಂತೆ ಭಕ್ತರು ನಡೆದುಕೊಳ್ಳುತ್ತಿದ್ದಾರಾ ಎಂದು ಕೇಳುತ್ತಿದ್ದೇನೆ.

**ಸಭಾಪತಿಯವರು:–** ಪ್ರಾಧಿಕಾರವನ್ನು ಮಾಡಿ, ಬರುವ ಭಕ್ತರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವುದು ಮಾನ್ಯ ವಿರೋಧ ಪಕ್ಷದ ನಾಯಕರ ಅಭಿಪ್ರಾಯ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಕ್ಷೇತ್ರ ಅಭಿವೃದ್ಧಿ ಮಾಡುವುದರ ಜೊತೆಗೆ ಕೆಲವೊಂದು ಕಾಮಗಾರಿಗಳ ಮುಖಾಂತರ

ಜನರಿಗೆ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಪ್ರಾಧಿಕಾರವನ್ನು ರಚನೆ ಮಾಡುತ್ತಿದ್ದಾರೆ ಎನ್ನುವುದು ನನ್ನ ಭಾವನೆ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):– ಮಾನ್ಯ ಸಭಾಪತಿಗಳೆ,** ಅವರು ಹೇಳುತ್ತಿರುವುದು ಕೂಡ ಒಂದು ಅಂಗ.

**ಶ್ರೀ ಎಸ್.ಆರ್. ಪಾಟೀಲ್:–** ಅಲ್ಲಿ ಇರುವ referenceಗೂ ಇಲ್ಲಿ ಇರುವುದಕ್ಕೂ ಮಹಾ ಅಂತರವಿದೆ.

**ಸಭಾಪತಿಯವರು:–** ಕೂಡಲ ಸಂಗಮದಲ್ಲಿ ಭಕ್ತಾಧಿಗಳಿಗೆ ಸೌಲಭ್ಯಗಳನ್ನು ಒದಗಿಸುವುದು ಮಾತ್ರವಲ್ಲ, ಬಸವಣ್ಣನವರು ಏನು ಆಸೆಪಟ್ಟಿದ್ದರು ಅದನ್ನು ಕಾರ್ಯಗತಗೊಳಿಸಲು ಅಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. ಆ ರೀತಿ ಇಲ್ಲಿಯು ಏನಾದರು ಮಾಡಲಾಗುತ್ತಿದೆಯೇ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಬಸವಣ್ಣನವರು ವಿಚಾರಗಳು ಇವತ್ತಿಗೂ ಪ್ರಸ್ತುತ. ಅದರ ಮುಖಾಂತರ ಜಾತ್ಯಾತೀತ ಸಮಾಜ ನಿರ್ಮಾಣ ಮಾಡಲು ಕ್ಷೇತ್ರ ಅಭಿವೃದ್ಧಿಯಾದರೆ ಸರಿ.

**ಸಭಾಪತಿಯವರು:–** ಈಗ ಕ್ಷೇತ್ರದ ಬಗ್ಗೆ ಮಾತನಾಡುವುದು ಬೇಡ.

**ಶ್ರೀ ಎಸ್.ಆರ್. ಪಾಟೀಲ್:–** ಸಮುದಾಯಕ್ಕೆ ನೀಡಿದಂತಹ, ಮನಕುಲಕ್ಕೆ ನೀಡಿದಂತಹ ಸಂದೇಶ ಇಲ್ಲಿ ಏನಾದರೂ ಇದೆಯೇ ಎಂದು ಅವರನ್ನು ನಾನು ಕೇಳುತ್ತೇನೆ.

**ಶ್ರೀ ಸಿದ್ದರಾಜು:– ಮಾನ್ಯ ಸಭಾಪತಿಗಲೆ,** ವಿಶೇಷವಾಗಿ ಮಲೆಮಹದೇಶ್ವರಕ್ಕೆ ಬರುವ ಭಕ್ತಾಧಿಗಳು, 12ನೇ ಶತಮಾನದಲ್ಲಿ ಬಸವಣ್ಣನವರು ಹಾಕಿಕೊಟ್ಟಂತಹ... ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹಿಂದುಳಿದ–ದೀನದಲಿತ ಭಕ್ತಾದಿಗಳು ಬರುತ್ತಾರೆ. ಇದು ಮಹದೇಶ್ವರ ಭಕ್ತ ಪರಂಪರೆಯಲ್ಲಿರುವುದು. ಇದನ್ನು ಸದನದ ಗಮನಕ್ಕೆ ತರಲು ಹೇಳುತ್ತಿದ್ದೇನೆ.

**ಡಾ॥ ಎ.ಎಚ್. ಶಿವಯೋಗಿಸ್ವಾಮಿ:- ಮಾನ್ಯ ಸಭಾಪತಿಗಳೆ,** ಇಲ್ಲಿ ಸಣ್ಣ correction ಇದೆ, ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಇಚ್ಚಿಸುತ್ತೇನೆ. 13ನೇ ಪುಟದಲ್ಲಿರುವ 21ನೇ ಪ್ಯಾರದಲ್ಲಿರುವ ವಿಷಯದ ಬಗ್ಗೆ ಮಾನ್ಯ ಕಾರ್ಣಿಕ್‌ರವರು ಹೇಳಿದರು, ಅವರು ಒಂದು ಪ್ಯಾರಾವನ್ನು ಓದಿ ಬಿಟ್ಟುಬಿಟ್ಟರು ಮುಂದಿನ ಪ್ಯಾರಾ ಓದಲಿಲ್ಲ. ಅಲ್ಲಿ ಸ್ವಲ್ಪ correction ಇದೆ. 13ನೇ ಪುಟ, 21ನೇ ಪ್ಯಾರಾದಲ್ಲಿ, ರಾಜ್ಯ ಸರ್ಕಾರವು ಪ್ರಾಧಿಕಾರದ ಶಿಫಾರಸ್ಸಿನ ಮೇರೆಗೆ ಅಥವಾ ಅನ್ಯತಾ ಶ್ರೀ ಮಲೆಮಹದೇಶ್ವರ ಕ್ಷೇತ್ರದ ನಿರ್ವಹಣೆಯ ನಿಯಮಗಳ ಮೂಲಕ ಉಪಬಂಧಗಳನ್ನು ರಚಿಸತಕ್ಕದ್ದು ಎಂದು ಇದೆ. ಅದರ ಮುಂದಿನ ವ್ಯಾಖ್ಯೆ, ಈ ಉಪಬಂಧಗಳಲ್ಲಿ ಶ್ರೀ ಮಲೆಮಹದೇಶ್ವರ ದೇವಸ್ಥಾನದ ನಿರ್ವಹಣೆಯು ಸೇರಿದಂತೆ, ಅಂದರೆ ದೇವಸ್ಥಾನದ ನಿರ್ವಹಣೆಯು ಸೇರಿದಂತೆ ಕ್ಷೇತ್ರಕ್ಕೆ ಬರುವ ಯಾತ್ರಿಗಳಿಗೆ, ಪ್ರವಾಸಿಗರಿಗೆ ಎಲ್ಲ ಸೌಲಭ್ಯಗಳನ್ನು ಕೊಡಬೇಕು ಎಂದು ಇದೆ. ಇಲ್ಲಿ ಒಂದು ಕಡೆ "ದೇವಸ್ಥಾನದ ನಿರ್ವಹಣೆಯು ಸೇರಿದಂತೆ" ಎಂದು ಬರೆಯಲಾಗಿದೆ. 10ನೇ ಪುಟದಲ್ಲಿ 2002ರ ಉಪಬಂಧಗಳ ನಿಯಮಗಳ ಪ್ರಕಾರ "ಶ್ರೀ ಮಲೆಮಹದೇಶ್ವರ ದೇವಸ್ಥಾನ ಮತ್ತು ದೇವಸ್ಥಾನದ ಆಡಳಿತದಲ್ಲಿ ಪ್ರಾಧಿಕಾರವು ಹಸ್ತಕ್ಷೇಪ ಮಾಡತಕ್ಕದಲ್ಲ" ಎಂದು ಬರೆಯಲಾಗಿದೆ. ಇದೇ ಇಲ್ಲಿ contradiction ಆಗಿರುವುದು. ಹೀಗಾಗಿ 21ನೇ ಪುಟದಲ್ಲಿರುವ ಒಂದು ವ್ಯಾಖ್ಯವನ್ನು ಬಿಡಬೇಕಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ಮಾನ್ಯ ಸಭಾಪತಿಗಳೆ,** ಕೇವಲ ಪ್ರಾಧಿಕಾರವನ್ನು ಮಾಡುತ್ತಾರೆಯೇ ಅಥವಾ ವ್ಯವಸ್ಥಾಪಕ ಸಮಿತಿಯನ್ನು ಮಾಡುತ್ತಾರೆಯೇ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):- ಮಾನ್ಯ ಸಭಾಪತಿಗಳೆ,** ವ್ಯವಸ್ಥಾಪಕ ಸಮಿತಿಯನ್ನು ರಚನೆ ಮಾಡುವುದಿಲ್ಲ. ಆ ಸಮಿತಿ ಮಾಡಿರುವುದರಿಂದಲೇ ದೇವಸ್ಥಾನ ಇದುವರೆಗೆ ಅಭಿವೃದ್ಧಿಯಾಗದೆ

ವಂಚಿತವಾಗಿರುವುದು. ಇವತ್ತು ತಂದಿರುವ ಈ ಮಸೂದೆಗೆಯೇ ಎಲ್ಲವನ್ನು ಒಳಪಡಿಸಲಾಗುತ್ತದೆ. ನಾಳೆ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ ಇದರಲ್ಲಿ ಏನೇನು ಬದಲಾವಣೆ ಮಾಡಬೇಕು ಮಾಡುತ್ತೇವೆ. ದೇವಸ್ಥಾನದ ಬಗ್ಗೆ ನಮ್ಮ ಉದ್ದೇಶಗಳೇನು ಅವುಗಳನ್ನು ಕಾರ್ಯರೂಪಕ್ಕೆ ತಂದು ಇವತ್ತು ಸಫಲತೆಯನ್ನು ಕಾಣಬೇಕಾಗಿದೆ. ಮಾನ್ಯ ಸದಸ್ಯರುಗಳು ಸೂಚಿಸಿರುವ ಕೆಲವು ಬದಲಾವಣೆಗಳನ್ನು ಇದರಲ್ಲಿ ಅಳವಡಿಸಿಕೊಳ್ಳಲಾಗುತ್ತದೆ. ಕೂಡಲ ಸಂಗಮದ ರೀತಿಯಲ್ಲಿಯೇ ಇದನ್ನು ಅಭಿವೃದ್ಧಿ ಮಾಡಬೇಕು ಎನ್ನುವುದು ನನ್ನ ಉದ್ದೇಶ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ತಾವು ಇದರಲ್ಲಿ ತಿದ್ದುಪಡಿ ಮಾಡಿ ಮತ್ತೆ ಬಿಲ್‌ನ್ನು ತರುತ್ತೀರಾ ಹೇಗೆ?

**ಶ್ರೀ ವಿ. ಸೋಮಣ್ಣ (ಸಭಾನಾಯಕರು):– ಮಾನ್ಯ ಸಭಾಪತಿಗಳೆ,** rules ಮಾಡಿಕೊಳ್ಳುವಾಗ ಈ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತೇವೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಶ್ರೀ ಮಲೈ ಮಹಾದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

ಖಂಡ 2 ರಿಂದ 40

**ಸಭಾಪತಿಯವರು:–** "ಖಂಡ 2 ರಿಂದ 40ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 40ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಪ್ರಸ್ತಾವದ ಅಂಗೀಕಾರ**

**ಶ್ರೀ ವಿ. ಸೋಮಣ್ಣ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಶ್ರೀ ಮಲೈ ಮಹಾದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2013ರ ಶ್ರೀ ಮಲೈ ಮಹಾದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**17. ವಿತ್ತೀಯ ಕಾರ್ಯಕಲಾಪಗಳು**

**2013–2014ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ**

**ಸಭಾಪತಿಯವರು:–** ನಾನು ಎಲ್ಲಾ ಪಕ್ಷಗಳಿಂದ ಕೊಟ್ಟಿರುವಂತಹ ಪಟ್ಟಿಯನ್ನು ಇಟ್ಟುಕೊಂಡಿದ್ದೇನೆ. ಆ ಪಟ್ಟಿಯಲ್ಲಿ ಯಾರಿಗೆ ಸದನದಲ್ಲಿ ಮಾತನಾಡಲು ಹೆಚ್ಚಿಗೆ ಅವಕಾಶ ಸಿಕ್ಕಿಲ್ಲ ಅವರಿಗೆ ಅವಕಾಶ ಕೊಡಲು ಹೆಸರನ್ನು ಬರೆದುಕೊಂಡಿದ್ದೇನೆ. ಉದಾಹರಣೆಗೆ ಮಾನ್ಯ ಘೋಟ್ನೆಕರ್‌ರವರಿಗೆ ಅವಕಾಶ ಸಿಕ್ಕಿರಲಿಲ್ಲ, ಅವರಿಗೆ ಮಾತನಾಡಲು ಅವಕಾಶವನ್ನು ಕೊಡಲಾಯಿತು. ಈ ರೀತಿ ಯಾರು ಮಾತನಾಡಿರುವುದಿಲ್ಲ ಅಂತವರಿಗೆ

ಹುಡುಕಿ–ಹುಡುಕಿ ಅವಕಾಶವನ್ನು ಕೊಡಲಾಗುತ್ತಿದೆ. ಯಾರು ತಪ್ಪು ತಿಳಿಯಬಾರದು. ಮಾನ್ಯ ಭಾಂಡಗೆಯವರು ಮಾತೆ ಆಡಿಲ್ಲ, ಅವರಿಗೆ ಅವಕಾಶವನ್ನು ಕೊಡುತ್ತೇನೆ. ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ಯಾರಿಗೂ ಇಲ್ಲ ಅನ್ನುವುದಿಲ್ಲ. ಎಷ್ಟು ಹೊತ್ತಾದರು ಕುಳಿತುಕೊಳ್ಳೋಣ. ಆದರೆ ಮಾತನಾಡಿದವರು ನನ್ನ ಭಾಷಣ ಮುಗಿಯಿತು ಎಂದು ಎದ್ದು ಹೋಗಬಾರದು. ಎಲ್ಲರೂ ಕುಳಿತ್ತಿರಬೇಕು. ಏನೊ ಐದು ನಿಮಿಷ ಹೋಗಿ ಕಾಫಿ ಕುಡಿದು ಬರುವುದಾದ್ದರೆ ನನ್ನದೇನು ಅಭ್ಯಂತರವಿಲ್ಲ. ಆದರೆ ಕುಳಿತಿರಬೇಕಾಗುತ್ತದೆ. ಸಹಕಾರವನ್ನು ನೀಡಿ. ಈಗ ಮಾನ್ಯ ನಾರಾಯಣ ಸಾ ಭಾಂಡಗೆಯವರು ಮಾತನಾಡಬೇಕು. ಗಡಿಯಾರ ನೋಡಿಕೊಳ್ಳಿ ಎಷ್ಟು ಗಂಟೆಗೆ ಪ್ರಾರಂಭ ಮಾಡಿದ್ದೀರಿ ಎಂದು, ಮಾರ್ಕ್ ಮಾಡಿಕೊಂಡು 8ರಿಂದ 10 ನಿಮಿಷದಲ್ಲಿ ಮಾತನಾಡಿ ಮುಗಿಸಿ.

**ಶ್ರೀ ನಾರಾಯಣ ಸಾ. ಭಾಂಡಗೆ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಗಳೆ,** 2013–14ನೇ ಸಾಲಿನ ಬಜೆಟ್‌ನ್ನು ಮಾನ್ಯ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್‌ರವರು ಸಮಾಜದ ಎಲ್ಲ ವೃತ್ತಿಯ ಜನರ ಕಲ್ಪನೆಯನ್ನು ಇಟ್ಟುಕೊಂಡು. ಎಲ್ಲರ ಅಭಿವೃದ್ಧಿಯ ದ್ಯೋತಕವಾಗಿ ಈ ಬಜೆಟ್‌ನ್ನು ಮಂಡಿಸಿರುವುದಕ್ಕಾಗಿ ಪ್ರಥಮವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ವಿರೋಧ ಪಕ್ಷದ ನಾಯಕರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಅವರು ಮಾತನಾಡುತ್ತಾ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮುಂದೆ ಯಾವ ರೀತಿ ಇನ್ನು ಉತ್ತಮವಾದ ಕೆಲಸವನ್ನು ಮಾಡಬೇಕು ಎನ್ನುವ ಬಗ್ಗೆ ಸಲಹೆಯನ್ನು ಕೊಟ್ಟರು ವಿನಹ ಯಾರು ಈ ಬಜೆಟ್ ಬಗ್ಗೆ ಪ್ರಖರವಾದ ಟೀಕೆ ಮತ್ತು ಪ್ರಹಾರವನ್ನು ಮಾಡಲಿಲ್ಲ. ಏಕೆಂದರೆ ಸಹಜವಾಗಿಯೇ ಮಾತನಾಡುವಾಗ ವಿರೋಧ ಪಕ್ಷದವರು ಮಾತನಾಡಬೇಕಾಗುತ್ತದೆ. ಈಗ ಇರುವ ಸಮಸ್ಯೆಗಳ ಬಗ್ಗೆ ಪುಸ್ತಕವನ್ನು ಹಿಡಿದು ಮಾತನಾಡಲು ಹೊರಟ್ಟರೆ ಒಂದು ತಾಸು ಬೇಕಾಗುತ್ತದೆ. ನಾನು ಅಂಕಿ–ಸಂಖ್ಯೆಗಳ ಸಮೇತ ವಿವರಿಸಲು ಹೋಗುವುದಿಲ್ಲ. ಬಾಗಲಕೋಟೆ ಜಿಲ್ಲೆ ಲಕ್ಷಾಂತರ ಎಕರೆ ಜಮೀನನ್ನು ಮುಳಗಡೆಯಲ್ಲಿ ಕಳೆದುಕೊಂಡು ತ್ಯಾಗ

ಮಾಡಿದಂತಹ ಜಿಲ್ಲೆ. ನೂರಾರು ಹಳ್ಳಿಗಳನ್ನು ನಾವು ಕಳೆದುಕೊಂಡಿದ್ದೇವೆ. ಒಂದು ಲಕ್ಷ ಇಪ್ಪತ್ತ ಸಾವಿರ ಜನಸಂಖ್ಯೆ ಇದ್ದ ದೊಡ್ಡ ನಗರವನ್ನು ಸಹ ನಾವು ಕಳೆದುಕೊಂಡಿದ್ದೇವೆ.

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಆದರೆ 1964ರಲ್ಲಿ ದಿ: ಲಾಲಬಹದ್ದೂರ ಶಾಸ್ತ್ರಿಯವರು ಅಡಿಗಲ್ಲು ಹಾಕಿದಂತಹ ಕೃಷ್ಣಾ ಮೇಲ್ದಂಡೆ ಆಣೆಕಟ್ಟು ಮುಗಿಸಲು 45 ವರ್ಷಗಳ ಸಮಯ ಹಿಡಿಯಿತು. ಮೊದಲು ನೂರಾರು ಕೋಟಿ ರೂಗಳ ಅಂದಾಜು ಮಾಡಲಾಗಿತ್ತು. ನಂತರ ಅದು ಸಾವಿರಾರು ಕೋಟಿ ರೂಗಳಿಗೆ ಹೋಯಿತು. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೆನೆ ಎಂದರೆ, ಸರ್ಕಾರವು ದಿವ್ಯ ನಿರ್ಲಕ್ಷ್ಯ ತಾಳಿದರೆ ಆ ಹಣ ಯಾವ ಮಟ್ಟಕ್ಕೆ ಹೋಗುತ್ತದೆ, ಜನರ ಹಣ ಯಾವ ರೀತಿ ಅಪವ್ಯಯವಾಗುತ್ತದೆ ಎನ್ನುವುದಕ್ಕೆ ಈ ಉದಾಹರಣೆಯನ್ನು ಕೊಡಬೇಕಾಯಿತು. ಆದರೆ ಬಾಗಲಕೋಟೆ ಜಿಲ್ಲೆಯಲ್ಲಿ ಮುಳಗಡೆಯಾಗುವ ಪ್ರದೇಶಗಳ ಜನರಿಗೆ ಐದಾರು ವರ್ಷಗಳಲ್ಲಿ ಸರ್ಕಾರದಿಂದ ಪ್ರತಿಯೊಬ್ಬ ನಿರಾಶ್ರಿತರಿಗೆ ಸ್ಥಳಾವಕಾಶ ಸಿಕ್ಕಿತು ಮತ್ತು ಅವರಿಗೆ ಒಳ್ಳೆಯ ಬೆಲೆ ಸಿಕ್ಕಿತು. ಹೊಸ ನವನಗರದ ನಿರ್ಮಾಣ ಬಾಗಲಕೋಟೆಯಲ್ಲಿ ಆಯಿತು. ಚಂದೆಘಡ ಬಿಟ್ಟರೆ ಬಾಗಲಕೋಟೆ ಅತ್ಯಂತ ಸುಂದರ ನಗರ ಎನ್ನುವಂತೆ ಆಯಿತು. ಇದು ಕಳೆದ ಐದಾರು ವರ್ಷಗಳಲ್ಲಿ ಸರ್ಕಾರ ಕೊಟ್ಟ ಒಂದು ಕೊಡುಗೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಬಾಗಲಕೋಟೆ ಮತ್ತು ಬಿಜಾಪುರದಲ್ಲಿ 118 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮೊದಲನೆಯ ಹಂತವಾಗಿ ಕೆರೆ ತುಂಬುವ ಕೆಲಸ ನಡೆಯಿತು. ಆದರೆ ಎರಡನೆ ಮತ್ತು ಮೂರನೇ ಹಂತದ ಕೆಲಸಗಳು ನಡೆಯಬೇಕಾಗಿದ್ದು, ಇದರಿಂದ ಅನೇಕ ರೈತರಿಗೆ ಅನುಕೂಲಗಳು ಆಗುತ್ತಿವೆ. ಅಖಂಡ ಜಿಲ್ಲೆಯಲ್ಲಿ ನೀರಾವರಿ ಸಲುವಾಗಿ ಚಿಮ್ಮಲಗಿ, ಗುತ್ತಿಬಸವಣ್ಣ, ಮರೋಳ್ ಮತ್ತು ರಾಮ್‌ತಾಳ್ ಯೋಜನೆಗಳು ಪೂರ್ಣಗೊಂಡಾಗ ಸುಮಾರು 10 ಲಕ್ಷ ಎಕರೆಗೆ ನೀರಾವರಿ ಒದಗಿಸುವ ಒಳ್ಳೆಯ ಕೆಲಸ ಆಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಕಳೆದ

ಮೂರ್ನಾಲ್ಕು ವರ್ಷಗಳಲ್ಲಿ ಉತ್ತರ ಕರ್ನಾಟಕದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯೂ ಆಯಿತು. ಅತಿವೃಷ್ಟಿ ಮೊದಲನೆಯ ಬಾರಿ ಆಗಿರದೆ ಕಳೆದ 50 ವರ್ಷಗಳಲ್ಲಿ ಅನೇಕ ಸಲ ಆಗಿದ್ದು, ಅನೇಕ ಗ್ರಾಮಗಳು ನೀರಿನಲ್ಲಿ ಮುಳುಗಿಹೋಗಿವೆ. ಅಂತಹ ಸಂದರ್ಭದಲ್ಲಿ ಸರ್ಕಾರವು ಆ ಮನೆಗಳಿಗೆ ಐದುನೂರೋ, ಹದಿನೈದು ನೂರೋ ರೂಪಾಯಿಗಳನ್ನು ಕೊಟ್ಟು ಕೈತೊಳೆದುಕೊಂಡು ಬಿಡುತ್ತಿತ್ತು. ಆದರೆ ನಮ್ಮ ಸರ್ಕಾರ 40 ಸಾವಿರ ರೂಪಾಯಿಗಳವರೆಗೆ ಸಹಾಯ ಧನವನ್ನು ಕೊಟ್ಟಿದೆ. ಸುಮಾರು 63 ಸಂಪೂರ್ಣವಾಗಿ ಮುಳುಗಿಹೋದ ಗ್ರಾಮಗಳಿಗೆ ಹೊಸ ಮನೆಗಳನ್ನು ಕೊಟ್ಟು, ಗ್ರಾಮವನ್ನು ಸ್ಥಳಾಂತರ ಮಾಡಿ, ಸುಮಾರು 50–60 ಸಾವಿರ ಮನೆಗಳನ್ನು ಕೊಟ್ಟು ಹಸ್ತಾಂತರ ಮಾಡಿದ್ದಾರೆ. ಅಲ್ಲಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಎಲ್ಲೋ ಒಂದೆರಡು ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಸಿಕ್ಕಿಲ್ಲದಿರಬಹುದು. ಅವುಗಳನ್ನು ಮಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ.

ಇನ್ನು ಸಾಲ ಮಾಡಿ ಈ ಬಜೆಟ್‌ನ್ನು ಮಾಡಿದ್ದಾರೆ, ಸಾಲ ಮಾಡಿ ತುಪ್ಪ ತಿಂದಿದ್ದಾರೆ ಹಾಗೂ ಸಾಲ ಮಾಡಿ ಲಗ್ನ ಮಾಡುತ್ತಾರೆ ಎಂದೆಲ್ಲಾ ಕೆಲವರು ಹೇಳಿದರು. ಆದರೆ ತುಪ್ಪವನ್ನು ಸಹ ಸಾಲ ಮಾಡಿ ತಿಂದರೆ ತಪ್ಪಲ್ಲ, ಏಕೆಂದರೆ ದೇಹದ ಆರೋಗ್ಯದ ಸಲುವಾಗಿ ಹಾಗೂ ದೇಹ ಸದೃಢ ಆಗುವ ಸಲುವಾಗಿ ತುಪ್ಪವನ್ನು ಸಾಲ ಮಾಡಿ ತಿಂದರೆ ತಪ್ಪಲ್ಲ. ಮಾಡಿದ ಸಾಲವನ್ನು ಮುಂದೆ ತೀರಿಸಬಹುದು. ಆದರೆ ದೇಹ ದೃಢವಾಗಿ ಇರಬೇಕು. ಆಗ ಮಾತ್ರ ಸಾಲ ತೀರಿಸಲು ಸಾಧ್ಯವಿದೆ. ಇವತ್ತು ಒಂದು ಲಕ್ಷ ನಲವತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರವು ಮಾಡಿದ್ದು, ಅದನ್ನು ತಪ್ಪು ಎಂದು ಹೇಳುವುದಕ್ಕೆ ಸಾಧ್ಯವಿದೆಯೇ?

**ಶ್ರೀ ಮರಿತಿಬ್ಬೇಗೌಡ:–** ತುಪ್ಪ ತಿಂದರೆ ತಪ್ಪಲ್ಲ, ಆದರೆ ತುಪ್ಪಕ್ಕೋಸ್ಕರ ಎಂಜಲು ತಿನ್ನಬಾರದು ಎಂದು ಹೇಳುತ್ತಿದ್ದೇವೆ.

**ಶ್ರೀ ನಾರಾಯಣಸಾ ಭಾಂಡಗೆ:-** ಯಾರು ತಿಂದಿದ್ದಾರೆ? ಮಾನ್ಯ ಸದಸ್ಯರು ತಿನ್ನಬೇಕು ಎಂದು ಇಚ್ಛೆ ಇದೆಯೇ? ಟೀಕೆ ಮಾಡುವ ಸಲುವಾಗಿ ಟೀಕೆ ಮಾಡಬಾರದು. ಮಾನ್ಯ ಹೊರಟ್ಟಿಯವರು ಮಠ-ಂಮದಿರ ಸಲುವಾಗಿ ಹಣ ಕೊಟ್ಟಿದ್ದು ತಪ್ಪಲ್ಲ ಎಂದು ಹೇಳಿದರು. ತಪ್ಪು ಎಂದು ಯಾರೂ ಹೇಳುವುದಕ್ಕೂ ಆಗುವುದಿಲ್ಲ ಹಾಗೂ ತಪ್ಪು ಎಂದು ಹೇಳಲು ಯಾರಿಗೂ ಧೈರ್ಯವೂ ಇಲ್ಲ. ಯಾರಾದರೂ ಮಠ-ಮಂದಿರಕ್ಕೆ ಕೊಟ್ಟ ಹಣ ತಪ್ಪು, ಅದು ವ್ಯರ್ಥ ಎಂದು ಹೇಳಲಿ ನೋಡೋಣ. ಅದು ಸಾಧ್ಯವಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಶೇಕಡ 90ರಷ್ಟು ತಪ್ಪು. ಈಗಲೂ ಮಠ-ಮಂದಿರಗಳಿಗೆ ಹಣ ಕೊಟ್ಟಿದ್ದು ತಪ್ಪು ಎಂದು ಹೇಳುತ್ತೇನೆ.

(ಗೊಂದಲ)

**ಶ್ರೀ ನಾರಾಯಣಸಾ ಭಾಂಡಗೆ:-** ಈ ಮಾತನ್ನು ಅವರ ಭಾಷಣದಲ್ಲಿ ಹೇಳಲಿಲ್ಲ. ಯಾವ ಮಠಕ್ಕೆ ಕೊಟ್ಟಿರುವುದು ತಪ್ಪು ಎಂದು ಹೆಸರನ್ನು ಹೇಳಲಿ. ಅದರ ಬಗ್ಗೆ ವಿಚಾರ ಮಾಡೋಣ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ವಿಚಾರ ಮಾಡುವುದಕ್ಕೆ ನಾವೇನು ಮಂತ್ರಿಗಳೇ?

**ಶ್ರೀ ಬಸವರಾಜ ಹೊರಟ್ಟಿ:-** ನಾನು ಹೇಳಿದ್ದೇನೆ.

**ಶ್ರೀ ನಾರಾಯಣಸಾ ಭಾಂಡಗೆ:-** ಮಠ ಮಂದಿರಗಳು ಕೂಡ ಸರ್ಕಾರ ಮಾಡಲು ಸಾಧ್ಯವಿಲ್ಲದಿರುವ ಕೆಲಸಗಳನ್ನು ಮಾಡುತ್ತಿವೆ. ದಾಸೋಹ, ಶಿಕ್ಷಣ ಮತ್ತು ಸಮಾಜ ಸೇವೆಯ ಅನೇಕ ಕಾರ್ಯಗಳನ್ನು ಮಠ ಮಂದಿರಗಳು ಮಾಡುತ್ತಾ ಬಂದಿವೆ. ಅದನ್ನು ತಪ್ಪು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ಹಾಗೂ ಇನ್ನೂ ಕೆಲವರಿಗೆ ಕೊಡಿ ಎಂದು ಹೇಳುವುದು ನ್ಯಾಯವಾಗಿದೆ. ಆದ್ದರಿಂದ ಕೇವಲ ಮಠ ಮಂದಿರಗಳಿಗೆ ಮಾತ್ರವಲ್ಲದೆ ಅನೇಕ ಹಿಂದುಳಿದ ಜಾತಿಗಳ ಪಟ್ಟಿಯನ್ನು ಮಾಡಿಕೊಂಡಿರುವುದಲ್ಲದೇ ಪ್ರತಿಯೊಂದು ಸಮಾಜಕ್ಕೂ ಅನುಕೂಲವಾಗುವ ಪಟ್ಟಿಯನ್ನು ಮಾಡಿದ್ದಾರೆ. ಯಾವುದೇ

ಹಿಂದುಳಿದ ಸಮಾಜವನ್ನು ಬಜೆಟ್‌ನಲ್ಲಿ ಬಿಟ್ಟಿಲ್ಲದೇ ಇರುವುದರಿಂದ ಈ ಬಜೆಟ್ ಸರ್ವವ್ಯಾಪಿಯಾಗಿದೆ. ಮೊನ್ನೆ ಭಾಷಣದಲ್ಲಿ 2 ರೂಪಾಯಿಗಳಿಗೆ ಕಿಲೋ ಅಕ್ಕಿಯನ್ನು ಕೊಟ್ಟಿದ್ದಕ್ಕೆ 'ಮೀನನ್ನು ತಿನ್ನೋದು ಕಲಿಸಬೇಡಿ, ಮೀನನ್ನು ಹಿಡಿಯುವುದನ್ನು ಕಲಿಸಿರಿ' ಎಂದು ಹೇಳಿದರು. ಆದರೆ ಮೊದಲು ಮೀನು ತಿಂದಾಗ ರುಚಿ ಇದೆ ಎಂದು ಗೊತ್ತಾಗಬೇಕು, ನಂತರ ಮೀನನ್ನು ಹಿಡಿಯುವುದಕ್ಕೆ ಹೋಗುತ್ತಾನೆ. ಪ್ರತಿ ಬಾರಿ ಯಾರೂ ಮೀನು ತಿನ್ನಿಸುವುದನ್ನು ಕಲಿಸುವುದಿಲ್ಲ. ಒಂದು ಸಾರಿ ತಿನ್ನಿಸಿದರೆ ಆತ ತಾನಾಗಿಯೇ ಮೀನು ಹಿಡಿಯುವುದಕ್ಕೆ ಹೋಗುತ್ತಾನೆ. ಇದನ್ನು ಯಾರೂ ಹೇಳಬೇಕಾಗಿಲ್ಲ. ಇಂತಹ ಅನೇಕ ಜನಪ್ರಿಯ ಯೋಜನೆಗಳನ್ನು ಹಿಂದಿನಿಂದಲೂ ಎಲ್ಲರೂ ಹಾಕಿಕೊಂಡು ಬಂದಿದ್ದಾರೆ. ಶ್ರೀ ಬಂಗಾರಪ್ಪನವರು ಇದ್ದಾಗ ಶಾಲೆಗಳನ್ನು ಹುಡುಗರು ದಪ್ಪ-ಪುಷ್ಟವಾಗಿರಲಿ ಎಂದು ತತ್ತಿಗಳನ್ನು ಕೊಡುತ್ತಿದ್ದರು. ಅದನ್ನು ತಪ್ಪು ಎಂದು ಹೇಳುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಅವರು ಊಟಕ್ಕೆ ತತ್ತಿಗಳನ್ನು ಕೊಟ್ಟರು, ಆದರೆ ಇವರು ತಟ್ಟೆಗಳನ್ನು ನುಂಗಿಬಿಟ್ಟರು.

**ಶ್ರೀ ನಾರಾಯಣಸಾ ಭಾಂಡಗೆ:-** ಆ ರೀತಿ ಆಗಿಲ್ಲ, ಮಾನ್ಯ ಹೊರಟ್ಟಿಯವರು ನಮ್ಮ ಮೇಲಿನ ಪ್ರೀತಿಯಿಂದ ಮಾತನಾಡುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಹಸಿವಾದಾನ ಮೀನನ್ನು ಕೊಡುವ ಪ್ರವೃತ್ತಿ ಮುಂದುವರೆಸುವುದಕ್ಕಿಂತ ಮೀನು ಹಿಡಿಯುವ ಕಲೆ ಕಲಿಸಿಕೊಟ್ಟಾಗ ಶಾಶ್ವತವಾಗಿ ಅವರ ಕಾಲ ಮೇಲೆ ನಿಲ್ಲುತ್ತಾರೆ. ಅದು spirit ಅಷ್ಟೇ. ಮೀನು ತಿಂದಮೇಲೆ ರುಚಿ ಗೊತ್ತಾದ ಮೇಲೆ ಹಿಡಿಯುವುದಕ್ಕೆ ಹೋಗುತ್ತಾನೆ ಎಂದು ಹೇಳಿದ ಬಗ್ಗೆ, you understand the spirit behind my statement.

**ಶ್ರೀ ನಾರಾಯಣಸಾ ಭಾಂಡಗೆ:-** ನಾನು ಅವರು ಹೇಳಿದ್ದನ್ನೇ ಪೂರ್ಣವಾಗಿ ಅರ್ಥಮಾಡಿಕೊಂಡು ಹೇಳಿದ್ದೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಅಕ್ಕಿ ತಿನ್ನುವುದಕ್ಕಿಂತ ಭತ್ತ ಬೆಳೆಯುವುದನ್ನು ಕಲಿಯಿರಿ ಎಂದು ಆಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:–** ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕು. ಮುಂಜಾನೆ ಹಸಿವಾದಾಗ ಶ್ರೀ ಭಾಂಡೆಗೆ ರವರು ಒಂದು ಮೀನು ಕೊಟ್ಟರು ಎಂದು ಸಂಜೆ ಹಸಿವಾದಾಗ ಶ್ರೀ ಭಾಂಡೆಗೆ ಅವರ ನೆನಪಾಗುತ್ತದೆ. ಏಕೆಂದರೆ ಅವರು ನಮ್ಮನ್ನು ಮರೆಯುವಂತೆ ಇಲ್ಲ. ಅವರು ಯಾವತ್ತೂ ನಮ್ಮ ಅಧೀನದಲ್ಲಿಯೇ ಇರಬೇಕು. ನಾವು ಹೇಳಿದಂತೆ ಕೇಳಬೇಕು ಹಾಗೂ ಹೇಳಿದಂತೆ ಕೇಳುವ ಪ್ರವೃತ್ತಿಗೆ ಬದಲಾಗಿ ಸ್ವಾವಲಂಬಿಗಳನ್ನಾಗಿ ನಿರ್ಮಾಣ ಮಾಡಿದಾಗ ಸ್ವಾಭಿಮಾನಿಗಳಾಗಿ ಬದುಕುವುದಕ್ಕೆ ಅನುಕೂಲವಾಗುತ್ತದೆ ಎಂದು ಉದಾಹರಣೆಯನ್ನು ಕೊಟ್ಟೆ.

**ಶ್ರೀ ನಾರಾಯಣಸಾ ಭಾಂಡೆಗೆ:–** ಮಾನ್ಯ ಪಾಟೀಲರು ಭಾಷಣದ ಉದ್ದಕ್ಕೂ ಸರ್ಕಾರಕ್ಕೆ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಮಗೆ ಒಳ್ಳೆಯ ಸಲಹೆಗಳನ್ನು ಕೊಟ್ಟು ಇನ್ನೂ ಒಳ್ಳೆಯದಾಗುವಂತೆ ಮಾಡಿ ಎಂದು ಹೇಳಿರುವುದಕ್ಕೆ ಧನ್ಯವಾದಗಳನ್ನು ಹೇಳಿದ್ದೇನೆ. ಅವರು ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕು, ಅವರ ಕಾಲಮೇಲೆ ಅವರು ನಿಲ್ಲುವಂತೆ ಸರ್ಕಾರಗಳು ಮಾಡಬೇಕು ಎಂದು ಹೇಳಿದ್ದು ಸರಿ. ಆದರೆ ಕಳೆದ 60 ವರ್ಷಗಳಲ್ಲಿ ಜನರನ್ನು ಭಿಕ್ಷೆ ಬೇಡುವಂತಹ ಪರಿಪಾಠಕ್ಕೆ ದೂಡಿದವರು ನಾವುಗಳಾಗಿದ್ದು, ಅದನ್ನು ಮರೆತುಬಿಟ್ಟಿದ್ದೇವೆ. ಗರೀಬಿ ಹಠಾವೋದಲ್ಲಿ ಏನು ಮಾಡಿದರು? ಗರೀಬಿ ಹಠಾವೋ ಆಗಲಿಲ್ಲ, ಗರೀಬ್‌ಕೋ ಹಠಾವ್ ಆಯಿತು. ಇದರಲ್ಲಿ ಬಹಳಷ್ಟು ಅಂತಹ ಇದೆ. ನಾವುಗಳು 50 ವರ್ಷಗಳ ಅಂತರದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡು ಬಂದಿದ್ದರೆ ಈ ರೀತಿಯ ಸಂಕಷ್ಟಗಳಲ್ಲಿ ರೈತ, ಜನ ಮತ್ತು ಸಮಾಜಗಳು ಇರುತ್ತಿರಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಅವರಿಂದ ಸುಂದರ ಕರ್ನಾಟಕ ಈಗ ಹೊಸದಾಗಿ ನಿರ್ಮಾಣವಾಗಿದೆ. ಅವರು ಏನು ಮಾಡಿದ್ದಾರೆ ಎಂದು ನಾಡಿನ ಸಮಸ್ತ ಜನತೆಗೆ ಗೊತ್ತಾಗಿದೆ. ವಿಧಾನ ಸೌಧವನ್ನು ಅವರೇ ಕಟ್ಟಿಸಿದ್ದರೇ?

ಎಲ್ಲಾ ಜಲಾಶಯಗಳನ್ನು ಅವರೇ ನಿರ್ಮಾಣ ಮಾಡಿದ್ದರೇ? ಅದಕ್ಕೆ ಎಲ್ಲರ ಕೊಡುಗೆ ಇದೆ. ನಮ್ಮ ಪಕ್ಷದವರು ಈ ರೀತಿ populist schemes ನಿಂದ cheap popularity ಸಲುವಾಗಿ ಮಾಡಿದರೆ ತಪ್ಪು. ಅಕ್ಷಮ್ಯ ಅಪರಾಧ. ಆದ್ದರಿಂದ ಯಾವುದೇ ಪಕ್ಷ ಇರಬಹುದು, ನಾನು ಪಕ್ಷಾತೀತವಾಗಿ ಹೇಳುವುದೇನೆಂದರೆ ಜನರನ್ನು ಸ್ವಾವಲಂಬಿಗಳನ್ನಾಗಿ ಮುನ್ನಡೆಸಬೇಕು. ಅವರನ್ನು ಪರಾವಲಂಬಿಗಳನ್ನಾಗಿ ಮಾಡಬಾರದು. ಏಕೆಂದರೆ ಅಮೇರಿಕಾ ದೇಶಕ್ಕೆ ನಮ್ಮ ದೇಶದ ಬಗ್ಗೆ ಬಹಳಷ್ಟು ಅಂಜಿಕೆ ಇದೆ ಎಂದು ಹೇಳುತ್ತಾರೆ. ಒಂದು ಕೋಟಿ 20 ಲಕ್ಷಗಳ ಮಾನವ ಸಂಪನ್ಮೂಲ ನಮ್ಮಲೇನಿದೆ, ಇದು ಸದ್ಬಳಕೆ ಆದರೆ ನಿಶ್ಚಿತವಾಗಿಯೂ ದೇಶಕ್ಕೆ ಭವಿಷ್ಯತ್ ಇದೆ. ಮಾನವ ಸಂಪನ್ಮೂಲ ಸದ್ಬಳಕೆ ಆಗುವಂತೆ ಸರಿಯಾದಂತಹ ದಾರಿ ತೋರಿಸಬೇಕು. ಅವರನ್ನು ಸರ್ಕಾರ ಅಥವಾ ಮತ್ಯಾರೋ ಮೇಲೆಯೇ ಅವಲಂಬಿತರಾಗುವಂತೆ ಮಾಡುವ ಬದಲಾಗಿ ಸ್ವಂತ ಕಾಲಮೇಲೆ ಬದಕನ್ನು ಸಾಗಿಸುವಂತಹ ಜೀವನ ಕೊಟ್ಟರೆ ಮಾನವ ಸಂಪನ್ಮೂಲ ಉಪಯೋಗವಾಗುತ್ತದೆ. ಭೌಗೋಳಿಕವಾಗಿ ಅಮೇರಿಕಾ ದೇಶವು ನಮಗಿಂತ ದೊಡ್ಡ ದೇಶವಾಗಿದ್ದು ಜನಸಂಖ್ಯೆ ಕಡಿಮೆ ಇದೆ. ಆದರೆ ನಮ್ಮಲ್ಲಿ ಜನಸಂಖ್ಯೆ ಹಾಗೂ ಮಾನವ ಸಂಪನ್ಮೂಲವೂ ಹೆಚ್ಚಾಗಿ ಇದೆ.

(7.30 ಘಂಟೆ)

ಸನ್ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ ಮಾನವ ಸಂಪನ್ಮೂಲ ಹೆಚ್ಚಾಗಿದೆ. 'ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮಾನವ ಸಂಪನ್ಮೂಲವನ್ನು ಹೊಂದಿರುವ ನಮ್ಮ ಭಾರತ ದೇಶ ಕ್ರಿಯಾಶೀಲವಾಗಿ ಕೆಲಸ ಮಾಡಿದರೆ, ಅಮೆರಿಕಾ ದೇಶವನ್ನು ಸಹ ಅಭಿವೃದ್ಧಿಯಲ್ಲಿ ಹಿಂದಿಕ್ಕುವ ಸಂಭವಗಳು ಹೆಚ್ಚಿವೆ' ಎನ್ನುವಂತಹ ಆತಂಕ ಅವರಿಗಿದೆ. ನಮ್ಮಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲದ ಸದ್ಬಳಕೆಯಾಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ. ಯುವ ಜನರಿಗೆ ಎಲ್ಲ ಸೌಲಭ್ಯಗಳನ್ನು ಕೊಟ್ಟು, ಊಟ ಮಾಡಿಸಿ ಮಲಗಿಸಿ ಬಿಟ್ಟರೆ, ಮಾನವ ಸಂಪನ್ಮೂಲದ ಸದ್ಬಳಕೆ ಆಗುವುದಿಲ್ಲ. ಅವರುಗಳು ರಾಷ್ಟ್ರ

ಕಟ್ಟುವಂತಹ ಕೆಲಸದಲ್ಲಿ ಭಾಗಿಯಾದಾಗ ಮಾತ್ರ ಮಾನವ ಸಂಪನ್ಮೂಲದ ಸದ್ಬಳಕೆ ಆಗುತ್ತದೆ. ಮಾನವ ಸಂಪನ್ಮೂಲವನ್ನು ನಿಷ್ಕ್ರಿಯಗೊಳಿಸುವ ಕೆಲಸವನ್ನು ಯಾವ ಸರ್ಕಾರ ಮಾಡಿದರೂ ತಪ್ಪೇ. ಆ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ನಿರ್ಗತಿಕರಿಗೆ ಸೌಲಭ್ಯಗಳನ್ನು ಕೊಡುವುದು ತಪ್ಪಲ್ಲ. ವಿಧವೆಯರಿಗೆ ಮಾಸಾಶನ ಕೊಡುವುದು ತಪ್ಪಲ್ಲ, ವೃದ್ಧರಿಗೆ ವೃದ್ಧಾಪ್ಯ ವೇತನ ಕೊಡುವುದು ತಪ್ಪಲ್ಲ. ಅರ್ಹರಿಗೆ ಸೌಲಭ್ಯಗಳನ್ನು ಕೊಟ್ಟರೆ ತಪ್ಪಾಗುವುದಿಲ್ಲ, ಅನರ್ಹರಿಗೆ ಕೊಟ್ಟರೆ ಮಾತ್ರ ತಪ್ಪಾಗುತ್ತದೆ. ನಾವು ಈ ಸದನದಲ್ಲಿ ಆ ಸೌಲಭ್ಯಗಳ ನೀಡಿಕೆಯನ್ನು ಬೆಂಬಲಿಸಿದ್ದೇವೆ ಮತ್ತು ಒಪ್ಪಿಕೊಂಡಿದ್ದೇವೆ. ಈಗ, ಈ ವೇದಿಕೆಯಲ್ಲಿ ಅದು ತಪ್ಪು ಎಂದು ಹೇಳುವುದು ಸರಿಯಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ದಯಮಾಡಿ ತಪ್ಪು ಮಾಹಿತಿ ಕಡತಕ್ಕೆ ಹೋಗುವುದು ಬೇಡ. ಯಾರಿಗೆ ಧ್ವನಿ ಇಲ್ಲ ಅವರಿಗೆ ಧ್ವನಿ ಕೊಡುವ ಬಗ್ಗೆ ಮತ್ತು ಯಾರು ಅರ್ಹರಿರುತ್ತಾರೆ ಅವರಿಗೆ ಸೌಲಭ್ಯಗಳನ್ನು ಕೊಡುವ ಬಗ್ಗೆ ಯಾವುದೇ ತಕರಾರು ಇಲ್ಲ. ಯಾರಿಗೆ ಮಕ್ಕಳು ಇರುವುದಿಲ್ಲ, ಜಮೀನು ಇರುವುದಿಲ್ಲ ಅಂತಹವರಿಗೆ ವೃದ್ಧಾಪ್ಯ ವೇತನ, ಮಾಸಾಶನ ಕೊಡುವುದು ಒಳ್ಳೆಯ ಯೋಜನೆಯಾಗಿದೆ. ಇದರಿಂದ ಅವರಿಗೆ ನ್ಯಾಯ ಬದಗಿಸಿದಂತಾಗುತ್ತದೆ. ನಾಗರಿಕ ಸರ್ಕಾರಗಳು ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಅನರ್ಹರಿಗೆ ಸೌಲಭ್ಯಗಳನ್ನು ಕೊಡುತ್ತಾ ಹೋದರೆ, ಸೋಮಾರಿಗಳನ್ನು ನಿರ್ಮಾಣ ಮಾಡಿದಂತಾಗುತ್ತದೆ. ಯಾರಿಗೆ ಅರ್ಹತೆ ಇದೆ ಅವರಿಗೆ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ. ಯಾರು ಅನಾಥರಾಗಿರುತ್ತಾರೆ, ಯಾರಿಗೆ ಜೀವನ ಸಾಗಿಸುವುದಕ್ಕೆ ದಾರಿ ಇರುವುದಿಲ್ಲ ಅವರಿಗೆ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಅರ್ಹರಿಗೆ ಮಾತ್ರ ಸೌಲಭ್ಯಗಳು ತಲುಪಬೇಕೇ ಹೊರತು, ಅರ್ನಹರಿಗೆ

ತಲುಪಬಾರದು. ದುಡ್ಡಿದ್ದವರಿಗೆ ಸಹಾಯ ಮಾಡಿದರೆ ಅದು ಸೌಲಭ್ಯಗಳ ದುರ್ಬಳಕೆ ಆಗುತ್ತದೆ.

**ಶ್ರೀ ನಾರಾಯಣ ಸಾ. ಭಾಂಡಗೆ:–** ಸನ್ಮಾನ್ಯ ಸಭಾಪತಿಯವರೇ, ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಟ್ಟಿರುವುದು ಬಡವರಿಗಾಗಿಯೇ ಹೊರತು ಶ್ರೀಮಂತರಿಗಾಗಿ ಅಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಾವು ಅದನ್ನು ಸ್ವಾಗತಿಸಿದ್ದೇವೆ.

**ಶ್ರೀ ನಾರಾಯಣ ಸಾ. ಭಾಂಡಗೆ:–** ಸನ್ಮಾನ್ಯ ಸಭಾಪತಿಯವರೇ, ಪ್ರತಿಯೊಂದು ಕ್ಷೇತ್ರದಲ್ಲಿಯೂ ನಮ್ಮ ಸರ್ಕಾರ ಸಾಧನೆ ಮಾಡಿದೆ ಎಂದು ಹೇಳಿದ್ದೇನೆ. ಬಂಡವಾಳ ಹೂಡಿಕೆದಾರರಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದೇವೆ ಎನ್ನುವ ಕಾರಣದ ಹಿನ್ನೆಲೆಯಲ್ಲಿ ನಮ್ಮ ದೇಶದ ಮೂಲೆ ಮೂಲೆಗಳಿಂದ ಮಾತ್ರವಲ್ಲ ವಿದೇಶಗಳಿಂದಲೂ ಉದ್ದಿಮೆದಾರರು ಬೆಂಗಳೂರಿಗೆ ಬಂದು ಅನೇಕ ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡುತ್ತಿದ್ದಾರೆ. ಆ ಮೂಲಕ ನಮ್ಮ ರಾಜ್ಯದ ಯುವಜನರಿಗೆ ಕೆಲಸ ಕೊಡುವಂತಹ ಕಾರ್ಯವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಶಿಕ್ಷಣಕ್ಕೆ ಸಂಬಂದಪಟ್ಟಂತೆ ಆಯವ್ಯಯದಲ್ಲಿ ಘೋಷಣೆ ಆಗಿರುವಂತಹ ಕಾರ್ಯಕ್ರಮಗಳ ಬಗ್ಗೆ ಟೀಕೆ ಟಿಪ್ಪಣಿಗಳು ಕೇಳಿ ಬಂದವು. ಶಿಕ್ಷಣ ಗುಣಮಟ್ಟ ಸರಿಯಿಲ್ಲ ಎನ್ನುವಂತಹ ಕೂಗು ಅನೇಕ ಬಾರಿ ಕೇಳಿ ಬಂದಿದೆ. ನಿನ್ನೆ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳ ನೇಮಕಾತಿಗೆ ಸಂಬಂಧಪಟ್ಟಂತೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಪ್ರೊ:ಕೃಷ್ಣಭಟ್‌ರವರು, 'ಪ್ರಸ್ತುತ ನಮ್ಮ ಶಾಲಾ ಮತ್ತು ಕಾಲೇಜುಗಳಲ್ಲಿ ನೀಡಲಾಗುತ್ತಿರುವ ಶಿಕ್ಷಣದ ಗುಣಮಟ್ಟ ಸರಿಯಿಲ್ಲ. ಆ ಸಂಸ್ಥೆಗಳನ್ನು ನಡೆಸುವವರ ಗುಣಮಟ್ಟವನ್ನು ಸಹ ನಾವು ತಿಳಿದುಕೊಳ್ಳಬೇಕಾಗುತ್ತದೆ. ಉಪ ಕುಲಪತಿಗಳ ಸ್ಥಾನಕ್ಕೆ ಸುಮಾರು ಆರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ' ಎನ್ನುವ ಅಘಾತಕಾರಿ ಸಂಗತಿಯನ್ನು ಹೇಳಿದ್ದರು. ಆಡಳಿತ ಪಕ್ಷ ಮತ್ತು ವಿರೋಧ

ಪಕ್ಷದ ಎಲ್ಲ ಸದಸ್ಯರು ಅದಕ್ಕೆ ಮೂಕ ಸಾಕ್ಷಿಯಾಗಿ ಕುಳಿತುಕೊಂಡು ಕೇಳಿಸಿಕೊಳ್ಳುತ್ತಿದ್ದರು. ಅದರ ಬಗ್ಗೆ ಯಾರೂ ಸಹ ಗಂಭೀರವಾಗಿ ಚರ್ಚೆ ಮಾಡಲಿಲ್ಲ. ಯಾವುದೇ ಪಕ್ಷದವರಾದರೂ ನಾವು ಇದನ್ನು ಟೀಕೆ ಮಾಡುತ್ತೇವೆ ಎನ್ನುವಂತಹ ಪ್ರತಿಕ್ರಿಯೆಯನ್ನು ನಾನು ನಿರೀಕ್ಷೆ ಮಾಡಿದ್ದೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಒಂದು ಸದನ ಸಮಿತಿಯನ್ನು ರಚನೆ ಮಾಡಿ ಅದರ ಬಗ್ಗೆ ತನಿಖೆ ನಡೆಸಬೇಕು. ಈ ಸದನದ ಮುಂದೆ ಭ್ರಷ್ಟಾಚಾರದ ವಿಷಯ ಪ್ರಸ್ತಾಪವಾದಾಗ ಅದನ್ನು ಸಂಪೂರ್ಣವಾಗಿ ಅಲಕ್ಷ್ಯಕ್ಕೆ ಒಳಪಡಿಸುವುದು ದುರಾದೃಷ್ಟಕರವಾದ ಸಂಗತಿಯಾಗಿದೆ.

**ಶ್ರೀ ನಾರಾಯಣ ಸಾ. ಭಾಂಡಗೆ:–** ಸನ್ಮಾನ್ಯ ಸಭಾಪತಿಯವರೇ, ಇಂತಹ ಅನೇಕ ಆರೋಪಗಳು ಸದನದಲ್ಲಿ ಪ್ರಸ್ತಾವಾದಾಗ, ಆರೋಪಗಳನ್ನು ಕೇಳುವುದು, ನಮಗೆ ತಿಳಿದಿರುವುದನ್ನು ಮಾತಾಡಿ ಹೋಗುವುದು ಅಷ್ಟರ ಮಟ್ಟಿಗೆ ಮಾತ್ರ ನಾವು ಕ್ರಿಯಾಶೀಲರಾಗಿರುತ್ತೇವೆ. ಅಂತಹ ಪ್ರಕರಣಗಳು ಬಂದಾಗ ಸದನ ಸಮಿತಿ ರಚನೆ ಮಾಡುವ ನಿರ್ಣಯವನ್ನು ತೆಗೆದುಕೊಳ್ಳುವ ಕೆಲಸ ಈ ಸದನದಲ್ಲಿ ಆಗಬೇಕು. 'ಮಾನ್ಯ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್‌ರವರು ಮಂಡಿಸಿರುವಂತಹ ಈ ಆಯವ್ಯಯ ಭಾರತೀಯ ಜನತಾ ಪಾರ್ಟಿ ಮತದಾರರನ್ನು ಓಲೈಸಲು ಮಂಡಿಸಿರುವಂತಹ ಆಯವ್ಯಯ' ಎನ್ನುವಂತಹ ಮಾತುಗಳನ್ನು ಬಹಳಷ್ಟು ಜನ ಸದಸ್ಯರು ಹೇಳಿದ್ದಾರೆ. ಮತದಾರರನ್ನು ಒಲಿಸುವುದು ಎಂದರೆ ಜನ ಸಾಮಾನ್ಯರನ್ನು ಒಲಿಸುವಂತಹ ಕೆಲಸ ಎಂದೇ ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ ಆಯವ್ಯಯವನ್ನು ಈ ಸದನದಲ್ಲಿ ಕುಳಿತು ನಾವು ಟೀಕೆ ಮಾಡಬಹುದು. ಆದರೆ, ಜನರು ಇದನ್ನು ಸ್ವಾಗತಿಸಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಭಾರತೀಯ ಜನತಾ ಪಕ್ಷ ಒಳ್ಳೆಯ ಆಯವ್ಯಯವನ್ನು ಕೊಟ್ಟಿದೆ, ಮುಂದೆ ಇದೇ ಸರ್ಕಾರ ಬರಬೇಕು, ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಆಗಬೇಕು ಎನ್ನುವುದು ಎಲ್ಲರ ಆಸೆಯಾಗಿದೆ. ಮುಂದಿನ ದಿನಗಳಲ್ಲಿ ನಾವು ಜನರ ಆಶೋತ್ತರಗಳಂತೆ ನಡೆಯುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ

ಬಯಸುತ್ತಿದ್ದೇನೆ. ಉತ್ತಮ ಆಯವ್ಯಯ ಮಂಡಿಸಿರುವುದಕ್ಕಾಗಿ ನಾನು ಮಾನ್ಯ ಜಗದೀಶ್ ಶೆಟ್ಟರ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತಿದ್ದೇನೆ. ಬಹಳ ವಿವರವಾಗಿ ಮಾತನಾಡಬೇಕೆಂದು ತಯಾರಾಗಿ ಬಂದಿದೆ ಆದರೆ ಸಮಯದ ಅಭಾವದಿಂದ ಮಾತನಾಡಲು ಸಾಧ್ಯವಾಗಲಿಲ್ಲ. ಆದರೂ ಇಷ್ಟು ಅವಕಾಶವನ್ನು ನೀಡಿದೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶವನ್ನು ಕೊಟ್ಟಿರುವುದಕ್ಕಾಗಿ ಪ್ರಪ್ರಥಮವಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಮುಂಗಡ ಪತ್ರ ಮಂಡನೆ ಮಾಡುವುದು ಒಂದು ಜವಾಬ್ದಾರಿಯುತವಾಗಿರುವಂತಹ ಸರ್ಕಾರದ ಸಂವಿಧಾನಬದ್ಧವಾದ ಪ್ರಾಸಂಗಿಕ ಕಾರ್ಯಕ್ರಮ ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ಸಾಲಿನ ಮುಂಗಡ ಪತ್ರದಲ್ಲಿ ಅಭಿವೃದ್ಧಿ ಬಗ್ಗೆ ಅಪಾರವಾದ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೆವು.

ಸನ್ಮಾನ್ಯ ಸಭಾಪತಿಯವರೇ, 2013-14ನೇ ಸಾಲಿನ ಆಯವ್ಯಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕಾಗಿ ಒಟ್ಟು 15,599 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಯಾವ ಕಾರ್ಯಕ್ರಮಗಳಿಗೆ ಮತ್ತು ಯೋಜನೆಗಳಿಗೆ ಈ 15,599 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಬೇಕಾಗಿತ್ತೋ ಆ ಕ್ಷೇತ್ರಗಳಿಗೆ ಪ್ರಾಮುಖ್ಯತೆಯನ್ನು ನೀಡಲ್ಲವೆಂದು ನಾನು ಹೇಳುತ್ತಿದ್ದೇನೆ. ಶಿಕ್ಷಕರ ಕೊರತೆ ಇದ್ದರೆ ವಿದ್ಯಾರ್ಥಿಗಳಿಗೆ ಗುಣಾತ್ಮಕವಾಗಿರುವಂತಹ ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. 'ಗುಣಾತ್ಮಕವಾಗಿರುವಂತಹ ಶಿಕ್ಷಣವನ್ನು ಕೊಡುತ್ತಿದ್ದೇವೆ' ಎಂದು ಎಲ್ಲ ಕಡೆಗಳಲ್ಲಿ ಹೇಳಿಕೊಂಡು ಬರುತ್ತಿದ್ದೇವೆ. ನನಗೆ ತಿಳಿದ ಮಟ್ಟಿಗೆ 2008 ನೇ ಸಾಲಿನಿಂದ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆರ್ಥಿಕ ಮಿತವ್ಯಯದ ಕಾರಣವನ್ನು ನೀಡಿ ಸರ್ಕಾರ

ಅನುಮತಿಯನ್ನು ನೀಡಿರಲಿಲ್ಲ. ಈ ಶಾಲೆಗಳಲ್ಲಿ ಸಾವಿರಾರು ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿದೆ. ಈ ಹುದ್ದೆಗಳನ್ನು ತುಂಬುವುದಕ್ಕೆ ಅವಕಾಶವನ್ನು ನೀಡುತ್ತಾರೆ ಮತ್ತು ಅದಕ್ಕೆ ವಿಶೇಷವಾಗಿರುವಂತಹ ಅನುದಾನವನ್ನು ನೀಡುತ್ತಾರೆ ಎನ್ನುವ ನಿರೀಕ್ಷೆಯನ್ನು ಈ ಆಯವ್ಯಯದಲ್ಲಿ ಇಟ್ಟುಕೊಂಡಿದ್ದೆವು, ಆ ನಿರೀಕ್ಷೆ ಹುಸಿಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಶಿಕ್ಷಣದ ಕಾರ್ಯಕ್ರಮಗಳಲ್ಲಿ ದೈಹಿಕ ಶಿಕ್ಷಣಕ್ಕೆ ಬಹಳಷ್ಟು ಉತ್ತೇಜನ ಕೊಡಬೇಕು ಎನ್ನುವ ಅಂಶ ಇದ್ದರೂ ಸಹ, ಹಿರಿಯ ಪ್ರಾಥಮಿಕ ಶಾಲೆಯಿಂದ ಹಿಡಿದು ಕಾಲೇಜು ಹಂತದವರೆಗೂ ದೈಹಿಕ ಶಿಕ್ಷಣವನ್ನು ಕಡ್ಡಾಯವಾದ ಶಿಕ್ಷಣವನ್ನಾಗಿ ಮಾಡುವುದಕ್ಕೆ ಮತ್ತು ಎಲ್ಲ ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಈ ರಾಜ್ಯದ ಯಾವುದೇ ಸರ್ಕಾರದಿಂದ ಸಾಧ್ಯವಾಗಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಮತ್ತು ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ವೇತನ ತಾರತಮ್ಯವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕಳೆದ ನಾಲ್ಕು ವರ್ಷ ಒಂಭತ್ತು ತಿಂಗಳಿನಲ್ಲಿ ಬಹಳಷ್ಟು ಬಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇಂದು ಮಾಡುತ್ತೇವೆ, ನಾಳೆ ಮಾಡುತ್ತೇವೆ, ಸಮಿತಿಯಿಂದ ವರದಿ ಪಡೆಯುತ್ತೇವೆ, ಕಾರ್ಯದರ್ಶಿಯವರಿಂದ ವರದಿ ಪಡೆಯುತ್ತೇವೆ ಎಂದು ಈ ಸರ್ಕಾರ ಅಸತ್ಯ ನುಡಿದು ಶಿಕ್ಷಕರು ಮತ್ತು ಉಪನ್ಯಾಸಕರು ಕೈಗೊಂಡಿದ್ದ ಚಳುವಳಿಯನ್ನು ಕೈಬಿಡಿಸಿ, ಅವರುಗಳು ಮನೆ ಸೇರುವ ಹಾಗೆ ಮಾಡಿತು. ಈ ಮುಂಗಡ ಪತ್ರದಲ್ಲಿ ಆ ವಿಷಯದ ಬಗ್ಗೆ ಅಪಾರವಾಗಿರುವಂತಹ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೆವು. ನಿನ್ನೆಯೂ ಸಹ ಆ ಶಿಕ್ಷಕರು ಮತ್ತು ಉಪನ್ಯಾಸಕರು ರಾಜ್ಯಾದ್ಯಂತ ಚಳುವಳಿ ಮಾಡಿದ್ದರು. ನಿನ್ನೆ ಕೂಡ ಅವರು ಇಡಿ ರಾಜ್ಯಾದ್ಯಂತ ಚಳುವಳಿಯನ್ನು ಮಾಡಿದರು. ಈ ಮುಂಗಡ ಪತ್ರದಲ್ಲಿಯಾದರೂ ಘೋಷಣೆ ಮಾಡುತ್ತಾರೆ, ಘೋಷಣೆ ಮಾಡುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ಇದು ಸರ್ಕಾರದ ಕೊನೆಯ ಅಧಿವೇಶನವಾಗಿದ್ದರೂ ಸಹ ಮಾಡಲಿಲ್ಲ. ಇದು

ನಿಜಕ್ಕೂ ಕೂಡ ಈ ವರ್ಗದ ಶಿಕ್ಷಕ ಬಂಧುಗಳಿಗೆ ಹತ್ತಾರು ವರ್ಷಗಳಿಂದ ವೇತನ ತಾರತಮ್ಯ ಇದ್ದು, ಈ ತಾರತಮ್ಯವನ್ನು ಹೋಗಲಾಡಿಸಲಿಕ್ಕೆ ಭರವಸೆಯನ್ನು ಕೊಟ್ಟು, ಕೊಟ್ಟು, ಇಂದಿಗೂ ಸಹ ಅದನ್ನು ಕೈಬಿಟ್ಟಿರುವುದು ಬಹಳ ವಿಷಾದನೀಯ ಸಂಗತಿ. ನಾಳೆಯಾದರೂ ಸಹ ಮುಖ್ಯಮಂತ್ರಿಗಳು ಈ ವೇತನ ತಾರತಮ್ಯವನ್ನು ಬಗೆಹರಿಸಲಿಕ್ಕೆ, ಪರಿಹರಿಸಲಿಕ್ಕೆ ಸೂಕ್ತವಾದಂತಹ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆನ್ನುವ ಒಂದು ಆಶಾಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಆದರೆ, ಈ ಸಂದರ್ಭದಲ್ಲಿ ಒಂದು ಕೆಲಸವನ್ನು ಮಾತ್ರ ವಿಶೇಷವಾಗಿ ಮಾಡಿದ್ದಾರೆ. ಹಿಂದೆ ಮಾನ್ಯ ಬಸವರಾಜ ಹೊರಟ್ಟಿ ಸಾಹೇಬರವರು ಶಿಕ್ಷಣ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮೊಟ್ಟಮೊದಲಿಗೆ, ಈ ರಾಜ್ಯದಲ್ಲಿ ವಿಶೇಷವಾಗಿ ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಿಕ್ಷಣದವರಿಗೆ ಎಲ್ಲಾ ವರ್ಗದ ಶಿಕ್ಷಕರಿಗೂ ಕೂಡ ಮೊಟ್ಟ ಮೊದಲನೆ ಬಾರಿಗೆ 200 ರೂಪಾಯಿಗಳ ವಿಶೇಷ ಭತ್ಯೆಯನ್ನು ಕೊಡಿಸಿದ್ದು ರಾಜ್ಯ ಸರ್ಕಾರದ ಇತಿಹಾಸದಲ್ಲಿ ಮೊದಲನೆಯಾಗಿದೆ. ಅದನ್ನೂ ರೂಢಿಸಿಕೊಂಡು, ನಿಮಗೆ ವೇತನ ತಾರತಮ್ಯವನ್ನು ಬಗೆಹರಿಸುತ್ತೇವೆಂದು ಹೇಳಿ, ಹೇಳಿ ಮೂಗಿಗೆ ತುಪ್ಪ ಸವರಿದರು, ಕಿವಿಗೆ ಹೂ ಇಟ್ಟರು. ಕೊನೆಗೆ ಏನು 200 ರೂಪಾಯಿಗಳನ್ನು ಹಿಂದಿನ ಸರ್ಕಾರ ಕೊಟ್ಟಿತ್ತು, ಅದಕ್ಕೆ 100 ರೂಪಾಯಿಗಳನ್ನು ಪ್ರಾಥಮಿಕ ಶಾಲೆಯವರಿಗೆ ಸೇರಿಸುತ್ತೇವೆ, 200 ರೂಪಾಯಿಗಳನ್ನು ಪ್ರೌಢ ಶಾಲಾ ಶಿಕ್ಷಕರಿಗೆ ಸೇರಿಸುತ್ತೇವೆ, 300 ರೂಪಾಯಿಗಳನ್ನು ಪದವಿ ಪೂರ್ವ ಕಾಲೇಜಿನವರಿಗೆ ಸೇರಿಸುತ್ತೇವೆಂದು ಹೇಳಿದರು. ಕೊಡುತ್ತಿರುವ 200 ರೂಪಾಯಿಗಳನ್ನು 300, 400 ಮತ್ತು 500 ರೂಪಾಯಿಗಳೆಂದು ಮಾಡಿದರು. 2008ನೇ ಸಾಲಿನಿಂದ ನೇಮಕಗೊಂಡಂತಹ ಶಿಕ್ಷಕರಿಗೆ ಈ ವಿಶೇಷ ಭತ್ಯೆಯನ್ನು ಕೊಡಲಿಲ್ಲ. 2008ನೇ ಇಸವಿಯಿಂದ ಈ ಇಲಾಖೆಗೆ ಸೇರ್ಪಡೆಯಾದವರಿಗೆ ಯಾವುದೇ ಹೊಸ ವೇತನ ಜಾರಿಯಾಗಿಲ್ಲ. ಹಿಂದೆ ಇದ್ದಂತಹ ಹಳೆಯ ವೇತನದಲ್ಲಿ ಇವರು ಇಲಾಖೆಗೆ ನೇಮಕಗೊಂಡಿದ್ದರು. ಅವರಿಗೂ ಕೂಡ ಅನ್ವಯವಾಗಬೇಕು. ಅದಕ್ಕೆ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳೆಲ್ಲರೂ ಒಪ್ಪಿದ್ದರು. ಆದರೆ, ಇನ್ನೂ ಕೂಡ 2008ರ ನಂತರ

ಇಲಾಖೆಗೆ ನೇಮಕಗೊಂಡ ಶಿಕ್ಷಕರಿಗೆ ಈ ವಿಶೇಷ ಭತ್ಯೆ ಅಂದರೆ 300, 400, 500 ರೂಗಳನ್ನು ಕೊಡುತ್ತಿಲ್ಲ. ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುವುದೇನೆಂದರೆ ಈ ಮುಂಗಡಪತ್ರದಲ್ಲಿ ಈಗ ಏನು 300, 400 ಮತ್ತು 500 ರೂಗಳ ವಿಶೇಷ ಭತ್ಯೆಯನ್ನು ಕೊಡುತ್ತಿದ್ದಾರೆ, ದಯಮಾಡಿ 2008 ನಂತರ ನೇಮಕಗೊಂಡಿರುವ ಶಿಕ್ಷಕರಿಗೂ ತತಕ್ಷಣ ವಿಸ್ತರಣೆ ಮಾಡಬೇಕು. ಮತ್ತೆ, ಇದನ್ನು ಮೂಲ ವೇತನಕ್ಕೆ ಸೇರ್ಪಡೆ ಮಾಡುವಂತಹದ್ದನ್ನಾದರೂ ಕೂಡ ಮಾನ್ಯ ಮುಖ್ಯಮಂತ್ರಿಗಳಿಂದ ಘೋಷಣೆ ಮಾಡಿಸಬೇಕೆಂದು ಹೇಳಿ ತಮ್ಮ ಮೂಲಕ ನಾನು ಘನ ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಪ್ರಾಥಮಿಕ ಶಾಲೆಗೆ ಅನುದಾನ ಕೊಡುವ ಬಗ್ಗೆ ಆ ಭಾಗದಿಂದ ಮಾನ್ಯ ಸದಸ್ಯರುಗಳು ಮಾತನಾಡುತ್ತಾ, ಖಾಸಗಿ ಶಿಕ್ಷಣ ಸಂಸ್ಥೆಗಳ ಶಾಲಾ ಕಾಲೇಜುಗಳಿಗೆ ನಾವು ಅನುದಾನವನ್ನು ಕೊಟ್ಟಿದ್ದೇವೆಂದು ಹೇಳಿದರು. ಶಾಶ್ವತ ಅನುದಾನ ರಹಿತ ಎನ್ನುವುದನ್ನು ರದ್ದುಪಡಿಸಿ, ಮೊಟ್ಟಮೊದಲ ಬಾರಿಗೆ ಪ್ರಾಥಮಿಕಶಾಲೆ, ಪ್ರೌಢಶಾಲೆ, ಮತ್ತು ಪದವಿಪೂರ್ವ ಕಾಲೇಜುಗಳಿಗೂ ಕೂಡ ಅನುದಾನ ಕೊಟ್ಟಂತಹದ್ದು ಶ್ರೀಮಾನ್ ಬಸವರಾಜ ಹೊರಟ್ಟಿಯವರು ಶಿಕ್ಷಣ ಸಚಿವರಾಗಿದ್ದಾಗ ಎನ್ನುವುದನ್ನು ಯಾರು ಸಹ ಇತಿಹಾಸ ಪುಟಗಳಿಂದ ತೆಗೆದು ಹಾಕಲಿಕ್ಕೆ ಸಾಧ್ಯವಿಲ್ಲ. ಆದರೆ, ಈ ಅನುದಾನವನ್ನು 1994–95ನೇ ಸಾಲಿನವರೆಗೆ ಪ್ರಾರಂಭವಾಗಿರುವ ಶಾಲೆಗಳಿಗೆ ಎಂದು ನಿಬಂಧನೆಯನ್ನಿಟ್ಟರು. ಆದರೆ, ನಾವು ಈ ಬಜೆಟ್‌ನಲ್ಲಿ ಬಹಳ ನಿರೀಕ್ಷೆ ಮಾಡಿದ್ದೆವು. 2000ನವರೆಗೂ ಪ್ರಾರಂಭವಾಗಿರುವಂತಹ ಶಾಲಾ ಕಾಲೇಜುಗಳಿಗೆಲ್ಲಾ ಕೂಡ ಈ ವೇತನ ಅನುದಾನವನ್ನು ಈ ಬಜೆಟ್‌ನಲ್ಲಿ ಮುಂದುವರಿಸುತ್ತದೆ ಎಂದು ಬಹಳ ಕಾತುರದಿಂದ ಕಾಯುತ್ತಿದ್ದೆವು. ಆದರೆ, 1994–95ನೇ ಸಾಲಿಗೆ ಇನ್ನೂ ಕೂಡ ಪೂರೈಸಲಿಕ್ಕೆ ಆಗದೇ ಇದನ್ನು ಇಲ್ಲಿಗೆ ಕೈಬಿಟ್ಟಿರುವಂತಹದ್ದು ಬಹಳ ಅತ್ಯಂತ ವಿಷಾದನೀಯ ಸಂಗತಿ. ಏಕೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಸಹ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮವಾದಂತಹ ಸಾಧನೆ ಮಾಡಿ, ಗುಣಮಟ್ಟದ ಶಿಕ್ಷಣ ಕೊಡುವಲ್ಲಿ ಯಶಸ್ವಿಯಾದಂತಹ ಸಾಧನೆಯನ್ನು ತೋರಿಸಿರುವಂತಹದ್ದು ದೊಡ್ಡ ಇತಿಹಾಸವಿದೆ. ಆ ಹಿನ್ನೆಲೆಯಲ್ಲಿ ಕನ್ನಡ

ಮಾಧ್ಯಮ ಶಾಲೆಗಳಿಗೆ ವಿಶೇಷವಾಗಿ 2000ನೇ ಸಾಲಿನವರೆಗೂ ಪ್ರಾರಂಭವಾಗಿರುವಂತಹ ಶಾಲಾ-ಕಾಲೇಜುಗಳಿಗೆ ಅನುದಾನವನ್ನು ನಾಳೆ ಘೋಷಣೆ ಮಾಡಬೇಕೆನ್ನುವ ಮಾತನ್ನು ತಮ್ಮ ಮೂಲಕ ನಾನು ಮೊತ್ತೊಮ್ಮೆ ಸರ್ಕಾರಕ್ಕೆ ಒತ್ತಾಯ ಮಾಡಲಿಕ್ಕೆ ಬಯಸುತ್ತೇನೆ.

ಮತ್ತೊಂದು ವಿಷಯ ಏನೆಂದರೆ, ಇವತ್ತು ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಇರತಕ್ಕಂತಹ ಅಧ್ಯಾಪಕರುಗಳೆ, ಕಸ ಹೊಡೆಯುತ್ತಾರೆ, ಘಂಟೆ ಬಾರಿಸುತ್ತಾರೆ, ಮತ್ತು ತಮ್ಮ ತಮ್ಮ ಶಾಲಾ-ಕಾಲೇಜುಗಳ ಬಾಗಿಲನ್ನು ತೆಗೆಯುತ್ತಾರೆ. ಇಲ್ಲದಿದ್ದರೆ, ಮುಖ್ಯ ಶಿಕ್ಷಕರು ಈ ಕೆಲಸಗಳನ್ನು ಮಾಡುತ್ತಾರೆ. ಇವತ್ತು ಸಿ ಮತ್ತು ಡಿ ದರ್ಜೆ ನೌಕರರು ಇವತ್ತು ಶಿಕ್ಷಣ ಇಲಾಖೆಯ ಯಾವ ಸಂಸ್ಥೆಯಲ್ಲೂ ಇಲ್ಲ. ಖಾಸಗಿ ಸಂಸ್ಥೆಗಳಲ್ಲೂ ಇಲ್ಲ, ಸರ್ಕಾರಿ ಸಂಸ್ಥೆಗಳಲ್ಲೂ ಕೂಡ ಇಲ್ಲ. ಆದ್ದರಿಂದ, ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ ಶಿಕ್ಷಣ ಇಲಾಖೆಯಲ್ಲಿ ಬಹು ಕಾಲದಿಂದ ಸಿ ಮತ್ತು ಡಿ ದರ್ಜೆ ನೌಕರರನ್ನು ಖಾಸಗಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಭರ್ತಿ ಮಾಡದೆ ಹಾಗೆಯೇ ಖಾಲಿ ಉಳಿದಿರುವಂತಹ ಈ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಈ ಸರ್ಕಾರ ಅವಕಾಶ ಕೊಡುತ್ತದೆ ಎಂದು ಬಹಳ ನಿರೀಕ್ಷೆ ಮಾಡಿದ್ದೆವು. ಆದರೆ ಈ ಒಂದು ಕೆಲಸ ಆಗಲಿಲ್ಲ. ಆದ್ದರಿಂದ ಈ ಕೆಲಸವನ್ನು ತತಕ್ಷಣ ಕೈಗೆತ್ತಿಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಇನ್ನು ಉನ್ನತ ಶಿಕ್ಷಣ ಇಲಾಖೆಯ ಬಗ್ಗೆ ಹೇಳುವುದಾದರೆ ಈ ಬಾರಿ ಬಜೆಟ್‌ನಲ್ಲಿ ಉನ್ನತ ಶಿಕ್ಷಣಕ್ಕೆ 3,067 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಇದು ಬಹಳ ಸಂತೋಷಕರವಾದ ಸಂಗತಿ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, ಉನ್ನತ ಶಿಕ್ಷಣದ ಸಾಧನೆಗೆ ಈ ಮುಂಗಡ ಪತ್ರದಲ್ಲಿ ಕಾರ್ಯಕ್ರಮ ರೂಪಿಸಿರುವಂತಹದ್ದು ಏನೂ ಇಲ್ಲ. ಇದುವರೆವಿಗೂ ಕೂಡ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 10-15 ವರ್ಷಗಳಿಂದ ನೇಮಕಗೊಂಡು, ನಿವೃತ್ತಿ ಮತ್ತು ಇನ್ನಿತರ ಕಾರಣಗಳಿಂದ ಖಾಲಿ ಬಿದ್ದಂತಹ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಅವಕಾಶವನ್ನೇ ಕೊಟ್ಟಿಲ್ಲ. ಇವತ್ತು ಉನ್ನತ

ಶಿಕ್ಷಣದಲ್ಲಿ, ಗುಣಮಟ್ಟದ ಶಿಕ್ಷಣ, ಸೆಮಿಸ್ಟರ್ ಸಿಸ್ಟಮ್ ಅನ್ನು ತೆಗೆದುಕೊಂಡು ಬಂದಿದ್ದೇವೆ. ಇವತ್ತು ಅಲ್ಲಿ ಪಾಠ ಮಾಡಲಿಕ್ಕೆ ಪೂರ್ಣ ಪ್ರಮಾಣದ ಉಪನ್ಯಾಸಕರಿಲ್ಲ. ಇವತ್ತು ಎಸ್‌ಸಿ/ಎಸ್.ಟಿ ಮ್ಯಾನೇಜ್‌ಮೆಂಟ್‌ನ ಶಾಲಾ–ಕಾಲೇಜುಗಳಿಗೆ 1994–95ನೇ ಸಾಲಿನವರೆಗೆ ಅನುದಾನವನ್ನು ಕೊಟ್ಟಿದ್ದೇವೆ. ಆದರೆ, ಇತರೆ ವರ್ಗದ ಶಿಕ್ಷಣ ಸಂಸ್ಥೆಗಳು ಏನಿವೆ, ಅಲ್ಲೂ ಕೂಡ ಅಧ್ಯಾಪಕರಿದ್ದಾರೆ, ಅಲ್ಲಿ ಕೂಡ ವಿದ್ಯಾರ್ಥಿಗಳಿದ್ದಾರೆ. ಅವರಿಗೆ ಏತಕ್ಕೆ ಅನುದಾನವನ್ನು ಈ ಸರ್ಕಾರ ಕೊಡಲಿಕ್ಕೆ ಆಗಲಿಲ್ಲ. ದಯಮಾಡಿ, ಇತರೆ ವರ್ಗದ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಕೂಡ ಮತ್ತು ಪ್ರಥಮ ದರ್ಜೆ ಕಾಲೇಜುಗಳಿಗೆ 1994–95ನೇ ಸಾಲಿನವರೆಗೂ ಕೂಡ ಅನುದಾನವನ್ನು ವಿಸ್ತರಣೆಯನ್ನು ಮಾಡಬೇಕಾಗಿತ್ತು, ಮಾಡಲಿಲ್ಲ. ಆದ್ದರಿಂದ, ಅನುದಾನವನ್ನು ವಿಸ್ತರಣೆ ಮಾಡಬೇಕೆಂದು ನಾನು ಮತ್ತೊಮ್ಮೆ ವಿನಂತಿಯನ್ನು ಮಾಡುತ್ತೇನೆ. ಮತ್ತೊಂದು ವಿಷಯ ಏನೆಂದರೆ, ದಿನಾಂಕ: 1–1–2006 ರಿಂದ ಯುಜಿಸಿ ಪರಿಷ್ಕೃತ ವೇತನ ನಮ್ಮ ರಾಜ್ಯದಲ್ಲಿ ಜಾರಿಗೆ ಬಂತು.

ಸನ್ಮಾನ್ಯ ಸಭಾಪತಿಯವರೆ, ಮತ್ತೊಂದು ಯುಜಿಸಿ ವೇತನ ಪರಿಷ್ಕರಣೆಗೆ ಸಮಿತಿ ರಚನೆಯಾಗುತ್ತಿದೆ. ದಿನಾಂಕ: 1–1–2006 ರಿಂದ ಜಾರಿಗೆ ಬಂದಂತಹ ಈ ಪರಿಷ್ಕೃತ ಯುಜಿಸಿ ವೇತನದ ಬಾಕಿಯನ್ನು ಇನ್ನೂ ಕೂಡ ಕೊಟ್ಟಿಲ್ಲ. ಕೇಂದ್ರ ಸರ್ಕಾರದ ಕಡೆ ಕೈ ತೋರಿಸಿಕೊಂಡು ರಾಜ್ಯ ಸರ್ಕಾರ ಇನ್ನೂ ಕೂಡ ಕೊಟ್ಟಿಲ್ಲ. ಅಥವಾ ಕೇಂದ್ರ ಸರ್ಕಾರದ ಕಡೆಯಿಂದ ತಗೆದುಕೊಳ್ಳುವಂತಹ ಪ್ರಯತ್ನವನ್ನೂ ಸಹ ಮಾಡಲಿಲ್ಲ. ಇದು ಅತ್ಯಂತ ವಿಷಾದನಿಯವಾದ ಸಂಗತಿ. ಆರು ವರ್ಷಗಳಾದರೂ ಕೂಡ ಈ ಉಪನ್ಯಾಸಕರುಗಳಿಗೆ ಕೊಡಬೇಕಾಗಿರುವಂತಹ ಯುಜಿಸಿ ವೇತನವನ್ನು ಇನ್ನೂ ಬಾಕಿ ಇಟ್ಟುಕೊಂಡಿದ್ದಾರೆ. ಇದನ್ನು ನಾವು ಈ ಮುಂಗಡಪತ್ರದಲ್ಲಿ ನಿರೀಕ್ಷೆ ಮಾಡಿದ್ದೆವು. ಈ ಒಂದು ಕೆಲಸ ಆಗಲಿಲ್ಲ. ಆದ್ದರಿಂದ, ತಕ್ಷಣ ಈ ಬಾಕಿ ವೇತನವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಇನ್ನೂ ಸಹ ಭರವಸೆಯನ್ನಿಟ್ಟುಕೊಳ್ಳುತ್ತೇನೆ.

ಮತ್ತೊಂದು ಪ್ರಮುಖ ಅಂಶ ಏನೆಂದರೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸುಮಾರು 2000 ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2000 ಉಪನ್ಯಸಕರ ಹುದ್ದೆಗಳು ಖಾಲಿ ಇದ್ದು ಸೆಮಿಸ್ಟರ್ ಪದ್ಧತಿಯಲ್ಲಿ ಯಾವ ರೀತಿ ಶಿಕ್ಷಣ ನಡೆಯುತ್ತಿದೆ ಎನ್ನುವುದನ್ನು ನಾವು ಗಮನಿಸಬಹುದು. ದಯಮಾಡಿ, ಈ ಹುದ್ದೆಗಳನ್ನು ತಂಬಿಕೊಳ್ಳಲಿಕ್ಕೆ ಈ ಮುಂಗಡ ಪತ್ರದಲ್ಲಿ ಹಣವನ್ನು ಕೊಡುತ್ತಾರೆಂದು ಅಪಾರವಾದಂತಹ ನಿರೀಕ್ಷೆಯನ್ನಿಟ್ಟುಕೊಂಡಿದ್ದೆವು. ಅದ್ಯಾವುದನ್ನೂ ಸಹ ನೋಡಲಿಕ್ಕೆ ಆಗುತ್ತಿಲ್ಲ. ದಯಮಾಡಿ ತತಕ್ಷಣ, ಈ ಹುದ್ದೆಗಳನ್ನು ತುಂಬತಕ್ಕಂತಹ ಪ್ರಕ್ರಿಯೆಗೆ ಈ ಮುಂಗಡಪತ್ರದಲ್ಲಿ ಚಾಲನೆ ಕೊಡಬೇಕೆನ್ನುವುದನ್ನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಖಾಲಿ ಇರುವಂತಹ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳು ಕೆಲಸ ಮಾಡುತ್ತಿದ್ದಾರೆ. ಆದರೆ, ಈ ಅತಿಥಿ ಉಪನ್ಯಾಸಕರಿಂದ 16 ತಾಸು ದುಡಿಸಿಕೊಂಡರೂ ಸಹ ಅವರಿಗೆ 8–10 ಸಾವಿರ ರೂಪಾಯಿಗಳ ಗೌರವಧನವನ್ನು ಕೊಡುತ್ತಿದ್ದಾರೆ. ಇದು ಅತ್ಯಂತ ಕಡಿಮೆ ಗೌರವಧನ. ಕೊಡುವಂತಹ ಈ ಗೌರವಧನವನ್ನೂ ಕೂಡ 8–10 ತಿಂಗಳಾದ ಮೇಲೆ ಒಮ್ಮೆ ಕೊಡುತ್ತಾರೆ. ಪ್ರತಿ ತಿಂಗಳು ಕೊಡುವುದಿಲ್ಲ. ಈ ಗೌರವಧನವನ್ನು ಈ ಮುಂಗಡ ಪತ್ರದಲ್ಲಿ ಪರಿಷ್ಕರಣೆ ಮಾಡುತ್ತಾರೆಂದು ನಿರೀಕ್ಷೆ ಇತ್ತು. ಅದು ಕೂಡ ಆಗಲಿಲ್ಲ. ಈ ಅತಿಥಿ ಉಪನ್ಯಾಸಕರು ಇವತ್ತು ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಅವರು ಒಳ್ಳೆಯ ಫಲಿತಾಂಶವನ್ನು ತರುತ್ತಿದ್ದಾರೆ. ಗುಣಮಟ್ಟದ ಶಿಕ್ಷಣವನ್ನು ಕೊಡುತ್ತಿದ್ದಾರೆ. ದಯವಿಟ್ಟು ಇಂತಹ ಶಿಕ್ಷಕ ವರ್ಗದ ಗೌರವಧನವನ್ನು ಪರಿಷ್ಕರಣೆ ಮಾಡಿ, ಅತಿಥಿ ಉಪನ್ಯಾಸಕರಿಗೆ ಕನಿಷ್ಟ 20 ಸಾವಿರ ರೂಪಾಯಿಗಳ ಗೌರವಧನ ಪ್ರತಿ ತಿಂಗಳು ತಲುಪುವಂತೆ ಮಾಡುವಲ್ಲಿ ಈ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಮತ್ತೊಂದು ಪ್ರಮುಖ ಅಂಶ ಏನೆಂದರೆ, ವಿಶ್ವವಿದ್ಯಾನಿಲಯಗಳ ವಿಚಾರ. ಈಗಾಗಲೇ ಕಳೆದ 2 ದಿನಗಳಿಂದ ವಿಶ್ವವಿದ್ಯಾನಿಲಯಗಳ ಬಗ್ಗೆ

ಚೆನ್ನಾಗಿ ಚರ್ಚೆ ನಡೆದಿದೆ. ಅದರ ಬಗ್ಗೆ ನಾನು ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಒಂದೊಂದು ವಿಶ್ವವಿದ್ಯಾನಿಲಯದಲ್ಲಿ 200ಕ್ಕೂ ಹೆಚ್ಚು ಭೋಧನಾ ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ಈ ಆಯವ್ಯಯದಲ್ಲಿ ಅವುಗಳನ್ನು ತುಂಬಲಿಕ್ಕೆ ಹಣವನ್ನು ಕೊಡುತ್ತಾರೆಂದು ನಾವು ಬಹಳ ಭರವಸೆಯನ್ನಿಟ್ಟುಕೊಂಡಿದ್ದೆವು. ಆ ಒಂದು ಕೆಲಸ ಆಗಲಿಲ್ಲ. ಆ ಕೆಲಸವೂ ಆಗಬೇಕು. ಇವತ್ತು ಮೈಸೂರು ವಿಶ್ವವಿದ್ಯಾನಿಲಯ ಇರಬಹುದು, ಮಂಗಳೂರು ವಿಶ್ವವಿದ್ಯಾನಿಲಯ ಇರಬಹುದು, ಗುಲ್ಬರ್ಗ ವಿಶ್ವವಿದ್ಯಾನಿಲಯ ಇರಬಹುದು, ದಾವಣಗೆರೆ ವಿಶ್ವವಿದ್ಯಾನಿಲಯ ಇರಬಹುದು, ಬೆಂಗಳೂರು ವಿಶ್ವವಿದ್ಯಾನಿಲಯ ಇರಬಹುದು. ಅಲ್ಲಿ ಹುದ್ದೆ ಮಂಜೂರಾಗಿ ಯಾರು ಉಪನ್ಯಾಸಕರು, ಭೋದಕರು ಮತ್ತು ಭೋದಕೇತರರು ಕೆಲಸ ಮಾಡುತ್ತಿದ್ದಾರೆ, ಅವರಿಗೆ ಪೂರ್ಣ ಪ್ರಮಾಣದಲ್ಲಿ ಅನುದಾನವನ್ನು ಕೊಡುತ್ತಿಲ್ಲ. ವೇತನಾನುದಾನವನ್ನು ಕೊಡುತ್ತಿಲ್ಲ. ಉದಾಹರಣೆಗೆ ಮೈಸೂರು ವಿಶ್ವವಿದ್ಯಾಲಯಕ್ಕೆ ಒಂದು ವರ್ಷಕ್ಕೆ ಈ ವೇತನಕ್ಕಾಗಿ 109 ಕೋಟಿ ರೂಪಾಯಿಗಳು ಬೇಕು. ಆದರೆ ಆ ವಿಶ್ವವಿದ್ಯಾಲಯಕ್ಕೆ ಕೊಡುತ್ತಿರುವುದು ಕೇವಲ 65 ರಿಂದ 68 ಕೋಟಿ ರೂಪಾಯಿಗಳು ಮಾತ್ರ. ಉಳಿದಂತಹ ಹಣವನ್ನು ಅವರು ಆಂತರಿಕವಾದ ರೀತಿಯಲ್ಲಿ ಬಳಕೆ ಮಾಡಬೇಕು, ಉತ್ಪಾದನೆ ಮಾಡಬೇಕು, ಸಂಪಾದನೆ ಮಾಡಬೇಕು ಎಂದು ಹೇಳುತ್ತಾರೆ. ಇವತ್ತು ಖಂಡಿತವಾಗಿ ಯಾವ ವಿಶ್ವವಿದ್ಯಾಲಯವನ್ನೂ ನಡೆಸುವುದಕ್ಕೆ ಆಗುತ್ತಿಲ್ಲ. ಮಾನ್ಯ ಅರುಣ ಶಹಾಪುರರವರು ಮಾತನಾಡುತ್ತಾ, ನನ್ನ ಕ್ಷೇತ್ರದ ಎರಡು ವಿಶ್ವವಿದ್ಯಾಲಯಕ್ಕೆ ತಲಾ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ಇದೇ ಸಕಾರ ಕಳೆದ 5 ವರ್ಷಗಳಲ್ಲಿ 9 ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಿದೆ. ಆದರೆ 2 ವಿಶ್ವವಿದ್ಯಾಲಯಗಳಿಗೆ ಮಾತ್ರ ತಲಾ 10 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಮುಂಗಡ ಪತ್ರದಲ್ಲಿ ಹೇಳಿದ್ದಾರೆ. ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಹತ್ತು ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಅಪಾರ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇನೆ.

House Rent Allowance (HRA) ಗೆ ಸಂಬಂಧಪಟ್ಟ ಹಾಗೆ ಒಂದೆರಡು ಹೇಳುತ್ತೇನೆ. ಮಾನ್ಯ ಪುಟ್ಟಣ್ಣನವರು ಇದರ ಬಗ್ಗೆ ಈಗಾಗಲೇ ವಿಷಾದವಾಗಿ ಮಾತನಾಡಿದ್ದಾರೆ. ಮಾನ್ಯ ಪುಟ್ಟಣ್ಣನವರು ಕೇವಲ ಬೆಂಗಳೂರು ನಗರದಲ್ಲಿರುವ ನೌಕರರನ್ನು ಉದಾಹರಣೆಯಾಗಿ ಕೊಟ್ಟು ಮಾತನಾಡಿದರು. ಇವತ್ತು ಬೆಂಗಳೂರು ನಗರದಲ್ಲಿರುವ ನೌಕರರಿಗೆ ಮಾತ್ರ ತ್ರಾಸಾಗುತ್ತಿಲ್ಲ. ಈ ಬರಗಾಲದಲ್ಲಿ ಕುಡಿಯಲು ನೀರು ಇಲ್ಲದೇ ಇರುವಂತಹ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲವೂ ದುಬಾರಿಯಾಗಿದೆ. ಕಡಿಮೆ ದರದಲ್ಲಿ ಯಾವುದೂ ಕೂಡ ಸಿಗುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿರುವ ನೌಕರರಿಗೆ 7 ಪರ್ಸೆಂಟ್ ಮನೆ ಬಾಡಿಗೆ ಭತ್ಯೆಯನ್ನು ಕೊಡುತ್ತಿದ್ದಾರೆ. ತಾಲ್ಲೂಕು ಕೇಂದ್ರಗಳಲ್ಲಿರುವ ನೌಕರರಿಗೆ 8 ಪರ್ಸೆಂಟ್ ಕೊಡುತ್ತಿದ್ದಾರೆ. ಜಿಲ್ಲಾ ಮಟ್ಟದಲ್ಲಿರುವ ನೌಕರರಿಗೆ 9 ಪರ್ಸೆಂಟಷ್ಟು ಕೊಡುತ್ತಿದ್ದಾರೆ. ಮೈಸೂರು–ಮಂಗಳೂರಿನಂತಹ ನಗರಗಳಲ್ಲಿ ವಾಸ ಮಾಡುತ್ತಿರುವವರಿಗೆ ಶೇಕಡ 15 ಮನೆ ಬಾಡಿಗೆ ಭತ್ಯೆಯನ್ನು ನೀಡಲಾಗುತ್ತಿದೆ. ಖಂಡಿತವಾಗಿ ಕೂಡ ಅವರ ಸ್ಥಿತಿ ಶೋಚನೀಯವಾಗಿದೆ. ಬೆಂಗಳೂರು ನಗರದ ನೌಕರರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮನೆ ಬಾಡಿಗೆ ಭತ್ಯೆಯನ್ನು ಹೇಗೆ ಜಾಸ್ತಿ ಮಾಡಿದ್ದಾರೋ ಅದೇ ರೀತಿ, ಜಿಲ್ಲಾ ಕೇಂದ್ರಗಳಲ್ಲಿರುವವರಿಗೆ, ತಾಲ್ಲೂಕು ಕೇಂದ್ರಗಳಲ್ಲಿರುವವರಿಗೆ, ಮಂಗಳೂರು–ಮೈಸೂರು ಕೇಂದ್ರಗಳಲ್ಲಿರುವ ನೌಕರರಿಗೆ ಶೇಕಡ 5ರಷ್ಟು ಮನೆ ಬಾಡಿಗೆ ಭತ್ಯೆಯನ್ನು ಕಡ್ಡಾಯವಾಗಿ ಹೆಚ್ಚು ಮಾಡಬೇಕು. ಇಲ್ಲದಿದ್ದರೆ ಇದರಲ್ಲಿ ಬಹಳ ತಾರತಮ್ಯವಾಗುತ್ತದೆ. ಇದು ಆಗಬಾರದು. ಬೆಂಗಳೂರಿನವರಿಗೆ ಕೊಟ್ಟಿರುವಂತೆ ಈ ರಾಜ್ಯದ ಎಲ್ಲಾ ಭಾಗಗಳಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ನೌಕರರಿಗೂ ಕೂಡ ಶೇಕಡ 5 ರಷ್ಟು ಮನೆ ಬಾಡಿಗೆ ಭತ್ಯೆಯನ್ನು ಹೆಚ್ಚು ಮಾಡಬೇಕು.

ನಮ್ಮ ದೇಶ ಕೃಷಿ ಪ್ರಧಾನವಾದಂಥ ದೇಶ. ನಮ್ಮ ರಾಜ್ಯ ಕೃಷಿ ಪ್ರಧಾನವಾದ ರಾಜ್ಯ. ಪ್ರತಿ ವರ್ಷ ಬಜೆಟ್ ಮಂಡನೆ ಮಾಡುತ್ತಿರುವವರು ರೈತರ ಮಕ್ಕಳೇ ಆಗಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವಿಶೇಷವಾಗಿ ಕೃಷಿ ಬಜೆಟ್ ಎಂದು ತಂದಿದೆ. ಆದರೆ ಇವತ್ತು ಹಳ್ಳಿಗಳಲ್ಲಿ ಕೃಷಿ

ಮಾಡುವುದಕ್ಕೆ ಆಗುತ್ತಿಲ್ಲ, ಅವೆಲ್ಲ ವೃದ್ಧಾಶ್ರಮಗಳಾಗುತ್ತಿವೆ. ಕೃಷಿಯನ್ನು ಕೈಬಿಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕಾವೇರಿ ಕೊಳ್ಳದಲ್ಲಿ ನೀರಿಲ್ಲ. ಈಗಾಗಲೇ ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟಿರುವುದರಿಂದ ರೈತರ ಬದುಕು ದುಸ್ತರವಾಗಿದೆ. ಈ ವಿಚಾರವಾಗಿ ನಾನು ಮುಂಗಡ ಪತ್ರದಲ್ಲಿ ಬಹಳ ನಿರೀಕ್ಷೆ ಮಾಡಿದ್ದೆ. ಆದರೆ ಯಥಾವತ್ತಾಗಿ, ಸಾಂಪ್ರದಾಯಿಕವಾಗಿ ಕೃಷಿ ಇಲಾಖೆಯ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳಿಗೆ, ಹಳೆ ಯೋಜನೆಗಳಿಗೆ ಹಣವನ್ನು ತೊಡಗಿಸುವ ಕಾರ್ಯ ಮಾಡಿದ್ದಾರೆ. ಕಾವೇರಿ ಕೊಳ್ಳದ ರೈತರು ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿ ಮಾಡಿರುವ ಪೂರ್ಣ ಸಾಲವನ್ನಾ ಮನ್ನಾ ಮಾಡಬೇಕು. ಒಂದು ಎಕರೆ ಬೆಳೆ ನಷ್ಟದ ಪರಿಹಾರವಾಗಿ 50 ಸಾವಿರ ರೂಪಾಯಿಗಳ ನೀಡಬೇಕು, ಪ್ರಸಕ್ತ ಸಾಲಿನಲ್ಲಿ ಉಂಟಾಗಿರುವ ಬೆಳೆ ಹಾನಿಗೆ ಕೇಂದ್ರ ಸರ್ಕಾರದಿಂದ ವಿಶೇಷ ಪರಿಹಾರ ಧನ ನೀಡುವಂತೆ ಒತ್ತಾಯ ಮಾಡಬೇಕು. ಪೂರ್ಣ ಪ್ರಮಾಣದಲ್ಲಿ ಕಂದಾಯವನ್ನು ಮನ್ನಾ ಮಾಡಬೇಕು. ಈ ನಿಟ್ಟಿನಲ್ಲಿ ಮುಂಗಡ ಪತ್ರದಲ್ಲಿ ತೋರಿಸಿರುತ್ತಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಈ ರೀತಿಯ ಯಾವುದೇ ಕಾರ್ಯಕ್ರಮಗಳಿಲ್ಲ. ಈ ಅಂಶವನ್ನು ನಾನು ಒಬ್ಬ ರೈತನ ಮಗನಾಗಿ ನೊಂದು ಹೇಳುತ್ತಿದ್ದೇನೆ.

**ಉಪಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ, ನಿಮ್ಮನ್ನು ನೋಡಿದರೆ ರೈತರ ಮಗ ಎಂದೆನಿಸುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ನಾನು ಪಕ್ಕಾ ರೈತನ ಮಗ. ನಾನೂ ವ್ಯವಸಾಯ ಮಾಡುತ್ತಿದ್ದೆ...

**ಉಪಸಭಾಪತಿಯವರು:–** ಊರಿನ ಕಡೆ ತಲೆ ಹಾಕುವುದಿಲ್ಲ, ಬೆಂಗಳೂರು–ಮೈಸೂರು ತಿರುಗಾಡಿಕೊಂಡು ಇರುತ್ತಾರೆ.

**ಶ್ರೀ ಮರಿತಿಬ್ಬೇಗೌಡ:–** ನಾನು ಊರಿನ ಕಡೆಗೂ ಹೋಗುತ್ತೇನೆ. ಮಾನ್ಯ ಸಭಾಪತಿಗಳೆ, ಸಹಕಾರಿ ಕ್ಷೇತ್ರದ ಬಗ್ಗೆ ಆ ಭಾಗದಿಂದ ಮಾತನಾಡಿದ ಮಾನ್ಯ ಶಾಣಪ್ಪನವರು, ರೈತರು ಸಹಕಾರಿ ಸಂಘಗಳಲ್ಲಿ ಮಾಡಿದ್ದಂಥ ಸಾಲ 3000 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದೇವೆ, ಇದು ದೊಡ್ಡ

ಸಾಧನೆ ಎನ್ನುವ ಮಾತನ್ನು ಹೇಳಿದರು. ಖಂಡಿತವಾಗಿ ಕೂಡ ನಾನು ಅಭಿನಂದಿಸುತ್ತೇನೆ. ಆದರೆ ಮಾಡಿದಂತಹ ಸಾಲದ ಅವಧಿ ಮುಕ್ತಾಯವಾದರೂ ಆ ಸಂಬಂಧ ಒಂದು ಕಂತನ್ನೂ ಕೂಡ ಸರ್ಕಾರ ಬಿಡುಗಡೆ ಮಾಡಿಲ್ಲ. ಇವತ್ತು ಪ್ರಾಥಮಿಕ ಸಹಕಾರ ಸಂಘಗಳು ಬಾಗಿಲು ಮುಚ್ಚುವಂತಹ ಸ್ಥಿತಿಗೆ ಬರುತ್ತಿವೆ. ಸಾಲವನ್ನೇನು ಮನ್ನಾ ಮಾಡಿದ್ದರೋ ಆ ಸಂಬಂಧ ಅವಧಿ ಮುಗಿದಿರತಕ್ಕಂಥ ಸಾಲದ ಬಾಬ್ತು, ಸಹಕಾರ ಸಂಘಗಳಿಗೆ ಸರ್ಕಾರ ಏನು ಹಣ ಬಿಡುಗಡೆ ಮಾಡಬೇಕಾಗಿತ್ತೋ ಅದರ ಒಂದು ಕಂತನ್ನೂ ಇದುವರೆಗೂ ಕೊಟ್ಟಿಲ್ಲ. ಅದನ್ನು ಕೊಡುವವರು ಯಾರು? ಮುಂದೆ ಬರುವಂತಹ ಸರ್ಕಾರದವರು. ಪ್ರಾಥಮಿಕ ಸಹಕಾರ ಸಂಘಗಳು ನಷ್ಟಕ್ಕೆ ಒಳಗಾಗುತ್ತಿವೆ. ಇದರಿಂದ ರೈತರ ಮೇಲೆ ಇನ್ನೊಂದು ರೀತಿಯ ದುಷ್ಪರಿಣಾಮವಾಗುತ್ತದೆ. ಸರ್ಕಾರದ ವತಿಯಿಂದ ಕೊಡಬೇಕಾದ ಕಂತನ್ನು ಕೊಡಲು ಏನು ವಿಳಂಬವಾಗುತ್ತಿದೆಯೋ ಅದರ ಜೊತೆ ಈ ದಿನಾಂಕದವರೆಗೂ ಕೂಡ ಆ ಸಾಲದ ಮೇಲಿನ ಬಡ್ಡಿಯ ಹಣವನ್ನು ಸೇರಿಸಿ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಬಡ್ಡಿ ಹಣವನ್ನು ಸೇರಿಸಿ ಕೊಡದೇ ಹೋದರೆ ಸಹಕಾರಿ ಸಂಘಗಳು ರೈತರ ಪರವಾಗಿ ಆ ಬಡ್ಡಿ ಹಣವನ್ನು ತುಂಬಿದರೆ ಅಂತಹ ಸಹಕಾರಿ ಸಂಘಗಳು ನಷ್ಟವನ್ನು ಅನುಭವಿಸುತ್ತವೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೆ, ಪ್ರಾಥಮಿಕ ಪತ್ತಿನ ಕೃಷಿ ಸಹಕಾರಿ ಬ್ಯಾಂಕುಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಪರಿಸ್ಥಿತಿ ಏಕೆ ಕಠಿಣವಾಗಿದೆ ಎಂದರೆ 900 ಕೋಟಿ ರೂಪಾಯಿಗಳ ಬಿಲ್ ಪೆಂಡಿಂಗ್ ಇವೆ. ರೈತರ ಸಾಲ ಮನ್ನಾ ಮಾಡಿ, ಖಾತೆ ಕ್ಲೋಸ್ ಮಾಡಿದರು. ಈಗ ಆ 900 ಕೋಟಿ ಹಣ ರಾಜ್ಯ ಸರ್ಕಾರದಿಂದ ಬರಬೇಕಾಗಿದೆ. ಮಾನ್ಯ ಮರಿತಿಬ್ಬೇಗೌಡರು ಹೇಳಿದ ಹಾಗೆ, ಒಂದು ತಿಂಗಳು ತಡವಾದರೆ ಆ ಒಂದು ತಿಂಗಳಿಗೆ ಬಡ್ಡಿಯನ್ನು ಕೊಡುವವರು ಯಾರು? ಬಡ್ಡಿಯನ್ನು ಸೇರಿಸಿ ಕೊಡದೇ ಹೋದರೆ ಸಹಕಾರಿ ಪತ್ತಿನ ಕೃಷಿ ಸಹಕಾರ ಬ್ಯಾಂಕುಗಳ ಮೇಲೆ ಭಾರ ಬೀಳುತ್ತದೆ. ಆ ಭಾರ ಸಹಿಸುವಂತಹ ಶಕ್ತಿ ಅವುಗಳಿಗಿಲ್ಲ. ಸಹಕಾರಿ

ಪತ್ತಿನ ಕೃಷಿ ಸಹಕಾರ ಬ್ಯಾಂಕುಗಳು ಮುಚ್ಚಿ ಹೋಗುವ ಸ್ಥಿತಿಯಲ್ಲಿದೆ. ಸಹಕಾರ ಖಾತೆಯನ್ನು ಹೊಂದಿರುವ ಮಾನ್ಯ ಮುಖ್ಯಮಂತ್ರಿಗಳು ಸದರಿ ಹಣವನ್ನು ಬಿಡುಗಡೆ ಮಾಡುವ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ ಸಹಕಾರಿ ಬ್ಯಾಂಕುಗಳು ಮುಚ್ಚಿ ಹೋಗುತ್ತವೆ. `900 Crore worth bills are pending with the Government. It should be released forthwith. ಆದಷ್ಟು ಬೇಗ ಬಿಡುಗಡೆ ಮಾಡಿ. ಇಲ್ಲದಿದ್ದರೆ ಸಹಕಾರಿ ಚಳುವಳಿಯೇ ಸಮಾಪ್ತಿ ಆಗುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ರೈತರ ಸಾಲವನ್ನು ಮನ್ನಾ ಮಾಡುವ ಸಂಬಂಧ, ಆ ಹಣವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಈ ದಿನದವರೆಗಿನ ಬಡ್ಡಿಯ ಹಣವನ್ನು ತಕ್ಷಣ ಪಾವತಿ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(8 ಘಂಟೆ)

ಸನ್ಮಾನ್ಯ ಮುಖ್ಯಮಂತ್ರಿಗಳು ಇತ್ತೀಚೆಗೆ ಒಂದು ಸಹಕಾರಿ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಅದೇನೆಂದರೆ, ಪ್ರಾಥಮಿಕ ಸಹಕಾರ ಸಂಘಗಳ ಕಾರ್ಯನಿರ್ವಹಣೆ ಇವತ್ತು ಬಹಳ ದುಸ್ಥರವಾಗಿದೆ. ಸ್ವಂತ ಶಕ್ತಿಯಿಂದ ಅವು ಕಾರ್ಯನಿರ್ವಹಣೆ ಮಾಡುವುದಕ್ಕಾಗುತ್ತಿಲ್ಲ. ದಯಮಾಡಿ ಈ ಪ್ರಾಥಮಿಕ ಸಹಕಾರ ಸಂಘಗಳ ಕಾರ್ಯನಿರ್ವಹಣೆಗೆ ಅಗತ್ಯ ಇರತಕ್ಕಂಥ ಸುಮಾರು ಒಂದು ವರ್ಷಕ್ಕೆ 150 ಕೋಟಿ ರೂಪಾಯಿಗಳನ್ನು ಸಹಕಾರ ಸಂಘಗಳ ಆಡಳಿತ ನಿರ್ವಹಣೆಗೆ ನಾನು ಕೊಡುವುದಕ್ಕೆ ಬಯಸಿದ್ದೇನೆ, ಖಂಡಿತವಾಗಿಯೂ ನಮ್ಮ ಸರ್ಕಾರದಲ್ಲಿ ಅದನ್ನು ಜಾರಿಗೆ ತರುತ್ತೇವೆ ಎನ್ನುವಂತಹ ಮಾತನ್ನು ಹೇಳಿದರು. ನಾನು ಮುಂಗಡ ಪತ್ರದಲ್ಲಿ ತಂದೇ ಬಿಡುತ್ತಾರೆ, ಸಮ್ಮೇಳನದಲ್ಲಿ ಹೇಳಿಬಿಟ್ಟಿದ್ದಾರಲ್ಲಾ ಎಂದು ಬಹಳ ನಿರೀಕ್ಷೆ ಮಾಡಿಕೊಂಡಿದ್ದೆ. ಆದರೆ, ಆಯವ್ಯಯ ಪುಸ್ತಕದಲ್ಲಿ ಎಲ್ಲಿ ಹುಡುಕಿದರೂ ಒಂದು ಲೈನ್‌ನಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಪ್ರಾಥಮಿಕ ಸಹಕಾರ ಸಂಘಗಳ ಕಾರ್ಯನಿರ್ವಹಣೆ ಸಂಬಂಧ 150 ಕೋಟಿ

ರೂಪಾಯಿಯಲ್ಲ, 1 ಕೋಟಿ ರೂಪಾಯಿಯನ್ನು ಕೊಡುವಂತಹ ಪ್ರಸ್ತಾಪ ಮಾಡಿಲ್ಲ. ಇದು ಸರಿಯಿಲ್ಲ. ಅವರಿಗೆ ಖಂಡಿತವಾಗಿಯೂ ಈ ಪರಿಸ್ಥಿತಿ ಮನವರಿಕೆಯಾಗಿದೆ. ಪ್ರಾಥಮಿಕ ಸಹಕಾರ ಸಂಘಗಳ ನಿರ್ವಹಣೆ, ಅಲ್ಲಿರತಕ್ಕಂಥ ನೌಕರರಿಗೆ ವೇತನ ಕೊಡುವುದಕ್ಕಾಗುತ್ತಿಲ್ಲ, ಬಹಳ ಸಮಸ್ಯೆಯಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಂಡಿದ್ದಾರೆ. ನಾಳೆ ಏನಾದರೂ ಮಾಡಿ ಪ್ರತಿ ವರ್ಷ 250 ಕೋಟಿ ರೂಪಾಯಿಗಳನ್ನು ಈ ಸಹಕಾರ ಸಂಘಗಳ ಕಾರ್ಯನಿರ್ವಹಣೆಗಾಗಿ ರಾಜ್ಯ ಸರ್ಕಾರ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ನಾನು ವಿನಂತಿ ಮಾಡುತ್ತೇನೆ. ಸಮಾಜ ಕಲ್ಯಾಣ ಇಲಾಖೆ ಸಚಿವರ ಕ್ಷೇತ್ರದಲ್ಲಿ ಹತ್ತಾರು ವರ್ಷಗಳಿಂದ ನಗರ ಪ್ರದೇಶದ ಎಚ್.ಆರ್.ಎ. ಅನ್ನು ಕೊಡುತ್ತಿದ್ದರು.

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ತಾವು ಸಮಯವನ್ನು ಜಾಸ್ತಿ ತೆಗೆದುಕೊಂಡಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸಮಾಜ ಕಲ್ಯಾಣ ಇಲಾಖೆ ಸಚಿವರ ಕ್ಷೇತ್ರದಲ್ಲಿ ಹತ್ತಾರು ವರ್ಷಗಳಿಂದ ನಗರ ಪ್ರದೇಶದ ಭತ್ಯೆಯನ್ನು ಕೊಡುತ್ತಿದ್ದರು. ಈಗ ಶಿಕ್ಷಕರಿಗೆ ತಕ್ಷಣ ನಿಲ್ಲಿಸಿಬಿಟ್ಟಿದ್ದಾರೆ. ಪೊಲೀಸ್‌ನವರಿಗೆ ಮಾತ್ರ ಕೊಡುತ್ತಾರೆ, ಶಿಕ್ಷಕರಿಗೆ ಇಲ್ಲ. ಇದು ಸಮಾಜ ಕಲ್ಯಾಣ ಇಲಾಖೆಯ ಸಚಿವರ ಕ್ಷೇತ್ರದಲ್ಲೇ ಆಗಿದೆ. ದಯಮಾಡಿ ತಕ್ಷಣ ನಿಂತಿರತಕ್ಕಂಥ ನಗರ ಪ್ರದೇಶದ ಮನೆ ಬಾಡಿಗೆ ಭತ್ಯೆಯನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಆದರೆ, ಈ ಸಂದರ್ಭದಲ್ಲಿ ತಪ್ಪೋ ಸರಿಯೋ ಮುಂಗಡ ಪತ್ರದಲ್ಲಿ ಕೆಲವು ಒಳ್ಳೆಯ ಕಾರ್ಯಕ್ರಮಗಳನ್ನು ಕೂಡ ಗುಣಗಾನ ಮಾಡಿದ್ದಾರೆ. ಅದರೆ, ಶಿಕ್ಷಣ ಇಲಾಖೆ ಮತ್ತು ಕೃಷಿ ಇಲಾಖೆಗೆ ನಿಜವಾಗಿಯೂ ಈ ಸಂದರ್ಭದಲ್ಲಿ ಹೆಚ್ಚಿನ ಮಹತ್ವವನ್ನು ಕೊಡಲಿಲ್ಲ. ಆದರೂ ಕೂಡ ಈ ಮುಂಗಡ ಪತ್ರವನ್ನು ಈ ಸಂದರ್ಭದಲ್ಲಿ ಸಾರ್ವತ್ರಿಕವಾಗಿ ನಾಡಿನ ಜನತೆಯ ಹಿತದೃಷ್ಟಿಯಿಂದ ನಾನು ಸ್ವಾಗತಿಸುತ್ತೇನೆ.

ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಮುಂಗಡ ಪತ್ರವನ್ನು ನಾನು ಸ್ವಾಗತಿಸುತ್ತೇನೆ. ಆಯವ್ಯಯದ 105ನೇ ಪುಟ್ಟದಲ್ಲಿ ಆಡಳಿತ ಸುಧಾರಣೆಗಳು ಎಂದು ನಮ್ಮ ಸರ್ಕಾರ ಕರ್ನಾಟಕ ರಾಜ್ಯದಾದ್ಯಂತ ನಾಗರಿಕರಿಗೆ 'ಸಕಾಲ'ದ ಅಡಿ ಇದುವರೆಗೂ 30 ಇಲಾಖೆ, ಸಂಸ್ಥೆಗಳು, 265 ಸೇವೆಗಳು, ಈ ಎಲ್ಲಾ ವಿಷಯವನ್ನು ತಿಳಿಸಿದ್ದಾರೆ. ನಿನ್ನೆ ವಿಶ್ವವಿದ್ಯಾನಿಲಯದ ಒಂದು ತಿದ್ದುಪಡಿ ವಿಧೇಯಕ ಬಂದಂತಹ ಸಮಯದಲ್ಲಿ ಸದನದಲ್ಲಿ ನಾವು ಚರ್ಚೆ ಮಾಡಿದೆವು. ಅನೇಕ ಬಾರಿ ನಾವು ತನಿಖೆಯನ್ನು ಮಾಡುವುದಕ್ಕೆ ಆದೇಶ ಮಾಡುತ್ತೇವೆ. ಆದರೆ, ತನಿಖೆ ಸಕಾಲದಲ್ಲಿ ಮುಗಿಯುವುದಿಲ್ಲ. ತನಿಖೆ ಸಕಾಲದಲ್ಲಿ ಮಗಿದರೂ ಕೂಡ ಕ್ರಮ ತೆಗೆದುಕೊಳ್ಳುವುದನ್ನು ಸರ್ಕಾರ ಮಾಡುವುದಿಲ್ಲ ಎನ್ನುವಂತಹ ಮಾತನ್ನು ನಾವು ನಿನ್ನೆ ಸ್ವಾಭಾವಿಕವಾಗಿ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆದರೆ, ಇಲ್ಲಿ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಬಹುಶಃ ಒಂದು ರೆಕಾರ್ಡ್ ಆದಂತಹ ತನಿಖೆ ನಮ್ಮ ಸರ್ಕಾರದಲ್ಲಿ ನಡೆದಿದೆ. ಈ ಸರ್ಕಾರದಲ್ಲಿ ನಡೆದ ತನಿಖೆಗೆ ಸಂಬಂಧಪಟ್ಟ ಹಾಗೆ ನಮ್ಮ ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಮೈಸೂರು ನಗರದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಪ್ರಮುಖವಾದಂತಹ ಅತ್ಯಂತ ಬೆಲೆ ಬಾಳುವಂತಹ 2,000 ಎಕರೆ ಪ್ರದೇಶವನ್ನು ಜಿಲ್ಲಾಧಿಕಾರಿಗಳಾಗಿದ್ದಂಥವರು ಅದು ಸರ್ಕಾರಿ ಗೋಮಾಳ, ಅದು ಬಿ ಖರಾಬ್ ಜಮೀನು, ಇಂಗ್ಲಿಷರ ಕಾಲದಿಂದ, ಮಹಾರಾಜರ ಕಾಲದಿಂದ 1861 ರಿಂದ ಬಿ ಖರಾಬ್ ಆಗಿದ್ದಂತಹ ಜಾಗ. ಅದನ್ನು ಖಾಸಗಿಯವರಿಗೆ ಖಾತೆ ಮಾಡಿಸಿ ಕೊಡುವುದಕೋಸ್ಕರವಾಗಿ ಬಿ ಖರಾಬ್‌ನಿಂದ ಎ ಖರಾಬ್‌ಗೆ ಬದಲಾವಣೆ ಮಾಡುವಂತಹ ಆದೇಶವನ್ನು ಮಾಡಿದರು. ಆದರೆ, ಈ ಆದೇಶದ ಹಿಂದೆ ಬಹಳ ದೊಡ್ಡದಾದಂತಹ real estate lobby ಇತ್ತು. ಅದರಲ್ಲಿ ಅನೇಕ ಜನ ಪ್ರಭಾವಿ ರಾಜಕಾರಣಿಗಳಿದ್ದರು. ಇವರೆಲ್ಲರ ರಾಜಕಾರಣಿಗಳ ಪಿತೂರಿಯ

ಫಲವಾಗಿ ಆ ಜಿಲ್ಲಾಧಿಕಾರಿಗಳ ಮೇಲೆ ಬಂದಂತಹ ಒತ್ತಡದಿಂದಾಗಿ ಜಿಲ್ಲಾಧಿಕಾರಿಗಳು ಈ ರೀತಿಯಾದಂತಹ.......

**ಶ್ರೀ ಬಸವರಾಜ ಹೊರಟ್ಟಿ:–** ಎಲ್ಲಾ ರಾಜಕಾರಣಿಗಳು ಎಂದರೆ ಯಾರು? ನೀವು ಅವರ ಹೆಸರನ್ನು ಹೇಳಬೇಕು. ರಾಜಕಾರಣಿಗಳು ಎಂದರೆ ಎಲ್ಲರೂ ಬರುತ್ತಾರೆ. ನೀವು ನಿರ್ದಿಷ್ಟವಾಗಿ ಇಂತಹ ರಾಜಕಾರಣಿಗಳು ಎಂದು ಹೇಳಿ. ಸುಮ್ಮನೆ ರಾಜಕಾರಣಿಗಳು ಎಂದು ಹೇಳಬೇಡಿ.

**ಶ್ರೀ ಗೋ. ಮಧುಸೂದನ್:–** ಈ ಸದನದಲ್ಲಿ ಇಲ್ಲದೆ ಇರುವಂತಹ ರಾಜಕಾರಣಿಗಳ ಹೆಸರನ್ನು ಹೇಳುವುದಕ್ಕೆ ಅವಕಾಶವಿಲ್ಲ. ಆ ಕಾರಣಕೋಸ್ಕರವಾಗಿ ನಾನು ಹೇಳುತ್ತಿಲ್ಲ. ನಾನು ಅವರಿಗೆ ನೋಟಿಸ್ ಕೊಡಬೇಕಾಗುತ್ತದೆ. ಹೆಸರನ್ನು ಹೇಳುವುದಕ್ಕಾಗುವುದಿಲ್ಲ.

ಮಾನ್ಯ ಸಭಾಪತಿಯವರೇ, ಇದರಲ್ಲಿ ಪಕ್ಷಾತೀತವಾಗಿ, ಜಾತ್ಯಾತೀತಾವಾಗಿ, ಎಲ್ಲಾ ರೀತಿಯ ಜನಗಳು ಕೂಡ ಈ 2,000 ಎಕರೆಯನ್ನು ಒತ್ತುವರಿ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದರು.

**ಶ್ರೀ ಮರಿತಿಬ್ಬೇಗೌಡ:–** ಯಾರು ಎಂದು ಹೆಸರು ಹೇಳಿ?

**ಶ್ರೀ ಗೋ. ಮಧುಸೂದನ್:–** ದಯಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಧುಸೂದನ್, ನೀವು ಹೆಸರು ಹೇಳಬೇಕಲ್ಲವೇ? ಹೆಸರನ್ನು ಹೇಳಿ?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾವು ಬಜೆಟ್ ಬಗ್ಗೆ ಮಾತನಾಡುತ್ತಿಲ್ಲ. ಹೆಸರು ಹೇಳಿ ಎಂದು ಕೇಳುತ್ತಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:–** ನೀವು ಯಾವ ಉದ್ದೇಶ ಇಟ್ಟುಕೊಂಡು ಮಾತನಾಡುತ್ತಿದ್ದೀರಿ?

**ಶ್ರೀ ಗೋ. ಮಧುಸೂದನ್:-** ಇದರಲ್ಲಿ ನಿಮ್ಮ ಯಾರ ಹೆಸರು ಇಲ್ಲ ಬಿಡಿ. ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಸರ್ಕಾರ ಅತೀ ಶೀಘ್ರವಾಗಿ ಸ್ಪಂದನೆ ಮಾಡಿತು. ನಮ್ಮ ರಾಜ್ಯದ ಉಪ ಮುಖ್ಯಮಂತ್ರಿಗಳು, ಕಂದಾಯ ಸಚಿವರಾಗಿರುವಂಥವರು ಜಿಲ್ಲಾಧಿಕಾರಿಗಳು ಮಾಡಿದಂತಹ ಆದೇಶವನ್ನು ನಾನು ಪ್ರಸ್ತಾಪ ಮಾಡಿದ 48 ಗಂಟೆಗಳ ಒಳಗಾಗಿ ಆದೇಶವನ್ನು ರದ್ದು ಮಾಡುವ ರೀತಿಯಲ್ಲಿ ಆದೇಶವನ್ನು ಮಾಡಿದರು.

**ಶ್ರೀ ಬಸವರಾಜ ಹೊರಟ್ಟಿ:-** ಸರ್ಕಾರ ಆದೇಶ ಮಾಡಿದೆಯೇ?

**ಶ್ರೀ ಗೋ. ಮಧುಸೂದನ್:-** ಉಪ ಮುಖ್ಯಮಂತ್ರಿಗಳು, ಕಂದಾಯ ಸಚಿವರು, ನಮ್ಮ ಸರ್ಕಾರದವರು. ನಿಮ್ಮಲ್ಲಿ ಏನಾದರೂ ಉಪ ಮುಖ್ಯಮಂತ್ರಿಗಳು ಇದ್ದಾರೆಯೇ? ಕಂದಾಯ ಸಚಿವರು ಈ ಆದೇಶವನ್ನು ಮಾಡಿದರು. ದಯಮಾಡಿ ಏನು ಕೇಳಬೇಡಿ. ಆಮೇಲೆ ನಾನು ಹೇಳುತ್ತೇನೆ.

**ಶ್ರೀ ಪುಟ್ಟಣ್ಣ:-** ಯಾರು ಎಂದು ಹೆಸರು ಹೇಳಿಬಿಟ್ಟರೆ ಅನುಮಾನ ಇರುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಏನಾದರೂ ಭಾಷಣ ಮಾಡುವ ಅವಶ್ಯಕತೆ ಇದ್ದರೆ ಯಾವ ಮಂತ್ರಿಗಳು ಜಮೀನು ತಿಂದಿದ್ದಾರೆ, ಅವರ ಹೆಸರನ್ನು ಹೇಳಿ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೇ, ಇವರೆಲ್ಲಾ ಮಾತನಾಡಿರುವುದನ್ನು ಕಡತದಿಂದ ತೆಗೆದು ಹಾಕಬೇಕು. ಕಂದಾಯ ಸಚಿವರು ಆದೇಶವನ್ನು ಮಾಡಿದರು. ಅದರಿಂದಾಗಿ ನಾನು ಹೇಳುತ್ತಿದ್ದೇನೆ, ರೆಕಾರ್ಡ್ ಸಮಯದಲ್ಲಿ ಒಂದು ತನಿಖೆ ನಡೆಯಿತು. ದಿನಾಂಕ:21-9-2012ರಂದು ತನಿಖೆಗೆ ಆದೇಶ ಆಗಿದೆ, ನೆನ್ನೆ ಅಂದರೆ ದಿನಾಂಕ: 13-2-2013 ರಂದು ವರದಿ ಬಂದಿದೆ. 134 ಪುಟಗಳ ಆ ವರದಿಯಲ್ಲಿ 594 ಪುಟಗಳ ದಾಖಲೆಗಳಿದ್ದು, ಅದು ಒಟ್ಟು 738 ಪುಟಗಳ ವರದಿಯಾಗಿದೆ. 32 ಜನ

ಅಧಿಕಾರಿಗಳನ್ನು ತನಿಖೆಗೆ ಒಳಪಡಿಸಿ ಸಿದ್ಧಪಡಿಸಲಾಗಿರುವ ಈ ಅಂತಿಮ ವರದಿಯನ್ನು ಅಲ್ಲಿನ ಪ್ರಾದೇಶಿಕ ಆಯುಕ್ತರು ನೀಡಿದ್ದಾರೆ. ಬಹಳ ದೊಡ್ಡದಾಗಿರುವ ಆ ವರದಿಯನ್ನು ನಾನು ಇಡೀ ಸದನಕ್ಕೇ ತೋರಿಸುತ್ತಿದ್ದೇನೆ.

**(ಈ ಹಂತದಲ್ಲಿ ತನಿಖೆಯ ವರದಿಯನ್ನು ಸದನಕ್ಕೆ ತೋರಿಸಲಾಯಿತು)**

**ಉಪ ಸಭಾಪತಿಯವರು:-** ಮಧುಸೂದನ್‌ರವರೇ, ತಾವು ಬಜೆಟ್ ಮೇಲೆ ಮಾತನಾಡಿ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೇ, ನಾನು ಬಜೆಟ್ ಮೇಲೆಯೇ ಮಾತನಾಡುತ್ತಿದ್ದೇನೆ. ಬಜೆಟ್‌ನಲ್ಲಿ **"ಸಕಾಲ"** ಯೋಜನೆಗೆ ಸಂಬಂಧಿಸಿದಂತೆ ಸಕಲವಾದಂತಹ ವರದಿ ಏನು ಬಂದಿದೆ ಅದರ ಬಗ್ಗೆಯೇ ನಾನು ಮಾತನಾಡುತ್ತಿದ್ದೇನೆ. ಈ ವರದಿಯಲ್ಲಿ ಅತ್ಯಂತ ಪ್ರಮುಖವಾದಂತಹ ಆರೋಪಗಳನ್ನೇನು ಮಾಡಿದ್ದೆವು ಆ ಎಲ್ಲಾ ಆರೋಪಗಳು ನಿಜ ಎಂದು ತೀರ್ಮಾನವಾಗಿದೆ. ತಮ್ಮಲ್ಲಿ ಇಲ್ಲದೇ ಇರುವಂತಹ ಅಧಿಕಾರವನ್ನು ಉಪಯೋಗ ಮಾಡಿಕೊಂಡಿದ್ದಾರೆ, ಸರ್ಕಾರಿ ಜಮೀನನ್ನು ಸರ್ಕಾರಿ ಜಮೀನನಲ್ಲ ಎಂದು ಜಿಲ್ಲಾಧಿಕಾರಿಗಳು ಘೋಷಣೆ ಮಾಡಿದ್ದಾರೆ. ಇದೆಲ್ಲವನ್ನೂ ಕೂಡ ಈ ವರದಿ ಅಂತಿಮವಾಗಿ ತೋರಿಸಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಆ ವರದಿಯನ್ನು ಯಾರು ಕೊಟ್ಟಿದ್ದಾರೆ?

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಯವರೇ, ಈ ವರದಿಯನ್ನು ಮೈಸೂರಿನ ಪ್ರಾದೇಶಿಕ ಆಯುಕ್ತರು ಕೊಟ್ಟಿದ್ದಾರೆ. ಅವರೇ ಇದರ ಸಕ್ಷಮ ತನಿಖಾಧಿಕಾರಿಯಾಗಿದ್ದರು. ಜಿಲ್ಲಾಧಿಕಾರಿಯ ಮೇಲೆ ಪ್ರಾದೇಶಿಕ ಆಯುಕ್ತರು ಇರುತ್ತಾರೆ. ಅವರ ಕೇಂದ್ರ ಕೂಡ ಮೈಸೂರಿನಲ್ಲೇ ಇತ್ತು. ನಾನು ಏಕೆ ಈ ವರದಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ, ದಸರಾ ಉತ್ಸವ ನಡೆಯಿತು, ಅದಾದ ನಂತರ ಅನೇಕ ಚಟುವಟಿಕೆಗಳು ಕೂಡ ನಡೆದವು, ಈ ಎಲ್ಲಿದ್ದರ ನಡುವೆಯೂ ಕೂಡ ಬಿಡುವನ್ನು ಮಾಡಿಕೊಂಡು 38

ಜನ ಅಧಿಕಾರಿಗಳನ್ನು ತನಿಖೆ ಮಾಡಿ ಅವರು ಎಲ್ಲರ ರಿಪೋರ್ಟ್‌ನ್ನು ತೆಗೆದುಕೊಂಡು ಅತೀ ಶೀಘ್ರದಲ್ಲಿ ಸರ್ಕಾರಕ್ಕೆ ಸಲ್ಲಿಸುವಂತಹ ಕೆಲಸವನ್ನು ಮಾಡಿದ್ದಾರೆ. ಬಹುಶಃ ಇದು ಕರ್ನಾಟಕದ ಇತಿಹಾಸದಲ್ಲಿ ರೆಕಾರ್ಡ್ ಆಗುತ್ತದೆ. ನಿನ್ನೆ ನಾವು ಒಬ್ಬ ಐ.ಎ.ಎಸ್. ಅಧಿಕಾರಿಯ ಬಗ್ಗೆ ಮಾತನಾಡುತ್ತಾ ಹೇಳಿದೆವು, ಐ.ಎ.ಎಸ್. ಅಧಿಕಾರಿಗಳ ವಿರುದ್ಧ ಯಾವುದೇ ತನಿಖೆಯನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ, ಅವರು ತಪ್ಪಿತಸ್ಥರು ಎಂದು ಯಾರೂ ತೀರ್ಮಾನಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿದರೆ, ಇಲ್ಲಿ ಅದಕ್ಕೆ ತದ್ವಿರುದ್ಧವಾದಂತಹ ವರದಿ ಬಂದಿದೆ. ಇದರಲ್ಲಿ ಐ.ಎ.ಎಸ್. ಅಧಿಕಾರಿಯ ಪೂರ್ತಿಯಾಗಿ ತಪ್ಪು ಮಾಡಿದ್ದಾನೆ, ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾನೆ. ಇದೆಲ್ಲವನ್ನೂ ಕೂಡ ಈ ವರದಿ ಪ್ರಕಟ ಮಾಡುತ್ತಿದೆ. “ಸಕಾಲ” ಎನ್ನುವ ಹೆಸರಿನಲ್ಲಿ ಅತೀ ಶೀಘ್ರವಾಗಿ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬೇಕಾದಂತಹ ಎಲ್ಲಾ ಕೆಲಸಗಳನ್ನು ಮಾಡಬೇಕೆಂದು ಈ ಸರ್ಕಾರವೇನು ತೀರ್ಮಾನ ಮಾಡಿದೆ, ಅದಕ್ಕನುಗುಣವಾಗಿ ಒಳ್ಳೆಯ ಕೆಲಸಗಳನ್ನು ಕೂಡ ಮಾಡಿದೆ. ಅದಕ್ಕಾಗಿ ನಾನು ಈ ಸರ್ಕಾರವನ್ನು ಉಪ ಮುಖ್ಯಮಂತ್ರಿಯವರನ್ನು, ಮುಖ್ಯಮಂತ್ರಿಯವರನ್ನು ಸಹ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸದಸ್ಯರು ಎಲ್ಲವನ್ನೂ ಹೇಳಿದರು. ಆದರೆ, ಈ ಸದನದಲ್ಲಿ ಮುಂದೆ ಏನು ಮಾಡಬೇಕೆಂದು ಹೇಳುತ್ತಿಲ್ಲ.

**ಶ್ರೀ ಗೋ. ಮಧುಸೂಧನ್:-** ಈ ವರದಿ ನಿನ್ನೆಯಷ್ಟೆ ಕೈ ಸೇರಿರುವಂತಹದ್ದು. ಇವತ್ತು ಸರ್ಕಾರಕ್ಕೆ ವರದಿ ಬಂದಿದೆ. ಈ ವರದಿಯ ಮೇಲೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಆ ಐ.ಎ.ಎಸ್. ಅಧಿಕಾರಿ ಮಾಡಿರುವಂತಹ ಈ ಅವ್ಯವಹಾರ ಏನಿದೆ, ಅದನ್ನು ಲೆಕ್ಕ ಹಾಕಿಕೊಂಡರೆ ಕನಿಷ್ಠ 10 ಸಾವಿರ ಕೋಟಿ ರೂಪಾಯಿಗಳ magnitude ಇದಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:–** ಇದರಲ್ಲಿ ರಾಜಕಾರಣಿಗಳು ಇರಲೇ ಬೇಕು. ನೀವು ಇದರ ಬಗ್ಗೆ ಪಕ್ಷಾತೀತವಾಗಿ ತನಿಖೆ ಮಾಡಬೇಕು.

**ಶ್ರೀ ಪುಟ್ಟಣ್ಣ:–** ಈ ಕೆಲಸವನ್ನು ಸರ್ಕಾರದ ಸಹಕಾರ ಇಲ್ಲದೇ ಮಾಡಲಿಕ್ಕೆ ಆಗುವುದೇ ಇಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಇದರಲ್ಲಿ ಯಾರು ಭಾಗಿಯಾಗಿದ್ದಾರೆಂದು ಅವರ ಹೆಸರನ್ನು ಹೇಳಿ. ನೀವು ಹೇಳುವುದು ಪಕ್ಷಾತೀತವಾಗಿರಲಿ.

(ಗೊಂದಲ)

**ಶ್ರೀ ಗೋ. ಮಧುಸೂಧನ್:–** ಈಗ ಬಂದಿರುವಂತಹ ವರದಿಯಲ್ಲಿ ಯಾವುದೇ ರಾಜಕಾರಣಿಯ ಹೆಸರಿಲ್ಲ. ಇದು ನೇರವಾಗಿ ಜಿಲ್ಲಾಧಿಕಾರಿಗಳು ಮಾಡಿರುವಂತಹ ತಪ್ಪು. ಅವರ ಬಗ್ಗೆ ಮಾಡಿರುವ ತನಿಖೆಯ ವರದಿ ಇದಾಗಿದೆ.

**ಉಪಸಭಾಪತಿಯವರು:–** ಶ್ರೀಯುತ ಮಧುಸೂಧನ್‌ರವರೆ, ತಾವು ಬಜೆಟ್ ಮೇಲೆ ಮಾತನಾಡಿಕೊಂಡು ಹೋಗಿ. ಇಲ್ಲದಿದ್ದರೆ, ನಿಮಗೆ ಕೊಟ್ಟಿರುವ ಸಮಯವನ್ನು ಬೇರೆಯವರಿಗೆ ಕೊಡುತ್ತೇನೆ.

(ಗೊಂದಲ)

**ಶ್ರೀ ಬಿ.ಜಿ ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:–** ಮಾನ್ಯ ಪುಟ್ಟಸ್ವಾಮಿ ಅವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಿ.ಜಿ. ಪುಟ್ಟಸ್ವಾಮಿ:–** ಅದು ಯಾವ ಕಾಲದಲ್ಲಿ ಆಗಿದೆ ಎಂದು ಮಾನ್ಯ ಸದಸ್ಯರು ಹೇಳಬೇಕು.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:-** ಅವರು ಮಾತನಾಡುವಾಗ ರಾಜಕಾರಣಿಗಳು ಎಂದು ಹೇಳಿದರು.

**ಶ್ರೀ ಗೋ. ಮಧುಸೂಧನ್:-** ತಾವು ಎಷ್ಟು ಹೇಳಿದರೂ ಸಹ ಈ ವರದಿಯಲ್ಲಿ ಯಾರ ಹೆಸರಿಲ್ಲ, ಅವರ ಹೆಸರನ್ನು ನಾನು ಈ ಸದನದಲ್ಲಿ ಹೇಳಲಿಕ್ಕೆ ಬರುವುದಿಲ್ಲ. ಅದರ ಬಗ್ಗೆ ಇನ್ನೂ ತನಿಖೆಯಾಗಬೇಕಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಮತ್ತೆ, ರಾಜಕಾರಣಿಗಳು ಎಂದು ನೀವು ಹೇಗೆ ಹೇಳಿದಿರಿ? ನೀವು ಪಕ್ಕಾ ರಾಜಕಾರಣಿಗಳು ಎಂದು ಹೇಳಿದ್ದೀರಿ. ರೆಕಾರ್ಡ್ ತೆಗೆಸಿ. ರಾಜಕಾರಣಿಗಳು ಎಂದು ತಾವು ಹೇಳಿದ್ದೀರಿ.

**ಶ್ರೀ ಗೋ. ಮಧುಸೂಧನ್:-** ನಾನು ಈಲ್ಡ್ ಆಗಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ನೀವು ರಾಜಕಾರಣಿಗಳು ಎಂದು ಹೇಳಿದ್ದೀರಿ. ಆದರೆ, ನೀವು ಈಗ ಇಲ್ಲವೆಂದು ಹೇಳುತ್ತಿದ್ದೀರಿ. ನೀವು ರಾಜಕಾರಣಿಗಳು ಎಂದು ಹೇಳಿದ್ದು, ಅವರ ಹೆಸರನ್ನು ಹೇಳಬೇಕು.

**ಶ್ರೀ ಗೋ. ಮಧುಸೂಧನ್:-** ಇಲ್ಲಿ ಆಗಿರುವುದು ಅಧಿಕಾರಿಗಳ ತನಿಖೆ. ಇದರ ಹಿಂದೆ ನೀವು ಹೇಳುವಂತೆ ಇದರಲ್ಲಿ ರಾಜಕೀಯ ಪ್ರಭಾವ ಇದೆ. ಅದರ ಬಗ್ಗೆ ತನಿಖೆಯಾಗಬೇಕಾಗಿದ್ದು, ಮುಂದಿನ ತನಿಖೆಯಾಗಬೇಕು. ಅದರ ಬಗ್ಗೆ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

**(ಈ ಹಂತದಲ್ಲಿ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ಆರ್. ಪಾಟೀಲ್:-** ಇದರ ಬಗ್ಗೆ ಅಧಿಕಾರಿಗಳಿಂದ ತನಿಖೆ ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಹಿಂದೆ ಒಂದು ದೊಡ್ಡ ಕುಳ ಇರಲೇ ಬೇಕು. ಪ್ರಬಲವಾದಂತಹ ರಾಜಕಾರಣಿಗಳು ಇರಲೇ ಬೇಕು. ನೀವು ಇದರ ಬಗ್ಗೆ ಪರೋಕ್ಷವಾಗಿ ಮೊಗಂ ಆಗಿ ಹೇಳಿದ್ದೀರಿ. ಏನು ಹೇಳಿದ್ದೀರಿ ಎಂದರೆ ಇದರ ಹಿಂದೆ ರಾಜಕಾರಣಿಗಳ ಕೈವಾಡ ಇದೆ ಎಂದು ಹೇಳಿದಿರಿ. What is the hindrance to tell the name of that person?

**ಶ್ರೀ ಗೋ. ಮಧುಸೂದನ್:–** ಆ ರೀತಿ ಹೇಳಲಿಕ್ಕೆ ನಮ್ಮ ಸದನದ ನಿಯಮಾವಳಿಗಳಲ್ಲಿ ಅವಕಾಶವಿಲ್ಲ. ಮತ್ತೆ ಆ ರೀತಿಯ ಹೆಸರು ಈ ವರದಿಯಲ್ಲಿ ಇರುವುದಿಲ್ಲ.

(ಗೊಂದಲ)

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಈಗ ಶ್ರೀಯುತ ಮಧುಸೂಧನ್ ರವರಿಗೆ ಕೊಟ್ಟಂತಹ 10 ನಿಮಿಷ ದಾಟಿದೆ. ಆದ್ದರಿಂದ, ಮಾನ್ಯ ಸದಸ್ಯರು ತಮ್ಮ ವಿಚಾರವನ್ನು ಮುಗಿಸಬೇಕು. ಇನ್ನು ಮಾತನಾಡುವವರಿದ್ದಾರೆ. ಬಜೆಟ್ ಮೇಲೆ ಮಾತನಾಡುವವರಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಇಲ್ಲಿ ಸಮಯದ ಪ್ರಶ್ನೆ ಬಂದಿಲ್ಲ. ಅವರು ಮಾತನಾಡುವಾಗ ಏನು ಹೇಳಿದರು ಎಂದರೆ 10 ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರವನ್ನು ಜಿಲ್ಲಾಧಿಕಾರಿಗಳು ಮಾಡಿದರು ಎಂದು ಹೇಳಿದರು. ಮುಂದೆ ಮಾತನಾಡುತ್ತಾ, ಇದರಲ್ಲಿ ರಾಜಕಾರಣಿಗಳು ಇದ್ದಾರೆಂದು ಹೇಳಿದರು. ಪಕ್ಷಾತೀತವಾಗಿ ರಾಜಕಾರಣಿಗಳು ಇದ್ದಾರೆಂದು ಹೇಳಿದರು. ಪಕ್ಷಾತೀತ ರಾಜಕಾರಣಿಗಳು ಎಂದರೆ ಅವರ ಹೆಸರನ್ನು ಹೇಳಬೇಕಲ್ಲವೇ? ಹೀಗಾಗಿ ಇಲ್ಲಿ ಸಮಯದ ಪ್ರಶ್ನೆ ಬರುವುದಿಲ್ಲ. ಅವರು ಹೇಳಿದ್ದಾರೆಂದರೆ, ಅದನ್ನು ಹೇಳಬೇಕಾಗುತ್ತದೆ. ಅವರು ಹೇಳಿದ್ದಾರೆ, ರೆಕಾರ್ಡ್ ತೆಗೆಸಿ ನೋಡಿ.

(ಗೊಂದಲ)

**ಶ್ರೀ ಅಪ್ಪಚ್ಚು ರಂಜನ್ (ಯುವಜನ ಸೇವೆ ಮತ್ತು ಕ್ರೀಡಾ ಸಚಿವರು):–** ಸನ್ಮಾನ್ಯ ಸಭಾಪತಿಯವರೆ, ಈ ವರದಿಯಲ್ಲಿ ಅಧಿಕಾರಿಗಳ ಬಗ್ಗೆ ಹೇಳುತ್ತಿದ್ದಾರೆ ಹೊರತು, ರಾಜಕಾರಣಿಗಳ ಹೆಸರನ್ನು ಹೇಳಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಈ ವರದಿಯಲ್ಲಿ ಎಸ್.ಆರ್. ಪಾಟೀಲ್‌ರವರು ಇದ್ದಾರೋ, ಶ್ರೀಯುತ ದಯಾನಂದ್‌ರವರು ಇದ್ದಾರೋ, ಶ್ರೀಯುತ ಬಸವರಾಜ ಹೊರಟ್ಟಿಯವರು ಇದ್ದರೋ, ಮತ್ತೆ ಯಾರು

ಇದ್ದಾರೋ ಎನ್ನುವುದನ್ನು ಹೇಳಬೇಕಲ್ಲವೇ? ಅವರ ಹೆಸರನ್ನು ಹೇಳದಿದ್ದರೆ ಈ ವಿಚಾರವಾಗಿ ಜನರ ಮನಸ್ಸಿನಲ್ಲಿ ಸಂಶಯ ಬರುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ನೇರವಾಗಿ ಒಬ್ಬ ಮಂತ್ರಿಗಳ ಬಗ್ಗೆ ಹೇಳುತ್ತಾರೆ. ಪರೋಕ್ಷವಾಗಿ ಅವರು ಹೇಳಿದ್ದಾರೆ. ಮೈಸೂರು ಜಿಲ್ಲಾ ಉಸ್ತುವಾರಿ ಮಂತ್ರಿಗಳ ಬಗ್ಗೆ ಹೇಳುತ್ತಾರೆ.

(ಗೊಂದಲ)

**ಸಭಾಪತಿಯವರು:–** ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸದಸ್ಯರು 10 ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂದು ಹೇಳಿದ್ದಾರೆ. ಆದ್ದರಿಂದ, ಸರ್ಕಾರ ಇದನ್ನು ಸಿಬಿಐ ಗೆ ವಹಿಸಬೇಕು.

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಇದರಲ್ಲಿ ಒಬ್ಬ ಮಂತ್ರಿ ಶಾಮೀಲಾಗಿದ್ದಾರೆಂದು ನೇರವಾಗಿ ಹೇಳಿದ್ದಾರೆ.

**ಸಭಾಪತಿಯವರು:–** ಸ್ವಲ್ಪ ನಾನು ಹೇಳುವುದನ್ನು ಕೇಳಿ. ನೀವು ನಿಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ಶ್ರೀಯುತ ಮಧುಸೂಧನ್‌ರವರೆ, ತಾವು ಸಹ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಇದನ್ನು ಒಂದು Independent Investigation Authority ಗೆ ರೆಫರ್ ಮಾಡಲಿ.

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ಬಜೆಟ್ ಮೇಲೆ ಮಾತನಾಡುವಾಗ ಯಾವ ವಿಷಯನ್ನಾದರೂ ಮಾತನಾಡಬಹುದು ಎಂದು ಸ್ವಾಭಾವಿಕವಾಗಿ ನಾವೆಲ್ಲರೂ ಒಪ್ಪಿರುವಂತಹದ್ದಾಗಿದ್ದು, ಅವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತಾಪ ಮಾಡುವಂತಹ ಅಧಿಕಾರ

ಅವರಿಗಿದೆ. ಪ್ರಸ್ತಾಪ ಮಾಡಿದ ಮೇಲೆ ಅದು ಹೀಗೆಯೇ ಇರಬೇಕು, ಹಾಗೆಯೇ ಇರಬೇಕೆಂದು ಹೇಳುವಂತಹ ಅಧಿಕಾರ ನನಗೂ ಇಲ್ಲ, ನಿಮಗೂ ಇಲ್ಲ. ಒಂದೇ ಒಂದು ವಿಚಾರ ಎಂದರೆ ಸದನದ ಗಾಂಭೀರ್ಯತೆಗೆ ಮೀರದ ಹಾಗಿರಬೇಕೆಂದು ನಾನು ಹೇಳಬಲ್ಲೆ. **ಮತ್ತೆ ಯಾರದ್ದಾದರೂ ಹೆಸರುಗಳನ್ನು ಅವರು ತೆಗೆದುಕೊಂಡಿದ್ದರೆ ಅದನ್ನು ನಾನು ಕಡತದಿಂದ ತೆಗೆಸಿ ಹಾಕಿಸುತ್ತೇನೆ ಅಷ್ಟೆ**. ಅದನ್ನು ಬಿಟ್ಟು . . .

(ಗೊಂದಲ)

ನಾನು ಪೂರ್ಣ ಹೇಳುವುದನ್ನು ಕೇಳಿ. ದಯವಿಟ್ಟು ಕುಳಿತುಕೊಳ್ಳಿ. ಎರಡನೆಯದಾಗಿ, ಈಗ ಯಾವುದೋ ವರದಿ ಎಂದು ಬಂದಿದ್ದರೆ, ಆ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದ್ದರೆ, ಆ ವರದಿಯನ್ನು ಸರ್ಕಾರ ಒಪ್ಪಿದರೆ, ಆ ವರದಿಯ ಬಗ್ಗೆ ಚರ್ಚೆ. ಸರ್ಕಾರ ಆ ವರದಿಯನ್ನು ರಿಜೆಕ್ಟ್ ಮಾಡಿದ್ದರೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ನಾನು ಹೇಳುವುದನ್ನು ಸ್ವಲ್ಪ ಕೇಳಿ. ಯಾವುದೇ ವರದಿಗಳು ಸರ್ಕಾರಕ್ಕೆ ಬಂದಿದ್ದರೆ, ತನಿಖೆಯ ಆಯೋಗದ ಯಾವುದಾದರೂ ವರದಿಗಳು ಅಧಿಕಾರಿಗಳಿಂದ ಬಂದಿದ್ದರೆ, ಆ ವರದಿಯನ್ನು ಸರ್ಕಾರ ಒಪ್ಪಿಕೊಂಡರೆ, ಅದರ ಮೇಲೆ ಕ್ರಮವಾಗುತ್ತದೆ. ಸದನ ನಡೆಯುತ್ತಿದ್ದರೆ, ಸದನದಲ್ಲಿ ಆ ವಿಚಾರ ಪ್ರಸ್ತಾಪವಾಗುತ್ತದೆ. ಸರ್ಕಾರ ಅದನ್ನು ಒಪ್ಪಿಕೊಳ್ಳದೆ ಹೋದರೆ ಅದು ಅಲ್ಲಿಯೇ ರಿಜೆಕ್ಟ್ ಆಗುತ್ತದೆ. ಆದ್ದರಿಂದ, ಈ ಎಲ್ಲಾ ಹಿನ್ನೆಲೆಗಳಲ್ಲಿ ಇದರ ಬಗ್ಗೆ ಹಿಂದೆ-ಮುಂದೆ ಪೂರ್ಣವಾಗಿ ಗೊತ್ತಿಲ್ಲದೆ ನಾನು ಕೇವಲ ಕಾನೂನನ್ನು ಮಾತ್ರ ಹೇಳುತ್ತಿದ್ದೇನೆ. ಹಾಗಾಗಿ, ಶ್ರೀಯುತ ಮಧುಸೂಧನ್‌ರವರು ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಆ ವಿಚಾರ ನನಗೆ ಪೂರ್ಣವಾಗಿ ಗೊತ್ತಿಲ್ಲ. ಅವರು ಈ ವಿಚಾರವನ್ನು ಪ್ರಸ್ತಾಪ ಮಾಡುವಾಗ ನಾನು ಸದನದಲ್ಲಿ ಇರಲಿಲ್ಲ. ಆದ್ದರಿಂದ, ಈಗ ಮಾನ್ಯ ಸದಸ್ಯರ ಸಮಯ ಮುಗಿದಿರುವುದರಿಂದ ತಮ್ಮ ಚರ್ಚೆಯನ್ನು ಮುಗಿಸಬೇಕಾಗಿ ಕೋರುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಈ ವರದಿಯನ್ನು ತೋರಿಸಲಿಕ್ಕೆಂದು ಮಾನ್ಯ ಸದಸ್ಯರು ತಂದಿದ್ದಾರೆ. ಈ ವರದಿಯ ಗತಿ ಏನಾಗಿದೆ?

**ಸಭಾಪತಿಯವರು:-** ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎಂದು ಕೇಳೋಣ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಪ್ರಾದೇಶಿಕ ಆಯುಕ್ತರು ಇದರ ಬಗ್ಗೆ ವಿಚಾರಣೆ ಮಾಡಿ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಇದರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ, ಸರ್ಕಾರ ಈ ವರದಿಯನ್ನು ಒಪ್ಪಿದೆಯೋ ಇಲ್ಲವೋ ದಯಮಾಡಿ ತಿಳಿಸಬೇಕು.

**ಸಭಾಪತಿಯವರು:-** ಈ ವಿಚಾರವಾಗಿ ಸಭಾನಾಯಕರನ್ನು ಕೇಳೋಣ.

(ಗೊಂದಲ)

**ಶ್ರೀ ಗೋ. ಮಧುಸೂಧನ್:-** ಮಾನ್ಯ ಸಭಾಪತಿಯವರೆ, ಇದು ಇಲಾಖಾ ತನಿಖೆಯಾಗಿದೆ. ಸರ್ಕಾರ ಮಾಡಿಸಿರುವ ತನಿಖೆಯಲ್ಲ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, it has become the property of this House.

**ಶ್ರೀ ವಿ. ಸೋಮಣ್ಣ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಸದಸ್ಯರಾದ ಶ್ರೀಯುತ ಗೋ. ಮಧುಸೂಧನ್‌ರವರು ಈ ಸದನದಲ್ಲಿ ಅವರ ಮೈಸೂರು ಜಿಲ್ಲೆಗೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಒಂದು enquiry ಯನ್ನು ಸಂಬಂಧಪಟ್ಟ ಸಚಿವರು constitute ಮಾಡಿದ್ದಾರೆ. ಇದರ ಬಗ್ಗೆ ವರದಿಯನ್ನು ಕೊಡಲಿಕ್ಕೆ ಸರ್ಕಾರ ಯಾರಿಗೆ ನೇಮಕ ಮಾಡಿರುತ್ತದೆ, ಅಂತಹವರಿಗೆ ತನಿಖೆ

ಮಾಡಿ, ಅದರ ವಿವರಗಳನ್ನು ವಿವರ ಮೂಲಕ ಕೊಡಿ ಎಂದು ಹೇಳಿರುತ್ತಾರೆ. ಆ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೋ ಇಲ್ಲವೋ ಅದರ ಮಾಹಿತಿ ನನ್ನ ಹತ್ತಿರ ಇಲ್ಲ. ಆದರೆ, ಸನ್ಮಾನ್ಯ ಹಿರಿಯ ಸದಸ್ಯರಾದ ಶ್ರೀಯುತ ಗೋ. ಮಧುಸೂಧನ್‌ರವರು ಅದನ್ನು ಸರ್ಕಾರದ ಗಮನಕ್ಕೂ ಕೂಡ ತಂದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಒಂದು ವಿಚಾರ ಹೇಳುವುದಾದರೆ, ಶ್ರೀಯುತ ಬಸವರಾಜ ಹೊರಟ್ಟಿಯವರು ಇರಬಹುದು, ಶ್ರೀಯುತ ಮರಿತಿಬ್ಬೇಗೌಡರವರು ಇರಬಹುದು, ಶ್ರೀಯುತ ಪುಟ್ಟಣ್ಣನವರು ಇರಬಹುದು. ಅವರುಗಳು ಈ ವಿಚಾರವಾಗಿ ಕೇಳುವುದರಲ್ಲಿ ಅರ್ಥವೂ ಸಹ ಇದೆ. ಆದ್ದರಿಂದ, ನಾನು ಈ ಸದನದಲ್ಲಿ ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ ಈ ವರದಿ ಸರ್ಕಾರಕ್ಕೆ ಬಂದಿದೆಯೋ ಇಲ್ಲವೋ ಎನ್ನುವ ಬಗ್ಗೆ ನಮಗೆ ಮಾಹಿತಿ ಇಲ್ಲ. ಈ ಕುರಿತು ಮಾಹಿತಿ ಇಲ್ಲದಿರುವುದರಿಂದ ಇದರ ಬಗ್ಗೆ ಈ ಮಾಹಿತಿಯನ್ನು ಪಡೆದು ಏನಾಗಿದೆ ಎಂದು ತಿಳಿದುಕೊಂಡು ನಾಳೆ ಬೆಳಿಗ್ಗೆ ಈ ಸದನಕ್ಕೆ ತಿಳಿಸುತ್ತೇನೆ. ಸರ್ಕಾರ ಅಂದರೆ ಅದು ಯಾರದೋ ಮನೆಯ ಸ್ವತ್ತು ಅಲ್ಲ. ಇದು ಯಾರದೇ ಮನೆಯ ಸ್ವತ್ತು ಅಲ್ಲ. ಅದಕ್ಕಿಂತ ಹೆಚ್ಚಾಗಿ, ಇದಕ್ಕೆ ತನ್ನದೇ ಆದ ಒಂದು sanctity ಇದೆ. ಒಬ್ಬ ವಿಚಾರಣಾ ಅಧಿಕಾರಿಯಾಗಿರುವ ರೀಜನಲ್ ಕಮೀಷನರ್ ಅವರು ಕೊಟ್ಟಿದ್ದಾರೆಯೋ, ಕೊಟ್ಟಿದ್ದರೆ ಅವರು ಯಾರಿಗೆ ಕೊಟ್ಟಿದ್ದಾರೆ, ಇದನ್ನು ಸರ್ಕಾರಕ್ಕೆ ಕೊಟ್ಟಿದ್ದಾರಾ? ಇಲ್ಲವೇ ಸರ್ಕಾರಕ್ಕೆ ಕೊಡದೆಯೇ ಇವರ ಕೈಗೆ ಕೊಟ್ಟಿದ್ದಾರಾ ಎಂಬ ಬಗ್ಗೆ ವಿಚಾರ ಮಾಬೇಕಾಗಿದೆ. ಈ ಕುರಿತು ಸರ್ಕಾರದಲ್ಲಿ ಏನಾಗಿದೆ ಎಂದು ತಿಳಿದುಕೊಂಡು ನಾಳೆ ಬೆಳಿಗ್ಗೆ ಈ ಸದನಕ್ಕೆ ಮಾಹಿತಿ ಜೊತೆಯಲ್ಲಿ ಇದರ ಉದ್ದೇಶ ಏನು ಎತ್ತ ಎಂಬುದನ್ನು ಚರ್ಚೆ ಮಾಡೋಣ. ಮಾನ್ಯ ಸಭಾಪತಿಯವರೆ ತಾವು ಸದಸ್ಯರಿಗೆ ಸೂಚನೆಯನ್ನು ಕೊಡಿ. ದಯವಿಟ್ಟು ಈಗ ಬೇರೆ ವಿಚಾರಗಳನ್ನು ತೆಗೆದುಕೊಳ್ಳಿ. ನಾಳೆ ಬೆಳಿಗ್ಗೆ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಮೊದಲು ಈ ಮಾಹಿತಿಯನ್ನು ಪಡೆದು ನಂತರ ಮಾತನಾಡೋಣ.

**ಸಭಾಪತಿಯವರು:–** ಬೇರೆ ಏನಾದರೂ ಮಾತನಾಡುವ ಹಾಗಿದ್ದರೆ ಮಾತನಾಡಿ.

**ಶ್ರೀ ಬಸವರಾಜ ಹೊರಟ್ಟಿ:-** ನಾನು ಬಿಡುವುದಿಲ್ಲ. ಈ ವರದಿಯನ್ನು ಸರ್ಕಾರ ಮಂಡನೆ ಮಾಡಬೇಕು. ಮಾನ್ಯ ಮಧುಸೂದನ್ ಅವರು ಈ ವರದಿಯನ್ನು ಇಲ್ಲಿ ಹೇಗೆ ಕೊಟ್ಟರು? ಆ ರೀತಿ ಮಾಡುವುದಕ್ಕೆ ಬರುತ್ತದೆಯೇ?

(ಗೊಂದಲ)

(ಹಲವಾರು ಜನ ಸದಸ್ಯರು ಒಮ್ಮೆಲೆ ಮಾತನಾಡತೊಡಗಿದರು)

**ಸಭಾಪತಿಯವರು:-** ಮಾಡಕೂಡದು. ಆ ರೀತಿ ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಈ ಕುರಿತು ವಿಚಾರಣೆ ಮಾಡುವುದಕ್ಕೆ ರೀಜನಲ್ ಕಮೀಷನರಿಗೆ ವಹಿಸಿದ್ದಾರೆ. ರೀಜನಲ್ ಕಮೀಷನರ್ ಅವರು ವಿಚಾರಣೆಯನ್ನು ಮಾಡಿ ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ಮಾನ್ಯ ಸದಸ್ಯರಾದ ಮಧುಸೂದನ್ ಅವರ ಹತ್ತಿರ ಇದೆ. ಅವರು ನೇರವಾಗಿ ಅದನ್ನು ಸರ್ಕಾರಕ್ಕೆ submit ಮಾಡಬೇಕಾಗುತ್ತದೆ. ಸರ್ಕಾರ ಅದಕ್ಕೆ ತನ್ನ ಒಪ್ಪಿಗೆಯನ್ನು ನೀಡಿದ ಮೇಲೆ ಆಗ ಅದು public document ಆಗುತ್ತದೆ. ಆಗ ಎಲ್ಲರಿಗೂ ಈ ದಾಖಲೆ ಸಿಗುತ್ತದೆ. ಈ ರಾಜ್ಯದ ಮುಖ್ಯಮಂತ್ರಿಗಳು ವಿಚಾರಣೆ ಮಾಡಿ ಆ ವರದಿಯನ್ನು ಮಾನ್ಯ ಮಧುಸೂದನ್ ಅವರಿಗೆ ಕೊಡಿ ಎಂದು ಹೇಳಿದ್ದಾರಾ? ಅವರು ಅದನ್ನು ಸರ್ಕಾರಕ್ಕೆ submit ಮಾಡಬೇಕಾಗುತ್ತದೆ. ಸರ್ಕಾರ ಅದನ್ನು accept ಮಾಡಿದರೆ it will become a public document, then we can have a copy of it.

**ಶ್ರೀ ಬಸವರಾಜ ಹೊರಟ್ಟಿ:-** ಈಗ ಅದು ಈ ಸದನದ ಸ್ವತ್ತು. ನಾನು principle ಮೇಲೆಯೇ ಮಾತನಾಡುತ್ತಿದ್ದೇನೆ. ಈ ಸದನದಲ್ಲಿ ಅದನ್ನು ಮಂಡಿಸಿದ ನಂತರ ಅದು ಸದನದ ಸ್ವತ್ತಾಗುತ್ತದೆ. ಸರ್ಕಾರ ರಚನೆ ಮಾಡಿದಂತಹ ಮತ್ತು ಅವರು ಯಾರನ್ನು ವಿಚಾರಣಾಧಿಕಾರಿಯವರನ್ನಾಗಿ ನೇಮಕ ಮಾಡಿರುತ್ತಾರೆ ಅವರು ಸರ್ಕಾರಕ್ಕೆ ಆ ವರದಿಯನ್ನು

ನೀಡಬೇಕಾಗುತ್ತದೆ. ಸರ್ಕಾರದಿಂದ ಈ ವರದಿ ಬರಬೇಕಾಗುತ್ತದೆ. ಆದರೆ ನೇರವಾಗಿ ಆ ವರದಿಯನ್ನು ಇವರಿಗೆ ನೀಡಿದ್ದೇ ಆದರೆ ಅದು ಅಪರಾಧವಾಗುತ್ತದೆ. ಇವರೂ ಕೂಡ ಅಪರಾಧಿಗಳು. ಇವರೂ ಕೂಡ ಅಪರಾಧವನ್ನು ಮಾಡಿದ ಹಾಗಾಗುತ್ತದೆ. ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟನೆ ಬೇಕು. ಸಭಾ ನಾಯಕರಾದ ಮಾನ್ಯ ಸೋಮಣ್ಣನವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ಸರ್ಕಾರದ confidential document ಆಗುತ್ತದೆ. ಅದನ್ನು ಇವರು ಹೇಗೆ ತಂದರು. ಇವರು ಎಲ್ಲಿ ಬೇಕಾದರೂ ಹೋಗಿ ಈ ವರದಿಯನ್ನು ತೆಗೆದುಕೊಂಡು ಬರುವುದಕ್ಕೆ ಆಗುತ್ತದೆಯೇ? ಅಲ್ಲಿಯವರೆಗೆ ನಾನು ಬಿಡುವುದಿಲ್ಲ. ಇದಕ್ಕೆ ಸ್ಪಷ್ಟತೆ ಬೇಕು.

**ಶ್ರೀ ಎಸ್.ಆರ್. ಪಾಟೀಲ್:-** ಅದು ಈ ಸದನದ ಸ್ವತ್ತು ಆಗಿದೆ.

**ಶ್ರೀ ಅಪ್ಪಚ್ಚು ರಂಜನ್:-** ಅದು ಈ ಸದನದ ಆಸ್ತಿಯಾಗುವುದಿಲ್ಲ. ನೀವು ಅನುಮತಿಯನ್ನು ಕೊಟ್ಟರೆ ಮಾತ್ರ ಅದು ಈ ಸದನದ ಆಸ್ತಿಯಾಗಿದೆ.

(ಗೊಂದಲ)

(ಹಲವು ಜನ ಸದಸ್ಯರು ಒಮ್ಮೆಲೆ ಮಾತನಾಡತೊಡಗಿದರು)

**ಶ್ರೀ ಎಸ್.ಆರ್. ಪಾಟೀಲ್:-** ಅಧಿಕಾರಿಗಳ ಮೇಲೆ ಆಪಾದನೆ ಇದೆ. ಇಲ್ಲಿ ಇಲ್ಲಿ 10,000 ಕೋಟಿ ಮೌಲ್ಯದ ಅವ್ಯವಹಾರ ನಡೆದಿದೆ ಎಂದು ಆಪಾದನೆ ಇದೆ. Now it has become proper of the House.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಮಾನ್ಯ ಸಭಾ ನಾಯಕರು ಏನು ಹೇಳುತ್ತಿದ್ದಾರೆ ಕೇಳೋಣ. ಸಹಕಾರ ಮಾಡಿ.

**ಶ್ರೀ ಎಸ್.ಆರ್. ಪಾಟೀಲ್:-** ಇಲ್ಲಿ ಏನು ಹೇಳಿದರು ಅವರು. It is a report submitted by the Regional Commissioner, ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದರು. ಇದರಲ್ಲಿ 10,000 ಕೋಟಿ

ರೂಪಾಯಿಯ ಅವ್ಯವಹಾರ ಆಗಿದೆ ಇದರಲ್ಲಿ ಆ ಅಧಿಕಾರಿಯ ಹೆಸರು ಮಾತ್ರ ಇದೆ. ಯಾರು ಇದರ ಉದ್ದೇಶದ ಹಿಂದೆ ಇದ್ದಾರೋ, ಈ ಹಿನ್ನೆಲೆಯಲ್ಲಿ ಇದ್ದಾ ರೋ ಆ ರಾಜಕಾರಣಿಯ ಹೆಸರು ಇದರಲ್ಲಿ ಇಲ್ಲ. ಇದರಲ್ಲಿ ಅಧಿಕಾರಿಗಳ ಹೆಸರು ಮಾತ್ರ ಇದೆ. This is the report submitted by the Regional Commissioner, ಇದು ನನ್ನ ಬಳಿ ಇದೆ ಎಂದು ಈಗಾಗಲೇ ಅದನ್ನು ಮಾನ್ಯ ಸದಸ್ಯರು exhibit ಮಾಡಿದ್ದಾರೆ. Now it has become property of the House. ನೀವು ಈಗ ಹೇಳಬೇಕು. ಈ ವರದಿ ಸರ್ಕಾರದ ಮುಖಾಂತರ ಇವರಿಗೆ ಬಂತೋ ಇಲ್ಲವೇ ನೇರವಾಗಿ ಆ ಅಧಿಕಾರಿ ಇವರಿಗೆ ಕೊಟ್ಟಿದ್ದಾರೋ ಹೇಳಬೇಕು. ಇವತ್ತು ಅದು ಕೂಡ ಜಿಜ್ಞಾಸೆಯ ಪ್ರಶ್ನೆಯಾಗಿದೆ.

**ಸಭಾಪತಿಯವರು:–** ಮಾನ್ಯ ಸಭಾ ನಾಯಕರು ಏನು ಹೇಳುತ್ತಾರೋ ಕೇಳೋಣ.

**ಶ್ರೀ ಗೋ ಮಧುಸೂದನ್:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ.....

**ಶ್ರೀ ಬಸವರಾಜ ಹೊರಟ್ಟಿ:–** ಈ ವರದಿಯನ್ನು ಕೊಡುವುದಕ್ಕೆ ಇದನ್ನು ಹೇಗೆ ಕೊಡಬೇಕು ಎಲ್ಲಿ ಕೊಡಬೇಕು ಎಂಬುದಕ್ಕೆ principle ನಲ್ಲಿ ತನ್ನದೇ ಆದ ರೀತಿ ನೀತಿಗಳು ಇವೆ. ಅವರು ಆ ವರದಿಯನ್ನು ಮುಖ್ಯಕಾರ್ಯದರ್ಶಿಯವರಿಗೆ ನೀಡಬೇಕಾಗಿತ್ತು. ಒಂದು ವೇಳೆ ರೀಜನಲ್ ಕಮೀಷನರ್ ಅವರು ಏನಾದರೂ ಇವರಿಗೆ ಆ ವರದಿಯನ್ನು ಕೊಟ್ಟಿದ್ದಿದ್ದರೆ ಅವರನ್ನು ಇವತ್ತೇ suspend ಮಾಡಬೇಕಾಗಿತ್ತು. ಇಲ್ಲವೇ ಇದನ್ನೇನಾದರೂ ಕಳವು ಮಾಡಿಕೊಂಡು ಬಂದಿದ್ದರೆ, ಇವರು ಕಳವು ಮಾಡಿಕೊಂಡು ಬಂದಿದ್ದಾರೆಂದು ಇವರ ಮೇಲೆ ಚಾರ್ಜ್ ಮಾಡಬೇಕಾಗುತ್ತದೆ. ಎರಡರಲ್ಲಿ ಒಂದು ಆಗಬೇಕು. ಈ ವರದಿ ಸರ್ಕಾರದ ಸ್ವತ್ತಾಗಿದೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:–** ಇಬ್ಬಿಬ್ಬರು ಮಾತನಾಡಿದರೆ ಹೇಗೆ? ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:–** ಈ ಸದನಕ್ಕೆ ತನ್ನದೇ ಆದ ಘನತೆ ಗೌರವ ಇದೆ. ಈ ಇದನ್ನು ಸದನದ ಮುಂದೆ ಅವರು ಇಟ್ಟಾಗ, ಸದನಕ್ಕೆ ಅಂದರೆ ನಮಗೂ ಸಂಪೂರ್ಣವಾದ ಅಧಿಕಾರ ಇದೆ. ರಾಜಕಾರಣಿಗಳ ಹೆಸರು ಹೇಳಿ ಅಂದರೆ ಅವರು ಆ ಹೆಸರನ್ನು ಹೇಳುತ್ತಿಲ್ಲ. 10,000 ಕೋಟಿ ರೂಪಾಯಿಯನ್ನು ಒಬ್ಬ ಅಧಿಕಾರಿ ತಿನ್ನುವುದಕ್ಕೆ ಸಾಧ್ಯವಿದೆಯೇನು? ರಾಜಕಾರಣಿಗಳು ಇದರಲ್ಲಿ ಇದ್ದಾರೆಯೇ ಎಂದು ಎಲ್ಲರಿಗೂ ಸಂಶಯ ಬರುತ್ತಿದೆ. ಅದಕ್ಕೋಸ್ಕರ ಇದನ್ನು ಕ್ಲಿಯರ್ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಈ ವರದಿಯನ್ನು ನೀವು ಹೇಗೆ ಕೊಟ್ಟಿರಿ? ಆ ವರದಿ ನಿಮಗೆ ಹೇಗೆ ಬಂತು? ಅದು ಸೀಕ್ರೇಟ್ ದಾಖಲೆಯಾಗಿದೆ. ಸರ್ಕಾರ ನೀಡಿದ ವರದಿ ಆದರೆ ನಮಗೆ ಈ ರೀತಿಯಾಗಿ ಬರುತ್ತದೆ. ಹೀಗಿರುವಾಗ ಆ ವರದಿಯನ್ನು ಇವರು ಹೇಗೆ ತೆಗೆದುಕೊಂಡು ಬಂದರು? ಈ ವರದಿ ಇಲ್ಲಿಗೆ ಹೇಗೆ ಬಂತು ಈ ಕುರಿತು ಎಲ್ಲಾ ಸತ್ಯಾಂಶವನ್ನು ಸರ್ಕಾರ ಇಂದು ನಮಗೆ ಹೇಳಬೇಕಾಗಿದೆ. ಈ ಕುರಿತು ಸರ್ಕಾರ ನಮಗೆ ಹೇಳಲೇಬೇಕು. ನನ್ನ ಒತ್ತಾಯ ಇದೆ.

(ಈ ಹಂತದಲ್ಲಿ ಬೇರೆ ವರದಿ ದಾಖಲೆಯ ಪುಸ್ತಕವನ್ನು ತೋರಿಸಿದರು)

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ ಆ ವರದಿಯನ್ನು ಕೊಟ್ಟವನು ನಾನು. ಅದು ಯಾವ ರೀತಿ ಬಂತು ಎಂದು ಹೇಳುವುದಕ್ಕೆ ನನಗೆ ಅಧಿಕಾರ ಇದೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ನಾನು ಒಂದು ನಿಮಿಷ ಈ ಬಗ್ಗೆ ಮಾತನಾಡುತ್ತೇನೆ. ನಾನು ಮಾತನಾಡಿದ ಮೇಲೆ ತಾವು ಮಾತನಾಡಿ.

**ಶ್ರೀ ಗೋ ಮಧುಸೂದನ್:–** ಅದು ಆಗುವುದಿಲ್ಲ. ನಾನು ಈಲ್ಡ್ ಆಗಿಲ್ಲ. ನಾನು ಮಾತನಾಡಿದ ಮೇಲೆ ತಾವು ಮಾತನಾಡಿ.

**ಶ್ರೀ ಪುಟ್ಟಣ್ಣ:-** ಅವರು ನಿನ್ನೆ ವರದಿಯನ್ನು ಕೊಟ್ಟಿದ್ದಾರೆಂದು ಹೇಳಿದರು. ನಿನ್ನೆ ಅವರು ಕೊಟ್ಟಿದ್ದರೆ, ಇವರ ಕೈಗೆ ಹೇಗೆ ಇವತ್ತು ಈ ವರದಿ ಬಂತು? ಕೆಲವು ಸೆಕೆಂಡ್‌ನಲ್ಲಿ ಮುಗಿಸುತ್ತೇನೆ. ಜಾತ್ಯಾತೀತವಾಗಿ ಪಕ್ಷಾತೀತವಾಗಿ ಇದರಲ್ಲಿ ರಾಜಕಾರಣಿಗಳು ಇದ್ದಾರೆಂದು ಹೇಳಿದರು. ನಾನು ಕೈಮುಗಿದು ತಮ್ಮನ್ನು ಕೇಳುತ್ತಿದ್ದೇನೆ. ಕಡತವನ್ನು ಸಬ್‌ಮಿಟ್ ಮಾಡಿದ್ದಾರೆ. ಅವರು ಹೇಳಿದ್ದಾರೆ. ಇದು ಈ ಸದನದ ವರದಿ ಎಂದು ಹೇಳಿದರು. ಯಾವ ರಾಜಕಾರಣಿ ಎಂಬುದನ್ನು ಹೇಳಬೇಕು. ಒಬ್ಬ ಅಧಿಕಾರಿಯ ಹೆಸರನ್ನು ಮಾತ್ರ ಹೇಳುತ್ತಾರೆ. 10,000 ಕೋಟಿ ರೂಪಾಯಿಯ ಹಣವನ್ನು quote ಮಾಡುತ್ತಿದ್ದಾರೆ. ತಾವು ಈ ಸದನದ ಗೌರವವನ್ನು ಕಾಪಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್:-** 10,000 ಕೋಟಿ ರೂಪಾಯಿಯ ಹಣ ಎಂದರೆ it is really biggest scandal of this Government. ರಾಜ್ಯದ ಬಹು ದೊಡ್ಡ scandal ಆಗಿದೆ. When it was submitted and how it has come to member.

**ಶ್ರೀ ವಿ. ಸೋಮಣ್ಣ:-** ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಯಾರನ್ನೂ ರಕ್ಷಣೆ ಮಾಡಬೇಕೆಂಬ ಉದ್ದೇಶ ಇಲ್ಲ. ತಪ್ಪಿತಸ್ಥರು ಯಾರೇ ಇದ್ದರೂ ಅವರನ್ನು shield ಮಾಡಬೇಕೆಂಬ ಉದ್ದೇಶ ಇಲ್ಲ. ತಪ್ಪಿತಸ್ಥರು ಯಾರೇ ಆಗಿದ್ದರೂ ತಪ್ಪಿತಸ್ಥರೇ. ಈ ಸದನ ತನ್ನದೇ ಆದಂತಹ ನೀತಿ ನಿಯಮಗಳು ಇವೆ. ಸರ್ಕಾರದ ಮಂತ್ರಿಗಳು ವಿಚಾರಣೆಯನ್ನು ಮಾಡುವುದಕ್ಕೆ ಅವರಿಗೆ ವಹಿಸಿರುತ್ತಾರೆ. ಅದು ಆಗಿರುತ್ತದೆ. ಆ ವರದಿ ರೀಜನಲ್ ಕಮೀಷನರ್ ಅವರಿಂದ ಸರ್ಕಾರಕ್ಕೆ ಬಂದು, ಅಲ್ಲಿಂದ ನಮ್ಮ ಕೈಗೆ ಸೇರುವುದೋ, ಮತ್ತೊಂದೋ, ಅದಕ್ಕೆ ತನ್ನದೇ ಆದ ರೀತಿ ನೀತಿ, ವ್ಯವಸ್ಥೆ ಇದೆ. ಮಾನ್ಯ ಮಧುಸೂದನ್ ಅವರು ಸಕಾಲ ವ್ಯವಸ್ಥೆಯ ಅಡಿಯಲ್ಲಿ ಆಯವ್ಯಯದ ಮೇಲೆ ಮಾತನಾಡುವಾಗ ಅವರು ಈ ಬಗ್ಗೆ ಇಲ್ಲಿ ಹೇಳುವುದಕ್ಕಿಂತ ಮೊದಲು ತಮ್ಮ ಅನುಮತಿಯನ್ನಾದರೂ ಪಡೆಯಬಹುದಿತ್ತು. ಇದು ಹೇಗೆ ಬಂತು ಎಂದು ಹೇಳಬಹುದಿತ್ತು. ಇದು ಈ

ರೀತಿ ಇದೆ ಒಂದು ವರದಿ ಇದೆ ಅದರಲ್ಲಿ ಈ ರೀತಿ ಇದೆ ಎಂದು ಅದರ ಆಗು ಹೋಗುಗಳನ್ನು ಹೇಳಬಹುದಿತ್ತು. ಸರ್ಕಾರಕ್ಕೂ ಯಾರನ್ನೂ shield ಮಾಡಬೇಕೆಂಬ ಉದ್ದೇಶ ನಮಗೆ ಏನೂ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಪುಟ್ಟಣ್ಣನವರು ಮಾನ್ಯ ಹೊರಟ್ಟಿಯವರು, ಮಾನ್ಯ ಮರಿತಿಬ್ಬೇಗೌಡ ಅವರು ಇರಬಹುದು. ನಾನು ತಕ್ಷಣವೇ ಮುಖ್ಯ ಕಾರ್ಯದರ್ಶಿಯವರನ್ನು ಸಂಪರ್ಕ ಮಾಡಿ ಮಾಹಿತಿಯನ್ನು ಪಡೆದುಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ಮಾನ್ಯ ಕಂದಾಯ ಸಚಿವರನ್ನೂ ಕೂಡ ಸಂಪರ್ಕ ಮಾಡಿ ಮಾತನಾಡುತ್ತೇನೆ. ಮಾನ್ಯ ಕಂದಾಯ ಸಚಿವರಿಗೆ ತಾವೂ ಕೂಡ ಒಂದು ಮಾತನ್ನು ಹೇಳಿ. ನಾನು ಕೂಡ ವಿನಂತಿ ಮಾಡುತ್ತೇನೆ. ಇದರ ಬಗ್ಗೆ ಮಾತನಾಡೋಣ. ಈ ಸದನದ ಚೌಕಟ್ಟಿನಲ್ಲಿ ನಾವು ಕೆಲಸ ಮಾಡಬೇಕಾಗಿದೆ. ತಾವು ಈಗ ಆಯವ್ಯಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಈಗ ಇದು ಆಗಲಿ. ನಾಳೆ ಬೆಳಿಗ್ಗೆ ಈ ಬಗ್ಗೆ ಕೂಲಂಕಷವಾಗಿ ಮಾತನಾಡೋಣ. ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ತಾವು ರೀತಿ ಅದಕ್ಕೆ ಅನುಮತಿಯನ್ನು ಕೊಡುತ್ತೀರೋ ಅದರಂತೆ ಮಾಡೋಣ ಎಂದು ಹೇಳಬಯಸುತ್ತೇನೆ.

**ಸಭಾಪತಿಯವರು:–** ಇದು ಹಿರಿಯ ಸದಸ್ಯರು ಇರತಕ್ಕಂಥಹ ಸದನ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಮಧುಸೂದನ್ ಅವರು ಏನೋ ಮಾತನಾಡಬೇಕೆಂದು ಇದ್ದರು.

**ಸಭಾಪತಿಯವರು:–** ನಾನು ಮಾತನಾಡುವುದೇ ಬೇಡವೇ? ತಾವೆಲ್ಲರೂ ಮಾತನಾಡಿದ್ದೀರಿ ಅದಕ್ಕೆ ನಾನು ruling ಕೊಡುವುದು ಬೇಡವೇ? ಇದು ಎಲ್ಲಾ ಹಿರಿಯ ಸದಸ್ಯರಿರತಕ್ಕಂಥ ಸದನ. ನಮ್ಮ ಸದನದಲ್ಲಿ ಕೆಲವು ರೀತಿ ರಿವಾಜುಗಳು ಇವೆ ಅದರಂತೆ ಈ ಸದನ ನಡೆದುಕೊಂಡು ಬಂದಿದೆ. ನಾನು ಕೆಲವು ಸಂಗತಿಗಳನ್ನು ನೆನಪು ಮಾಡಿಕೊಡುವುದಕ್ಕೆ ಇಷ್ಟಪಡುತ್ತೇನೆ. ನಿರ್ದಿಷ್ಟವಾಗಿ ಮಾನ್ಯ ಬಸವರಾಜ ಹೊರಟ್ಟಿಯವರಿಗೆ ನೆನಪು ಮಾಡಿಕೊಡುತ್ತೇನೆ. ಅವರು ಕಳೆದ 32 ವರ್ಷಗಳಿಂದ ಈ ಸದನದಲ್ಲಿ

ಸದಸ್ಯರಾಗಿದ್ದಾರೆ. ಬಹಳ ದೊಡ್ಡ ದೊಡ್ಡ ವ್ಯಕ್ತಿಗಳು ಈ ಸದನದಲ್ಲಿ ಸದಸ್ಯರಾಗಿ ಹೋಗಿದ್ದಾರೆ. ಅವರುಗಳ ಹೆಸರುಗಳನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ಮೇಲೆ ಕುಳಿತುಕೊಂಡು ನೋಡುತ್ತಿದ್ದೆ. ನನಗೆ ನೆನಪು ಇದ್ದ ಹಾಗೆ ಈ ಬ್ರೀಫ್‌ಕೇಸಿನಲ್ಲಿ ಇಂತಹ ವಿಷಯ ಇದೆ ಎಂದು ಹೇಳಿದಾಗ ಹೇಳಿ, ಹೇಳಿ ಎಂದು ಕೇಳುತ್ತಿದ್ದರು. ಹೇಳಿ ಬಿಡಲೇ ಹುಷಾರು ಹೇಳಿಬಿಡಲೇ ಎಂದು ಹೇಳಿ ನಂತರ ಈಗ ಹೇಳುವುದಿಲ್ಲ ಎಂದು ಹೇಳುತ್ತಿದ್ದರು. ಈ ಬ್ರೀಫ್‌ಕೇಸಿನಲ್ಲಿ ಏನು ಇದೆ ಗೊತ್ತಾ ವಾಚ್ ಇದೆ ತೋರಿಸಿಬಿಡಲೇ ಎಂದು ಹೇಳಿದರು. ಆಗ ಬೇರೆಯವರು ತೋರಿಸಿ ತೋರಿಸಿ ಎಂದು ಕೇಳಿದರು. ಆಗ ತೋರಿಸಬೇಕು ಎಂದು ಆ ಸದನದಲ್ಲಿ ಇದ್ದಂತಹ ಮಂತ್ರಿಗಳು ಮತ್ತು ಸದಸ್ಯರು ಗಲಾಟೆ ಮಾಡಿದಾಗ ಆವತ್ತು ಈ ಸದನದಲ್ಲಿ ಸಭಾಪತಿಯಾಗಿದ್ದಂತಹವರು ಒಂದು ರೂಲಿಂಗ್ ಅನ್ನು ಕೊಟ್ಟಿದ್ದು ನೆನಪು ಇದೆ. ಅವರು ತೋರಿಸುವುದು ಬಿಡುವುದು ಸದಸ್ಯರ ಹಕ್ಕು. ಮತ್ತು ಇದು ಎಲ್ಲಿಂದ ಬಂತು ಹೇಗೆ ಬಂತು ಎಂದು ಕೇಳುವುದು ಅವರ ಹಕ್ಕು. ಹಾಗಾಗಿ ಅವರು ತಂದಿದ್ದಾರೆ. ಈ ಸದನದ ಮುಂದೆ ಇಟ್ಟಿದ್ದಾರೆ. ಅದರೊಳಗೆ ಏನು ಇದೆ ಏನು ಇಲ್ಲವೆಂದು ನಮಗೆ ಗೊತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ನಾವು ಸಣ್ಣ ಸಣ್ಣ ಹುಡುಗರಿದ್ದಾಗ, ಹಾವಾಡಿಗರು ಹಾವು ತೋರಿಸುತ್ತೇನೆ ಹಾವು ತೋರಿಸುತ್ತೇನೆ ಎಂದು ಹೇಳಿ ಕಡೆಗೆ ಏನೂ ತೋರಿಸುವುದಿಲ್ಲ. ಇದು ಹಾಗೂ ನಡೆಯುತ್ತದೆ.

(8–30 ಘಂಟೆ)

ನಾವು ಸಣ್ಣವರು ಇದ್ದಾಗ ಹಾವಾಡಿಗರು ಹಾವು ಹಾಡಿಸುವಂತಹ ಸಮಯದಲ್ಲಿ ಇದಕ್ಕಿಂತಲೂ ಹೆಚ್ಚು ದೊಡ್ಡ ಹಾವು ಇದೆ ಅದನ್ನು ತೋರಿಸುತ್ತೇನೆ ಎಂದು ಹೇಳಿ ಕೊನೆಗೆ ಏನು ತೋರಿಸುವುದಿಲ್ಲ. ಆ ರೀತಿಯೂ ನಡೆಯುತ್ತದೆ. ಆ ರೀತಿ ತಮ್ಮ ತಮ್ಮ ವಾದಗಳನ್ನು ಮಂಡಿಸುವ ಅಧಿಕಾರ ಎಲ್ಲರಿಗೂ ಇದೆ. ಆದರೆ ಇವತ್ತು ಸದನದಲ್ಲಿ ಇಷ್ಟೆಲ್ಲಾ ಚರ್ಚೆಯ ಹಿನ್ನೆಲೆಯಲ್ಲಿ ಸಭಾ ನಾಯಕರು ಸಭೆಯಲ್ಲಿ ಒಂದು ಮಾತನ್ನು ಹೇಳಿದರು.

ನಾನು ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಹತ್ತಿರ ಮಾತನಾಡಿ. ನಾನೇ ನಾಳೆ ಬೆಳಿಗ್ಗೆ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆ ಹಿನ್ನೆಲೆಯಲ್ಲಿ ಈ ವಿಷಯದ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸೋಣ. ಮತ್ತೆ ಕೆಲವು ಸಂಗತಿಗಳು..

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ರೋಲೆಕ್ಸ್ ವಾಚ್‌ಗೂ ಈ ಘಟನೆಗೂ ಬಹಳ ಅಂತರ ಇದೆ. ಅದರ ಬಗ್ಗೆ . . .

**ಸಭಾಪತಿಯವರು:-** ಇಲ್ಲ. ನಾನು ಹೆಸರು ಹೇಳುತ್ತಿಲ್ಲ ಅಂತ. ರೊಲೆಕ್ಸ್ ವಾಚ್ ಹಗರಣ ನಡೆದಾಗ ಏನು ನಡೆಯಿತು ಎನ್ನುವುದನ್ನು ಮಾನ್ಯ ಬಸವರಾಜ ಹೊರಟ್ಟಿಯವರು ನೆನಪು ಮಾಡಿಕೊಂಡರೆ ಸಾಕು. ಬಾಕಿ ಎಲ್ಲಾ ಗೊತ್ತಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಬ್ಯಾಗ್‌ನಲ್ಲಿ ವಾಚ್ ಇದೆ it is a private property. Member might have brought that watch or anything. ಇಲ್ಲಿ ಏನು ಹೇಳುತ್ತಾರೆ Regional Commissioner ರವರನ್ನು ಅಪಾಯಿಂಟ್ ಮಾಡಿದ್ದಾರೆಂದು. ಆ Regional Commissioner ನವರೇ ರಿಪೋರ್ಟ್ ಕೊಟ್ಟಿದ್ದಾರೆ. This report is submitted by the Regional Commissioner ಅಲ್ಲಿ ಅದೊಂದು ಖಾಸಗಿ ಸ್ವತ್ತು. ಇಲ್ಲಿ ವಾಚ್ ಇದೆ. ಈ ಬ್ಯಾಗ್‌ನಲ್ಲಿ ವಾಚ್ ಇದೆ. Here it is my personal property. ನಾನು ಅದನ್ನು ತೋರಿಸಬಹುದು ಅಥವಾ ಬಿಡಬಹುದು. But. This is a

report, hence it is a public document. The State Government has appointed Regional Commissioner to enquire into the matter. ಅವರು ತನಿಖೆಯನ್ನು ಮಾಡಿದ್ದಾರೆ. 14 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಅವರು ಕೊಟ್ಟಿರುವಂತಹ ವರದಿ ನನ್ನ ಹತ್ತಿರ ಇದೆ, ಆ ವರದಿಯಲ್ಲಿ ಅಧಿಕಾರಿಗಳ ಮೇಲೆ ಅಪಾಧನೆ ಇದೆ. ಇಷ್ಟು ನಿಖರವಾಗಿ ಗಟ್ಟಿಯಾಗಿ ಹೇಳಿದ್ದಾರೆ. ಒಂದು ಸರ್ಕಾರಿ ವರದಿ, ಈ ಸದನದಲ್ಲಿ ಅವರು exhibt

ಮಾಡಿದ್ದಾರೆ. ವಾಚ್‌ಗೂ ಈ ವಿಷಯಕ್ಕೂ ಬಹಳ ಅಂತರ ಇದೆ. ಆ ವಾಚ್ ಪ್ರಕರಣ ಇದಕ್ಕೆ ruling applicable ಅಗುವುದಿಲ್ಲವೆಂದು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ತಾವು ಹೇಳಿದ ರೋಲೆಕ್ಸ್ ವಾಚ್ ಪ್ರಕರಣ ಬೇರೆ. ರೋಲೆಕ್ಸ್ ವಾಚ್‌ನ್ನು ಮಂತ್ರಿಗಳು ತೆಗೆದುಕೊಂಡು ಬಂದಿದ್ದರು. ಕೈಯಲ್ಲಿ ಕಟ್ಟಿಕೊಂಡಿದ್ದ ತಾವು ಹೇಳಿದ್ದು ಎಲ್ಲಾ ಸರಿಯಾಗಿದೆ. ಆ ಸಮಯದಲ್ಲಿ ನಾನು ಕೂಡ ಸದನದಲ್ಲಿದ್ದೆ.

**ಸಭಾಪತಿಯವರು:–** ಅಷ್ಟೇ ಅಲ್ಲ. ಮುಂದೆ ಏನು ನಡೆಯಿತು ಎನ್ನುವುದನ್ನು ಕೂಡ ಹೇಳುತ್ತೇನೆ. ನನಗನ ಹತ್ತಿರ ಕ್ಯಾಸೆಟ್ ಇದೆ, ಟೇಪ್ ರೆಕಾರ್ಡರ್ ತೆಗೆದುಕೊಂಡು ಬಂದಿದ್ದೇನೆ. I can replay ಎಂದು ಹೇಳಿದರು. ಆದರೆ ಅವರು replay ಮಾಡಲಿಲ್ಲ. He did not playe it.

**ಶ್ರೀ ಅಪ್ಪಚ್ಚು ರಂಜನ್ (ಯುವಜನ ಸೇವೆ ಮತ್ತು ಕ್ರೀಡೆ ಸಚಿವರು):–** ಮಾನ್ಯ ಸಭಾಪತಿಯವರೆ, ಯಾವುದಾದರು ತನಿಖಾ ವರದಿಯನ್ನು ಸಲ್ಲಿಸಬೇಕಾದರೆ, ಅವರು ನಿಮ್ಮ ಅನುಮತಿಯನ್ನು ಪಡೆದುಕೊಳ್ಳಬೇಕು. ಅನುಮತಿಯನ್ನು ಕೊಟ್ಟ ಮೇಲೆ ಅವರು ಅದನ್ನು ಸದನಕ್ಕೆ ಕೊಟ್ಟಾಗ ಮಾತ್ರ ಅದು ಸದನದ ಪ್ರಾಪರ್ಟಿಯಾಗುತ್ತದೆ. ಅಲ್ಲಿಯವರೆಗೆ ಅದು ಸದನದ ಪ್ರಾರ್ಪಟಿಯಾಗುವುದಿಲ್ಲ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ರೋಲೆಕ್ಸ್ ವಾಚ್ ಪ್ರಕರಣವನ್ನು ಇದಕ್ಕೆ ಕಂಪೇರ್ ಮಾಡುವುದಕ್ಕಾಗುವುದಿಲ್ಲ. ರೊಲೆಕ್ಸ್ ವಾಚ್ ಅವರ ಸ್ವಂತದ್ದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಮಾತನಾಡುವಾಗ ಏನು ಬೇಕಾದರೂ ಮಾತನಾಡಬಹುದಾ, ಏನು ಬೇಕಾದರೂ ತೋರಿಸಬಹುದಾ?

(ಗೊಂದಲ)

**ಸಭಾಪತಿಯವರು:–** ಎಷ್ಟು ಜನರು ಮಾತನಾಡುತ್ತೀರಿ? ಈಗ ನಾಲ್ಕು ಜನರು ಒಟ್ಟಿಗೆ ಮಾತನಾಡುತ್ತಿದ್ದೀರಿ, ಇನ್ನೊಂದು ಇಬ್ಬರು ಮಾತನಾಡಿ. ಯಾವುದು ಕೂಡ ಕಡತಕ್ಕೆ ಹೋಗುವುದಿಲ್ಲ. ಹೋಗಬಾರದು. ಒಬ್ಬಗಿಂತಲೂ ಹೆಚ್ಚು ಸದಸ್ಯರು ಮಾತನಾಡಿದರೆ ಯಾವುದು ರೆಕಾರ್ಡ್ ಆಗತಕ್ಕಂಥದ್ದಲ್ಲ. ಯಾರಾದರು ಒಬ್ಬೊಬ್ಬರೆ ಮಾತನಾಡಬೇಕು. ಜಾಸ್ತಿ ಮಾತನಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಸದನದಲ್ಲಿ ಏನು ಬೇಕಾದರೂ ತೋರಿಸಬಹುದಾ? ಏನಿದು?

(ಗೊಂದಲ)

**ಶ್ರೀ ಅಪ್ಪಚ್ಚು ರಂಜನ್ (ಯುವಜನ ಸೇವೆ ಮತ್ತು ಕ್ರೀಡೆ ಸಚಿವರ):–** ಮಾನ್ಯ ಸಭಾಪತಿಯವರೆ, ಏನಾದರು ಒಂದನ್ನು ಸದನದಲ್ಲಿ ತೋರಿಸಬೇಕಾದರೆ ಅದಕ್ಕೆ ತಾವು ಅನುಮತಿಯನ್ನು ಕೊಡಬೇಕು.

(ಗೊಂದಲ)

ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಅದನ್ನು ಸದನಕ್ಕೆ ಒಪ್ಪಿಸಿದಾಗ ಮಾತ್ರ ಆಗ ಅದು ಸದನದ ಪ್ರಾಪರ್ಟಿಯಾಗುತ್ತದೆ. ತಾವು ಅದನ್ನು ತೋರಿಸುವುದಕ್ಕೆ ಅನುಮತಿಯನ್ನು ಕೊಟ್ಟಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ತಾವು ಏನು ಕೋಟ್ ಮಾಡಿದ್ದೀರಿ. ಆ ರೂಲಿಂಗ್ ಇದಕ್ಕೆ ಅನ್ವಹಿಸುವುದಿಲ್ಲವೆಂದು ನನ್ನ ಸ್ಪಷ್ಟವಾದಂತಹ submission ಏಕೆಂದರೆ ಅವರು ತಮ್ಮ ಮನೆಯಲ್ಲಿದ್ದಂತಹ ವಾಚ್ ತೆಗೆದುಕೊಂಡು ಬಂದಿರಬಹುದು. ಟೇಪ್ ರೆಕಾರ್ಡರ್‌ನ್ನು ತೆಗೆದುಕೊಂಡು ಬಂದಿರಬಹುದು. But this is the report, and it is written by the Regional Commissioner. ಇದು Regional Commissioner ರವರು ಕೊಟ್ಟಂತಹ ವರದಿ. ಇದರಲ್ಲಿ ಜಿಲ್ಲಾಧಿಕಾರಿಗಳ ಮೇಲೆ ಅಪಾದನೆ ಇದೆ.

ಇದರಲ್ಲಿ 10,000 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಇದರ ಹಿಂದೆ ಇದ್ದಂತಹ ರಾಜಕಾರಣಿಯ ಹೆಸರು ಈ ವರದಿಯಲ್ಲಿಲ್ಲ. ಎಂದು ಶ್ರೀ ಗೋ. ಮಧುಸೂಧನ್‌ರವರು ಹೇಳಿರುವಂಥದ್ದು. ತಮ್ಮ ಮನೆಯಿಂದ ತೆಗೆದುಕೊಂಡು ಬಂದಂತಹ ವಾಚಿನ ಬಗ್ಗೆ ಕೊಟ್ಟಂತಹ ruling ಬೇರೆ. ಆ ruling ಇದಕ್ಕೆ ಅನ್ವಯಿಸುವುದಿಲ್ಲ.

(ಗೊಂದಲ)

**ಸಭಾಪತಿಯವರು:–** ಏನಾಗಬೇಕೆಂದು ತಮ್ಮಗಳ ಉದ್ದೇಶ ಗೊತ್ತಾಗಲಿಲ್ಲ. ಉದ್ದೇಶ ಏನು?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಮೊದಲು ವಿಸ್ಕೃತವಾಗಿ ಚರ್ಚೆಯಾಗಬೇಕು. Regional Commissioner ರವರು ಕೊಟ್ಟಿರುವಂತಹ ವರದಿಯನ್ನು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಒಂದೊಂದು ಪ್ರಶ್ನೆಯನ್ನು ಕೊಡಬೇಕು.

**ಸಭಾಪತಿಯವರು:–** ಮಾನ್ಯ ಗೋ. ಮಧುಸೂದನ್‌ರವರು ಮಾತನಾಡಿ ಮುಗಿಸುವುದು ಬೇಡವೇ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ಮಾತನಾಡಲಿ.

**ಸಭಾಪತಿಯವರು:–** ಮತ್ತೆ ಗೋ. ಮಧುಸೂದನ್‌ರವರು ಮಾತನಾಡುವುದಕ್ಕೆ ಬಿಡಿ. ಈಗ ಕೆಲವೊಂದು ವಿಷಯಗಳನ್ನು ಹೇಳಿದ್ದೀರಿ. ಕೆಲವು ವಿಷಯಗಳನ್ನು ಹೇಳಿದ್ದೀರಿ. ಅದನ್ನು ಅವರು ಒಪ್ಪಿಕೊಳ್ಳಬಹುದು ಅಥವಾ ...

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಒಂದೇ ಒಂದು ವಿಷಯವನ್ನು ಹೇಳಿಬಿಡುತ್ತೇನೆ.

**ಸಭಾಪತಿಯವರು:-** ಈಗ ಗೋ. ಮಧುಸೂಧನ್‌ರವರು ಏನು ಹೇಳುತ್ತಾರೆ ಅದನ್ನು ಕೇಳೋಣ. ಆಮೇಲೆ ನಾನು ರೂಲಿಂಗ್ ಕೊಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಯಾವುದಾದರು ಪೇಪರ್‌ನ್ನು quote ಮಾಡಿ ಮಾತನಾಡಿದಾಗ ಅದನ್ನು ನಿಮ್ಮ ಕೈಯಲ್ಲಿ ಕೊಡಬೇಕು. ನಾವು ಯಾವ ದಾಖಲೆಗಳನ್ನು ನೋಡಿ ಅದರ ಮೇಲೆ ಮಾತನಾಡುತ್ತೇನೆ ನಾನು ಮಾತನಾಡಿದ ಮೇಲೆ ಆ ದಾಖಲೆಗಳನ್ನು ತರಿಸಿಕೊಂಡು ತಾವು ಪರಾಮರ್ಶಿಸಬೇಕಾಗುತ್ತದೆ. You have to peruse that document.

**ಸಭಾಪತಿಯವರು:-** ನಿಮ್ಮ ಉದ್ದೇಶ ಏನೆಂದು ಹೇಳಲೇ ಇಲ್ಲ. ನಿಮ್ಮ ಬೇಡಿಕೆ ಏನು? Should he speak or not?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, let him speak. ಆದರೆ ಅವರು ಮಾತನಾಡುವುದಕ್ಕೆ ಪೂರ್ವದಲ್ಲಿ ಅವರು ಏನಾದರು ದಾಖಲೆಗಳನ್ನು ನೋಡಿ quote ಮಾಡಿರುತ್ತಾರೆ. ತಾವು ಸಭಾಪತಿಗಳಾಗಿ ಅದನ್ನು ನೋಡಬೇಕು. ಅವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುವುದಕ್ಕೆ ಬರುವುದಿಲ್ಲ. ನಾನು ಮಾತನಾಡಿದ್ದೀನಿ ಎಂದಮೇಲೆ I must perfect to my subject. ಅದನ್ನು peruse ಮಾಡುವ ಹಕ್ಕು ತಮಗೆ ಇದೆ.

**ಸಭಾಪತಿಯವರು:-** ಓ.ಕೆ. ಅದನ್ನೆಲ್ಲಾ ಗಮನಿಸುವುದಕ್ಕೆ ಅವರಿಗೆ ಹೇಳುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ತಮಗೆ ನನ್ನ ಒಂದು ವಿನಂತಿ ಏನೆಂದರೆ, ದಯಮಾಡಿ ಅವರು ಕೋಟ್ ಮಾಡಿರುವುದನ್ನು ತೆಗೆದುಕೊಳ್ಳಿ. ಅದು ವರದಿ ಹೌದೋ ಅಲ್ಲವೋ ಎನ್ನುವುದನ್ನು ನೋಡಿ..

(ಗೊಂದಲ)

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೆ, ಅವರುಗಳು ಮಾತ್ರ ಸದಸ್ಯರಾ? ನಾನು ಈ ಸದನದ ಸದಸ್ಯ ಅಲ್ಲವೇ? ನಾನು ಈ ಸದನಕ್ಕೆ ಪುಗಸಟ್ಟೆ ಬಂದಿಲ್ಲ. ಚುನಾವಣೆಯಲ್ಲಿ ಗೆದ್ದು ಬಂದಿದ್ದೇನೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಹಾಗಾದರೆ ನಾನು ಯಾವುದೋ ಒಂದು ಪೇಪರ್ ನೋಡಿ ಏನೇನೋ ತಪ್ಪು ತಪ್ಪುಗಳನ್ನು ಓದುತ್ತೇನೆ. ಆಗ ಅದನ್ನು verify ಮಾಡುವುದು ಪೀಠದ ಜವಾಬ್ಧಾರಿಯೋ ಅಲ್ಲವೋ? ನಾನು ಮನಸ್ಸೋ ಇಚ್ಚೆ ಅದರಲ್ಲಿ ಇಲ್ಲದೇ ಇರುವುದನ್ನು ಓದುತ್ತೇನೆ. ಅದನ್ನು ನೋಡುವುದು ಪೀಠದ ಜವಾಬ್ಧಾರಿಯೋ ಇಲ್ಲವೋ?

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೆ, ನಾನು ಮಾತನಾಡಿ ಮುಗಿಸಿದ ಮೇಲೆ ಬೇರೆ ಸದಸ್ಯರುಗಳು ಮಾತನಾಡಲಿ.

**ಸಭಾಪತಿಯವರು:–** ನೀವುಗಳು ಹೇಳಿದ್ದು ಆಯಿತು. ಈಗ ಶ್ರೀ ಗೋ. ಮಧುಸೂಧನ್‌ರವರು ಅದರ ಬಗ್ಗೆ ಏನು ಹೇಳುತ್ತಾರೆ ಕೇಳೋಣ. ನೀವುಗಳು ಅವರು ಹೇಳಿದ್ದನ್ನು ಕೇಳುವುದಕ್ಕೆ ತಯಾರಿಲ್ಲ ಎಂದರೆ, . .

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಬೇಡ.

**ಸಭಾಪತಿಯವರು:–** ಈ ರೀತಿಯಾಗಿ ಧ್ವನಿಯನ್ನು ಏರಿಸಿ ಮಾತನಾಡಿದರೆ ನಾನು ಸದನವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ (ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಮರಿತಿಬ್ಬೇಗೌಡ ದಯವಿಟ್ಟು ಕುಳಿತುಕೊಳ್ಳಿ.

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ. ನಾನು ವಿಷಯಗಳನ್ನೂ ಕೂಡ ಕೇಳಿದ್ದೇನೆ. ಆದರೆ ಈಗ ಮಾನ್ಯ ಗೋ.

ಮಧುಸೂಧನ್‌ರವರಿಗೆ ಮಾತನಾಡುವುದ್ದಕ್ಕೇ ಬಿಡಬಾರದು ಎನ್ನುವುದು ಸರಿಯಲ್ಲ. ನೀವುಗಳು ಹೇಳಿದಂತಹ ಪಾಯಿಂಟ್‌ಗಳಿಗೆ ಅವರು ಏನು ಹೇಳುತ್ತಾರೆ ಕೇಳೋಣ. ಅವರ ಹತ್ತಿರ ಅದಕ್ಕೆ ಸಮಜಾಯಿಸಿ ಇರಬಹುದು. ಬೇರೆ ವಿಷಯ ಇರಬಹುದು. ಅವರು ಏನು ಮಾತನಾಡುತ್ತಾರೆಂದು ಎರಡು ನಿಮಿಷ ಕೇಳುವುದಿಲ್ಲ ಎನ್ನುವುದಾದರೆ ನಾನು ಸದನವನ್ನು ಮುಂದೂಡಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಅವರು ಈಗಾಗಲೇ ಒಂದು ಸಾರಿ ಸದನದಲ್ಲಿ ಹೇಳಿದ್ದಾರೆ. ಬೇರೆ ವಿಷಯ ಇರಬಹುದೆಂದು ತಾವು ಹೇಳುತ್ತಿದ್ದೀರಿ. ಎಲ್ಲಾ ಸದಸ್ಯರುಗಳಿಗೂ ಕೂಡ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಸದನದಲ್ಲಿ ಮಾತನಾಡುತ್ತೇವೆ.

**ಸಭಾಪತಿಯವರು:–** ದಯಮಾಡಿ ಮಾನ್ಯ ಮರಿತಿಬ್ಬೇಗೌಡರೆ ಕುಳಿತುಕೊಳ್ಳುತ್ತೀರಾ? ಕುಳಿತುಕೊಳ್ಳುವುದಿಲ್ಲವೇ? ಕುಳಿತುಕೊಳ್ಳುತ್ತಿರೋ ಇಲ್ಲವೋ? ನೀವು ಹೇಳಿದಂತೆ ಸಭೆ ನಡೆಯುವುದಕ್ಕಾಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಅಂದರೆ ಅವರು ಹೇಳಿದಂತೆ ಸಭೆ ನಡೆಯಬೇಕಾ?

**ಸಭಾಪತಿಯವರು:–** ಅವರು ಹೇಳಿದಂತೆಯೂ ಕೂಡ ಸಭೆ ನಡೆಯುವುದಕ್ಕಾಗುವುದಿಲ್ಲ. ಏನು ಮಾತನಾಡುತ್ತೀರಾ? ದಯಮಾಡಿ ಮರಿತಿಬ್ಬೇಗೌಡರೆ ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ತಮ್ಮ ಆಜ್ಞೆಯನ್ನು ಪಾಲಿಸುತ್ತಿದ್ದೇವೆ.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಈಗ ಕುಳಿತುಕೊಳ್ಳಿ. ಶ್ರೀ ಗೋ. ಮಧುಸೂದನ್‌ರವರು ಮಾತನಾಡುತ್ತಿರುವಾಗ ಮದ್ಯದಲ್ಲಿ ತಮ್ಮ ಸಂಶಯಗಳನ್ನು ಎತ್ತಿದ್ದೀರಿ. ಇದರ ಬಗ್ಗೆ ಮಾನ್ಯ ಗೋ.

ಮಧುಸೂಧನ್‌ರವರು ಏನು ಮಾತನಾಡುತ್ತಾರೆ ಅದನ್ನು ಕೇಳುವುದಕ್ಕೆ ಇಷ್ಟಪಟ್ಟಿದ್ದೇನೆ. ಅವರು ಏನು ಹೇಳುತ್ತಾರೆ ಅದನ್ನು ಕೇಳಿದ ಮೇಲೆ ನೋಡೋಣ. ಈಗ ಅವರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲ ಎಂದರೆ ಕಷ್ಟವಾಗುತ್ತದೆ. ಈಗ ಅವರು ಮಾತನಾಡುವುದೇ ಬೇಡವೇ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ಮಾತನಾಡಲಿ. ನಮ್ಮದು ಏನು ತಕರಾರು ಇಲ್ಲ.

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೆ, ದಯಮಾಡಿ ನನಗೆ ಈಗ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾನು ಮಾತನಾಡಿ ಮುಗಿದ ಮೇಲೆ ಅವರುಗಳು ಮಾತನಾಡಲಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ಮಾತನಾಡಲಿ. ಅವರು ಏನು ಹೇಳಿದ್ದಾರೆಂದರೆ, . . .

**ಸಭಾಪತಿಯವರು:–** ಅವರು ಏನು ಹೇಳಿದ್ದಾರೆಂದು ನಾನು ಕಡತವನ್ನು ತರಿಸಿಕೊಂಡು ನೋಡುತ್ತೇನೆ. ನೀವು ಹೇಳಿದ್ದನ್ನು ಕೇಳಿದ್ದೇನೆ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೆ, ಈ ವರದಿ ನನ್ನ ಹತ್ತಿರ ಹೇಗೆ ಬಂತು ಎಂದು ಇಲ್ಲಿ ಚರ್ಚೆ ನಡೆಯುತ್ತಿದೆ.

**ಸಭಾಪತಿಯವರು:–** ಅದನ್ನೆಲ್ಲಾ ಹೇಳಬೇಡಿ. ವಿಷಯವನ್ನು ಹೇಳಿ.

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೆ, ಈ enquiry constitute ಆಗಿದ್ದೆ ನಾನು ಮಾಡಿದಂತಹ ಆರೋಪದಿಂದ, ನನ್ನ ಪತ್ರದ ಆಧಾರದ ಮೇಲೆ. I have been marked a copy, ನಾನು Regional Commissioner ರವರಿಗೆ ಪತ್ರವನ್ನು ಬರೆದು ತಾವು ಸಲ್ಲಿಸುತ್ತಿರುವಂತಹ ವರದಿಯ ಒಂದು ಪ್ರತಿಯನ್ನು ನನಗೆ ಕೊಡಿ ಎಂದು ಕೇಳಿದ್ದೆ. ಅವರು ನನಗೆ ಒಂದು ಪ್ರತಿಯನ್ನು ಕೊಟ್ಟಿದ್ದಾರೆ. ಇದು ಯಾವುದೋ piracy ಅಲ್ಲ. ನನ್ನ

ಹತ್ತಿರ ಇರುವಂಥದ್ದು ಅಧಿಕೃತವಾದಂತಹ ಪ್ರತಿ. ಅದನ್ನು ನಿಮಗೆ ಕೊಟ್ಟು ಕಳುಹಿಸುತ್ತೇನೆ ತಾವೇ ಅದನ್ನು ನೋಡಬಹುದು.

**ಸಭಾಪತಿಯವರು:–** ಕಳುಹಿಸಿಕೊಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, it is more than an offence. ಇದು ಇನ್ನೊಂದು ದೊಡ್ಡ ಅಪರಾಧ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ.

**ಸಭಾಪತಿಯವರು:–** ಇದು ಹೇಗೆ ಅಪರಾಧವಾಗುತ್ತದೆ? ಯಾರೋ ಅಧಿಕಾರಿಗಳು ಕೊಟ್ಟಿರುವಂತಹ ವರದಿ ಅವರ ಹತ್ತಿರ ಇರುವಂತಹ ಕಾಗದ ಪತ್ರಗಳನ್ನು ಮಂಡಿಸುತ್ತಾರೆ. ಅಪರಾಧ ಹೇಗೆ ಆಗುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಅದು ಹೇಗೆ ಅಧಿಕಾರಿಗಳು ಅವರಿಗೆ ಕೊಡುತ್ತಾರೆ?

**ಸಭಾಪತಿಯವರು:–** ಅದು ಮಾರ್ಕ್ ಮಾಡಿರುವಂಥದ್ದೋ ಅಲ್ಲವೋ ಎನ್ನುವುದನ್ನು ನಾನು ನೋಡುತ್ತೇನೆ. ಅಪರಾಧ ಎಲ್ಲಿ ಆಗುತ್ತದೆ. ಅವರಿಗೆ ಒಂದು ದಾಖಲಾತಿ ಸಿಕ್ಕಿದೆ. ಆ ದಾಖಲೆಯನ್ನೇ ತೆಗೆದುಕೊಂಡು ಬಂದಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ಏನು ಹೇಳಿದ್ದಾರೆಂದು ದಯಮಾಡಿ ಕಡತವನ್ನು ತೆಗೆಸಿ. ಅವರು ಏನು ಹೇಳಿದರು ಎಂದರೆ, ಸರ್ಕಾರ Regional Commissioner ರವರು ತನಿಖೆ ಮಾಡಿರುವುದನ್ನು ಕೊಟ್ಟಿದ್ದಾರೆ. ವರದಿ ಎಲ್ಲಿಗೆ ಬರಬೇಕು. ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಬಂದು ಸರ್ಕಾರಕ್ಕೆ ಬರಬೇಕು.

**Mr CHAIRMAN:-** He has been marked a copy,

**Sri G. MADHUSUDAN:-** I have been marked a copy,

**ಸಭಾಪತಿಯವರು:–** ನೀವು ಅವರಿಗೆ ಹೇಳಿ.

**ಶ್ರೀ ಬಸವರಾಜ ಹೊರಟ್ಟಿ:–** ತಾವು ಮಾನ್ಯ ಸಭಾಪತಿಯವರಾಗಿದ್ದೀರಿ. ಮಂತ್ರಿಯಾಗಿ ಕೆಲಸ ಮಾಡಿದಂಥವರು ನಾನು ನಿಮ್ಮನ್ನು ಕೇಳುತ್ತೇನೆ...

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್.

**ಸಭಾಪತಿಯವರು:–** ಏನು ಹೇಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, 171ನೇ ಕಲಂನ ಪ್ರಕಾರ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ ಅದಕ್ಕೆ ನಮ್ಮದೇ ಆದಂತಹ ಕೆಲವು guidelines ಇದೆ. ಬಜೆಟ್‌ನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಿದ ತರುವಾಯ ಮಾನ್ಯ ಸಭಾಪತಿಯವರು ಗೊತ್ತುಪಡಿಸಬಹುದಾದ ಒಂದು ದಿನ ಅಥವಾ ಹೆಚ್ಚಿನ ದಿನಗಳಲ್ಲಿ ಮತ್ತು ಸಭಾಪತಿಯವರು ಈ ಉದ್ದೇಶಕ್ಕಾಗಿ ನಿಗಧಿಪಡಿಸಬಹುದಾದ ಸಮಯದಲ್ಲಿ ಕರ್ನಾಟಕ ವಿಧಾನ ಪರಿಷತ್ತು, ಬಜೆಟ್ ಬಗ್ಗೆ ಒಟ್ಟಾರೆಯಾಗಿ ಅಥವಾ ಅದರಲ್ಲಿ ಅಡಕವಾಗಿರುವ ತತ್ವದ ಆಧಾರಂಶದ ಮೇಲೆ ಚರ್ಚಿಸತಕ್ಕದ್ದು. ಇದು ಬಜೆಟ್ ಮೇಲೆ ಚರ್ಚೆಗೆ ಇರುವಂತಹ ಗೈಡಲೈನ್ಸ್. ಆದರೆ ಈಗ ಚರ್ಚೆಯಾಗುತ್ತಿರುವುದಕ್ಕೂ ಬಜೆಟ್‌ಗೂ ಯಾವುದೇ ಸಂಬಂಧವಿಲ್ಲ. ಆದ್ದರಿಂದ ಈ ಚರ್ಚೆಗೆ ಅವಕಾಶವನ್ನು ಕೊಡಬಾರದು ಎಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸದಸ್ಯರು ದಾಖಲೆಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. Capt. Ganesg Karnik is on the wrong track. Mr. Madhusudan, you are on the right way.

**ಸಭಾಪತಿಯವರು:–** ಮಾನ್ಯ ಗಣೇಶ್ ಕಾರ್ಣಿಕ್‌ರವರು ಎತ್ತಿರುವ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ನಾನು ಒಂದು ವಿಷಯವನ್ನು ಹೇಳಲು ಇಷ್ಟಪಡುತ್ತೇನೆ. ನಮ್ಮ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಲ್ಲಿ, ಸ್ವಾಭಾವಿಕವಾಗಿ ನಮ್ಮ ಸದನದಲ್ಲಿ ಬಹಳ

ವರ್ಷಗಳಿಂದ ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆಯಾಗಲಿ, ಬಜೆಟ್ ಮೇಲೆ ಆಗಲಿ ಮಾತನಾಡುವಾಗ.... ನಾನು ಅದನ್ನು ಹಾಸ್ಯವಾಗಿ ಹೇಳುತ್ತಿರುತ್ತೇನೆ. ಅದು ಕಾನೂನಿನಲ್ಲಿ ಎಲ್ಲಯೂ ಇಲ್ಲ, ಪುಸ್ತಕದಲ್ಲಿಯೂ ಇಲ್ಲ, sky is the limit, anything under the Sun we can discuss ಎನ್ನುವ ಹಿನ್ನೆಲೆಯಲ್ಲಿ ಈ ರೀತಿಯ ವಿಚಾರಗಳು ಬಂದಾಗ ಕೆಲವರು ಪ್ರಾಸಂಗಿಕವಾಗಿ ಪ್ರಸ್ತಾಪ ಮಾಡುವುದನ್ನು ನಾನು ಒಪ್ಪುತ್ತೇನೆ. ಆದರೆ ಮಾನ್ಯ ಮಧುಸೂದನ್‌ರವರು ಮಾತನಾಡುವುದಕ್ಕೆ ನಾವು ಬಿಡುವುದಿಲ್ಲ, ನಾವು ಹೇಳಿದ ಹಾಗೆ ಮಧುಸೂದನ್ ನಡೆದುಕೊಳ್ಳಬೇಕು ಎಂದರೆ ಆಗುವುದಿಲ್ಲ. ಮಧುಸೂದನ್ ಏನಾದರೂ ನಮ್ಮ ಸದನದ ಘನತೆ–ಗಾಂಭೀರ್ಯವನ್ನು ಮೀರಿ ನಡೆದುಕೊಂಡರೆ, ಆಗ ಅದನ್ನು ತಾವು ನನ್ನ ಗಮನಕ್ಕೆ ತರಬಹುದು. ಇಲ್ಲಾ ನಾನೇ ಅವರಿಗೆ suo moto ಈ ರೀತಿ ಮಾಡಿದರೆ ಆಗುವುದಿಲ್ಲ ಎಂದು ಹೇಳುವ ಅಧಿಕಾರ ನನಗೂ ಇದೆ ನಿಮಗೂ ಇದೆ. ಈ ಕಡತ ಹೇಗೆ ಬಂತು ಎನ್ನುವುದರ ಬಗ್ಗೆ ಅವರು ಹೇಳಿದ್ದಾರೆ. ಇದನ್ನು ನಾನೇನು ಕದ್ದು ತಂದಿರುವುದಿಲ್ಲ, ಯಾರಿಗೂ ಹಣ ಕೊಟ್ಟು ತಂದಿರುವುದಿಲ್ಲ. ನನಗೆ ಅಧಿಕೃತವಾಗಿ ಕಾಪಿಯನ್ನು ಮಾರ್ಕ್ ಮಾಡಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಮಾನ್ಯ ಹೊರಟ್ಟಿಯವರು ಅವರು ಹೇಳಿರುವುದು ಹೌದೊ ಅಲ್ಲವೊ ಎಂದು ಕೇಳಿದರು. ಮಧುಸೂದನ್‌ರವರು ಸತ್ಯ ಹೇಳುತ್ತಿದ್ದಾರೊ, ಸುಳ್ಳು ಹೇಳುತ್ತಿದ್ದಾರೊ ಎನ್ನುವುದನ್ನು ನೋಡಲು ನಾನು Judge ಅಲ್ಲ. ಅದು ಅವರಿಗೆ ಬಿಟ್ಟಿದು. ಅವರು ಸದನದಲ್ಲಿ ಸುಳ್ಳು ಹೇಳಿದರೆ, ಸದನವನ್ನು mislead ಮಾಡಿದ್ದರೆ, ಮಾರ್ಕ್ ಮಾಡದೆ ಇರುವ ಕಾಪಿಯನ್ನು ತಂದು, ಮಾರ್ಕ್ ಮಾಡಿರುವುದು ಎಂದು ಹೇಳಿದ್ದರೆ ಅದಕ್ಕೆ ತಾವು ಒಂದು ಹಕ್ಕುಚ್ಯುತಿ ಪ್ರಸ್ತಾವವನ್ನು ಮಂಡಿಸಬಹುದು ಅದನ್ನು ನಾನು ಗಮನಿಸುತ್ತೇನೆ. ಆದರೆ ಅವರು ಪ್ರಸ್ತಾಪವನ್ನೆ ಮಾಡಬಾರದು ಎನ್ನುವುದು ಸರಿಯಾಗುವುದಿಲ್ಲ. ಮಧುಸೂದನ್‌ರವರಿಗೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ತಮಗೆ ಮಾತನಾಡಲು ಕೊಟ್ಟಿರುವುದು 10 ನಿಮಿಷ. ವಿಷಯವನ್ನು ಪ್ರಸ್ತಾಪ

ಮಾಡಿದ್ದೀರಿ. ಸಾಕು ಅದನ್ನು ಮುಕ್ತಾಯಗೊಳಿಸಿ, ನಾನು ಇನ್ನು ಬೇರೆ ವಿಷಯಗಳನ್ನು ತೆಗೆದುಕೊಳ್ಳಬೇಕು.

**ಶ್ರೀ ಗೋ. ಮಧುಸೂದನ್:– ಮಾನ್ಯ ಸಭಾಪತಿಗಳೆ,** ನಾನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಮುಕ್ತಾಯಗೊಳಿಸುವುದಕ್ಕಿಂತ ಮುಂಚೆ ನಾನು ಸರ್ಕಾರದಲ್ಲಿ ಒಂದು ವಿನಂತಿಯನ್ನು ಮಾಡಲು ಇಷ್ಟಪಡುತ್ತೇನೆ. ಇಷ್ಟು ದೊಡ್ಡದಾದ ಹಗರಣ ನಡೆದಿದೆ. ಈ ಹಗರಣಕ್ಕೆ ಸಂಬಂಧಪಟ್ಟ ಅಧಿಕಾರಿಯ ಬಗ್ಗೆ ಸರ್ಕಾರಕ್ಕೆ ತನಿಖಾ ವರದಿ ಬಂದಿದೆ. ಸರ್ಕಾರಕ್ಕೂ ತಲುಪಿದೆ ಆ ಕಾಪಿಯನ್ನು ನನಗೂ ಮಾರ್ಕ್ ಮಾಡಿದ್ದಾರೆ. ನಾನೇ complainant ಆಗಿರುವುದರಿಂದ, I have got every right to obtainthe copy. ನಾನು legal ಆಗಿ ಕಾಪಿಯನ್ನು ತೆಗೆದುಕೊಂಡಿದ್ದೇನೆ. ಸದನದಲ್ಲಿ ಪ್ರಸ್ತಾಪ ಮಾಡಿ ಸರ್ಕಾರಕ್ಕೆ ವಿನಂತಿಸಿಕೊಳ್ಳುವುದು, ಆ ವ್ಯಕ್ತಿಯ ಮೇಲೆ ಕೂಡಲೇ ಇಲಾಖಾ ತನಿಖೆಯನ್ನು ಪ್ರಾರಂಭ ಮಾಡಬೇಕು. ಆ ವ್ಯಕ್ತಿಯ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಅಷ್ಟೆ ಅಲ್ಲ ಈ ವರದಿಯಲ್ಲಿ ಯಾವ ವಿಷಯಗಳು ಪ್ರಸ್ತಾಪವಾಗಿಲ್ಲ, ಅದಕ್ಕೆ ಇದರ ಹಿಂದೆ ಇರುವ ಶಕ್ತಿಗಳು ಯಾವವು ಇದ್ದಾವೆ ಆ ಎಲ್ಲ ವಿಷಯದ ಬಗ್ಗೆ ಇನ್ನೊಂದು ಹೊಸ ತನಿಖೆಯಾಗಬೇಕು. ತನಿಖೆ ಮಾಡಿ ಎಲ್ಲರನ್ನು exose ಮಾಡಬೇಕು. ನಾವು–ನೀವು ಎಲ್ಲಾ ಮೈಸೂರಿಗೆ ಹೋಗುತ್ತೇವೆ, ಚಾಮುಂಡಿ ಬೆಟ್ಟಕ್ಕೆ ಹೋಗುತ್ತೇವೆ, ಚಾಮುಂಡಿ ತಾಯಿಗೆ ನಮಸ್ಕಾರ ಮಾಡಿ ಬರುತ್ತೇವೆ. ಅದರ ತಪ್ಪಲಿನಲ್ಲಿ ಅತ್ಯಂತ ಬೆಲೆಬಾಳುವಂತಹ 2000 ಎಕರೆ ಜಮೀನು ಇದೆ. ಅದನ್ನು ಶಾಶ್ವತವಾಗಿ ಮೈಸೂರಿನ ಆಸ್ತಿಯಾಗಿ, ಹಸಿರಿನ ವಲಯವಾಗಿ, ಮೈಸೂರಿನ ಉಸಿರಾಗಿ ಇದನ್ನು ಉಳಿಸಿಕೊಳ್ಳಲು ನಾವು ಎಲ್ಲರೂ ಬದ್ಧರಾಗಬೇಕು. ಇದಕ್ಕೆ ತನಿಖೆಯನ್ನು ಪೂರ್ಣಗೊಳಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:–** ಈಗ ಬಜೆಟ್ ಮೇಲೆ ಭಾಷಣವನ್ನು ಪ್ರಾರಂಭ ಮಾಡೋಣ. ಈಗ ಮಾನ್ಯ ಕೃಷ್ಣಾಭಟ್‌ರವರು ಮಾತನಾಡಬೇಕು.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಈ ರೀತಿ ಸದನ ನಡೆಯುವುದಾದ್ದರೆ ಮೂರು ಕಾಸಿನ ಗೌರವವಿಲ್ಲ, ಈ ಪ್ರಕರಣದ ಬಗ್ಗೆ ಈ ರೀತಿ ನಡೆದುಕೊಂಡರೆ, ಈ ಸದನಕ್ಕೆ ಘನತೆ–ಗೌರವವಿಲ್ಲ. **ಈ ಸದನಕ್ಕೆ ಧಿಕ್ಕಾರ, ಈ ಸದನಕ್ಕೆ ಕಿಂಚಿತ್ತು ಘನತೆ–ಗೌರವವಿಲ್ಲ.**

**ಸಭಾಪತಿಯವರು:-** ಸದನಕ್ಕೆ ಧಿಕ್ಕಾರ ಎಂದರೆ ಹುಷಾರ್!

**ಶ್ರೀ ಮರಿತಿಬ್ಬೇಗೌಡ:-** ಇದು ಸಂವಿಧಾನಕ್ಕೆ ದೊಡ್ಡ ಅಪಚಾರ. ಈ ಸದನಕ್ಕೆ ಯಾವುದೇ ನೀತಿ–ನಿಯಮಗಳು ಇಲ್ಲ. ನಾವು ಈ ಸದನವನ್ನು ಬಹಿಷ್ಕರಿಸುತ್ತೇವೆ.

**ಸಭಾಪತಿಯವರು:-** ಮಾತನಾಡುವಾಗ ನಿಯಂತ್ರಣವಿರಲಿ ಹುಷಾರ್! ಸದನಕ್ಕೆ ಧಿಕ್ಕಾರ ಎನ್ನುವುದು ಇದು ಘನತೆ ತರುವ ವಿಚಾರವಲ್ಲ. ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಅವರಿಗೆ ಹೇಳಬೇಕಾಗುತ್ತದೆ.

(ಗೊಂದಲ)

**(ಈ ಹಂತದಲ್ಲಿ ಸದನದಲ್ಲಿ ಹಾಜರಿದ್ದ ಜೆ.ಡಿ.ಎಸ್ ಪಕ್ಷದ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)**

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಅವರು ನಡೆದುಕೊಂಡಿರುವುದು ತಪ್ಪು. For perusal, ದಯಮಾಡಿ ತಾವು ಆ ದಾಖಲೆಯನ್ನು ತಮ್ಮ ವಶಕ್ಕೆ ಬರಬೇಕು. ಏಕೆಂದರೆ ಅವರು refer ಮಾಡಿದ್ದಾರೆ.

**ಸಭಾಪತಿಯವರು:-** ಅದನ್ನು ನಾನು ನೋಡುತ್ತೇನೆ. ಯಾರೇ ಸದನದ ಗೌರವಾನ್ವಿತ ಸದಸ್ಯರು, ಎಷ್ಟೆ ಉದ್ವೇಗಕ್ಕೆ ಒಳಗಾಗಿದ್ದರೂ, ಧಿಕ್ಕಾರವನ್ನು ಕೂಗುತ್ತಾರೆ. ಸರ್ಕಾರಕ್ಕೆ ಧಿಕ್ಕಾರ, ಪಾಲಿಸಿಗೆ ಧಿಕ್ಕಾರ ಎಂದು

ಕೂಗುತ್ತಾರೆ. ಆದರೆ **ಸದನಕ್ಕೆ ಧಿಕ್ಕಾರ** ಎಂದು ಕೂಗಿದ್ದಾರೆ ಇದು ಘನತೆ ತರುವಂತಹ ವಿಚಾರವಲ್ಲ. ನಾನು ಗೌರವಾನ್ವಿತ ಸಭಾನಾಯಕರನ್ನು ಮತ್ತು ಮಾನ್ಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರನ್ನು ನನ್ನ ಕೊಠಡಿಗೆ ಕರೆದು ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದನ್ನು ನಾನು ತೀರ್ಮಾನ ಮಾಡುತ್ತೇನೆ. ಉದ್ವೇಗದ ಭರದಲ್ಲಿ.....

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ತಾವು ಹೇಳುವುದನ್ನು ನಾವು ಒಪ್ಪಿದ್ದೇವೆ. ಇದರಲ್ಲಿ ಏನು ಉದ್ವೇಗವಿಲ್ಲ. ದಯಮಾಡಿ ಅವರು refer ಮಾಡಿದ್ದಾರೆ, ಅದಕ್ಕಾಗಿ ಆ ದಾಖಲೆಯನ್ನು ತಾವು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು ಎನ್ನುವುದು ನನ್ನ ವಿನಂತಿ.

**ಸಭಾಪತಿಯವರು:–** ಆಯಿತು, ಈಗ ಮಾನ್ಯ ಕೃಷ್ಣಭಟ್ಟರವರು ಮಾತನಾಡುತ್ತಾರೆ. ಇವರೆ ಕೊನೆಯಲ್ಲ, ಮಾತನಾಡಲು ನನಗೂ ಅವಕಾಶ ಬೇಕು ಎಂದು ಪುಟ್ಟಸ್ವಾಮಿಯವರು ನಿನ್ನೆಯಿಂದ ಕಾಯುತ್ತಿದ್ದಾರೆ. ಯಾರು ಮಾತನಾಡಲು ಅವಕಾಶವನ್ನು ಕೇಳುತ್ತೀರಾ ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ. ಮಾತನಾಡುವಾಗ ಬೇರೆ ಸದಸ್ಯರು ಮಾತನಾಡುವವರು ಇದ್ದಾರೆ ಎನ್ನುವುದನ್ನು ನೆನಪಿನಲ್ಲಿಟ್ಟುಕೊಂಡು ಮಾತನಾಡಿ ಬೇಗನೆ ಮುಗಿಸಬೇಕು. ಕೆಲವು ಸಾರಿ ಪ್ರಾಸಂಗಿಕವಾಗಿ ಈ ರೀತಿಯ ಮಾತುಗಳು ಬರುತ್ತವೆ, ಇರಲಿ ಅದನ್ನು ಮುಂದೆ ಏನು ಮಾಡಬೇಕೆಂದು ನೋಡುತ್ತೇನೆ. ಕೃಷ್ಣಭಟ್‌ರವರೆ ಬೇಗ 10 ನಿಮಿಷದಲ್ಲಿ ಮಾತನಾಡಿ ಮುಗಿಸಿ. ಅದಕ್ಕಿಂತ ಬೇಗನೆ ಮಗಿಸಿದರು ಒಳ್ಳೆಯದು. ಅವರು ಆದ ಮೇಲೆ ಬೇರೆಯವರಿಗೆ ಅವಕಾಶವನ್ನು ಕೊಡುತ್ತೇನೆ.

**ಪ್ರೊ.ಪಿ.ವಿ. ಕೃಷ್ಣಭಟ್ಟ:–** ಮಾನ್ಯ ಸಭಾಪತಿಗಳೆ, ಈಗಾಗಲೇ 9 ಗಂಟೆಯಾಗುತ್ತಿದೆ. ನಾಳೆ ಉತ್ತರ ಹೇಳುವುದಕ್ಕಿಂತ ಮುಂಚೆ ಒಂದು ಗಂಟೆ ಸದಸ್ಯರು ಮಾತನಾಡಲು ಅವಕಾಶವನ್ನು ಕೊಡಿ. ಆಗ ಮಾತನಾಡುತ್ತೇವೆ. ನಾವು ಇಲ್ಲಿ ಬೆಳಗ್ಗೆಯಿಂದ ಕುಳಿತ್ತಿದ್ದೇವೆ. ತಾವೇ ವಿಚಾರ ಮಾಡಿ, ನಮಗೆ ಈಗ 76 ವರ್ಷ ವಯಸ್ಸು.

**ಸಭಾಪತಿಯವರು:-** ನಾನು ನೀವು ಒಂದೇ ವಯಸ್ಸಿನವರು. ನಾನು ಕುಳಿತ್ತಿದ್ದೇನೆ. ನಾನು ಏನು ಮಾಡಲಿ ಹೇಳಿ.

**ಪ್ರೊ.ಪಿ.ವಿ. ಕೃಷ್ಣಭಟ್ಟ:-** 8 ಗಂಟೆ ಎಂದು ಹೇಳಿದ್ದೀರಿ, ಈಗ 9 ಗಂಟೆಯಾದರು ನಾವು ಕುಳಿತ್ತಿದ್ದೇವೆ. ಅದಕ್ಕಾಗಿ ನಾಳೆ ಒಂದು ಗಂಟೆ ಮಾತನಾಡಲು ಅವಕಾಶವನ್ನು ಕೊಡಿ.

**ಶ್ರೀ ಎಸ್.ಆರ್. ಪಾಟೀಲ್:-** ನಾಳೆ ಬೆಳಗ್ಗೆ ತೆಗೆದುಕೊಳ್ಳಿ.

**ಸಭಾಪತಿಯವರು:-** ನಾಳೆ ಒಬ್ಬರು ಮಾತನಾಡಬೇಕು ಎಂದರೆ, 20 ಜನ ಸದಸ್ಯರು ಮಾತನಾಡಬೇಕು ಎಂದು ನಿಲ್ಲುತ್ತಾರೆ. ಒಬ್ಬರಿಗೆ ಎಂದು ಹೇಗೆ ಹೇಳಲು ಆಗುತ್ತದೆಯೇ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೆ, ಇದು ತಮ್ಮ ವಿವೇಚನೆಗೆ ಬಿಟ್ಟ ವಿಚಾರ. ನನಗೆ ನಾಳೆ ಅನುಮತಿ ಕೊಡಬಹುದು, ಕೊಡದೆಯೇ ಇರಬಹುದು. ಅವಕಾಶ ಕೊಟ್ಟರೆ ಮಾತನಾಡುತ್ತೇವೆ ಇಲ್ಲದಿದ್ದರೆ ಇಲ್ಲ. ಇನ್ನೊಂದು ವಿಷಯ ಆ ದಾಖಲೆ ಸದನದ ಆಸ್ತಿ ಅದನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ.

**ಸಭಾಪತಿಯವರು:-** ಅದನ್ನು ನಾನು ತೆಗೆದುಕೊಳ್ಳುತ್ತೇನೆ. ಮಾನ್ಯ ಮಧುಸೂದನ್‌ರವರೆ ಅದನ್ನು ನನ್ನ ವಶಕ್ಕೆ ಕಳುಹಿಸಿ ಕೊಡಿ. ಈಗ ಮಾನ್ಯ ಕೃಷ್ಣಭಟ್ಟರವರು ಮಾತನಾಡುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಮಧುಸೂದನ್‌ರವರು ತಮ್ಮಲ್ಲಿದ್ದ ದಾಖಲೆಯನ್ನು ಮಾನ್ಯ ಸಭಾಪತಿಯವರಿಗೆ ಸಲ್ಲಿಸಿದರು)**

**ಪ್ರೊ.ಪಿ.ವಿ. ಕೃಷ್ಣಭಟ್ಟ:-** ಮಾನ್ಯ ಸಭಾಪತಿಗಳೆ, ಸಿಮೀತವಾದ ಸಮಯ ಸಿಗುತ್ತದೆ ಎನ್ನುವ ಅರಿವು ಇದ್ದಿದ್ದರಿಂದ ಆ ಮಿತಿಯಲ್ಲಿಯೇ ಕೆಲವು ಸಂಗತಿಗಳನ್ನು ಸದನದಲ್ಲಿ ಗಮನಕ್ಕೆ ತರಬೇಕು ಎಂದು ಅಂದುಕೊಂಡಿದೆ. ಆದರೆ ಈಗಿನ ಸ್ಥಿತಿಯಲ್ಲಿ ಮಾತನಾಡುವಂತಹ ಪರಿಸ್ಥಿತಿಯಲ್ಲಿ ನಾನು ಇಲ್ಲ. ಆದ್ದರಿಂದ ಈಗ ನಾನು ಮಾತನಾಡುವುದಿಲ್ಲ. ಸಾಧ್ಯವಾದರೆ ನಾಳೆ ಅವಕಾಶ

ಸಿಕ್ಕರೆ, ತಾವು ಅವಕಾಶವನ್ನು ಕೊಟ್ಟರೆ ನಾನು ಮಾತನಾಡುತ್ತೇನೆ. ಈಗ ನಾನು ಮಾತನಾಡಲು ಸಾಧ್ಯವಾಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ಕೃಷ್ಣಭಟ್ಟರು ನಾಳೆ ಸಮಯ ಸಿಕ್ಕರೆ ನನಗೆ ಮಾತನಾಡಲು ಅವಕಾಶ ಕೊಡಿ ಎಂದು ಕೇಳಿದ್ದಾರೆ. ನೋಡೋಣ ನನಗೆ ಗೊತ್ತಿಲ್ಲ. ಏಕೆಂದರೆ ನಾಳೆ ಏನೇನು ವಿಷಯಗಳನ್ನು ಹಾಕಿಕೊಳ್ಳಬೇಕು ಎನ್ನುವ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ, ಸಭಾನಾಯಕರ ಹತ್ತಿರ ಸಮಾಲೋಚನೆ ಮಾಡಬೇಕಾಗುತ್ತದೆ. ಅವಶ್ಯಕವಾದ ಸರ್ಕಾರಿ ಕಲಾಪಗಳು ಇರುತ್ತವೆ. ಅವುಗಳೆಲ್ಲವನ್ನು ಪೂರೈಸಿಕೊಂಡುವುದು ನನ್ನ ಮತ್ತು ಇಡೀ ಸದನದ ಧರ್ಮ. ಹೀಗಾಗಿ ನನ್ನ ಹತ್ತಿರ ಸಮಯ ಎಷ್ಟು ಇದೆ ಎನ್ನುವುದನ್ನು ನೋಡಿಕೊಂಡು ಆ ಸಮಯದ ಹಿನ್ನೆಲೆಯಲ್ಲಿ ಇವತ್ತು ಮಾತನಾಡಲು ಆಗದೆ ಇರುವ ಮಾನ್ಯ ಕೃಷ್ಣಭಟ್‌ರವರಿಗೆ ಮತ್ತು ಮಾನಯ ಪುಟ್ಟಸ್ವಾಮಿ ಇಬ್ಬರ ಹೆಸರನ್ನು ನಾನು consider ಮಾಡುತ್ತೇನೆ. ಈಗ ದೊಡ್ಡರಂಗೇಗೌಡರೆ ನೀವು ಮಾತನಾಡಿ.

**ಪ್ರೊ: ದೊಡ್ಡರಂಗೇಗೌಡ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೆ, ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ನೀಡಿರುವುದಕ್ಕಾಗಿ ಅಭಿನಂದನೆಗಳು.

ನೆರವಾಗು ಬಡ ಜನಕೆ
ದನಿಯಾಗು ದಲಿತರಿಗೆ
ಸತ್ಯವಾಗು ಅಸತ್ಯ ಪರಿಸರ ಮೆರೆಯೆ
ಒಳಗಣ್ಣಾಗು ಜಾಣ ಕುರುಡರಿಗೆ
ಕಹಳೆಯಾಗು ಜಾಣ ಕಿವುಡರಿಗೆ

ಎಂದಿದ್ದಾರೆ "ವಿಶ್ವಮಾನವ" ಕವಿಗಳು. ಆಮೂಲಾಗ್ರ ಬದಲಾವಣೆಯನ್ನು ತರಬೇಕೆಂಬುದು ನಮ್ಮ ಸರ್ಕಾರದ ಆಶಯ: ರಾಜ್ಯ ಪ್ರಗತಿ ಪಥದಲ್ಲಿ ಸಾಗಬೇಕೆಂಬುದು ಸರ್ಕಾರದ ನಿಜವಾದ ಅಭಿಲಾಷೆ ಅಭಿವೃದ್ಧಿಯೇ ಆಡಳಿತದ ಅಂತರಂಗದ ತಾರಕ ಮಂತ್ರ. ಮೂಲಭೂತ

ಸೌಕರ್ಯಗಳನ್ನು ಒದಗಿಸುವ ಕಡೆಗೆ ಸರ್ಕಾರ ಪ್ರಾಮಾಣಿಕವಾಗಿ ಅಭಿಮುಖವಾಗಿದೆ: ಶಿಕ್ಷಣಕ್ಕೆ ದಿಟವಾಗಿ ಪ್ರಾಮುಖ್ಯ ಸಿಕ್ಕಿದೆ. ಆರೋಗ್ಯ ಸಂವರ್ಧನೆಗೆ ಆದ್ಯತೆ ದೊರೆತಿದೆ. ಹಿಂದೆಂದಿಗಿಂತಲೂ ಮಾಹಿತಿ ತಂತ್ರಜ್ಞಾನ ದಿಟವಾಗಿ ಉತ್ಕಷದ ಹಾದಿಯಲ್ಲಿದೆ. ದುರ್ಬಲರು ಸಬಲರಾಗಲು ಸರ್ಕಾರ ವಿಶೇಷ ಒತ್ತು ನೀಡಿದೆ; ಕ್ರಿಯಾಶೀಲವಾಗಿದೆ. ಗ್ರಾಮೀಣ ಜನರ ಏಳಿಗೆಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಇವೆಲ್ಲ ಅಭಿನಂದನೀಯ ವಿಷಯಗಳು. ಆಡಲಿತದಲ್ಲಿ ವಿಕೇಂದ್ರಿಕರಣವೂ ಸಾಧಿತರವಾಗಿದೆ. ಅಂದುಕೊಂಡದ್ದಕ್ಕಿಂತ ಅಧಿಕವಾಗಿ ಸಂಪನ್ಮೂಲಗಳ ಕ್ರೋಢೀಕರಣವಾಗಿದೆ. ಉದಾಹರಣೆಗೆ 2011–12ನೇ ಸಾಲಿನಲ್ಲಿ ನಮ್ಮ ರಾಜ್ಯದ 6,231 ರೂಪಾಯಿಗಳ ತಲಾ ಯೋಜನ ಗಾತ್ರ ಇತ್ಯಾತ್ಮಕ ಸಂಗತಿಯಾಗಿದೆ ಎಂದು ನಾನು ಭಾವಿಸುತ್ತೇನೆ. ಇದು ಮೆಚ್ಚಬೇಕಾದಂತಹ ಅಂಶ. 2,657 ಕಿಲೋ ಮೀಟರ್ ಉದ್ದದ ರಾಜ್ಯ ಹೆದ್ದಾರಿಗಳ ಅಗಲೀಕರಣದ ಕಾರ್ಯ ಸಕಾರಾತ್ಮಕ ಅಭಿವೃದ್ಧಿ ಸಾಧ್ಯವಾಗಿದೆ. ಸುವರ್ಣ ವಿಕಾಸ ಯೋಜನೆ ಸಾಕಾರವಾಗಿರುವುದು ಮೆಚ್ಚಬೇಕಾಗಿದಂತಹ ಅಂಶ. ನಿದರ್ಶನ 1,733 ಕಿಲೋ ಮೀಟರ್ ಜಿಲ್ಲಾ ಮುಖ್ಯ ರಸ್ತೆಗಳ ಆಗಿರುವಂತಹ ಅಭಿವೃದ್ಧಿಯನ್ನು ಈ ಸಮದರ್ಭದಲ್ಲಿ ತಮ್ಮ ಮುಖಾಂತರ ಎಲ್ಲರಿಗೂ ನೆನಪು ಮಾಡುವುದಕ್ಕೆ ಇಷ್ಟಪಡುತ್ತೇನೆ. ಯಾರು ಏನೇ ಹೇಳಲಿ, ಯಾರು ಏನೇ ಟೀಕಿಸಲಿ ಬೆಂಗಳೂರು ಅಭಿವೃದ್ಧಿ ಅಭಿನಂದನಾರ್ಹ. ರಾಷ್ಟ್ರೀಯ ಮಿಲಿಟರಿ ಸ್ಮಾರಕ ಆಗು ಮಾಡುವಲ್ಲಿ ಸರ್ಕಾರ ವಹಿಸಿದ ಜವಾಬ್ದಾರಿ ಗಮನಾರ್ಹವಾದುದ್ದು. ಭಾರತ ಸರ್ಕಾರದ ಸಹಯೋಗದಲ್ಲಿ ಮುನ್ನಡೆ ಸಾಧ್ಯವಾಗಿರುವ "ಮೆಟ್ರೋ ರೈಲು" ಕಾಮಗಾರಿ ನಿಜಕ್ಕೂ ಸ್ತುತ್ಯಾರ್ಹ, ಆಗಿರುವ ಕಾರ್ಯ ಅದ್ಭೂತ. ಬೆಂಗಳೂರು ಜನತೆ ಮೆಟ್ರೋ ಸೌಲಭ್ಯವನ್ನು ಇನ್ನೂ ಹೆಚ್ಚಿನ ರೀತಿ ಉಪಯೋಗಿಸಿಕೊಳ್ಳಬೇಕಾಗಿದೆ. ಸುಮಾರು 66,00,000 ವಿದ್ಯಾರ್ಥಿಗಳಿಗೆ "ಅಕ್ಷರ ದಾಸೋಹ" ನೀಡಿರುವುದು ನಿಜಕ್ಕೂ ಒಂದು ಅನುಪಮ ಸಾಧನೆಯೇ ಆಗಿದೆ ಎಂದು ನನ್ನ ಭಾವನೆ. ಜಾನಪದ ವಿಶ್ವವಿದ್ಯಾಲಯ, ಸಂಸ್ಕೃತ ವಿಶ್ವವಿದ್ಯಾಲಯ, ಸಂಗೀತ ವಿಶ್ವವಿದ್ಯಾಲಯ, ತೋಟಗಾರಿಕೆ ವಿಶ್ವವಿದ್ಯಾಲಯ ಇವುಗಳು ವೇಗೋತ್ಕರ್ಷ

ಪಡೆದುಕೊಂಡು ಸಕ್ರೀಯ ಚಾಲನೆಗೆ ಅನುವಾಗಿ ಪ್ರಗತಿ ಪಥದತ್ತ ಹೆಜ್ಜೆ ಹಾಕಿರುವುದು ಎಲ್ಲರೂ ಮೆಚ್ಚಬೇಕಾದಂತಹ ಸಂಗತಿಯಾಗಿದೆ. ಸಾರಾಸಗಟು ಕಟು ವಿಮರ್ಶೆಯ ಕಪ್ಪು ಮೋಡಗಳ ನಡುವೆ ಕೂಡ ಬೆಳ್ಳಿರೇಖೆಯ ಆಶಾಕಿರಣವಳಿವೆ. ಉದಾಹರಣೆಗೆ "ಮಡಿಲು ಯೋಜನೆ", ತಾಯಿ ಭಾಗ್ಯ ಯೋಜನೆ" "ಆರೋಗ್ಯ ಕವಚ ಯೋಜನೆ", ವಾಜಪೇಯಿ ಆರೋಗ್ಯ ಶ್ರೀ ಯೋಜನೆ" ನಮ್ಮ ಸರ್ಕಾರದ ಸಾಧನೆಗಳೆಂದು ಎದೆತಟ್ಟಿ ಹೇಳಬಹುದಾಗಿದೆ. ಅದಕ್ಕೆ ಪ್ರಶಂಸೆ ಸಲ್ಲಬೇಕಾಗುತ್ತದೆ. ಸಮಾಜ ಕಲ್ಯಾಣಕ್ಕೆ ಸಂಬಂಧಿಸಿದ ಹಾಗೆ ಪರಿಶಿಷ್ಟ ಜಾತಿಯ ಜನರ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ನಮ್ಮ ಸರ್ಕಾರ 414.50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು, ಶ್ಲಾಘನೀಯ ಕಾರ್ಯವಾಗಿದೆ. ನಮ್ಮ ಬುದ್ಧಿ ಜೀವಿಗಳು ಸಾವಿರ ಹೇಳಲಿ. ವಾಸ್ತವ ಸತ್ಯವೇ ಬೇರೆ. ರಾಜ್ಯದ ಹದಿನೆಂಟ ಮಠಗಳು ನಡೆಸುವ ವಿದ್ಯಾರ್ಥಿ ನಿಲಯಗಳಿಗೆ, ಶೈಕ್ಷಣಿಕ ಸಂಸ್ಥೆಗಳಿಗೆ, ಸಮುದಾಯ ಭವನಗಳಿಗೆ ಸರ್ಕಾರ ಕೊಡುಗೆ ನೀಡಿದ್ದು ಪ್ರಶಂಸಾರ್ಹ ಸಂಗತಿಯಾಗಿದೆ. ಅದೆಲ್ಲವೂ ಜನ ಪರವೇ; ಅವೆಲ್ಲವೂ ಜನ ಹಿತವೇ; ಅದೆಲ್ಲವೂ ಜನ ಕಲ್ಯಾನವೇ: ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಸರ್ಕಾರ ವಿಶೇಷ ಕಾಳಜಿ ವಹಿಸಿದ್ದು ಅತ್ಯಂತ ಗಮನಾರ್ಹ ವಿಷಯ. 17.4 ಲಕ್ಷ ಅಸಂಘಟಿತ ಕಾರ್ಮಿಕ ಕುಟುಂಬಗಳಿಗೆ "ಸ್ಮಾರ್ಟ್ ಕಾರ್ಡ್" ವಿತರಣೆಯಾಗಿರುವುದು ಇತ್ಯಾತ್ಮಕ ಅಂಶವಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಆಗಿರುವಂತಹ ಸಾಧನೆಗಳು ಪ್ರಶಂಶನೀಯ ಸಂಗತಿಗಳು. "ಯೂನಿಕೋಡ್" ಕನ್ನಡ ತಂತ್ರಾಂಶದ ಅನುಷ್ಠಾನ ಮೆಚ್ಚಬೇಕಾದ್ದು. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯದಲ್ಲಿ ವ್ಯೂಜ್ ಬರ್ಗ್, ಆಸ್ಟ್ರಿಯ, ವಿಯನ್ನಾ ಹೈಡಲ್ ಬರ್ಗ್ ವಿಶ್ವ ವಿದ್ಯಾಲಯಗಳಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಗೆ ಚಾಲನೆ ನೀಡಿದ್ದು ಆರು ಕೋಟಿ ಕನ್ನಡಿಗರು ಕೊಂಡಾದಬೇಕಾದಂತಃ ಅಚ್ಚ ಕನ್ನಾಡಾಭಿಮಾನದ ವಿಷಯವಾಗಿದೆ. ಇದಕ್ಕಾಗಿ ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಸ್ವಾಮಿ ವಿವೇಕಾನಂದರ 150ನೇ ಜಯಂತಿ ಸಲುವಾಗಿ "ನಮ್ಮ ನಾಡು" ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ಹಮ್ಮಿಕೊಂಡದ್ದು ಅಭಿನಂದನಾರ್ಹ.

ಕುವೆಂಪು ದರ್ಶನ ಭವನ, ಮಲ್ಲಿಕಾರ್ಜುನ ಮನ್ಸೂರ್ ಪ್ರತಿಷ್ಠಾನ ಭವನ. ಮಹಾದಂಡ ನಾಯಕ ಜನರಲ್ ಬೇವೂರ್ ಸ್ಮಾರಕ ಭವನ, ಸಂಗೊಳ್ಳಿ ರಾಯಣ್ಣ ಸ್ಮಾರಕ ಭವನ ಇವುಗಳ ಕರೆಗೆ ನಮ್ಮ ಸರ್ಕಾರ ಆದ್ಯತೆ ನೀಡಿದ್ದು ಆಗಬೇಕಾದ ಕಾರ್ಯ. ಇದು ಅಭಿನಂದನೀಯ. ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಇಟ್ಟ ಹೊಸ ಹೆಜ್ಜೆಗಳು ದಾಖಲಾರ್ಹ ಸಂಗತಿಗಳಾಗಿವೆ. ಉಗ್ರ ಟೀಕಾಕಾರರೂ ಒಪ್ಪಲೇಬೇಕಾದ ಒಂದು ಅಂಶ ಇದೆ. ಪ್ರವಾಸೋದ್ಯಮದಲ್ಲಿ ನಮ್ಮ ರಾಜ್ಯದ ಯುವ ಜನತೆಯನ್ನು ಜಾಗೃತಗೊಳಿಸಲು ಸುಮಾರು 10,000 ವಿದ್ಯಾರ್ಥಿಗಳಿಗೆ "ಕರ್ನಾಟಕ ದರ್ಶನ" ಪ್ರವಾಹ ಸೌಲಭ್ಯ ಒದಗಿಸುತ್ತಿರುವುದು ಎಲ್ಲರೂ ಮೆಚ್ಚಬೇಕಾದ ವಿಷಯವಾಗಿದೆ. ಮಗುವಿಗೊಂದು ಮರ, ಶಾಲೆಗೊಂದು ವನ ಯೋಜನೆ ಸಂಪೂರ್ಣವಾಗಿ ವನಸಂವರ್ಧನ ಯೋಜನೆ. ಇಂಥ ವಿನೂತ ಆಯವ್ಯಯವನ್ನು ಮಂಡಿಸಿದಂತಹ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತಾ, ಈ ಆಯವ್ಯಯವನ್ನು ನಾನು ಮನಸಾರೆ ಸ್ವಾಗತಿಸುತ್ತಾ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

**(ಸದನವು ಸಂಜೆ 8 ಗಂಟೆ 56 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 15ನೇ ಫೆಬ್ರವರಿ 2013ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**